# ಅಧ್ಯಾಯ-೦೯

# ಆಡಳಿತ ಮತ್ತು ರಾಜಸ್ವ

## ಚಾರಿತ್ರಿಕ ಹಿನ್ನೆಲೆ

ಭಾರತ ದೇಶದಲ್ಲಿ ಜಿಲ್ಲೆಯು ರಾಜ್ಯಾಡಳಿತದ ಮುಖ್ಯ ಘಟಕವಾಗಿದೆ. ನಮ್ಮ ದೇಶದ ಇತಿಹಾಸದುದ್ದಕ್ಕೂ ಅನೇಕ ರೂಪಗಳಲ್ಲಿ ಆಡಳಿತದ ಮುಖ್ಯ ಘಟಕವಾಗಿ ಜಿಲ್ಲೆಯನ್ನು ಪರಿಗಣಿಸುತ್ತಾ ಬರಲಾಗಿದೆ. ಭಾರತದ ಪ್ರಪ್ರಥಮ ಐತಿಹಾಸಿಕ ಸಾಮ್ರಾಜ್ಯವನ್ನು ಸ್ಥಾಪಿಸಿದ ಮೌರ್ಯರು ತಮ್ಮ ವಿಶಾಲ ಸಾಮ್ರಾಜ್ಯವನ್ನು ಸಮರ್ಥವಾಗಿ ಮತ್ತು ಪರಿಣಾಮಕಾರಿಯಾಗಿ ಆಳುವ ಸಲುವಾಗಿ ಪ್ರಾಂತಗಳಾಗಿ ವಿಭಜಿಸಿದ್ದರು. ಈ ಪ್ರಾಂತಗಳನ್ನು 'ಆಹಾರ', 'ವಿಷಯ' ಮತ್ತು 'ಪ್ರದೇಶ'ಗಳೆಂದು ವಿಂಗಡಿಸಿದ್ದರು. ಪ್ರತಿಯೊಂದು ಪ್ರಾಂತವೂ ಓರ್ವ ವೈಸರಾಯ್ ಮತ್ತು ರಾಜ ಪ್ರತಿನಿಧಿಯ ಆಡಳಿತದಲ್ಲಿರುತ್ತಿತ್ತು. ರಾಜಕುವರರು ಒಮ್ಮೊಮ್ಮೆ ಪ್ರಾಂತಾಧಿಕಾರಿಗಳಾಗಿ ನೇಮಕಗೊಳ್ಳುತ್ತಿದ್ದರು. ಆಗ ಅವರನ್ನು 'ಕುಮಾರ ಮಹಾಮಾತ್ರ'ರೆಂದು ಕರೆಯಲಾಗುತ್ತಿತ್ತು: ಇನ್ನುಳಿದ ಪ್ರಾಂತಾಧಿಕಾರಿಗಳನ್ನು 'ಮಹಾಮಾತ್ರ'ರೆಂದು ಕರೆಯಲಾಗುತ್ತಿತ್ತು. ಕೇಂದ್ರದಲ್ಲಿದ್ದಂತೆ ಮಂತ್ರಿಗಳಿಂದ ಕೂಡಿದ ಸಮಾಲೋಚನಾ ಸಭೆಯೊಂದು ಪ್ರತೀ ಪ್ರಾಂತದಲ್ಲಿಯೂ ಇದ್ದು ಮಹಾಮಾತ್ರರಿಗೆ ಸಹಾಯ ಮಾಡುತ್ತಿತ್ತು ಎಂದು ನಂಬಲಾಗಿದೆ. ಜೊತೆಗೆ ಬೇರೆ ಬೇರೆ ಅಧಿಕಾರಿಗಳೂ ಮಹಾಮಾತ್ರರಿಗೆ ಸಹಾಯ ಮಾಡಲು ನೇಮಕಗೊಳ್ಳುತ್ತಿದ್ದರು. ಅವರುಗಳಲ್ಲಿ 'ಯೂತ' (ತೆರಿಗೆ ಸಂಗ್ರಹಕಾರ), 'ರಜುಕ' (ಕಂದಾಯ ವಸೂಲಿಕಾರ), 'ಸ್ಥಾನಿಕ' (ಜಿಲ್ಲೆ ಅಧಿಕಾರಿ) ಮುಂತಾದವರಿದ್ದರು ಎಂದು ತಿಳಿದುಬರುತ್ತದೆ.

ಪ್ರಾಂತಗಳನ್ನು ಜಿಲ್ಲೆಗಳನ್ನಾಗಿ ವಿಭಜಿಸುತ್ತಿದ್ದರು ಮತ್ತು 'ಸ್ಥಾನಿಕ' ಎಂಬ ಪದನಾಮ ಹೊಂದಿದ್ದ ಅಧಿಕಾರಿಗಳು ಅವುಗಳ ಆಡಳಿತವನ್ನು ನಡೆಸುತ್ತಿದ್ದರು. 'ಸ್ಥಾನಿಕ'ರಿಗೆ ನೆರವಾಗಲು 'ಗೋಪ' ಎಂಬ ಒಂದು ಅಧಿಕಾರಿ ವರ್ಗ ಇರುತ್ತಿತ್ತು. ಆಡಳಿತದ ಅತ್ಯಂತ ಸಣ್ಣ ಘಟಕವೆಂದರೆ 'ಗ್ರಾಮ' ಆಗಿತ್ತು: ಮತ್ತು ಗ್ರಾಮಿಕ ಎಂಬ ಅಧಿಕಾರಿಯು ಗ್ರಾಮ ಸಭೆಯ ಸಹಾಯದಿಂದ ಅಲ್ಲಿನ ಆಡಳಿತವನ್ನು ನಡೆಸುತ್ತಿದ್ದನು.

ಗುಪ್ತರ ಕಾಲದಲ್ಲಿ (ಕ್ರಿ.ಶ.೩೨೦-ಕ್ರಿ.ಶ೯೫) ಸಾಮ್ರಾಜ್ಯವನ್ನು ಪ್ರಾಂತ್ಯಗಳನ್ನಾಗಿ, ಅವುಗಳನ್ನು ಮತ್ತೆ 'ವಿಷಯ'ಗಳು ಹಾಗೂ 'ಮಂಡಳ'ಗಳನ್ನಾಗಿ ವಿಭಜಿಸಿದ್ದರು. 'ವಿಷಯ'ದ ಅಧಿಕಾರಿಯನ್ನು 'ವಿಷಯಪತಿ' ಅಥವಾ 'ಆಯುಕ್ತ' ಎಂದು ಕರೆಯಲಾಗುತ್ತಿತ್ತು. ಭಾರತದ ಸರಿಸುಮಾರು ಎಲ್ಲಾ ಭಾಗಗಳಲ್ಲಿಯೂ ಈ ಸಾಮ್ರಾಜ್ಯಶಾಹಿ ಮಾದರಿ ಅಲ್ಪಸ್ವಲ್ಪ ಮಾರ್ಪಾಟುಗಳೊಂದಿಗೆ ಅನುಸರಿಸಲ್ಪಡುತ್ತಿತ್ತು. ಹಿಂದೂ ರಾಜ್ಯಾಡಳಿತದ

ವ್ಯವಸ್ಥೆ ಕುರಿತಾದ ಗ್ರಂಥಗಳಲ್ಲಿ ಮುಖ್ಯವಾಗಿರುವ ಮನುಸ್ಮೃತಿ, ಕೌಟಿಲ್ಯನ ಅರ್ಥಶಾಸ್ತ್ರ, ಶುಕ್ರನೀತಿಸಾರ, ಕಾಮಂದಕ ನೀತಿಸಾರ ಮುಂತಾದವು ದೇಶಾದ್ಯಂತ ಆಡಳಿತ ವ್ಯವಸ್ಥೆಯ ಮೇಲೆ ತಮ್ಮದೇ ಆದ ಪ್ರಭಾವವನ್ನು ಹೊಂದಿದ್ದವು. ಗಂಗ ದುರ್ವಿನೀತನನ್ನು ಮನುವಿಗೆ ಹೋಲಿಸಲಾಗಿದೆ ಮತ್ತು ಗಂಗ ನೀತಿಮಾರ್ಗನು ಶುಕ್ರನೀತಿಸಾರದ ಪ್ರಕಾರವೇ ರಾಜ್ಯಾಡಳಿತವನ್ನು ನಿರ್ವಹಿಸುತ್ತಿದ್ದನೆಂದು ಹೇಳಲಾಗಿದೆ. ಗಂಗರ ರಾಜ್ಯಾಡಳಿತ ವ್ಯವಸ್ಥೆಯು ಮೌರ್ಯ ಮತ್ತು ಗುಪ್ತರ ರಾಜ್ಯಭಾರದಂತೆ ಅನೇಕ ಸುಸಜ್ಜಿತ ವಿಭಾಗಗಳಿಂದ ಕೂಡಿದ್ದಿತು. ದಕ್ಷ ರಾಜ್ಯಭಾರಕ್ಕಾಗಿ ಸಾಮ್ರಾಜ್ಯವನ್ನು 'ನಾಡು', 'ವಿಷಯ', 'ವೇಂಠೆ', 'ಕಂಪಣ' ಮುಂತಾದ ಭಾಗಗಳನ್ನಾಗಿ ವಿಂಗಡಿಸಲಾಗಿತ್ತು. 'ಗ್ರಾಮ'ವು ಆಡಳಿತದ ಮೂಲಭೂತ ಅಥವಾ ಅತಿ ಕನಿಷ್ಟ ಘಟಕವಾಗಿತ್ತು. ರಾಜ್ಯ ವಿಭಾಗಗಳನ್ನು ಸಾಮಾನ್ಯವಾಗಿ ಸಂಖ್ಯಾಪೂರ್ವಕವಾಗಿ ಗಂಗವಾಡಿ–೯೬,೦೦೦, ಬನವಾಸಿ–೧೨,೦೦೦, ಪುನ್ನಾಡು–೬,೦೦೦, ಕರೆನಾಡು–೭೦, ತೊರೆನಾಡು–೫೦೦ ಎಂದು ನಿರ್ಣೀತವಾಗಿರುತ್ತಿದ್ದವು. ಈ ಸಂಖ್ಯಾ ಪ್ರತ್ಯಯಗಳ ನಿಜವಾದ ಅರ್ಥ ಏನಿತ್ತೆಂಬುದು ನಿಗೂಢವಾಗಿಯೇ ಉಳಿದಿದ್ದು, ಕೆಲವು ವಿದ್ವಾಂಸರು ಮುಂದೆ ಮಾಡಿರುವ ಊಹೆಗಳು ತರ್ಕಬದ್ಧವಾಗಿರುವಂತೆ ಕಾಣುವುದಿಲ್ಲ. ಪ್ರತೀ ಗ್ರಾಮದಲ್ಲಿಯೂ 'ಗ್ರಾಮಕೂಟಕ' ಅಥವಾ 'ಗಾವುಂಡ' ಪದನಾಮ ಹೊಂದಿರುತ್ತಿದ್ದ ಅಧಿಕಾರಿಯು ಗ್ರಾಮಾಡಳಿತವನ್ನು ನಡೆಸುತ್ತಿದ್ದನು. 'ರಾಷ್ಟ್ರಪತಿ', 'ವಿಷಯಪತಿ', 'ಆಯುಕ್ತಕ' ಮುಂತಾದ ಅಧಿಕಾರಿಗಳು ದೊಡ್ಡ ಆಡಳಿತ ಘಟಕಗಳ ಜವಾಬ್ದಾರಿ ಹೊಂದಿರುತ್ತಿದ್ದರು.

ರಾಷ್ಟ್ರಕೂಟರ ಕಾಲದಲ್ಲಿ ಚಕ್ರವರ್ತಿಯ ನೇರ ಆಡಳಿತಕ್ಕೆ ಸೇರಿದ್ದ ಪ್ರದೇಶವನ್ನು 'ರಾಷ್ಟ್ರ' ಎಂಬ ಆಡಳಿತ ಘಟಕಗಳನ್ನಾಗಿ ವಿಭಜಿಸಲಾಗಿತ್ತು. ಇದನ್ನು ಈಗಿನ ಜಿಲ್ಲೆಗೆ ಸಮಾನವಾದ ಆಡಳಿತ ವಿಭಾಗವೆಂದು ಕರೆಯಬಹುದು. 'ವಿಷಯ', 'ರಾಷ್ಟ್ರ'ಕ್ಕಿಂತ ಚಿಕ್ಕ ಕ್ಷೇತ್ರ. ಇದನ್ನೇ ಕೆಲವೊಮ್ಮೆ 'ದೇಶ' ಎಂದೂ ವ್ಯವಹರಿಸಿರುವುದು ಕಂಡುಬರುತ್ತದೆ. 'ವಿಷಯ'ಕ್ಕಿಂತ ಚಿಕ್ಕ ಆಡಳಿತ ಘಟಕವೆಂದರೆ 'ಭುಕ್ತಿ' ಅಥವಾ 'ನಾಡು', 'ಗ್ರಾಮ' ಅಥವಾ 'ಊರು' ಮೂಲ ಆಡಳಿತ ಘಟಕವಾಗಿತ್ತು. 'ರಾಷ್ಟ್ರ'ದ ಮುಖ್ಯಸ್ಥನನ್ನು 'ರಾಷ್ಟ್ರಪತಿ' ಎಂದು ಕರೆಯುತ್ತಿದ್ದರು. ಅವನು ಓರ್ವ ಸಾಮಂತ ರಾಜನ ಸ್ಥಾನಮಾನಗಳನ್ನು ಹೊಂದಿದ್ದನೆನ್ನಲಾಗಿದೆ. ಭೂಕಂದಾಯ ವಸೂಲಿಯು 'ರಾಷ್ಟ್ರಪತಿ'ಯ ಪ್ರಮುಖ ಕಾರ್ಯಗಳಲ್ಲೊಂದಾಗಿತ್ತು. ಸ್ಥಳೀಯ ಹಕ್ಕುಬಾಧ್ಯತೆಗಳು ಮತ್ತು ವಿಶೇಷ ಸೌಕರ್ಯ ಅಥವಾ 'ವಳನಾಡು'ಗಳನ್ನು 'ನಾಡು' ಅಥವಾ ತಾಲೂಕುಗಳನ್ನಾಗಿ ಮರು ವಿಭಜಿಸುತ್ತಿದ್ದರು. ಚಾಮರಾಜನಗರ ಜಿಲ್ಲೆಯ ಬಹುತೇಕ ಭಾಗವು ಮುಡಿಗೊಂಡ ಚೋಳಮಂಡಲ ಮತ್ತು ಗಂಗೈಕೊಂಡ ಚೋಳ ಮಂಡಲದಲ್ಲಿ ಅಂತರ್ಗತವಾಗಿತ್ತು. ಕುದುಗೂರುನಾಡು (ಗುಂಡ್ಲುಪೇಟೆ ತಾಲೂಕು), ನವಿಲೆನಾಡು (ಕೊಳ್ಳೇಗಾಲ ತಾಲೂಕು), ಎಣ್ಣೆನಾಡು (ಚಾಮರಾಜನಗರ ತಾಲೂಕು) ಮುಂತಾದವು ಹೆಸರಿಸಬಹುದಾದ ಆ ಕಾಲದ ನಾಡುಗಳು.

ಹೊಯ್ಸಳರು (ಕ್ರಿ.ಶ.೯೭೮–ಕ್ರಿ.ಶ.೧೩೩೬) ಚೋಳರ ಉತ್ತರಾಧಿಕಾರಿಗಳಾಗಿ ಅಧಿಕಾರ ಪಡೆದುಕೊಂಡ ಮೇಲೆ ವಿವರಿಸಿದ ಆಡಳಿತ ವ್ಯವಸ್ಥೆಯನ್ನೇ ಮುಂದುವರೆಸಿದರು. ವಿಜಯನಗರ ಸಾಮ್ರಾಟರು ಸಹ ಹಿಂದಿನಿಂದ ನಡೆದು ಬಂದಿದ್ದ ಆಡಳಿತ ವ್ಯವಸ್ಥೆಯನ್ನು ಭಂಗಗೊಳಿಸುವ ಕಾರ್ಯವನ್ನು ಮಾಡಲಿಲ್ಲ. ಆದರೆ ವಿಜಯನಗರದ ಕಾಲದಲ್ಲಿ (ಕ್ರಿ.ಶ.೧೩೩೬–ಕ್ರಿ.ಶ.೧೫೬೫) ಸಂಖ್ಯೆ ಮತ್ತು ವೈವಿಧ್ಯತೆ ಎರಡರಲ್ಲೂ ಆಡಳಿತ ಘಟಕಗಳು ಏರಿಕೆ ಆದವು. ಆಗ ಜಾರಿಯಲ್ಲಿದ್ದ ಆಡಳಿತ ಘಟಕಗಳೆಂದರೆ 'ರಾಜ್ಯ', 'ದೇಶ', 'ನಾಡು', 'ಸೀಮೆ', 'ವಳಿತ', 'ಸ್ಥಳ' ಮತ್ತು 'ವೇಂಠೆ'. ವಿಜಯನಗರದಂತಹ ವಿಸ್ತಾರವಾದ ಸಾಮ್ರಾಜ್ಯದಲ್ಲಿ ಇಂತಹ ವೈವಿಧ್ಯತೆ ಸಹಜವಾದುದೇ ಆಗಿತ್ತೆನ್ನಬಹುದು. ಸೀಮೆ ಮತ್ತು ನಾಡು ಪ್ರಯೋಜನಗಳನ್ನು ಕುರಿತಾದ ದಾಖಲೆಗಳನ್ನಿಡುವುದು ಅವರ ಅಧಿಕಾರಕ್ಕೇ ಸೇರಿತ್ತು. ಇದೇ ರೀತಿ ಬ್ರಾಹ್ಮಣರು, ದೇವಸ್ಥಾನಗಳು ಹೊಂದಿದ್ದ

ಜಮೀನುಗಳ ವಿವರಗಳನ್ನೂ 'ರಾಷ್ಟ್ರಪತಿ'ಯೇ ನಿರ್ವಹಿಸಬೇಕಾಗಿತ್ತು. ವಿಷಯಪತಿಗಳು ಮತ್ತು ಭೋಗಪತಿಗಳು ಅವರವರ ಅಧೀನದಲ್ಲಿದ್ದ ಆಡಳಿತ ಘಟಕಗಳಲ್ಲಿ ಮೇಲಿನಂತೆಯೇ ಕಾರ್ಯನಿರ್ವಹಿಸುತ್ತಿದ್ದರು. ಇವರಿಗೆ ಸಹಾಯಕರಾಗಿ 'ನಾಡಗಾವುಂಡ' ಮತ್ತು 'ದೇಶಗ್ರಾಮಕೂಟ' ಎಂಬ ಪದನಾಮವಿದ್ದ ಅಧಿಕಾರಿಗಳಿದ್ದರು. ಗ್ರಾಮಮುಖ್ಯ ಮತ್ತು ಗ್ರಾಮಲೆಕ್ಕಿಗ/ಕರಣ/ಶ್ರೀಕರಣ/ಕುಲಕರ್ಣಿ ಗ್ರಾಮಾಡಳಿತವನ್ನು ನಡೆಸುತ್ತಿದ್ದರು. ಅವರ ಹುದ್ದೆಗಳು ಬಹುತೇಕ ಅನುವಂಶೀಕವಾಗಿದ್ದವು. ಗ್ರಾಮಗಳಿಂದ ಬರಬೇಕಾದ ರಾಜ್ಯಾದಾಯಕ್ಕೆ ಮಾತ್ರವೇ ಅಲ್ಲದೇ ಅವುಗಳ ಶಾಂತಿ ಸುವ್ಯವಸ್ಥೆಗೂ ಅವರೇ ಜವಾಬ್ದಾರರಾಗಿದ್ದರು.

ಈ ಜಿಲ್ಲೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಚೋಳರ ಆಳ್ವಿಕೆಗೊಳಪಟ್ಟಿದ್ದಾಗ ಪ್ರಾಂತ್ಯಗಳನ್ನು 'ಮಂಡಲ'ಗಳಾಗಿ ವಿಭಜಿಸುವ ಪರಿಪಾಠವಿತ್ತು. ಆ ಮಂಡಲಗಳನ್ನು ಪುನಃ 'ವಳನಾಡು'ಗಳನ್ನಾಗಿ ವಿಭಜಿಸುತ್ತಿದ್ದರು. ಇಂದಿನ ಜಿಲ್ಲೆಗಳೊಂದಿಗೆ ಹೋಲಿಸಬಹುದಾಗಿದ್ದ ಪ್ರತ್ಯೇಕ ವಿಧವಾದ ಆಡಳಿತ ಘಟಕಗಳಾಗಿರದೇ ಪರ್ಯಾಯ ಪದಗಳಾಗಿ ಬಳಕೆಯಲ್ಲಿದ್ದಂತೆ ತಿಳಿದುಬರುತ್ತದೆ. ಮುಂದೆ ಮೈಸೂರಿನ ಒಡೆಯರು ವಿಜಯನಗರದ ಆಡಳಿತ ಪರಂಪರೆಗೆ ಈ ಭಾಗದಲ್ಲಿ ವಾರಸುದಾರರಾದರು. ಮೊಘಲ ಸಾಮ್ರಾಟರು ಭಾರತದಲ್ಲಿ ಪರಂಪರಾಗತವಾಗಿ ಬಂದಿದ್ದ ಆಡಳಿತ ವ್ಯವಸ್ಥೆಯನ್ನೇ ಸೂಕ್ತ ಮಾರ್ಪಾಡುಗಳೊಂದಿಗೆ ಮುಂದುವರೆಸಿದರು. ಆಡಳಿತ ಮತ್ತು ರಾಜಸ್ವ ಸಂಗ್ರಹದ ಅನುಕೂಲಕ್ಕಾಗಿ ಸಾಮ್ರಾಜ್ಯವನ್ನು ಪ್ರಾಂತಗಳಾಗಿ ಇಲ್ಲವೇ 'ಸುಭಾ'ಗಳಾಗಿ ವಿಂಗಡಿಸಿದ್ದರು. ಸುಭಾಗಳನ್ನು 'ಸರಕಾರ' ಅಥವಾ ಜಿಲ್ಲೆಗಳಲ್ಲಿ ಒಳವಿಂಗಡಣೆ ಮಾಡಲಾಗಿತ್ತು. ಪ್ರತಿಯೊಂದು 'ಸರಕಾರವು' ಅನೇಕ 'ಪರಗಣ'ಗಳನ್ನು ಒಳಗೊಂಡಿರುತ್ತಿತ್ತು; ಮತ್ತು ಪ್ರತೀ 'ಪರಗಣ'ದಲ್ಲಿ ಅನೇಕಾನೇಕ ಗ್ರಾಮಗಳಿರುತ್ತಿದ್ದವು. ಓರ್ವ ಮಿಲಿಟರಿ ಅಧಿಕಾರಿಯೂ ಆಗಿರುತ್ತಿದ್ದ ಫೌಜುದಾರನು ಜಿಲ್ಲಾ (ಸರಕಾರ) ಆಡಳಿತದ ಮುಖ್ಯಸ್ಥನಾಗಿದ್ದನು. ಅಮಲ್ ಗುಜರ್ ಎಂಬ ಪದನಾಮವಿದ್ದ ಕಂದಾಯಾಧಿಕಾರಿಗೆ ಅಗತ್ಯ ನೆರವು ನೀಡುವುದೂ ಅವನ ಕರ್ತವ್ಯಗಳಲ್ಲಿ ಸೇರಿತ್ತು. ಪರಗಣಗಳು ಅತಿ ಸಣ್ಣ ಆಡಳಿತ ಮತ್ತು ಆರ್ಥಿಕ ಘಟಕಗಳೆನಿಸಿದ್ದು ಶೇಖ್ದಾರ್, ಅಮೀಲ್, ಪೋತೆದಾರ್ ಮತ್ತು ಕಾರಕೂನ ಮುಂತಾದ ಅಧಿಕಾರಿಗಳ ನಿಯಂತ್ರಣದಲ್ಲಿದ್ದವು. ಪರಗಣದ ಕಾರ್ಯಕಾರಿ ಅಧಿಕಾರಿಯು ಶೇಖ್ದಾರನೇ ಆಗಿರುತ್ತಿದ್ದನು. ಪೋತದಾರನು ಪರಗಣದ ಖಜಾನೆದಾರನಾಗಿರುತ್ತಿದ್ದನು. ಕಾರಕೂನರು ಎಲ್ಲಾ ಕೃಷಿಯೋಗ್ಯ ಭೂಮಿಯ ವಿವರಗಳು, ಬೆಳೆಗಳ ವಿವರಗಳು, ಕೃಷಿಕರು ನೀಡಬೇಕಾಗಿದ್ದ ಕಂದಾಯದ ಲೆಕ್ಕ, ವಾರ್ಷಿಕ ಸಂಗ್ರಹಣ, ಬಾಕಿ ನಿಂತ ಕಂದಾಯದ ಲೆಕ್ಕಪತ್ರಗಳನ್ನಿಡುವುದು ಮುಂತಾದ ಕಾರ್ಯಗಳನ್ನು ನಿರ್ವಹಿಸಬೇಕಾಗಿತ್ತು.

ದಕ್ಷಿಣಭಾರತದಲ್ಲಿ ಮೊಘಲರ ಆಗಮನದೊಂದಿಗೆ ಆಡಳಿತ ವ್ಯವಸ್ಥೆಯಲ್ಲಿ ಅವರ ಪ್ರಭಾವವೂ ಕಂಡುಬರತೊಡಗಿತು. ಮೈಸೂರಿನ ದೊರೆ ಚಿಕ್ಕದೇವರಾಜ ಒಡೆಯರು (೧೬೭೩–೧೭೦೪) ಅನೇಕ ಆಡಳಿತಾತ್ಮಕ ಸುಧಾರಣೆಗಳನ್ನು ಜಾರಿಗೆ ತಂದು ಪ್ರಸಿದ್ಧಿ ಪಡೆದರು. ಅವರ ಆಳ್ವಿಕೆಯ ಪ್ರಾರಂಭದಲ್ಲಿದ್ದ ೭೨ ಗಡಿಗಳು ಅಥವಾ ಆಡಳಿತದ ವಿಭಾಗಗಳನ್ನು ಪುನರ್ವಿಂಗಡಿಸಿ ಅವುಗಳ ಸಂಖ್ಯೆಯನ್ನು ೮೪ಕ್ಕೆ ಏರಿಸಿದರು. ಪ್ರತಿಯೊಂದು ಗಡಿಯನ್ನು ಕೆಲವು ಹೋಬಳಿಗಳನ್ನಾಗಿ ವಿಭಜಿಸಲಾಯಿತು; ಅವುಗಳ ಕೆಳಗೆ ಇರುತ್ತಿದ್ದ ೮ ರಿಂದ ೧೬ರ ಸಂಖ್ಯೆಯಷ್ಟು ಉಪಗ್ರಾಮಗಳನ್ನು ದೊಡ್ಡ ಗ್ರಾಮವೊಂದಕ್ಕೆ ಸೇರ್ಪಡೆ ಮಾಡಲಾಯಿತು. ಪ್ರತೀ ಹೋಬಳಿಯಲ್ಲಿದ್ದ ಅತಿ ದೊಡ್ಡ ಗ್ರಾಮವನ್ನು ಹೋಬಳಿ ಕೇಂದ್ರವನ್ನಾಗಿ ಘೋಷಿಸಿ ಆ ಹೋಬಳಿಗೆ ಅದೇ ಹೆಸರನ್ನಿಡಲಾಯಿತು. ಪ್ರತಿ ಹೋಬಳಿಗೆ ಓರ್ವ ಸುಬೇದಾರನನ್ನು ನೇಮಕ ಮಾಡಲಾಯಿತು. ಅವನ ಕೈಕೆಳಗೆ

ಚಿಕ್ಕ ಪಾರುಪತ್ಯಗಾರ (ಸಹಾಯಕ), ಮೂವರು ಅಥವಣೆ ಪ್ರತಿಗಾರ/ಪ್ರತಿ ಮಾಡುವವರು (Scroll-writers), ಆರು ಲೆಕ್ಕಿಗ (accountants) ಮತ್ತು ಓರ್ವ ರಾಯಸದವನು (scribe) ಇರುತ್ತಿದ್ದರು.

ಪ್ರತಿ ಹಳ್ಳಿಯಲ್ಲಿಯೂ ಪರಂಪರಾಗತವಾಗಿ ನಡೆದು ಬಂದಿದ್ದ ಗ್ರಾಮೀಣ ಅರ್ಥವ್ಯವಸ್ಥೆಯನ್ನು ಪುನಶ್ಚೈತನ್ಯಗೊಳಿಸಲಾಯಿತು ಮತ್ತು ಬಾರಾಬಲೂತಿ ಎಂಬ ಅಂಕಿತ ನೀಡಿ ಭದ್ರ ಬುನಾದಿಯ ಮೇಲೆ ನೆಲೆಗೊಳಿಸಲಾಯಿತು. ಆ ವ್ಯವಸ್ಥೆಯಲ್ಲಿ ಗ್ರಾಮೀಣ ಆಡಳಿತವನ್ನು ಈ ಕೆಳಗೆ ಹೆಸರಿಸಿರುವ ಹನ್ನೆರಡು ಗ್ರಾಮೀಣ ಕ್ರಮಾಗತೆ ನೌಕರರು ನಡೆಸಿಕೊಂಡು ಹೋಗುತ್ತಿದ್ದರು.

(೧) ಗೌಡ(ಪಟೇಲ) (Headman), ೨) ಶಾನುಭೋಗ (Accountant), ೩) ಜೋಯಿಸ (Astrologer), ೪) ಕಮ್ಮಾರ (Blacksmith), ೫) ಅಕ್ಕಸಾಲಿಗ (Goldsmith), ೬) ಕುಂಬಾರ (Potter), ೭) ಅಗಸ (Washerman), ೮) ಹಜಾಮ (Barber), ೯) ತೋಟಿ (Scavenger), ೧೦) ತಳವಾರ (Watchman), ೧೧) ನೀರುಗಂಟಿ (Regulator of tank sluices) ಮತ್ತು ೧೨) ಬಡಗಿ (Carpenter)

ಚಿಕ್ಕದೇವರಾಜ ಒಡೆಯರ ಕಟ್ಟುಪಾಡುಗಳ ಪ್ರಕಾರ ಬಾರಾಬಲೂತಿಯವರ ಸಂಭಾವನೆಯ ಅಥವಾ ರುಸುಂಗಳನ್ನು ಅವರವರ ಹಕ್ಕುಗಳಿನುಸಾರವಾಗಿ ನಿಗದಿಪಡಿಸಲಾಗಿತ್ತು. ಅವುಗಳನ್ನು ಸಾಮಾನ್ಯವಾಗಿ ರೈತರೇ ವಸ್ತುರೂಪದಲ್ಲಿ ಸಲ್ಲಿಸಬೇಕಾಗಿತ್ತು. ಗೌಡನಿಗೆ ಮನೆ ತೆರಿಗೆ ನೀಡುವುದರಿಂದ ಮತ್ತು ಬಿಟ್ಟಿ ಚಾಕರಿ ಮಾಡುವುದರಿಂದ ವಿನಾಯಿತಿ ಇತ್ತಲ್ಲದೇ ಕೆಲವು ಕಾಣಿಕೆಗಳು ಮತ್ತು ಕಡ್ಡಾಯ ಪಾವತಿಗಳು ಸಹ ಸಿಗುತ್ತಿದ್ದವು. ಗ್ರಾಮಲೆಕ್ಕಿಗನ ಅರ್ಧ ವೇತನವನ್ನು ನಗದುರೂಪದಲ್ಲಿ ಮತ್ತು ಉಳಿದ ಅರ್ಧ ವೇತನವನ್ನು ವಸ್ತುರೂಪದಲ್ಲಿ ನೀಡಲಾಗುತ್ತಿತ್ತು; ಇದಲ್ಲದೇ, ರೈತರುಗಳಿಂದ ನೇರವಾಗಿ ಪ್ರತೀ ವರ್ಷಕ್ಕೊಮ್ಮೆ ಕಾಲು ಭಾಗ, ಅರ್ಧಭಾಗ, ಮುಕ್ಕಾಲು ಭಾಗ, ಪೂರ್ಣಭಾಗದಂತೆ ಹಣ ಆಯಾ ರೈತನ ಅಂತಸ್ತಿಗೆ ಅನುಗುಣವಾಗಿ ನೀಡಲ್ಪಡುತ್ತಿತ್ತು. ಇದನ್ನು ಕಡತದ ಕಾಣಿಕೆಯ ಹಣ ಎಂದು ಕರೆಯುತ್ತಿದ್ದರು. ಗ್ರಾಮದ ಉಳಿದ ನೌಕರರಿಗೂ ಅವರದೇ ಆದ ಪ್ರತ್ಯೇಕ ರುಸುಮುಗಳು ರೈತರಿಂದ ಸಲ್ಲುತ್ತಿದ್ದವು. ಗ್ರಾಮದ ಪ್ರತಿಯೊಬ್ಬ ರೈತನೂ ಈ ೧೨(ಗ್ರಾಮದ) ಅಧಿಕಾರಿಗಳಿಗೆ 'ಹೊರೆಹುಲ್ಲು ಮೊರಭತ್ತ' ಅಂದರೆ ದವಸ, ಧಾನ್ಯಗಳನ್ನು ಸುಗ್ಗಿಯ ಕಾಲದಲ್ಲಿ ನೀಡುತ್ತಿದ್ದನು. ಜ್ಯೋತಿಷಿ, ಶಾನುಭೋಗ, ತೋಟಿ, ತಳವಾರ ಮತ್ತು ಕೆರೆ–ನೀರುಗಂಟಿ ಇವರುಗಳು ೧ ರಿಂದ ೬ ವರಹಗಳ ಕಂದಾಯ ಮೌಲ್ಯವಿದ್ದ, ಕಂದಾಯರಹಿತ 'ಮಾನ್ಯ–ಭೂಮಿ'ಯನ್ನು ಜೀವನ ನಿರ್ವಹಣೆಗೆಂದು ಪಡೆಯುತ್ತಿದ್ದರು.

ಚಿಕ್ಕದೇವರಾಜ ಒಡೆಯರು ಔರಂಗಜೇಬನ ಆಸ್ಥಾನಕ್ಕೆ ಕಳುಹಿಸಿದ್ದ ಕರಣಿಕ ಲಿಂಗಣ್ಣಯ್ಯನೆಂಬ ವಕೀಲನು ಮೊಘಲರ ಸ್ನೇಹ ಮತ್ತು ವಿಶ್ವಾಸ ಗಳಿಸಿಕೊಂಡು "ರಾಜಾ ಜಗದೇವ್' ಎಂಬ ಕಿತಾಬು ಹಾಗೂ "ರಾಜ ಚಿಕ್ಕದೇವರಾಜ್ ಮಹಮದ್ ಷಾಯಿ" ಎಂಬ ಮೊಹರನ್ನು ಅನೇಕ ಬಿರುದುಗಳೊಂದಿಗೆ ೧೭೦೦ರಲ್ಲಿ ಮೈಸೂರಿಗೆ ತಂದನು. ಅವನಿಂದ ಮೊಘಲರ ಆಡಳಿತ ಪದ್ಧತಿ ಮತ್ತು ಅಠಾರಾ ಕಛೇರಿ ಎಂಬುದಾಗಿ ಇದ್ದ ಅಧಿಕಾರ ಸ್ಥಾನಗಳ ವಿವರಣೆಯನ್ನು ಕೇಳಿ ಪ್ರೇರಿತರಾದ ಚಿಕ್ಕದೇವರಾಜ ಒಡೆಯರು ಮೈಸೂರಿನಲ್ಲಿಯೂ ಅದೇ ರೀತಿ ೧೮ ಚಾವಡಿಗಳನ್ನು ನಿಬಂಧನೆ ಮಾಡಿದರು ಮತ್ತು ಪ್ರತಿಯೊಂದು ಚಾವಡಿಗೆ ಪ್ರತ್ಯೇಕವಾಗಿ ಗೊತ್ತುಗಾರ, ದಫ್ತರದವರು, ಗುಮಾಸ್ತೆಯರು, ರಾಯಸದವರು, ದಫೇದಾರ, ಊಳಿಗದವರು, ಕಾವಲುಗಾರ ಮುಂತಾದ ಜನಗಳನ್ನು ನೇಮಕ ಮಾಡಿದರು. ಸಿ.ಹಯವದನರಾವ್ ದಾಖಲಿಸಿರುವಂತೆ "ಹದಿನೆಂಟು ಇಲಾಖೆಗಳ (ಅಠಾರಾ ಕಛೇರಿ) ಕಲ್ಪನೆಯನ್ನು ಮೊಘಲರ ಆಡಳಿತಾತ್ಮಕ ಸಂಪ್ರದಾಯ ಮತ್ತು

ಕಾರ್ಯವಿಧಾನದಿಂದ ತೆಗೆದುಕೊಂಡಿರಬಹುದಾಗಿದ್ದರೂ, ಚಿಕ್ಕದೇವರಾಜ ಒಡೆಯರು ರೂಪಿಸಿದ ಇಲಾಖೆಗಳ ತಪಶೀಲುಗಳು ಅವಶ್ಯಕ ಅಂಶಗಳಲ್ಲಿ ದೇಶೀಯವಾಗಿದ್ದುದು ಮಾತ್ರವಲ್ಲದೇ ಸ್ಥಳೀಯ ಅವಶ್ಯಕತೆಗಳಿಗೆ ಹೊಂದಿಸಲ್ಪಟ್ಟಿದ್ದವು. ಅನೂಚಾನವಾಗಿ ಬಂದ ಸಂಸ್ಥೆಗಳನ್ನು ಸುಧಾರಿಸುವ ಮೂಲಕ ಅವುಗಳನ್ನು ತನ್ನದೇ ಕಾಲದ ಸ್ಥಿತಿಗತಿಗಳೊಂದಿಗೆ ಹೆಚ್ಚು ಖಚಿತವಾದ ಮತ್ತು ನವೀನವಾದ ದಿಕ್ಕಿನಲ್ಲಿ ಸರಿಪಡಿಸುವ ಒಂದು ಬಲವಾದ ಧೋರಣೆ ಅವನಲ್ಲಿದ್ದುದರ ಪುರಾವೆಯಾಗಿ ಅವು ಕಂಡುಬರುತ್ತವೆ". ಈ ಸುಧಾರಣೆಗಳು ಕಾರ್ಯತಃ ಎಷ್ಟೊಂದು ಪ್ರಯೋಜನಕಾರಿಯಾಗಿದ್ದುವೆಂದರೆ ಮುಂದೆ ಬ್ರಿಟೀಷರ ಆಡಳಿತಾವಧಿಯಲ್ಲಿ (೧೮೩೧–೧೮೮೧) ಸಚಿವಾಲಯವನ್ನು ಅಠಾರಾ ಕಛೇರಿ ಎಂದೇ ಕರೆಯುವ ರೂಢಿ ಮುಂದುವರೆಯಿತು.

ಹೈದರನು (೧೭೬೧–೧೭೮೨) ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡ ನಂತರ ಅನೇಕ ಬದಲಾವಣೆಗಳನ್ನು ಮಾಡಿದನು. ಅವನ ಕಾಲದಲ್ಲಿ ಒಟ್ಟು ೧೪೪ ಗಡಿಗಳು ಅಥವಾ ಜಿಲ್ಲೆಗಳಿದ್ದವು. ಇಡೀ ರಾಜ್ಯವನ್ನು ಅಸಮ ವಿಸ್ತೀರ್ಣವುಳ್ಳಂತಹ ೧೬ ಸುಬೇದಾರಿಗಳನ್ನಾಗಿ ವಿಂಗಡಿಸಲಾಗಿತ್ತು. ನಾಗರೀಕ ಮತ್ತು ಮಿಲಿಟರಿ ಅಧಿಕಾರಗಳೆರಡನ್ನು ಹೊಂದಿರುತ್ತಿದ್ದ ಸುಬೇದಾರರು ಅವರವರ ಪ್ರದೇಶದಲ್ಲಿನ ಆಡಳಿತದ ವ್ಯವಹಾರಗಳನ್ನು ನಿಯಂತ್ರಿಸುತ್ತಿದ್ದರು. ಪ್ರತಿಯೊಂದು ಜಿಲ್ಲೆಯಲ್ಲಿಯೂ ಓರ್ವ ಅಮಿಲ್ ಮತ್ತು ಉಪ ಸುಬೇದಾರ ಎಂದು ನೇಮಕಗೊಂಡ ಅಧಿಕಾರಿಗಳು ಸುಬೇದಾರನಿಗೆ ಸಹಾಯಕರಾಗಿರುತ್ತಿದ್ದರು.

ಪ್ರತಿಯೊಂದು ತಾಲೂಕನ್ನು ಸಣ್ಣಸಣ್ಣದಾಗಿ ವಿಭಜಿಸಿ ಹೋಬಳಿಗಳನ್ನು ಸೃಜಿಸಲಾಗಿತ್ತು. ಸಾಮಾನ್ಯವಾಗಿ ನಾಲ್ಕರಿಂದ ಒಂಭತ್ತು ಸಹಸ್ರ ಪಗೋಡಾಗಳವರೆಗೆ ಹುಟ್ಟುವಳಿ ಇರುತ್ತಿದ್ದ ಆ ಹೋಬಳಿಗಳು ಶೇಕದಾರ ಅಥವಾ ಪಾರುಪತ್ಯಗಾರ ಎಂಬ ಅಧಿಕಾರಿಯ ಉಸ್ತುವಾರಿಯಲ್ಲಿದ್ದವು. ಊರ ಗೌಡರುಗಳಿಂದ ಕಂದಾಯವನ್ನು ವಸೂಲು ಮಾಡಿ ಅಮಿಲ್‌ದಾರನ ಕಛೇರಿಗೆ ತಲುಪಿಸುವ ಜವಾಬ್ದಾರಿ ಶೇಕದಾರನದಾಗಿತ್ತು. ಅವನ ಸಹಾಯಕ್ಕಾಗಿ ಇಬ್ಬರು ಲೆಕ್ಕಿಗರು ಇರುತ್ತಿದ್ದು ಅವರುಗಳನ್ನು ಶಿರಸ್ತೇದಾರ್ ಅಥವಾ ಗಡಿ ಶಾನುಭೋಗ ಎಂದು ಕರೆಯುತ್ತಿದ್ದರು. ಇವರೆಲ್ಲರಿಗೂ ಸರಕಾರದಿಂದ ನಿಗದಿತ ಸಂಬಳ ದೊರಕುತ್ತಿತ್ತು. ಗ್ರಾಮ ಮಟ್ಟದಲ್ಲಿ ಪರಂಪರಾಗತ ಆಯಗಾರ ಅಥವಾ ಬಾರಾಬಲೂತಿ ಇನ್ನೂ ಸಕ್ರಿಯವಾಗಿತ್ತು. ಗ್ರಾಮಾಡಳಿತದ ಮುಖ್ಯಸ್ಥನನ್ನು ಗೌಡ ಅಥವಾ ಪಟೇಲ ಎಂದು ಕರೆಯುತ್ತಿದ್ದರು. ಇವನ ಜೊತೆಗೆ ಹಳ್ಳಿಯ ನಾಲ್ವರು ಹಿರಿಯರು ಸೇರಿ ಪಂಚಾಯತ್ ಎಂಬ ವ್ಯವಸ್ಥೆ ಇದ್ದು ಗ್ರಾಮದ ಎಲ್ಲಾ ವಿವಾದಗಳನ್ನು ಬಗೆಹರಿಸಲು ಯತ್ನಿಸುತ್ತಿದ್ದರು. ಗ್ರಾಮದ ಎಲ್ಲಾ ಲೆಕ್ಕಗಳನ್ನು ಶಾನುಭೋಗನೇ ನಿರ್ವಹಿಸುತ್ತಿದ್ದನು.

ಹೈದರಾಲಿಯ ನಂತರ ಅಧಿಕಾರಕ್ಕೆ ಬಂದ ಟಿಪ್ಪುಸುಲ್ತಾನ (೧೭೮೨–೧೭೯೯)ನ ಕಾಲದಲ್ಲಿ ಮೇಲಿನ ವ್ಯವಸ್ಥೆಯೇ ಮುಂದುವರೆಯಿತು. ಟಿಪ್ಪು ಸುಲ್ತಾನನ ಪತನ (೧೭೯೯) ವಾದ ನಂತರ ಬ್ರಿಟಿಷರಿಂದ ಮರುಸ್ಥಾಪನೆಯಾದ ಒಡೆಯರ್ ಮನೆತನದ ಮುಮ್ಮಡಿ ಕೃಷ್ಣರಾಜ ಒಡೆಯರ್ (೧೭೯೯–೧೮೬೮)ರವರ ಅಪ್ರಾಪ್ತ ಅವಧಿಯಲ್ಲಿ ದಿವಾನ್ ಪೂರ್ಣಯ್ಯನೇ ರೀಜೆಂಟನೂ ಆಗಿ ಆಡಳಿತವನ್ನು ನಡೆಸಬೇಕಾಯಿತು. ಅವರು ಮೈಸೂರು ಸಂಸ್ಥಾನವನ್ನು ೧೨೦ ತಾಲೂಕುಗಳಾಗಿ ವಿಭಾಗ ಮಾಡಿ ಪ್ರತಿ ತಾಲೂಕಿಗೂ ಒಬ್ಬೊಬ್ಬ ಅಮೀಲರನ್ನು ನೇಮಿಸಿದರು. ಅವರೆಲ್ಲಾ ಆಯಾ ತುಕಡಿ (ಜಿಲ್ಲೆ) ಸುಬೇದಾರರುಗಳ ಅಧಿಕಾರಕ್ಕೆ ಒಳಪಟ್ಟಿದ್ದರು. ಪ್ರತಿ ತುಕಡಿಯ ಖಜಾನೆಗೂ ಒಬ್ಬೊಬ್ಬ ಗೊಲ್ಲನಿದ್ದನು. ಲೆಕ್ಕಕ್ಕೆ ಶಿರಸ್ತೆದಾರನು ಜವಾಬ್ದಾರನಾಗಿದ್ದನು. ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖುದ್ದು ಆಳ್ವಿಕೆ (೧೮೧೧–೧೮೩೧)ಯ ಅವಧಿಯಲ್ಲಿ ಮಾಡಿದ ವ್ಯವಸ್ಥೆಯಿಂದ ೧೯ ಕಛೇರಿಗಳೂ, ೧೨೫ ಗಡಿ

ಎಂದರೆ ತಾಲೂಕುಗಳು ಮತ್ತು ಅವುಗಳ ಒಟ್ಟು ವಿಚಾರಣೆ ಮತ್ತು ನಿಯಂತ್ರಣಕ್ಕಾಗಿ ೬ ಫೌಜುದಾರಿ (ತುಕಡಿ)ಗಳೂ ಸ್ಥಾಪಿತವಾದುವು. ತಾಲೂಕುಗಳ ಹಂಚಿಕೆ ಈ ರೀತಿ ಇತ್ತು.

| ತುಕಡಿಯ ಹೆಸರು | ತಾಲೂಕುಗಳ ಸಂಖ್ಯೆ | ತುಕಡಿಯ ಹೆಸರು | ತಾಲೂಕುಗಳ ಸಂಖ್ಯೆ |
|---|---|---|---|
| ಅಷ್ಟಗ್ರಾಮ ತುಕಡಿ | ೨೮ ತಾಲೂಕುಗಳು | ಮಂಜರಾಬಾದು ತುಕಡಿ | ೧೩ ತಾಲೂಕುಗಳು |
| ಬೆಂಗಳೂರು ತುಕಡಿ | ೨೮ ತಾಲೂಕುಗಳು | ನಗರ ತುಕಡಿ | ೨೪ ತಾಲೂಕುಗಳು |
| ಚಿತ್ರದುರ್ಗ ತುಕಡಿ | ೧೩ ತಾಲೂಕುಗಳು | ಮದ್ದಗಿರಿ ತುಕಡಿ | ೧೯ ತಾಲೂಕುಗಳು |

ಹೀಗೆ ವಿಂಗಡಿಸಿದ ೧೨೫ ತಾಲೂಕುಗಳಲ್ಲಿ ಪ್ರತಿ ತಾಲೂಕಿಗೂ ಒಬ್ಬ ಸುಬೇದಾರ, ಒಬ್ಬ ಪೇಷ್ಕಾರ, ಇಬ್ಬರು ಶಿರಸ್ತೆದಾರರು ಮತ್ತು ಗುಮಾಸ್ತೆ, ಮುನ್ಷಿ ಮುಂತಾದ ಹಲವರು ಲೆಕ್ಕದವರು, ಓಲೆಕಾರ, ಕಿಲ್ಲೆದಾರ, ಠಾಣಾದಾರ, ಅಂಚೆ ಮುತ್ಸದ್ದಿ, ಕೊತ್ವಾಲ್ ಚಾವಡಿ ಮುಂತಾದ ಹಲವು ಚಾವಡಿಗಳು, ಆಯಾ ಗ್ರಾಮದ ಪ್ರಜೆಗಳಿಗೆ ಗೊತ್ತುಗಾರರಾಗಿ ಗೌಡ, ಶಾನುಭೋಗ, ಶೇಕದಾರ, ಪ್ರತಿ ತುಕಡಿಗೊಬ್ಬ ಫೌಜುದಾರ ಇರುತ್ತಿದ್ದರು. ಅವರ ಕಛೇರಿಗಳಿಗೆ ಶಿರಸ್ತೆದಾರ, ಗುಮಾಸ್ತೆ, ಮುನ್ಷಿ ಮುಂತಾದ ಸಿಬ್ಬಂದಿಯನ್ನು ನೇಮಕ ಮಾಡಲಾಯಿತು.

ಬ್ರಿಟಿಷರ ಆಡಳಿತ ಕಾಲದಲ್ಲಿ ಸಂಸ್ಥಾನವನ್ನು ವಿಭಾಗ, ಜಿಲ್ಲೆ, ಉಪವಿಭಾಗ ತಾಲೂಕು ಮತ್ತು ಹೋಬಳಿ ಎಂದು ಅನುಕ್ರಮವಾಗಿ ಕಿರಿದಾಗುತ್ತಾ ಸಾಗುವಂತೆ (ವಿಕೇಂದ್ರೀಕರಣ) ವಿಂಗಡಿಸಲಾಗಿತ್ತು. ಪ್ರತಿಯೊಂದು ಆಡಳಿತ ಘಟಕವೂ ಓರ್ವ ಜವಾಬ್ದಾರಿಯುತ ಅಧಿಕಾರಿಯ ನಿಯಂತ್ರಣದಲ್ಲಿದ್ದು ಅವನು ತನ್ನ ಮೇಲಿನ ಅಧಿಕಾರಿಯ ಅಧೀನದಲ್ಲಿರುತ್ತಿದ್ದನು. ಸಾಮಾನ್ಯವಾಗಿ ಸಣ್ಣ ಸಣ್ಣ ವೃತ್ತಗಳು ಮತ್ತು ಉಪವಿಭಾಗಗಳಾಗಿ ವಿಂಗಡಣೆಯಾಗಿರುತ್ತಿದ್ದ ಜಿಲ್ಲೆಗಳ ಸಮೂಹವನ್ನೇ ಪ್ರಾಂತ ಎಂದು ಪರಿಗಣಿಸಬಹುದಾಗಿತ್ತು; ಮತ್ತು ಆಡಳಿತ ಘಟಕಗಳಲ್ಲಿ ಅತ್ಯಂತ ಮುಖ್ಯವಾದುದು 'ಜಿಲ್ಲೆ'ಯೇ ಆಗಿತ್ತು. ವಿಭಾಗೀಯ ಅಧಿಕಾರಿಗಳನ್ನು ೧೮೬೧ ರಿಂದ ಸೂಪರಿಂಟೆಂಡೆಂಟ್ ಎಂದು ಕರೆಯುತ್ತಿದ್ದರು; ನಂತರದ ಜಿಲ್ಲಾಧಿಕಾರಿಗಳನ್ನು ಆಗ ಡೆಪ್ಯುಟಿ ಸೂಪರಿಂಟೆಂಡೆಂಟ್ ಎಂದು ಕರೆಯುತ್ತಿದ್ದರು; ಕಬ್ಬನ್ ಮಹಾಶಯನು ಕಮಿಷನರಾಗಿದ್ದಾಗ ನಾಲ್ಕು ವಿಭಾಗಗಳಿದ್ದವು ಮತ್ತು ಎಲ್.ಬಿ. ಬೌರಿಂಗನು ಚೀಫ್ ಕಮಿಷನರಾಗಿದ್ದಾಗ (೧೮೬೨) ಅವುಗಳ ಸಂಖ್ಯೆಯನ್ನು ಮೂರಕ್ಕಿಳಿಸಿದನು – ಬೆಂಗಳೂರು, ಅಷ್ಟಗ್ರಾಮ ಮತ್ತು ನಗರ, ಚಾಮರಾಜನಗರ ಜಿಲ್ಲಾ ಪ್ರದೇಶವು ಆಗ ಅಷ್ಟಗ್ರಾಮದಲ್ಲಿ ವಿಭಾಗದಲ್ಲಿ (ಮೈಸೂರು ಜಿಲ್ಲೆ) ಸೇರಿತ್ತು. ಕಬ್ಬನ್ನನ ಆಡಳಿತಾವಧಿಯಲ್ಲಿ 'ನಾನ್–ರೆಗ್ಯುಲೇಷನ್' ಪ್ರಾಂತವೆನಿಸಿದ್ದ ಮೈಸೂರು ಸಂಸ್ಥಾನಕ್ಕೆ ಬ್ರಿಟಿಷ್ ಕಾಯಿದೆಗಳು ತಾನೇ ತಾನಾಗಿ ಅನ್ವಯವಾಗುವಂತಿರಲಿಲ್ಲ. ಬೌರಿಂಗನ ಕಾಲದಲ್ಲಿ ಮೈಸೂರು 'ರೆಗ್ಯುಲೇಷನ್' ಪ್ರಾಂತವೆಂದು ಘೋಷಿಸಲ್ಪಟ್ಟಿತು. ೧೮೬೯ರಲ್ಲಿ ವಿಭಾಗೀಯ ಸೂಪರಿಂಟೆಂಡೆಂಟರನ್ನು ಕಮೀಷನರು ಎಂದು ಮತ್ತು ಡೆಪ್ಯುಟಿ ಸೂಪರಿಂಟೆಂಡೆಂಟರನ್ನು ಡೆಪ್ಯುಟಿ ಕಮೀಷನರು ಎಂದು ಮರುನಾಮಕರಣ ಮಾಡಲಾಯಿತು; ಆಗಲೇ, ಕಮೀಷನರನ್ನು 'ಚೀಫ್ ಕಮೀಷನರು' ಎಂದು ಕರೆಯಬೇಕೆಂದು ಆದೇಶಿಸಲಾಯಿತು.

ತನ್ನ ಅಧೀನಕ್ಕೊಳಪಟ್ಟ ಪ್ರದೇಶ ಅಥವಾ ಜಿಲ್ಲೆಯಲ್ಲಿ ಡೆಪ್ಯುಟಿ ಕಮೀಷನರ್ ಅಥವಾ ಜಿಲ್ಲಾಧಿಕಾರಿಯು ಸರಕಾರದ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸುತ್ತಿದ್ದನು; ಜನರ ದೃಷ್ಟಿಯಲ್ಲಿ ಸರಕಾರದ ಅಧಿಕಾರವು ಅವನಲ್ಲಿ ಅಂತರ್ಗತವಾಗಿರುವುದೇನೋ ಹೌದು; ಮತ್ತು, ಅವರುಗಳ ಬೇಗೆಗಳನ್ನು ನಿವಾರಿಸಿ ಸೌಖ್ಯವನ್ನು ಹೆಚ್ಚಿಸಲು ಜನರು ಮೊದಲು ನೋಡುತ್ತಿದ್ದುದು ಅವನ ಕಡೆಗೇ. ಪ್ರಾರಂಭದಲ್ಲಿ ಅವನು ಪ್ರಧಾನ ಕಂದಾಯಾಧಿಕಾರಿ ಮತ್ತು ಪ್ರಧಾನ ಮ್ಯಾಜಿಸ್ಟ್ರೇಟ್ ಎರಡೂ ಆಗಿದ್ದನು. ತದನಂತರ ನ್ಯಾಯಾಧೀಶನ ಕರ್ತವ್ಯಗಳಿಂದ ಮ್ಯಾಜಿಸ್ಟ್ರೇಟನ ಕರ್ತವ್ಯಗಳನ್ನು ಪ್ರತ್ಯೇಕಿಸಿ, ಡೆಪ್ಯುಟಿ ಕಮೀಷನರಿಗೆ ನೀಡಲಾಯಿತು. ಆದರೂ ಅವನ ಪ್ರಥಮ ಕರ್ತವ್ಯ ಭೂಮಿ ಮತ್ತು ಭೂಕಂದಾಯದೊಡನೆಯೇ ಮುಖ್ಯವಾಗಿ ಸಂಬಂಧಿಸಿತ್ತು. ೧೮೬೯ರಲ್ಲಿ ಸಹಾಯಕ ಸೂಪರಿಂಟೆಂಡೆಂಟ್‌ರವರು ನಿರ್ವಹಿಸುತ್ತಿದ್ದ ನ್ಯಾಯಾಧೀಶನ ಕರ್ತವ್ಯಗಳನ್ನು ಹಿಂದಕ್ಕೆ ಪಡೆಯಲಾಯಿತು ಮತ್ತು ಸಹಾಯಕ ನ್ಯಾಯಾಧೀಶರನ್ನು ನೇಮಕ ಮಾಡಲಾಯಿತು. ಅಮೀಲದಾರರು ನಿರ್ವಹಿಸುತ್ತಿದ್ದ ನ್ಯಾಯಾಧೀಶನ ಅನೇಕ ಜವಾಬ್ದಾರಿಗಳನ್ನು ಸಹಾ ೧೮೭೪–೭೫ ರಿಂದ ಹಿಂಪಡೆದು ಮುನ್ಸೀಫರುಗಳಿಗೆ ನೀಡಲಾಯಿತು. ಚಾಮರಾಜೇಂದ್ರ ಒಡೆಯರಿಗೆ ರಾಜ್ಯಾಧಿಕಾರವನ್ನು ಹಿಂತಿರುಗಿಸುವ ಮೊದಲು ೧೮೭೯ರಲ್ಲಿ ವಿಭಾಗೀಯ ಕಮೀಷನರ ಹುದ್ದೆಗಳನ್ನು ರದ್ದು ಮಾಡಲಾಯಿತು. ಜಿಲ್ಲೆಗಳಲ್ಲಿ ಡೆಪ್ಯುಟಿ ಕಮೀಷನರು ಮತ್ತು ಅವರ ಅಧೀನದಲ್ಲಿ ಸಹಾಯಕ ಕಮೀಷನರು ಮುಂದುವರೆಸಲ್ಪಟ್ಟರು. ಸಹಾಯಕ ಕಮೀಷನರ ಅಧೀನಾಧಿಕಾರಿಗಳಾಗಿ ತಾಲೂಕುಗಳಲ್ಲಿ ಅಮೀಲದಾರರು ಸಹಾ ಮುಂದುವರೆಸಲ್ಪಟ್ಟರು. ಇವರ ಕೈಕೆಳಗೆ ಶಿರಸ್ತೇದಾರ, ಶೇಕದಾರ ಮತ್ತು ಹಳ್ಳಿಗಳಲ್ಲಿ ಪಟೇಲ – ಶಾನುಭೋಗ ಕರ್ತವ್ಯ ನಿರ್ವಹಿಸುತ್ತಿದ್ದರು.

## ಕರ್ನಾಟಕ ಏಕೀಕರಣದ ನಂತರದ ಬದಲಾವಣೆಗಳು

ಕರ್ನಾಟಕ ಏಕೀಕರಣವಾದ (೧೯೫೬) ನಂತರ ಜಿಲ್ಲಾಡಳಿತಕ್ಕೆ ಸಂಬಂಧಿಸಿದಂತೆ ಕೆಲವೇ ಕೆಲವು ಬದಲಾವಣೆಗಳಾಗಿದ್ದು, ಅವುಗಳನ್ನು ಸೂಕ್ತ ಜಾಗಗಳಲ್ಲಿ ಪ್ರಸ್ತಾಪಿಸಲಾಗಿದೆ. ಎ. ಅವಸ್ಥಿ ಎಂಬ ವಿದ್ವಾಂಸರು ಹೇಳುವಂತೆ, "ಹೀಗೆ ಬ್ರಿಟಿಷ್ ಆಳ್ವಿಕೆಯಲ್ಲಿ ಜಿಲ್ಲೆಯು ಆಡಳಿತ ಮತ್ತು ರಾಜಕೀಯ ಪ್ರಜ್ಞೆಗಳೆರಡಲ್ಲಿಯೂ ವಾಸ್ತವಿಕವಾಗಿ ಒಂದು ತರಹದ ಉಪರಾಜಧಾನಿಯಾಯಿತು. ಸ್ವತಂತ್ರ ಭಾರತವು ಈ ಪರಂಪರೆಯನ್ನು ಕಾಯ್ದುಕೊಂಡಿತು. ರಾಜ್ಯದಲ್ಲಿ ಆಡಳಿತದ ಮತ್ತು ಸರಕಾರದ ವ್ಯವಸ್ಥೆಯಲ್ಲಿ ಜಿಲ್ಲೆಯು ಆಯಕಟ್ಟಿನಂತೆ ತನ್ನ ಸ್ಥಾನವನ್ನು ಉಳಿಸಿಕೊಂಡಿತು. ಈ ಮಟ್ಟದಲ್ಲಿ ಸರಕಾರದ ನೀತಿಗಳು ಕಾರ್ಯರೂಪದಲ್ಲಿ ಬರುತ್ತಿವೆ. ಸ್ಥಾನಿಕ ಸಮಸ್ಯೆಗಳನ್ನು ಅಭ್ಯಸಿಸಲಾಗುತ್ತಿದೆ ಹಾಗೂ ಅವುಗಳನ್ನು ರಾಜ್ಯ ಸರಕಾರಕ್ಕೂ ತಿಳಿಸಲಾಗುತ್ತದೆ. ಜಿಲ್ಲೆಯಲ್ಲಿ ಸರಕಾರದ ದೊಡ್ಡ ಸಂಕೀರ್ಣ ಯಂತ್ರವೇ ಕಾರ್ಯಾಚರಣೆಯಲ್ಲಿದೆ; ಇವುಗಳ ಫಲಿತಾಂಶಗಳಿಂದಲೇ ಸರಕಾರಿ ನೀತಿಗಳ ಯೋಜನೆಗಳ ಮತ್ತು ಕಾರ್ಯ ಸರಣಿಗಳ ಯಶಸ್ಸಿನ ವ್ಯಾಪ್ತಿಯನ್ನು ಇಲ್ಲಿ ಅಳೆಯಲು ಸಾಧ್ಯವಿದೆ. ಜಿಲ್ಲೆಯು ಬಹುತರವಾಗಿ ಪ್ರತಿಯೊಬ್ಬ ನಾಗರಿಕನ ಸಂಪರ್ಕದಲ್ಲಿ ಬರುವ ಆಡಳಿತ ಘಟಕವೆಂದು ಸ್ಪಷ್ಟವಾಗಿ ಹೇಳಬಹುದು. ದೇಶದಲ್ಲಿಯ ಪ್ರತಿಯೊಂದು ಹಳ್ಳಿ ಮತ್ತು ಪಟ್ಟಣ ಜಿಲ್ಲೆಯೊಂದರ ಭಾಗವಾಗಿರುತ್ತದೆ. ತನ್ನ ಜಿಲ್ಲೆಯ ಹೆಸರು ಹೇಳಲಾಗದ ನಾಗರಿಕನನ್ನು ಅತಿ ವಿರಳವಾಗಿ ಕಾಣಬಹುದು. ಚುನಾವಣೆ ಉದ್ದೇಶಗಳಿಗಾಗಿ ಜಿಲ್ಲೆಯು ಒಂದು ಮಹತ್ವದ ಘಟಕವೂ ಆಗಿದೆ ಮತ್ತು ಪ್ರತಿಯೊಂದು ರಾಜಕೀಯ ಪಂಗಡವು ಈ ಮಟ್ಟದಲ್ಲಿ ಬಲವಾದ ಸಂಘಟನೆಯನ್ನು ಕಟ್ಟಲು ಪ್ರಯತ್ನಿಸುತ್ತದೆ. ಈ ಅರ್ಥದಲ್ಲಿ ಜಿಲ್ಲೆಯನ್ನು ಸಾಮಾನ್ಯವಾಗಿ ರಾಜಕೀಯ ಮತ್ತು ಆಡಳಿತ ಜೀವನದ ಕೇಂದ್ರವೆಂದು ವರ್ಣಿಸಲೂ ಬಹುದು". ಆಡಳಿತ ಸುಧಾರಣಾ

ಆಯೋಗ ಅಧ್ಯಯನ ತಂಡದ ವರದಿ (ಫೆಬ್ರವರಿ ೧೯೬೭) ಹೇಳುವಂತೆ, ಜಿಲ್ಲೆಯು 'ಒಟ್ಟಾರೆ ಸಾರ್ವಜನಿಕ ಆಡಳಿತದ ಉಪಕರಣವು ಕೇಂದ್ರೀಕೃತವಾಗಬಹುದಾದ ಮತ್ತು ಜನತೆಯೊಡನೆ ನೇರ ಸಂಪರ್ಕದಲ್ಲಿ ಬರುವ ಅತ್ಯಂತ ಅನುಕೂಲಕರ ಭೌಗೋಳಿಕ ಘಟಕವಾಗಿದೆ'.

ಸಚಿವಾಲಯದ ಹೊರಗಿನ ರಾಜ್ಯ ಸರಕಾರದ ಬಹಳಷ್ಟು ವಿಭಾಗಗಳು ಜಿಲ್ಲೆಯಲ್ಲಿ ನೆಲೆಸಿದ ಬಾಹ್ಯ ಇಲ್ಲವೇ ಕ್ಷೇತ್ರ ಸೇವೆಗಳನ್ನು ಹೊಂದಿರುತ್ತವೆ. ಕೆಲವೊಂದು ಸಂದರ್ಭಗಳಲ್ಲಿ ಕೇಂದ್ರ ಸರಕಾರವೂ ಜಿಲ್ಲಾ ಮಟ್ಟದಲ್ಲಿ ತನ್ನ ಕ್ಷೇತ್ರ ನಿಯೋಗಗಳನ್ನು ಹೊಂದಿರುತ್ತದೆ. ಈ ವಿಭಾಗಗಳು ಮತ್ತು ಕೇಂದ್ರ ಸರ್ಕಾರದ ವ್ಯವಹಾರಗಳೊಂದಿಗೆ ಸಂಬಂಧವಿರುವ ಇನ್ನಿತರ ಚಟುವಟಿಕೆಗಳು ಸೇರಿ ಜಿಲ್ಲೆಯ ಆಡಳಿತ ಯಂತ್ರವನ್ನು ರೂಪಿಸಿರುತ್ತವೆ. ಈ ರೀತಿಯಾಗಿ ಎಸ್.ಎಸ್. ಖೇರ್ ಅಭಿಪ್ರಾಯಪಟ್ಟಿರುವಂತೆ, "ಜಿಲ್ಲೆಯ ಆಡಳಿತವು ಜಿಲ್ಲೆಯಲ್ಲಿ ಸರಕಾರದ ಒಟ್ಟು ಕಾರ್ಯನಿರ್ವಹಣೆಗಾಗಿ ಇರುತ್ತದೆ; ಸಾರ್ವಜನಿಕ ವ್ಯವಹಾರಗಳ ವ್ಯವಸ್ಥೆಯನ್ನು ಕಾರ್ಯರೂಪದಲ್ಲಿ ತರುವಾಗ ಒಟ್ಟು ಹಾಗೂ ಸಂಕೀರ್ಣ ಸಂಘಟನೆಯಾಗಿ, ಭೌಗೋಳಿಕವಾಗಿ ಗೆರೆ ಹೊಡೆದು ತೋರಿಸಿದ ಜಿಲ್ಲೆಯ ಪ್ರದೇಶದಲ್ಲಿ ಬರೀ ಸ್ಥಾಯಿಯಾಗಿರದೆ ಒಂದು ಚಾಲಕ ಶಕ್ತಿಯಾಗಿ ಇರುತ್ತದೆ... ಜಿಲ್ಲಾ ಆಡಳಿತವು ಸರಕಾರದ ಎಲ್ಲಾ ನಿಯೋಗಗಳನ್ನು ವೈಯಕ್ತಿಕ ಅಧಿಕಾರಿಗಳನ್ನು ಮತ್ತು ಕಾರ್ಯಕರ್ತರನ್ನು ಸಮಾಜಸೇವಕರನ್ನು ಜಿಲ್ಲೆಯಲ್ಲಿ ಸಾರ್ವಜನಿಕ ವ್ಯವಹಾರಗಳ ವ್ಯವಸ್ಥೆಗಾಗಿರುವ ಎಲ್ಲಾ ಸಂಸ್ಥೆಗಳನ್ನು ಬೇರೆ ಬೇರೆ ತರಹ ಪಂಚಾಯತಿಗಳಂತಹ ಸಂಸ್ಥಾರೂಪದ ಗುಂಪುಗಳನ್ನು ಆಡಳಿತದೊಡನೆ ಹೊಂದಿಕೊಂಡ ಎಲ್ಲಾ ಸಲಹಾ ಮಂಡಳಿಗಳನ್ನು ಒಳಗೊಳ್ಳುತ್ತದೆ".

ರಾಜ್ಯಗಳ ಪುನರ್ವಿಂಗಡಣೆ ವಿಧಿ ಪ್ರಕಾರ ವಿಶಾಲ ಮೈಸೂರು (ನಂತರ 'ಕರ್ನಾಟಕ' ಎಂದು ಮರುನಾಮಕರಣವಾದ) ರಾಜ್ಯ ಅಸ್ಥಿತ್ವಕ್ಕೆ ಬಂದಾಗ (ನವೆಂಬರ್ ೧, ೧೯೫೬) ಒಟ್ಟು ೧೯ ಜಿಲ್ಲೆಗಳಿದ್ದವು. ಮೈಸೂರು ಜಿಲ್ಲೆಯಲ್ಲಿ ಆಗ ೧೧ ತಾಲೂಕುಗಳಿದ್ದು, ಇಂದಿನ ಚಾಮರಾಜನಗರ ಜಿಲ್ಲೆಯಲ್ಲಿರುವ ನಾಲ್ಕು ತಾಲೂಕುಗಳು, ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲ–ಅದರಲ್ಲಿಯೇ ಅಂತರ್ಗತವಾಗಿದ್ದವು. ಆದರ್ಶ ವಿಸ್ತೀರ್ಣ ಇಲ್ಲವೇ ಜನಸಂಖ್ಯೆ ಜಿಲ್ಲೆಗಳನ್ನು ರೂಪಿಸುವಲ್ಲಿ ನಿರ್ಣಾಯಕ ಸಂಗತಿಗಳಾಗಿಲ್ಲ. ಆದರೆ ಇತ್ತೀಚೆಗೆ ಅನೇಕ ರಾಜ್ಯಗಳಲ್ಲಿ ದೊಡ್ಡ ಜಿಲ್ಲೆಗಳನ್ನು ಸಣ್ಣ ಮತ್ತು ಹೆಚ್ಚು ಸುವ್ಯವಸ್ಥೆಗೆ ಅಳವಡುವ ಜಿಲ್ಲೆಗಳನ್ನಾಗಿ ವಿಂಗಡಿಸಲಾಗುತ್ತಿದೆ. ಬೆಂಗಳೂರು ಜಿಲ್ಲೆಯನ್ನು ಬೆಂಗಳೂರು (ನಗರ) ಮತ್ತು ಬೆಂಗಳೂರು (ಗ್ರಾಮೀಣ) ಎಂದು ೧೯೬೨ ರಲ್ಲಿಯೇ ವಿಭಜಿಸಲಾಯಿತು. ಆದರೆ, ನಾಲ್ಕೇ ವರ್ಷಗಳ ನಂತರ (೧೯೬೬), ಬೆಂಗಳೂರು ನಗರ ಜಿಲ್ಲೆಯನ್ನು ಪುನಃ ಬೆಂಗಳೂರು ಗ್ರಾಮೀಣ ಜಿಲ್ಲೆಯಲ್ಲಿ ವಿಲೀನಗೊಳಿಸಲಾಯಿತು. ಬೆಂಗಳೂರು ಜಿಲ್ಲೆಯನ್ನು ೧೯೮೮ರಲ್ಲಿ ಪುನಃ ಬೆಂಗಳೂರು (ನಗರ) ಜಿಲ್ಲೆ ಮತ್ತು ಬೆಂಗಳೂರು (ಗ್ರಾಮೀಣ) ಜಿಲ್ಲೆ ಎಂದು ವಿಭಜಿಸಲಾಗಿದೆ. ಆಗಸ್ಟ್ ೧೯೯೭ರಲ್ಲಿ ಕೆಲವು ದೊಡ್ಡ ಜಿಲ್ಲೆಗಳ ಗಾತ್ರವನ್ನು ಕುಗ್ಗಿಸುವ ಮೂಲಕ ಹೊಸತಾಗಿ ೭ ಹೊಸ ಜಿಲ್ಲೆಗಳನ್ನು ರಚಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲೆಯಿಂದ ಚಾಮರಾಜನಗರ, ಗುಂಡ್ಲುಪೇಟೆ, ಯಳಂದೂರು ಮತ್ತು ಕೊಳ್ಳೇಗಾಲ ತಾಲೂಕುಗಳನ್ನು ಬೇರ್ಪಡಿಸಿ ಹೊಸತಾಗಿ ಚಾಮರಾಜನಗರ ಜಿಲ್ಲೆಯನ್ನು ರಚಿಸಲಾಯಿತು. ಜಿಲ್ಲೆಯು ೪ ತಾಲೂಕು, ೧ ಉಪ ವಿಭಾಗ, ೧೬ ಹೋಬಳಿಗಳನ್ನು ಹಾಗೂ ೧೨ ನಾಡ ಕಛೇರಿಗಳನ್ನು ಹೊಂದಿದೆ. (ಸರ್ಕಾರದ ಅಧಿಸೂಚನೆ ಆರ್‌ಡಿ ೪೨ ಎಲ್‌ಆರ್‌ಡಿ ೮೭ (ಪಿ–III)ದಿನಾಂಕ ೨.೮.೧೯೯೭)


## ಕಂದಾಯ ಆಡಳಿತದ ಘಟಕಗಳು

ಪ್ರಾಚೀನ ಭಾರತದಲ್ಲಿ ವಾಸ್ತವವಾಗಿ ಸರ್ಕಾರದಲ್ಲಿ ಎರಡು ಇಲಾಖೆಗಳು ಮಾತ್ರ ಪ್ರಮುಖವಾದವುಗಳಾಗಿದ್ದವು. ಅವುಗಳಲ್ಲಿ ಮೊದಲನೆಯದೇ ಭೂ ಕಂದಾಯ ಇಲಾಖೆ ಮತ್ತು ಎರಡನೆಯದೇ ಸೈನಿಕ ಅಥವಾ ರಕ್ಷಣಾ ಇಲಾಖೆ. ಮೊದಲನೇ ಇಲಾಖೆಯು ಭೂ ನಿರ್ವಹಣೆ ಮತ್ತು ಕಂದಾಯ ಅಥವಾ ರಾಜಸ್ವ ವಸೂಲಿ ಹಾಗೂ ಒಳಾಡಳಿತ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರೆ, ಎರಡನೇ ಇಲಾಖೆಯು ಬಾಹ್ಯ ಮತ್ತು ಒಳಗಿನ ಶತ್ರುಗಳ ವಿರುದ್ಧ ರಾಜ್ಯದ ಪ್ರಾದೇಶಿಕ ಸಮಗ್ರತೆಯನ್ನು ಕಾಯ್ದುಕೊಳ್ಳುವ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಿತ್ತು. ನಾಗರೀಕತೆ ಬೆಳೆಯುತ್ತಾ ಬಂದ ಹಾಗೆ ಆಡಳಿತವು ಹೆಚ್ಚೆಚ್ಚು ಸಂಕೀರ್ಣಗೊಳ್ಳುತ್ತಾ ಸಾಗಿ ಸರ್ಕಾರದಲ್ಲಿ ಅನೇಕ ಇಲಾಖೆಗಳು ಮತ್ತು ಪ್ರಕಾರ್ಯಗಳು ಮೂಡುತ್ತಾ ಬಂದವು. ಪ್ರಾರಂಭದಲ್ಲಿ ಈ ಹೊಸ ಇಲಾಖೆಗಳು ಕಂದಾಯ ಇಲಾಖೆಯೆಂಬ ವೃಕ್ಷದ ರೆಂಬೆಕೊಂಬೆಗಳಂತೆಯೇ ಕಾರ್ಯನಿರ್ವಹಿಸುತ್ತಿದ್ದು ಕ್ರಮೇಣ ಒಂದೊಂದಾಗಿ ಪ್ರತ್ಯೇಕಗೊಂಡವು. ಈ ಕಾರಣದಿಂದಾಗಿಯೇ, ಕಂದಾಯ ಇಲಾಖೆಯನ್ನು ಉಳಿದೆಲ್ಲಾ ಸರ್ಕಾರಿ ಇಲಾಖೆಗಳ **"ಮಾತೃ ಇಲಾಖೆ"** ಎಂದು ಪರಿಗಣಿಸುತ್ತಾರೆ.

ರಾಜ್ಯ ಸಚಿವ ಸಂಪುಟದ ಹಿರಿಯ ಸದಸ್ಯರೊಬ್ಬರು ಕಂದಾಯ ಇಲಾಖೆಯ ಮುಖ್ಯಸ್ಥರಾಗಿರುತ್ತಾರೆ. ಕಂದಾಯ ಸಚಿವರ ಕೆಳಗೆ ಸಚಿವಾಲಯದ ಮಟ್ಟದಲ್ಲಿ ಓರ್ವ ಪ್ರಧಾನ ಕಾರ್ಯದರ್ಶಿ ಮತ್ತು ಓರ್ವ ಕಾರ್ಯದರ್ಶಿ ಇರುತ್ತಾರೆ. ಪ್ರಕೃತಿ ವಿಕೋಪ ನಿರ್ವಹಣೆ, ನೋಂದಣಿ ಮತ್ತು ಮುಜರಾಯಿ ವಿಷಯಗಳನ್ನು ಕಾರ್ಯದರ್ಶಿಯವರು ಪರಿಶೀಲಿಸುತ್ತಾರೆ; ಭೂ ಮಾಪನ ಮತ್ತು ಭೂ ದಾಖಲೆ, ಭೂ ಸುಧಾರಣೆ, ಕಂದಾಯ ಸೇವೆಗಳು, ಭೂ ಮಂಜೂರಾತಿ, ಭೂ ಸ್ವಾಧೀನ ಮತ್ತು ಇಲಾಖೆಯ ಸಮಗ್ರ ಮೇಲ್ವಿಚಾರಣೆ ಕಾರ್ಯವನ್ನು ಪ್ರಧಾನ ಕಾರ್ಯದರ್ಶಿಯವರು ನಿರ್ವಹಿಸುತ್ತಾರೆ ಮತ್ತು ಕಂದಾಯ ಇಲಾಖೆಯಲ್ಲಿ ಇ–ಗವರ್ನೆನ್ಸ್‌ನ ಪರಿಣಾಮಕಾರಿ ನಿರ್ವಹಣೆಗಾಗಿ ಹೊಸತಾಗಿ ಸೃಷ್ಟಿಸಿರುವ ವಿಶೇಷ ಕಾರ್ಯದರ್ಶಿ (ಭೂಮಿ) ಇವರು ಗಣಕೀಕರಣ ವ್ಯವಸ್ಥೆಯನ್ನು ನೋಡಿಕೊಳ್ಳುತ್ತಾರೆ.

ಕಂದಾಯ ಇಲಾಖೆಯಲ್ಲಿ ಮುಜರಾಯಿ ಖಾತೆಯನ್ನು ನಿರ್ವಹಿಸಲು ಪ್ರತ್ಯೇಕವಾಗಿ ಒಬ್ಬರು ಸಚಿವರಿರುತ್ತಾರೆ. ಕಾರ್ಯದರ್ಶಿ, ಕಂದಾಯ ಇಲಾಖೆ ಮೇಲೆ ಹೇಳಿರುವಂತೆ ಮುಜರಾಯಿ ಇಲಾಖೆಗೆ ಸಂಬಂಧಿಸಿದ ವಿಷಯ ನಿರ್ವಹಿಸುತ್ತಾರೆ; ಆಯುಕ್ತರು, ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳು, ಮುಜರಾಯಿ ಸಚಿವರಡಿಯಲ್ಲಿ ಕಾರ್ಯ ನಿರ್ವಹಿಸುವರು. ಭೂ ಮಾಪನ ಮತ್ತು ಭೂದಾಖಲೆಗಳ ಇಲಾಖೆಯನ್ನು ೨೦೦೫–೦೬ನೇ ಸಾಲಿನಲ್ಲಿ ರಾಜ್ಯಮಟ್ಟದ ಭೂ ಮಾಪನ ನಿರ್ದೇಶನಾಲಯದ ಕಛೇರಿಯನ್ನು ಹೊರತುಪಡಿಸಿ, ಕಂದಾಯ ಇಲಾಖೆಯಲ್ಲಿ ವಿಲೀನಗೊಳಿಸಲಾಗಿದೆ. ರಾಜ್ಯಮಟ್ಟದಲ್ಲಿ ಕಂದಾಯ ಇಲಾಖೆಯ ಅಧೀನಕ್ಕೊಳಪಡುವ ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ೨೦೦೫ನೇ ಇಸವಿಯಲ್ಲಿ ಪುನಃ ಸ್ಥಾಪಿಸಲಾಗಿದೆ.

**ಕೋಷ್ಟಕ–೯.೧ ಚಾಮರಾಜನಗರ ಜಿಲ್ಲೆ ಕಂದಾಯ ಇಲಾಖೆಯ ಸಂಘಟನಾ ಚಾರ್ಟ್**



ಭಾರತದ ಜನಗಣತಿ ೨೦೧೧ರ ಪ್ರಕಾರ ಚಾಮರಾಜನಗರ ಜಿಲ್ಲೆ ೫,೧೦೧ ಚ.ಕಿ.ಮೀ. ವಿಸ್ತೀರ್ಣವುಳ್ಳದ್ದಾಗಿದ್ದು, ೪೨೪ ಜನವಸತಿಯುಳ್ಳ ಮತ್ತು ೮೫ ಜನವಸತಿರಹಿತ ಹಳ್ಳಿಗಳನ್ನು ಹೊಂದಿರುತ್ತದೆ; ಕೇವಲ ನಾಲ್ಕು ನಗರ ಯಾ ಪಟ್ಟಣಗಳು ಈ ಜಿಲ್ಲೆಯಲ್ಲಿವೆ. ಈ ಜಿಲ್ಲೆಯ ನಾಲ್ಕು ತಾಲೂಕುಗಳಿಂದ ಒಟ್ಟು ೧೬ ಹೋಬಳಿಗಳಿವೆ:

| ತಾಲೂಕುಗಳು | ಹೋಬಳಿಗಳು |
|---|---|
| ಚಾಮರಾಜನಗರ | ಸಂತೆಮರಳ್ಳಿ, ಕಸಬ, ಹರವೆ, ಹರದನಹಳ್ಳಿ, ಚಂದಕವಾಡಿಪಾಳ್ಯ, |
| ಕೊಳ್ಳೇಗಾಲ | ಹನೂರು, ಲೊಕ್ಕನಹಳ್ಳಿ, ರಾಮಾಪುರ, ಬೈಲೂರು, ಕಸಬ |
| ಯಳಂದೂರು | ಅಗರ, ಕಸಬ |
| ಗುಂಡ್ಲುಪೇಟೆ | ಬೇಗೂರು, ಕಸಬ, ತೆರಕಣಾಂಬಿ, ಹಂಗಳ |

## ವಿಭಾಗೀಯ/ಪ್ರಾದೇಶಿಕ ಆಯುಕ್ತರು

ಕರ್ನಾಟಕ ಏಕೀಕರಣವಾದ ದಿನದಿಂದಲೇ ಹೊಸ ರಾಜ್ಯವನ್ನು ನಾಲ್ಕು ಕಂದಾಯ ವಿಭಾಗಗಳನ್ನಾಗಿ ವಿಂಗಡಿಸಲಾಯಿತು (೧ನೇ ನವೆಂಬರ್ ೧೯೫೬). ಸರ್ಕಾರದ ಆದೇಶ ಸಂಖ್ಯೆ: ಎಸ್‌ಎಸ್‌೪೮೧೬–೯೧೬/ ಎಸ್‌ಆರ್‌ಡಿ ೨–೫೬.೨ ದಿನಾಂಕ ೨೪ನೇ ಅಕ್ಟೋಬರ್, ೧೯೫೬, ವಿಭಾಗೀಯ ಆಯುಕ್ತರನ್ನು ನೇರವಾಗಿ ಕಂದಾಯ ಮತ್ತು ಸ್ಥಳೀಯ ಸ್ವಯಮಾಧಿಕಾರ ಇಲಾಖೆಗಳ ಆಡಳಿತ, ಶಾಂತಿ ಸುವ್ಯವಸ್ಥೆ ಮತ್ತು ಅಭಿವೃದ್ಧಿ ಚಟುವಟಿಕೆಗಳ ಸಮನ್ವಯ ಕಾರ್ಯಗಳಿಗೆ ಜವಾಬ್ದಾರರನ್ನಾಗಿ ಮಾಡಲಾಯಿತು. ಕರ್ನಾಟಕ ಭೂಕಂದಾಯ ಅಧಿನಿಯಮ, ೧೯೬೪ರ ಕಲಮು ೬(೨)ರ ಪ್ರಕಾರ, ಸರಕಾರದ ನಿಯಂತ್ರಣಕ್ಕೊಳಪಟ್ಟು, ವಿಭಾಗಾಧಿಕಾರಿಯು ತನ್ನ ವಿಭಾಗದ ಪ್ರಮುಖ ಕಂದಾಯಾಧಿಕಾರಿಯಾಗಿದ್ದರು ಮತ್ತು ವಿಭಾಗದ ವ್ಯಾಪ್ತಿಯಲ್ಲಿ ಅಧೀನ ಕಛೇರಿಗಳ ಮೇಲೆ ಅಧಿಕಾರ ಚಲಾಯಿಸಬಲ್ಲವರಾಗಿದ್ದರು. ವಿಭಾಗಾಧಿಕಾರಿಗಳಿಗೆ ಮೊದಲು ಇದ್ದ ಅಧಿಕಾರಗಳನ್ನು ಕೆಳಗೆ ಕಾಣಿಸಿದೆ.

ವಿಭಾಗಾಧಿಕಾರಿಯು ವಿಭಾಗೀಯ ಮಟ್ಟದಲ್ಲಿನ ಎಲ್ಲಾ ಇಲಾಖೆಗಳ ಮುಖ್ಯ ಸಮನ್ವಯಾಧಿಕಾರಿಯಾಗಿದ್ದರು. ಜಿಲ್ಲಾಧಿಕಾರಿಗಳಿಂದ ಶಿಫಾರಸ್ಸು ಮಾಡಲಾದ ಕಂದಾಯ ಇಲಾಖೆಗೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಪರಿಶೀಲಿಸುವುದು, ಪೌರಾಡಳಿತ, ರಾಷ್ಟ್ರೀಯ ವಿಸ್ತರಣಾ ಸೇವಾ ಘಟಕಗಳು, ತಾಲೂಕು ಅಭಿವೃದ್ಧಿ ಮಂಡಳಿ, ಗ್ರಾಮ ಪಂಚಾಯ್ತಿಗೆ ಸಂಬಂಧಿಸಿದ ಶಿಫಾರಸ್ಸುಗಳೆಲ್ಲಾ ಅವರ ಮೂಲಕವೇ ಸರ್ಕಾರಕ್ಕೆ ಕಳುಹಿಸಲ್ಪಡುತ್ತಿದ್ದವು. ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ಹಲವಾರು ವಿಷಯಗಳಲ್ಲಿ ಅವರು ಮೇಲ್ಮನವಿ ಪ್ರಾಧಿಕಾರ ಹೊಂದಿದ್ದರು. ಅನೇಕ ವಿಷಯಗಳಲ್ಲಿ ಯೋಜನೆ, ಕಾಮಗಾರಿಗಳಿಗೆ ಮಂಜೂರಾತಿ ನೀಡುವ ಅಧಿಕಾರ ಅವರಿಗಿತ್ತು. ಅವರ ವಿಭಾಗದಲ್ಲಿ ಬರುವ ಎಲ್ಲಾ ಕಂದಾಯ ಇಲಾಖೆಯ ಕಛೇರಿಗಳ ತಪಾಸಣೆಯನ್ನು ನಡೆಸುವ ಜವಾಬ್ದಾರಿ ವಿಭಾಗಾಧಿಕಾರಿಯದೇ ಆಗಿತ್ತು. ಅವರು ಜಿಲ್ಲಾಧಿಕಾರಿಗಳಿಗೆ, ಯೋಜನಾಧಿಕಾರಿಗಳಿಗೆ, ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಸಮುದಾಯ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಎದುರಾಗುವ ಅಡೆತಡೆಗಳನ್ನು ನಿವಾರಿಸಿ ಮುನ್ನಡೆವ ಬಗ್ಗೆ ಸಲಹೆ–ಸೂಚನೆಗಳನ್ನು ನೀಡುತ್ತಿದ್ದರು. ತಹಸೀಲ್ದಾರ, ವಿಭಾಗ ಅಭಿವೃದ್ಧಿ ಅಧಿಕಾರಿ ಮುಂತಾದ ಕಂದಾಯ ಇಲಾಖೆಯ ಅಧಿಕಾರಿಗಳ ನೇಮಕಾತಿ, ತೈನಾತಿ ಮತ್ತು ರಜೆ ಮಂಜೂರಾತಿಯೇ ಮುಂತಾದ ವಿಷಯಗಳು ವಿಭಾಗೀಯ ಆಯುಕ್ತರ ಜವಾಬ್ದಾರಿಗಳಾಗಿದ್ದವು. ಅವರ ವಿಭಾಗದ ಎಲ್ಲಾ ಸರಕಾರಿ ಇಲಾಖೆಗಳ ಕೆಲಸಗಳಲ್ಲಿ ಅಂತರ ಇಲಾಖಾ ಸಮನ್ವಯ ತರಲು ಪ್ರತಿ ಮೂರು ತಿಂಗಳಿಗೊಮ್ಮೆ ಸಮನ್ವಯ ಸಮಿತಿಯ ಸಭೆಯನ್ನು ಕರೆಯುತ್ತಿದ್ದರು. ಅಂತಹ ಸಭೆಗಳಲ್ಲಿ ಬೇರೆ ಬೇರೆ ಇಲಾಖೆಗಳ ಕೆಲಸಕಾರ್ಯಗಳಲ್ಲಿ

ದೀರ್ಘಕಾಲದಿಂದ ವಿಲೇವಾರಿಯಾಗದೇ ಇರುವ ವಿಷಯಗಳನ್ನು ಜಾಗ್ರತೆಯಾಗಿ ತೀರ್ಮಾನಿಸಿ ಮುಗಿಸಲು ಪ್ರಯತ್ನ ಮಾಡಲಾಗುತ್ತಿತ್ತು. ವಿಭಾಗೀಯ ಆಯುಕ್ತರಿಗೆ ಸಾಮಾನ್ಯವಾಗಿ ಕಂದಾಯ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಗಮನಿಸುವ ಇಬ್ಬರು ಪತ್ರಾಂಕಿತ ಸಹಾಯಕ ಅಧಿಕಾರಿಗಳು ಮತ್ತು ಪತ್ರಾಂಕಿತ ವ್ಯವಸ್ಥಾಪಕರು ಹಾಗೂ ಇತರ ಸಿಬ್ಬಂದಿ ಆಡಳಿತ ಕಾರ್ಯಗಳಲ್ಲಿ ಸಹಾಯ ಮಾಡುತ್ತಿದ್ದರು.

ವಿಭಾಗಾಧಿಕಾರಿಗಳು ಈ ಹಿಂದೆ ಸಂವಿಧಾನಾತ್ಮಕವಾಗಿ ಮೇಲ್ಮನವಿ ಮತ್ತು ಪುನರ್ ಪರಿಶೀಲನೆ (Appeal and Revision) ಪ್ರಾಧಿಕಾರಿಯಾಗಿ ಈ ಮುಂದೆ ಕಾಣಿಸಿರುವ ನಿಯಮ–ಅಧಿನಿಯಮಗಳಡಿ ಅಧಿಕಾರವನ್ನು ಚಲಾಯಿಸುತ್ತಿದ್ದರು.

i) ಭಾರತೀಯ ವಿಸ್ಫೋಟಕಗಳ ಅಧಿನಿಯಮ, ೧೯೪೦
ii) ಕರ್ನಾಟಕ ನಾಗರೀಕ ಸೇವೆಗಳ ನಿಯಮಗಳು, ೧೯೫೭
iii) ಭಾರತೀಯ ಆಯುಧ ಅಧಿನಿಯಮ, ೧೯೫೯
iv) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧
v) ಕರ್ನಾಟಕ ಭೂ ಸ್ವಾಧೀನ ಅಧಿನಿಯಮ, ೧೯೬೧
vi) ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪
vii) ಕರ್ನಾಟಕ ಪೌರಸಭೆಗಳ ಅಧಿನಿಯಮ, ೧೯೬೪
viii) ಕರ್ನಾಟಕ ಸಿನೆಮಾ (ವಿನಿಯಮನ) ಅಧಿನಿಯಮ, ೧೯೬೪ ಮತ್ತು ಸಿನೆಮ್ಯಾಟೊಗ್ರಾಫಿಕ್ ಅಧಿನಿಯಮ.
ix) ಕರ್ನಾಟಕ ನೀರಾವರಿ ಅಧಿನಿಯಮ, ೧೯೬೫
x) ಕರ್ನಾಟಕ ಭೂ ಮಂಜೂರಾತಿ ನಿಯಮಗಳು, ೧೯೬೯
xi) ಕರ್ನಾಟಕ ಕೃಷಿ ಸಾಲ ಕಾರ್ಯಾಚರಣೆ ಮತ್ತು ಸಂಕೀರ್ಣ ಉಪಬಂಧಗಳ ಅಧಿನಿಯಮ, ೧೯೭೪.
xii) ಕರ್ನಾಟಕ ಇನಾಮುಗಳು ಮತ್ತು ನಿರ್ದಿಷ್ಟ ಇನಾಮುಗಳ ರದ್ಧತಿ ಅಧಿನಿಯಮ (೧೯೫೪, ೧೯೫೫, ೧೯೭೭)
xiii) ಕರ್ನಾಟಕ ಎಕ್ಸಿಬಿಷನ್ ಆಫ್ ಫಿಲ್ಮ್ಸ್ ಆನ್ ಟಿ.ವಿ. ಸ್ಕ್ರೀನ್ ಥ್ರೂ ವಿ.ಸಿ.ಆರ್. (ವಿನಿಯಮನ) ಅಧಿನಿಯಮ, ೧೯೮೪
xiv) ಕರ್ನಾಟಕ ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಪಂಗಡಗಳು ಮತ್ತು ಇತರೆ ಹಿಂದುಳಿದ ವರ್ಗಗಳು (ನೇಮಕಾತಿ, ಮೀಸಲಾತಿ, ಇತ್ಯಾದಿ) ಅಧಿನಿಯಮ, ೧೯೯೩.
xv) ಕರ್ನಾಟಕ ಟ್ರಝರ್ ಟ್ರೋವ್ ಅಧಿನಿಯಮ,
xvi) ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ, ೧೯೯೩
xvii) ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ದತ್ತಿಗಳ ಅಧಿನಿಯಮ, ೧೯೯೭
xviii) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, ೧೯೯೯.

ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ಶಿಫಾರಸ್ಸಿನನ್ವಯ ರಾಜ್ಯದಲ್ಲಿನ ನಾಲ್ಕು ವಿಭಾಗಾಧಿಕಾರಿಗಳ ಕಛೇರಿಗಳನ್ನು ರದ್ದುಗೊಳಿಸಲಾಗಿತ್ತು. ಆದರೆ, ಜಿಲ್ಲೆ, ಉಪವಿಭಾಗ ಮತ್ತು ತಾಲೂಕುಮಟ್ಟದ ಉಸ್ತುವಾರಿ

ಹಾಗೂ ಆಡಳಿತಾತ್ಮಕ ನಿಯಂತ್ರಣ ಪ್ರಾಧಿಕಾರವನ್ನು ಸೃಷ್ಟಿಸುವ ಪರ್ಯಾಯ ವ್ಯವಸ್ಥೆಯನ್ನು ಮಾಡಲಿಲ್ಲ. ವಿಭಾಗಾಧಿಕಾರಿಗಳ ಕಛೇರಿಯನ್ನು ರದ್ದುಗೊಳಿಸಿದ್ದರಿಂದ ಆಡಳಿತದಲ್ಲಿ ಕೆಳಕಂಡ ಪ್ರತಿಕೂಲ ಪರಿಣಾಮಗಳು ಸಂಭವಿಸಿದವು.

ಅ) ಜಿಲ್ಲಾ ಮತ್ತು ತಾಲೂಕು ಮಟ್ಟದಲ್ಲಿ ಆಡಳಿತಾತ್ಮಕ ನಿಯಂತ್ರಣವು ಕ್ರಮವಾಗಿ ಹತೋಟಿ ತಪ್ಪುತ್ತಿತ್ತು.

ಆ) ವಿಭಾಗಮಟ್ಟದಲ್ಲಿ ನಿಯಂತ್ರಣಾಧಿಕಾರಿಯಾಗಿದ್ದ ವಿಭಾಗಾಧಿಕಾರಿಗಳು ವಿವಿಧ ಅಧಿನಿಯಮಗಳು ಮತ್ತು ನಿಯಮಗಳಡಿಯಲ್ಲಿ ನ್ಯಾಯಿಕ ಸ್ವರೂಪದ ಪ್ರಾಧಿಕಾರಿಗಳಾಗಿದ್ದರು. ವಿಭಾಗೀಯ ಕಛೇರಿಗಳ ರದ್ಧತಿಯಿಂದಾಗಿ, ಆ ಕಾರ್ಯಗಳು ವಿಶೇಷವಾಗಿ ಬಾಧಿತವಾಗಿ ಅತೀ ಹೆಚ್ಚಿನ ಪ್ರಕರಣಗಳು ಬಾಕಿ ಉಳಿದವು.

ಮೇಲೆ ಪಟ್ಟಿ ಮಾಡಿರುವ ಅಧಿನಿಯಮ – ನಿಯಮಗಳಡಿಯಲ್ಲಿ ಬರತಕ್ಕ ಪ್ರಕರಣಗಳನ್ನು ಕರ್ನಾಟಕ ಮೇಲ್ಮನವಿ ಪ್ರಾಧಿಕಾರಕ್ಕೆ ವರ್ಗಾಯಿಸಿದ್ದು, ಅವುಗಳನ್ನು ಸಮರ್ಪಕವಾಗಿ ನಿರ್ವಹಿಸಲು ಸಾಧ್ಯವಾಗುತ್ತಿರಲಿಲ್ಲ. ವಿಭಾಗ ಮಟ್ಟದಲ್ಲಿ ಈ ಹಿಂದೆ ಪರಿಶೀಲಿಸಲಾಗುತ್ತಿದ್ದ ಹಲವಾರು ವಿಷಯಗಳನ್ನು/ಪ್ರಕರಣಗಳನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಬೇಕಾದ ಅಗತ್ಯವೂ ಉಂಟಾಯಿತು. ಹೀಗೆ ಸರ್ಕಾರದ ಮಟ್ಟದಲ್ಲಿ ಸಂಭವಿಸಿರುವ ಹೆಚ್ಚುವರಿ ಕಾರ್ಯಬಾಹುಳ್ಯ ಮತ್ತು ಒತ್ತಡವನ್ನು ನಿವಾರಿಸಿಕೊಳ್ಳಲು ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಬೆಂಗಳೂರು, ಮೈಸೂರು, ಗುಲಬರ್ಗಾ ಮತ್ತು ಬೆಳಗಾವಿಗಳಲ್ಲಿ ಸ್ಥಾಪಿಸಲು ಕರ್ನಾಟಕ ಸಚಿವ ಸಂಪುಟವು ತನ್ನ ದಿನಾಂಕ ೧೯–೦೮–೨೦೦೫ ರಂದು ನಡೆದ ಸಭೆಯಲ್ಲಿ ಅಂಗೀಕರಿಸಿತು. ಅದು ಹೊಸ ಪ್ರಾದೇಶಿಕ ಆಯುಕ್ತರುಗಳು ಕಂದಾಯ ಇಲಾಖೆಯ ಕಾರ್ಯಕ್ರಮಗಳ ಜೊತೆಗೆ ಅಭಿವೃದ್ಧಿ ಚಟುವಟಿಕೆಗಳ ಮೇಲುಸ್ತುವಾರಿಯನ್ನು ಕೂಡ ಮಾಡಬೇಕೆಂದು ತೀರ್ಮಾನಿಸಿತು.

ಈ ತೀರ್ಮಾನದ ಪ್ರಕಾರ ಸೆಪ್ಟೆಂಬರ್ ೨೦೦೫ರಲ್ಲಿ ಕಂ.ಇ.೯ ಬಿಎಂಎಂ ೨೦೦೬ ದಿನಾಂಕ ೦೮–೦೯–೨೦೦೫ರಂತೆ ನಾಲ್ಕು ಪ್ರಾದೇಶಿಕ ಆಯುಕ್ತರ ಕಛೇರಿಗಳನ್ನು ಬೆಂಗಳೂರು, ಮೈಸೂರು, ಗುಲಬರ್ಗಾ ಮತ್ತು ಬೆಳಗಾವಿ ಇಲ್ಲಿ ಸಹಾಯಕ ಸಿಬ್ಬಂದಿ ಸಹಿತ ಸ್ಥಾಪನೆ ಮಾಡಿ ರಾಜ್ಯ ಸರಕಾರವು ಆದೇಶ ಹೊರಡಿಸಿತು. ಮೈಸೂರು ಪ್ರಾದೇಶಿಕ ಆಯುಕ್ತರು ಮೈಸೂರು, ಮಂಡ್ಯ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳ ಕಾರ್ಯವ್ಯಾಪ್ತಿ ಹೊಂದಿರುತ್ತಾರೆ. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಅಧೀನರಾಗಿ ಕಾರ್ಯನಿರ್ವಹಿಸುವರು.

ಪ್ರಾದೇಶಿಕ ಆಯುಕ್ತರ ಕಛೇರಿಗಳು ಈ ಕೆಳಕಾಣಿಸಿರುವ ಕಾರ್ಯಗಳನ್ನು ನಿರ್ವಹಿಸುತ್ತದೆ.

೧. ಸಿಬ್ಬಂದಿಗಳ ನಿರ್ವಹಣೆ, ಅಭಿವೃದ್ಧಿ, ತರಬೇತಿ ಮತ್ತು ಕಂದಾಯ ಇಲಾಖೆಯ ಮಾನವ ಸಂಪನ್ಮೂಲದ ಇತರ ವಿಷಯಗಳು.

೨. ಜಿಲ್ಲೆ, ಉಪವಿಭಾಗ, ತಾಲೂಕು, ಹೋಬಳಿ ಮತ್ತು ಗ್ರಾಮಮಟ್ಟದ ಕಂದಾಯದ ಲೆಕ್ಕ ಮತ್ತು ಲೆಕ್ಕ ಪರಿಶೋಧನೆಗಳ ನಿರ್ವಹಣೆ ಹಾಗೂ ವಾರ್ಷಿಕ ತಪಾಸಣೆ, ಅನಿರೀಕ್ಷಿತ ತಪಾಸಣೆ ಹಾಗೂ ಪರಿಶೀಲನೆ ಮತ್ತು ವಾರ್ಷಿಕ ಕಡ್ಡಾಯ ಜಮಾಬಂದಿ ನಡೆಸುವುದು.

೩. ಈ ಹಿಂದೆ ವಿಭಾಗಾಧಿಕಾರಿಗಳು ವಿವಿಧ ನಿಯಮ–ಅಧಿನಿಯಮಗಳಡಿಯಲ್ಲಿ ಚಲಾಯಿಸುತ್ತಿದ್ದ ಶಾಸನಬದ್ಧ (ಮೇಲ್ಮನವಿ ಮತ್ತು ಪುನರಾವಲೋಕನ) ಅಧಿಕಾರ.

೪. ನೋಂದಣಿ ಮತ್ತು ಮುದ್ರಾಂಕ ಶುಲ್ಕ, ಭೂಮಾಪನ ಮತ್ತು ಭೂ ದಾಖಲೆಗಳ ಕಾರ್ಯ, ಮುಜರಾಯಿ ಕಛೇರಿಗಳ ಆಡಳಿತಾತ್ಮಕ ನಿಯಂತ್ರಣಕ್ಕೆ ಸಂಬಂಧಿಸಿದ ಕೆಲಸಗಳ ಮೇಲುಸ್ತುವಾರಿ ಅಧಿಕಾರ.

೫. ಅಧೀನ ಕಛೇರಿಗಳಲ್ಲಿ ಕಾನೂನು ಬದ್ಧವಾಗಿ, ಸರಕಾರದ ಸೂಚನೆಗಳು/ಆಜ್ಞೆಗಳ ಪ್ರಕಾರ ಮತ್ತು ಸ್ಥಾಯೀ ಆದೇಶಗಳನ್ವಯ ಕೆಲಸ–ಕಾರ್ಯಗಳ ನಿರ್ವಹಣೆ ಆಗುತ್ತಿರುವ ಕುರಿತು ತಪಾಸಣೆ ಮಾಡುವುದು.

೬. ನೈಸರ್ಗಿಕ ವಿಕೋಪ ಹಾಗೂ ಬರ ಪರಿಹಾರ ವಿಷಯಗಳ ಮೇಲ್ವಿಚಾರಣೆ, ನಿಯಂತ್ರಣ ಮತ್ತು ಬೆಳೆ ಕಟಾವು ಪ್ರಯೋಗ ಮತ್ತು ಭೂ ಕಂದಾಯ ಮಾಫಿ ಕಾರ್ಯಗಳ ಅಧಿಕಾರ.

೭. ರಾಜ್ಯದಲ್ಲಿ ಎಲ್ಲಾ ರೀತಿಯ ಚುನಾವಣೆಗಳ ಮೇಲ್ವಿಚಾರಣೆ.

೮. ಭೂ ಮಂಜೂರಾತಿ, ಭೂ ಸ್ವಾಧೀನ, ಭೂ ಸುಧಾರಣೆ, ಭೂ ಕಂದಾಯ ವಸೂಲಿ, ಭೂ ಮಾಪನ ಮತ್ತು ಕಂದಾಯ ಇಲಾಖೆಯ ಗಣಕೀಕರಣ ಕಾರ್ಯಗಳ ಮೇಲುಸ್ತುವಾರಿ.

೯. ಜಿಲ್ಲೆ, ಉಪವಿಭಾಗ ಮತ್ತು ತಾಲೂಕು ಕಛೇರಿಗಳಿಗೆ ಹಣಕಾಸು ಬಿಡುಗಡೆ, ವಾರ್ಷಿಕ ಆಯವ್ಯಯ ತಯಾರಿಕೆ, ಶಾಸನ ಸಭೆಗಳ ಪ್ರಶ್ನೆಗಳಿಗೆ ಉತ್ತರಿಸುವುದು, ಶಾಸಕಾಂಗದ ಉಪಸಮಿತಿಗಳಿಗೆ ವರದಿ ಸಲ್ಲಿಸುವುದು ಹಾಗೂ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಪ್ರಗತಿ ಪರಿಶೀಲನೆ ಮಾಡುವುದು.

೧೦. ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರಕಾರಿ ಇಲಾಖೆಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ತಿಂಗಳಿಗೊಮ್ಮೆಯಾದರೂ ವಿಮರ್ಶಿಸುವುದು ಮತ್ತು ಪರಿಶೀಲಿಸುವುದು.

೧೧. ಆರ್ಥಿಕ ಮತ್ತು ಭೌತಿಕ ಗುರಿ ಸಾಧಿಸುವಲ್ಲಿ ಕೊರತೆಯಾದಾಗ ಕಾರಣಗಳನ್ನು ಪತ್ತೆ ಹಚ್ಚಿ ಸಕಾಲಿಕ ಪರಿಹಾರೋಪಾಯಗಳನ್ನು ಸೂಚಿಸಿ ಅದರಂತೆ ಕ್ರಮ ಜರುಗಿಸುವುದು. ಅಂತಹ ವಿಷಯಗಳಿಗೆ ಸಂಬಂಧಿಸಿದಂತೆ ಇಲಾಖೆಗಳ ಮುಖ್ಯಸ್ಥರು, ಕಾರ್ಯದರ್ಶಿಗಳು ಮತ್ತು ಪ್ರಧಾನ ಕಾರ್ಯದರ್ಶಿಗಳೊಂದಿಗೆ ಸಮಾಲೋಚಿಸಿ ಸೂಕ್ತ ಕ್ರಮ ಜರುಗಿಸುವುದು.

ನಾಲ್ಕು ಪ್ರಾದೇಶಿಕ ಕಛೇರಿಗಳಿಗೆ ಐ.ಎ.ಎಸ್. ಸೂಪರ್ ಟೈಮ್ ಸ್ಕೇಲ್ ಅಧಿಕಾರಿಗಳು ಮುಖ್ಯಸ್ಥರಾಗಿರುತ್ತಾರೆ. ಪ್ರಾದೇಶಿಕ ಆಯುಕ್ತರ ಪ್ರಕಾರ್ಯಗಳಲ್ಲಿ ನೆರವಾಗಲು ಇಬ್ಬರು ಸೂಪರ್ ಟೈಮ್ ಸ್ಕೇಲ್ ಅಧಿಕಾರಿಗಳಿರುತ್ತಾರೆ. ಅವರುಗಳೆಂದರೆ, (ಅ)ಹೆಚ್ಚುವರಿ ಆಯುಕ್ತರು (ಕಂದಾಯ ಆಡಳಿತ); ಮತ್ತು, ಹೆಚ್ಚುವರಿ ಆಯುಕ್ತರು (ಭೂ ನಿರ್ವಹಣೆ, ಯೋಜನೆಗಳು ಮತ್ತು ಇನ್ನಿತರೆ ವಿಷಯಗಳು). ಇವರಲ್ಲದೆ ಅಗತ್ಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗವನ್ನು ಸಹ ಸೃಷ್ಟಿಸಿ ಪ್ರಾದೇಶಿಕ ಕಛೇರಿಗಳಿಗೆ ನೀಡಲಾಗಿದೆ.

## ಜಿಲ್ಲಾಧಿಕಾರಿ

ಜಿಲ್ಲೆಯು ಆಡಳಿತದ ಅತ್ಯಂತ ಮಹತ್ವದ ಘಟಕವಾದರೆ, ಜಿಲ್ಲಾಧಿಕಾರಿಯು ಅದರ ಅತ್ಯಂತ ನಿರ್ಣಾಯಕ ವ್ಯಕ್ತಿಯಾಗಿರುತ್ತಾನೆ. ಬ್ರಿಟಿಷ್ ಆಡಳಿತದ ಪ್ರಾರಂಭದ ದಿನಗಳಿಂದ ಅವಳಿ ಸರಕಾರ (Dyarchy) ಕಾಲ (೧೯೨೧–೧೯೩೭) ದವರೆಗೆ ಜಿಲ್ಲಾಧಿಕಾರಿಯೊಬ್ಬನೇ ಜಿಲ್ಲಾ ಆಡಳಿತದ ಮುಖ್ಯಸ್ಥನಾಗಿದ್ದನು. ಅವಳಿ ಸರಕಾರದ ಅವಧಿಯು ಅವನ ಸತ್ವ ಪರೀಕ್ಷೆಯ ಕಾಲವಾಗಿತ್ತು. ಸಂಪರ್ಕ ಸಾಧನಗಳ ಅತ್ಯದ್ಭುತ ಬೆಳವಣಿಗೆ, ಶೈಕ್ಷಣಿಕ ಅಭಿವೃದ್ಧಿ, ಪತ್ರಿಕೋದ್ಯಮದ ಏಳಿಗೆ, ಸ್ಥಾನಿಕ ಆಡಳಿತ ಸಂಸ್ಥೆಗಳ ಪ್ರಾರಂಭ ಮತ್ತು ತಾಂತ್ರಿಕ

ವಿಭಾಗಗಳ ಅಭಿವೃದ್ಧಿ, ಜಿಲ್ಲಾಧಿಕಾರಿಯ ಸ್ಥಾನಮಾನದ ಮೇಲೆ ಪ್ರತಿಕೂಲ ಪರಿಣಾಮವನ್ನು ಉಂಟು ಮಾಡಿದವು. ಜಿಲ್ಲಾಧಿಕಾರಿಯ ಮುಖ್ಯ ಗಮನವು ೧೯೩೭ರ ತನಕ ಸಾರ್ವಜನಿಕ ಶಾಂತಿ ಸುವ್ಯವಸ್ಥೆ, ಕಂದಾಯ ಸಂಗ್ರಹಣೆ, ತ್ವರಿತ ನ್ಯಾಯದಾನ ಮತ್ತು ಭೂ ದಾಖಲೆಗಳ ವ್ಯವಸ್ಥೆ ಮತ್ತು ನಿರ್ವಹಣೆ ಮುಂತಾದ ವಿಷಯಗಳ ಮೇಲೆ ಕೇಂದ್ರೀಕೃತವಾಗಿತ್ತು. ಅವರ ಕಾರ್ಯಕ್ಷೇತ್ರವು ೧೯೩೯ ರಿಂದ ವಿಸ್ತರಿಸಿ ಗ್ರಾಮೀಣಾಭಿವೃದ್ಧಿ, ಸಹಕಾರ ಚಳವಳಿಯ ಪ್ರಗತಿ ಮತ್ತು ಗ್ರಾಮಪಂಚಾಯತಿಗಳನ್ನು ಆವರಿಸಿತು. ದ್ವಿತೀಯ ಜಾಗತಿಕ ಯುದ್ಧ ಸೃಷ್ಟಿಸಿದ ಸಮಸ್ಯೆಗಳು ಜಿಲ್ಲಾಧಿಕಾರಿಯ ಕರ್ತವ್ಯಗಳು ಮತ್ತು ಪ್ರಕಾರ್ಯಗಳ ವ್ಯಾಪ್ತಿ ಮತ್ತು ವೈವಿಧ್ಯತೆಯನ್ನು ಮತ್ತಷ್ಟು ವಿಸ್ತರಿಸಿದವು. ಭಾರತವು ಪರತಂತ್ರದಿಂದ ಬಿಡುಗಡೆ ಸಾಧಿಸಿದ ನಂತರ ಎದುರಿಸಬೇಕಾಗಿ ಬಂದ ಸಮಸ್ಯೆಗಳು ಜಿಲ್ಲಾಧಿಕಾರಿಯ ಕಾರ್ಯಭಾರವನ್ನು ಮತ್ತಷ್ಟು ಹೆಚ್ಚಿಸಿದವು. ೧೯೫೨ ರಿಂದ ಆರಂಭವಾದ ಆರ್ಥಿಕ ಮತ್ತು ಸಾಮಾಜಿಕಾಭಿವೃದ್ಧಿ ಕಾರ್ಯಕ್ರಮಗಳು ಹಾಗೂ ೧೯೫೯ ರಲ್ಲಿ ಚಾಲನೆಗೊಂಡ ಪಂಚಾಯತ್ ರಾಜ್ ಪದ್ಧತಿಯು ಜಿಲ್ಲಾಧಿಕಾರಿಯ ಕರ್ತವ್ಯ ಮತ್ತು ಜವಾಬ್ದಾರಿಗಳ ಕುರಿತು ಹೊಸ ಭಾಷ್ಯವನ್ನೇ ಬರೆದವು. ಕಂದಾಯ ಸಂಗ್ರಹ, ಶಾಂತಿ ಸುವ್ಯವಸ್ಥೆ ಕ್ರಮೇಣ ಹಿಂದೆಗೆದು ಮಾನವ ಮತ್ತು ಆರ್ಥಿಕ ಸಂಪನ್ಮೂಲಗಳ ಅಭಿವೃದ್ಧಿ, ಸಮಾಜ ಸೇವೆ ಕಾರ್ಯಗಳು ಜಿಲ್ಲಾಧಿಕಾರಿಯ ಆದ್ಯತಾ ವಿಷಯಗಳಾಗಿ ಹೊರಹೊಮ್ಮಿದವು.

## ಜಿಲ್ಲಾಧಿಕಾರಿಯ ಸಾಮಾನ್ಯ ಕರ್ತವ್ಯಗಳು

೧) ನ್ಯಾಯಾಂಗ ದಂಡಾಧಿಕಾರತ್ವ ಮೂಲಕ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವುದು; ೨) ಸರ್ಕಾರಕ್ಕೆ ಸಂಬಂಧಿಸಿದ ಎಲ್ಲಾ ರೀತಿಯ ಸಾರ್ವಜನಿಕ ದೂರು ಮತ್ತು ಮನವಿಗಳ ನಿರ್ವಹಣೆ; ೩) ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರ್ವಜನಿಕ ವಿತರಣಾ ವ್ಯವಸ್ಥೆಯ ನಿರ್ವಹಣೆ; ೪) ಎಲ್ಲಾ ರೀತಿಯ ಚುನಾವಣೆಗಳನ್ನು ನಡೆಸುವುದು; ೫) ಜನಗಣತಿ, ಜಾನುವಾರು ಗಣತಿ, ಕೃಷಿ ಗಣತಿಯೇ ಮುಂತಾದ ಗಣತಿ ಕಾರ್ಯಗಳನ್ನು ನಡೆಸುವುದು; ೬) ಎಲ್ಲಾ ಔಪಚಾರಿಕ ಸಮಾರಂಭಗಳಲ್ಲಿ ಜಿಲ್ಲಾ ಮಟ್ಟದಲ್ಲಿ ರಾಜ್ಯದ ಪರವಾಗಿ ಶಿಷ್ಟಾಚಾರ ಕಾರ್ಯ ನಿರ್ವಹಣೆ; ೭) ಪ್ರಕೃತಿ ವಿಕೋಪ ನಿರ್ವಹಣೆ, ನೈಸರ್ಗಿಕ ಮತ್ತು ಅನೈಸರ್ಗಿಕ ವಿಕೋಪಗಳಿಂದ ಬಾಧಿತರಾದವರಿಗೆ ಪರಿಹಾರ, ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾರ್ಯ ನಿರ್ವಹಣೆ; ೮) ವೃದ್ಧಾಪ್ಯ ವೇತನ ಮತ್ತಿತರ ಸಾಮಾಜಿಕ ಸುರಕ್ಷತೆ ಯೋಜನೆಗಳ ನಿರ್ವಹಣೆ; ೯) ಜನನ, ಮರಣ ಮತ್ತು ವಿವಾಹಗಳ ನೋಂದಣಿ; ೧೦) ಆದಾಯ, ಜಾತಿ, ಧರ್ಮ, ನಿವಾಸ, ರಾಷ್ಟ್ರೀಯತೆ, ಅಲ್ಪಸಂಖ್ಯಾತರ ಸ್ಥಾನಮಾನ ಇತ್ಯಾದಿಗಳ ಬಗ್ಗೆ ಪ್ರಮಾಣ ಪತ್ರ ನೀಡಿಕೆ; ೧೧) ಗುಪ್ತ ನಿಧಿ ನಿಯಂತ್ರಣ; ೧೨) ಮೋಟಾರು ವಾಹನಗಳ ಅಧಿನಿಯಮದಡಿಯಲ್ಲಿ ಜಿಲ್ಲಾಮಟ್ಟದಲ್ಲಿ ಸಾರಿಗೆ ವಿಷಯಗಳ ನಿರ್ವಹಣೆ; ೧೩) ಎಲ್ಲಾ ನ್ಯಾಯಾಲಯಗಳಲ್ಲಿ ಜಿಲ್ಲಾ ಮಟ್ಟದ ಸರ್ಕಾರಿ ವ್ಯಾಜ್ಯ ನಿರ್ವಹಣೆ; ೧೪) ಕೇಂದ್ರ ಮತ್ತು ರಾಜ್ಯ ಸರ್ಕಾರಗಳ (ಗ್ರಾಮೀಣಾಭಿವೃದ್ಧಿ ಹೊರತುಪಡಿಸಿ) ವಿವಿಧ ಯೋಜನೆಗಳ ಮತ್ತು ಕಾರ್ಯಕ್ರಮಗಳ ಸಮನ್ವಯ ಹಾಗೂ ಪರಿವೀಕ್ಷಣೆ ಕಾರ್ಯ ನಿರ್ವಹಣೆ; ೧೫) ಜಿಲ್ಲಾ ಆಡಳಿತದಡಿ ಬರುವ ಇಲಾಖೆಗಳಾದ ಆರೋಗ್ಯ, ಶಿಕ್ಷಣ, ಸಮಾಜ ಕಲ್ಯಾಣ, ಹಿಂದುಳಿದ ವರ್ಗಗಳ ಕಲ್ಯಾಣ ಮತ್ತು ಪುರಸಭೆ ಹಾಗೂ ಸ್ಥಳೀಯ ಸಂಸ್ಥೆಗಳ ಮೇಲ್ವಿಚಾರಣೆ ಇವಕ್ಕೆಲ್ಲಾ ಪ್ರತ್ಯೇಕ ಅಧಿಕಾರಿಗಳಿದ್ದರೂ, ಜಿಲ್ಲಾ ಮಟ್ಟದಲ್ಲಿ ಈ ಇಲಾಖೆಗಳ ಸಮನ್ವಯ ಹಾಗೂ ಕಾರ್ಯನಿರ್ವಹಣೆಯ ಹೊಣೆಗಾರಿಕೆ ಜಿಲ್ಲಾಧಿಕಾರಿಯದಾಗಿದೆ.

## ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕರ್ತವ್ಯಗಳು

೧) ಜಿಲ್ಲೆಯಲ್ಲಿಯ ಭೂ ದಾಖಲೆಗಳ ನಿರ್ವಹಣೆ ಮತ್ತು ಎಲ್ಲಾ ಜಮೀನುಗಳ ಮಾಪನ; ಭೂಮಿ ಕಂಪ್ಯೂಟರೀಕೃತ ವ್ಯವಸ್ಥೆ, ೨) ಭೂ ಕಂದಾಯ, ನೀರು ತೆರಿಗೆ, ಮತ್ತಿತರ ಸರ್ಕಾರಿ ಬಾಕಿ, ಉಪಕರಗಳು ಮತ್ತು ತೆರಿಗೆಗಳ ವಸೂಲಾತಿ; ೩) ಗ್ರಾಮಠಾಣಾ, ಗೋಮಾಳ, ಗುಂಡು ತೋಪು, ಕೆರೆ ಅಂಗಳ, ಉಪವನಗಳು ಮುಂತಾದ ಸಾಮುದಾಯಿಕ ಜಮೀನುಗಳೂ ಸೇರಿದಂತೆ ಎಲ್ಲಾ ಸರ್ಕಾರಿ ಜಮೀನುಗಳ ನಿರ್ವಹಣೆ ಮತ್ತು ಪರಿಸರ ಸಂರಕ್ಷಣೆ; ೪) ಭೂ ಮಂಜೂರಾತಿ; ೫) ಭೂ ಸುಧಾರಣೆ ಮತ್ತು ಗೇಣಿದಾರಿಕೆಯ ನಿಬಂಧನೆಗಳ ನಿರ್ವಹಣೆ; ೬) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರ ಜಮೀನು ರಕ್ಷಣೆ; ೭) ಭೂ ಪರಿವರ್ತನೆ; ೮) ಸ್ಥಿರಾಸ್ತಿಗಳ ಮೇಲಿನ ಬಾಡಿಗೆ ನಿಯಂತ್ರಣ; ಸಾರ್ವಜನಿಕ ಉದ್ದೇಶಗಳಿಗಾಗಿ ಖಾಸಗಿ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳ್ಳುವುದು; ೯) ಸ್ಥಿರಾಸ್ತಿಗಳ ವ್ಯವಹಾರ, ಉಯಿಲು, ಒಪ್ಪಂದ ಇತ್ಯಾದಿಗಳ ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳ ವಸೂಲಾತಿ; ಮತ್ತು ಹಿಂದೂ ಧಾರ್ಮಿಕ ಸ್ಥಳಗಳ ನಿಯಂತ್ರಣ ಮತ್ತು ಅಭಿವೃದ್ಧಿ.

ಜಿಲ್ಲಾಧಿಕಾರಿಯವರು ಈ ಕೆಳಕಾಣಿಸಿರುವ ಮುಖ್ಯವಾದ ಅಧಿನಿಯಮಗಳಡಿ ದತ್ತವಾಗಿರುವ ಅಧಿಕಾರಗಳನ್ನು ತಮ್ಮ ವಿವಿಧ ಕರ್ತವ್ಯಗಳ ನಿರ್ವಹಣೆ ಸಂಬಂಧ ಚಲಾಯಿಸಬಹುದಾಗಿದೆ:

೧) ದಂಡಪ್ರಕ್ರಿಯಾ ಸಂಹಿತೆ ಕಾಯ್ದೆ (ಶಾಂತಿ ಪಾಲನೆ, ಸಾರ್ವಜನಿಕ ಉಪದ್ರವಗಳು ಮತ್ತು ಇತರೆ ವಿಷಯಗಳು – ಕಾರ್ಯಕಾರಿ ದಂಡಾಧಿಕಾರಿಗಳಿಗೆ ಸಂಬಂಧಿಸಿದಂತಿರುವ)
೨) ಕರ್ನಾಟಕ ಕೃಷಿ ಸಾಲ ಅಧಿನಿಯಮ
೩) ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ,
೪) ನೈಸರ್ಗಿಕ ವಿಕೋಪ ನಿರ್ವಹಣೆ ಪ್ರಾಧಿಕಾರ ಅಧಿನಿಯಮ.
೫) ಸಂಘ ಸಂಸ್ಥೆಗಳ ನೋಂದಾವಣಿ ಅಧಿನಿಯಮ
೬) ಭಾರತೀಯ ಪೆಟ್ರೋಲಿಯಂ ಅಧಿನಿಯಮ,
೭) ಭಾರತೀಯ/ ಕರ್ನಾಟಕ ರಿಜಿಸ್ಟ್ರೇಷನ್ ಅಧಿನಿಯಮ, ೧೯೦೮
೮) ಭಾರತೀಯ ಪಾಲುದಾರಿಕೆ ಅಧಿನಿಯಮ, ೧೯೩೨
೯) ಕರ್ನಾಟಕ ಮೋಟಾರು ವಾಹನಗಳ ಅಧಿನಿಯಮ, ೧೯೩೯
೧೦) ಭಾರತೀಯ ಸ್ಫೋಟಕಗಳ ಅಧಿನಿಯಮ, ೧೯೪೦
೧೧) ಕರ್ನಾಟಕ ಸಿನೆಮಾ (ರೆಗ್ಯುಲೇಷನ್) ಅಧಿನಿಯಮ, ೧೯೫೪
೧೨) ಭಾರತೀಯ ದಂಡ ಸಂಹಿತೆ, ಕರ್ನಾಟಕ ವಕ್ಫ್ ಅಧಿನಿಯಮ ೧೯೫೪
೧೩) ಭಾರತೀಯ ಶಸ್ತ್ರಾಸ್ತ್ರಗಳ ಅಧಿನಿಯಮ, ೧೯೫೫
೧೪) ಕರ್ನಾಟಕ ಮುದ್ರಾಂಕಗಳ ಅಧಿನಿಯಮ, ೧೯೫೭
೧೫) ಮತದಾರರ ನೊಂದಣಿ ನಿಯಮಾವಳಿ ೧೯೬೦
೧೬) ಕರ್ನಾಟಕ ಭೂ ಸ್ವಾಧೀನ ಅಧಿನಿಯಮ, ೧೯೬೧
೧೭) ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧
೧೮) ಕರ್ನಾಟಕ ಬಾಡಿಗೆ ನಿಯಂತ್ರಣ ಕಾಯ್ದೆ, ೧೯೬೧
೧೯) ಕರ್ನಾಟಕ ಗುಪ್ತ ನಿಧಿ ಅಧಿನಿಯಮ, ೧೯೬೨

೨೦) ಕರ್ನಾಟಕ ಪೋಲೀಸ್ ಅಧಿನಿಯಮ ೧೯೬೩
೨೧) ಕರ್ನಾಟಕ ಮುನಿಸಿಪಾಲಿಟಿಗಳ ಅಧಿನಿಯಮ ೧೯೬೪
೨೨) ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪
೨೩) ಕರ್ನಾಟಕ ನೀರಾವರಿ ಅಧಿನಿಯಮ, ೧೯೬೫
೨೪) ಪಾಸ್‌ಪೋರ್ಟ್ ಅಧಿನಿಯಮ ೧೯೬೭
೨೫) ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ, ೧೯೬೯
೨೬) ಭಿಕ್ಷಾವೃತ್ತಿ ನಿಷೇಧ ಅಧಿನಿಯಮ ೧೯೭೫
೨೭) ಜೀತಪದ್ಧತಿ ನಿರ್ಮೂಲನಾ ಅಧಿನಿಯಮ ೧೯೭೬
೨೮) ಕರ್ನಾಟಕ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳು (ಹಲವು ಜಮೀನುಗಳ ವರ್ಗಾವಣೆ ತಡೆ) ಅಧಿನಿಯಮ, ೧೯೭೮
೨೯) ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಮೇಲಿನ ದೌರ್ಜನ್ಯತಡೆ ಅಧಿನಿಯಮ ೧೯೮೯
೩೦) ಕರ್ನಾಟಕ ಜಿಲ್ಲಾ ಪಂಚಾಯತ್, ತಾಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಅಧಿನಿಯಮ, ೧೯೯೩
೩೧) ಕರ್ನಾಟಕ ಹಿಂದೂ ಧಾರ್ಮಿಕ ಮತ್ತು ಧರ್ಮದತ್ತಿಗಳ ಅಧಿನಿಯಮ ೧೯೯೭
೩೨) ಇನಾಂ ಅಬಾಲಿಷನ್ ಆಕ್ಟ್
೩೩) ಕರ್ನಾಟಕ ವಿಸಿಪಿ ಮೂಲಕ ಟೆಲಿವಿಷನ್ ಪರದೆ ಮೇಲೆ ಚಲನಚಿತ್ರ (ಫಿಲ್ಮ್) ಪ್ರದರ್ಶನ (ರೆಗ್ಯುಲೇಷನ್) ಅಧಿನಿಯಮ, ೨೦೦೦

ಕಂದಾಯ ವಿವಾದಗಳಿಗೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಯು ಬಹುಮಟ್ಟಿನ ನ್ಯಾಯಿಕ ಕರ್ತವ್ಯಗಳನ್ನು ನಿರ್ವಹಿಸುವರು. ಅವರು ಜಿಲ್ಲೆಯ ಕಾರ್ಯಕಾರಿ ನ್ಯಾಯಾಧೀಶರಾಗಿರುವ ಕಾರಣ ಕಾಯ್ದೆ ಮತ್ತು ಸುವ್ಯವಸ್ಥೆಗೆ ಜವಾಬ್ದಾರರಾಗಿರುತ್ತಾರೆ. ಉಪ ವಿಭಾಗೀಯ ಮತ್ತು ತಾಲೂಕು ಕಾರ್ಯ ನಿರ್ವಾಹಕ ನ್ಯಾಯಾಧೀಶರುಗಳ ಮೇಲಧಿಕಾರಿಯೂ ಇವರೇ ಆಗಿರುತ್ತಾರೆ. ಕಾನೂನು ಸುವ್ಯವಸ್ಥೆ ನಿರ್ವಹಣೆ ಸಂಬಂಧದಲ್ಲಿ ಪೋಲಿಸ್ ಬಲದ ಮೇಲೆ ಸಹ ಇವರಿಗೆ ನಿಯಂತ್ರಣ ಇರುತ್ತದೆ; ಅಲ್ಲದೆ, ಸೆರೆಮನೆಗಳು ಮತ್ತು ಬಂದೀಖಾನೆಗಳ ನಿರ್ವಹಣೆ ಸಂಬಂಧ ಇವರಿಗೆ ಮೇಲುಸ್ತುವಾರಿ ಅಧಿಕಾರವಿರುತ್ತದೆ. ಜಿಲ್ಲಾ ದಂಡಾಧಿಕಾರಿಯಾಗಿರುವ ಕಾರಣದಿಂದ ಜಿಲ್ಲಾಧಿಕಾರಿಯಾಗಿ ಭಾರತೀಯ ಶಸ್ತ್ರಾಸ್ತ್ರ ಅಧಿನಿಯಮ ಮತ್ತು ಭಾರತೀಯ ಸಿಡಿಮದ್ದುಗಳ ಅಧಿನಿಯಮ ಪ್ರಕಾರ ಲೈಸೆನ್ಸುಗಳು ಮತ್ತು ಪರವಾನಗಿಗಳನ್ನು ವಿತರಿಸುವ ಅಧಿಕಾರ ಇರುತ್ತದೆ. ಕರ್ನಾಟಕ ಸಿನೆಮಾಟೋಗ್ರಾಫ್ ಅಧಿನಿಯಮ ಪ್ರಕಾರ ಇವರು ಲೈಸೆನ್ಸು ನೀಡುವ ಪ್ರಾಧಿಕಾರವಾಗಿರುತ್ತಾರೆ.

ಜಿಲ್ಲಾಧಿಕಾರಿಯು ಉಪ ಅಭಿವೃದ್ಧಿ ಆಯುಕ್ತರೂ ಆಗಿರುವುದರಿಂದ ಅವರ ಜಿಲ್ಲೆಯ ಸಮುದಾಯ ಅಭಿವೃದ್ಧಿ ಯೋಜನೆ ಕಾರ್ಯಕ್ರಮಗಳ ಅನುಷ್ಠಾನದ ಮೇಲುಸ್ತುವಾರಿ ನಡೆಸುವರು. ಜಿಲ್ಲೆಯಲ್ಲಿರುವ ಅನೇಕ ಇಲಾಖೆಗಳ ತರಹೇವಾರಿ ಅಭಿವೃದ್ಧಿ ಚಟುವಟಿಕೆಗಳ ಮಾರ್ಗದರ್ಶಿತ್ವ ಮತ್ತು ಸಮನ್ವಯ ಕಾರ್ಯಗಳನ್ನು ಇವರು ಜಿಲ್ಲಾ ಅಭಿವೃದ್ಧಿ ಮಂಡಳಿಯ ಎಕ್ಸ್–ಅಫಿಷಿಯೊ ಅಧ್ಯಕ್ಷರ ಸ್ಥಾನದಿಂದ ನಿರ್ವಹಿಸುವರು. ಬಹುಪ್ರಕಾರದ ಕರ್ತವ್ಯ ನಿರ್ವಹಣೆಯಲ್ಲಿ ಜಿಲ್ಲಾಧಿಕಾರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವ ಅಧಿಕಾರಿ–ಸಿಬ್ಬಂದಿಯಲ್ಲಿ ಕೇಂದ್ರ ಸ್ಥಾನಿಕ ಸಹಾಯಕ (ಈಗ ಹೆಚ್ಚುವರಿ ಜಿಲ್ಲಾಧಿಕಾರಿ) ಜಿಲ್ಲಾ ಅಭಿವೃದ್ಧಿ ಸಹಾಯಕ, ಕಛೇರಿ ಸಹಾಯಕ, ಜಿಲ್ಲಾ ಸಮಾಜ ಕಲ್ಯಾಣ ಅಧಿಕಾರಿ, ಆಹಾರ ವಸ್ತುಗಳ ಸಹಾಯಕ ಮುಂತಾದವರಿದ್ದರು.

### ಚಾಮರಾಜನಗರ ಜಿಲ್ಲೆಯಲ್ಲಿ ಜಿಲ್ಲಾಧಿಕಾರಿಗಳಾಗಿ ಸೇವೆ ಸಲ್ಲಿಸಿದವರು

| | | | |
|---|---|---|---|
| ೧. | ಬಿ.ಹೆಚ್.ಮಂಜುನಾಥ್ ಭಾ.ಆ.ಸೇ., ವಿಶೇಷ ಕರ್ತವ್ಯಾಧಿಕಾರಿಗಳು (ಜಿಲ್ಲಾ ರಚನೆ) | ೨೯–೦೫–೧೯೯೭ | ೧೪–೦೮–೧೯೯೭ |
| ೨. | ಬಿ.ಹೆಚ್.ಮಂಜುನಾಥ್, ಭಾ.ಆ.ಸೇ., | ೧೫–೦೮–೧೯೯೭ | ೨೩–೦೩–೨೦೦೦ |
| ೩. | ಆರ್.ಜೆ.ವಾಲೀಕರ್,ಕ.ಆ.ಸೇ., (ಪ್ರಭಾರ) | ೨೪–೦೩–೨೦೦೦ | ೧೧–೦೪–೨೦೦೦ |
| ೪. | ಬಿ.ಭೀಮಯ್ಯ, ಭಾ.ಆ.ಸೇ., | ೧೨–೦೪–೨೦೦೦ | ೧೯–೦೭–೨೦೦೨ |
| ೫. | ಜಿ.ಎಲ್.ಚಂದ್ರಶೇಖರಯ್ಯ, ಭಾ.ಆ.ಸೇ., | ೨೦–೦೭–೨೦೦೨ | ೨೦–೦೩–೨೦೦೪ |
| ೬. | ಹರ್ಷಗುಪ್ತಾ, ಭಾ.ಆ.ಸೇ., | ೨೦–೦೩–೨೦೦೪ | ೨೪–೦೮–೨೦೦೫ |
| ೭. | ಬಿ.ರಾಮು, ಕ.ಆ.ಸೇ., (ಪ್ರಭಾರ) | ೨೫–೦೮–೨೦೦೫ | ೧೧–೦೯–೨೦೦೫ |
| ೮. | ಕೆ.ಆರ್.ಶಶಿಧರ, ಭಾ.ಆ.ಸೇ., | ೧೨–೦೯–೨೦೦೫ | ೧೪–೦೩–೨೦೦೬ |
| ೯. | ಬಿ.ರಾಮು, ಕ.ಆ.ಸೇ., (ಪ್ರಭಾರ) | ೧೫–೦೩–೨೦೦೬ | ೧೯–೦೫–೨೦೦೬ |
| ೧೦. | ಅನ್ವರ್ ಪಾಷ, ಭಾ.ಆ.ಸೇ., | ೨೦–೦೫–೨೦೦೬ | ೨೨–೦೨–೨೦೦೭ |
| ೧೧. | ಕೆ.ವಿಶ್ವನಾಥರೆಡ್ಡಿ, ಭಾ.ಆ.ಸೇ., | ೨೨–೦೨–೨೦೦೭ | ೧೫–೦೭–೨೦೦೮ |
| ೧೨. | ಜೆ.ಜಯರಾಂ, ಕ.ಆ.ಸೇ., (ಪ್ರಭಾರ) | ೧೫–೦೭–೨೦೦೮ | ೧೮–೦೮–೨೦೦೮ |
| ೧೩. | ಮನೋಜ್ ಕುಮಾರ್ ಮೀನಾ, ಭಾ.ಆ.ಸೇ., | ೧೮–೦೮–೨೦೦೮ | ೨೬–೧೨–೨೦೦೯ |
| ೧೪ | ಸಿರಸಗಿ ನಾಗಪ್ಪ ಕೆ.ಎ.ಎಸ್ (ಪ್ರಭಾರ) | ೨೬–೧೨–೨೦೦೯ | ೨೩–೦೧–೨೦೧೦ |
| ೧೫ | ಚಕ್ರವರ್ತಿ ಮೋಹನ್ ಭಾ.ಆ.ಸೇ | ೨೩–೦೧–೨೦೧೦ | ೧೧–೦೫–೨೦೧೦ |
| ೧೬ | ಎ.ಎಂ.ಯೋಗೀಶ್ ಕೆ.ಎ.ಎಸ್ (ಪ್ರಭಾರ) | ೧೧–೦೫–೨೦೧೦ | ೦೯–೦೬–೨೦೧೦ |
| ೧೭ | ಚಕ್ರವರ್ತಿ ಮೋಹನ್ ಭಾ.ಆ.ಸೇ | ೦೯–೦೬–೨೦೧೦ | ೨೦–೧೦–೨೦೧೦ |
| ೧೮ | ಎಂ.ನಾಗರಾಜು ಕೆ.ಎ.ಎಸ್.(ಪ್ರಭಾರ) | ೨೬–೧೦–೨೦೧೦ | ೨೯–೧೦–೨೦೧೦ |
| ೧೯ | ಕೆ.ಅಮರನಾರಾಯಣ ಭಾ.ಆ.ಸೇ | ೨೯–೧೦–೨೦೧೦ | ೨೫–೦೮–೨೦೧೧ |
| ೨೦ | ಡಾ.ಹೆಚ್.ಟಿ.ಚಂದ್ರಶೇಖರ್ ಕೆ.ಎ.ಎಸ್(ಪ್ರಭಾರ) | ೨೫–೦೮–೨೦೧೧ | ೧೨–೦೯–೨೦೧೧ |
| ೨೧ | ಕೆ.ಅಮರನಾರಾಯಣ ಭಾ.ಆ.ಸೇ | ೧೨–೦೯–೨೦೧೧ | ೦೯–೦೧–೨೦೧೨ |
| ೨೨ | ಕೆ.ಆರ್.ಸುಂದರ್ ಭಾ.ಆ.ಸೇ | ೦೯–೦೧–೨೦೧೨ | ಇಂದಿನವರೆಗೆ |

## ಸಹಾಯಕ ಆಯುಕ್ತರು

ಜಿಲ್ಲಾಧಿಕಾರಿ ಮತ್ತು ತಹಸೀಲ್ದಾರ್ ನಡುವಿನ ಸಂಪರ್ಕದ ಕೊಂಡಿಯಾಗಿ ಸಹಾಯಕ ಆಯುಕ್ತರು ಕಾರ್ಯನಿರ್ವಹಿಸುತ್ತಾರೆ. ಇವರು ಕಂದಾಯ ಮತ್ತು ದಂಡಾಧಿಕಾರಗಳೆರಡನ್ನೂ ಚಲಾಯಿಸುತ್ತಾರೆ. ಕಂದಾಯ ವಿಷಯಗಳಿಗೆ ಸಂಬಂಧಿಸಿದಂತೆ ತಹಸೀಲ್ದಾರರು ನೀಡುವ ಆದೇಶಗಳ ಮೇಲ್ಮನವಿ ಪ್ರಾಧಿಕಾರವಾಗಿ ಸಹಾಯಕ ಆಯುಕ್ತರು ಇರುತ್ತಾರೆ. ಭೂ ಕಂದಾಯ ಕಾಯ್ದೆಯಡಿ ಜಿಲ್ಲಾಧಿಕಾರಿಯವರಿಂದ ದತ್ತವಾಗುವ ಅಧಿಕಾರಗಳನ್ನು ಇವರು ಚಲಾಯಿಸುವರು. ಕರ್ನಾಟಕ ಭೂ ಕಂದಾಯ ಕಾಯ್ದೆ, ೧೯೬೪ರ ಕಲಮುಗಳಲ್ಲಿ ಮತ್ತು ಇನ್ನುಳಿದ ರಾಜ್ಯ ಕಾಯ್ದೆಗಳಲ್ಲಿ ಜಿಲ್ಲಾಧಿಕಾರಿಗೆ ಕೊಡಮಾಡಿರುವ ಅಧಿಕಾರಗಳಲ್ಲಿ ಹಲವನ್ನು ಉಪವಿಭಾಗದ ಸಹಾಯಕ ಆಯುಕ್ತರಿಗೂ ವಿಸ್ತರಿಸಲಾಗಿದೆ. ಸಹಾಯಕ ಆಯುಕ್ತರು ಭೂ ಸ್ವಾಧೀನ ಅಧಿಕಾರಿಯಾಗಿ ಮತ್ತು ಅಭಿವೃದ್ಧಿ ತೆರಿಗೆ ಅಧಿಕಾರಿಯಾಗಿ ಕಾರ್ಯನಿರ್ವಹಿಸುವರು. ಕರ್ನಾಟಕ ಭೂ ಸುಧಾರಣಾ ಅಧಿನಿಯಮದ (೧೯೬೧) ಅಡಿಯಲ್ಲಿ ಇವರು ತಾಲೂಕು ಮತ್ತು ಉಪವಿಭಾಗದ ಟ್ರಿಬ್ಯುನಲ್‌ಗಳ ಅಧ್ಯಕ್ಷರೂ ಹೌದು. ಇವರ ಬಹುಮುಖ್ಯ ಕಾರ್ಯಗಳೆಂದರೆ,

ತಹಸೀಲ್ದಾರರು, ಕಂದಾಯ ನಿರೀಕ್ಷಕರು ಮತ್ತು ಗ್ರಾಮಾಧಿಕಾರಿಗಳ ಕೆಲಸಕಾರ್ಯಗಳನ್ನು ಆಗಿಂದಾಗ್ಗೆ ತಪಾಸಣೆ ನಡೆಸುವ ಮೂಲಕ ಭೂ ಕಬಳಿಕೆ ಮುಂತಾದವನ್ನು ಪತ್ತೆಹಚ್ಚುವುದು, ಸರ್ಕಾರದ ಹಿತಾಸಕ್ತಿಗಳ ರಕ್ಷಣೆ; ತಹಸೀಲ್ದಾರರು ನೀಡುವ ಆದೇಶಗಳನ್ನು ಪ್ರಶ್ನಿಸಿ ಸಲ್ಲಿಸಲಾಗುವ ಮೇಲ್ಮನವಿಗಳನ್ನು ಆಲಿಸುವುದು ಮತ್ತು ಭೂ ಸ್ವಾಧೀನ ಸಂಬಂಧದ ಮೊಕದ್ದಮೆಗಳ ವಿಲೇವಾರಿ ವಾರ್ಷಿಕ ಜಮಾಬಂದಿ ನಡೆಸುವುದು, ಬೆಳೆಗಳು ಮತ್ತು ಗಡಿಗುರುತುಗಳ ಪರಿವೀಕ್ಷಣೆ ಕಾರ್ಯ, ಹಕ್ಕು ದಾಖಲಾತಿಯ ತಪಾಸಣೆ; (ಭೂಮಿ 'ಇ' ಆಡಳಿತ) ಭೂ ಕಂದಾಯ ವಸೂಲಾತಿ, ಅಭಿವೃದ್ಧಿ ತೆರಿಗೆ ಸಂಗ್ರಹ ಮತ್ತು ತಕಾವಿ ಸಾಲಗಳ ಮರುಪಾವತಿ ಕಾರ್ಯಗಳ ಮೇಲುಸ್ತುವಾರಿ ಮುಂತಾದವು.

ಇವರು ಉಪವಿಭಾಗದ ದಂಡಾಧಿಕಾರಿಯಾಗಿದ್ದು, ದಂಡ ಪ್ರಕ್ರಿಯಾ ಸಂಹಿತೆಯಲ್ಲಿ ನೀಡಲಾಗಿರುವ ಅನೇಕ ಅಧಿಕಾರಗಳನ್ನು ಚಲಾಯಿಸುವರು. ಇವುಗಳಲ್ಲಿ ಮುಖ್ಯವಾದವುಗಳೆಂದರೆ, ಸಾರ್ವಜನಿಕ ಶಾಂತಿ ಮತ್ತು ನೆಮ್ಮದಿಯ ರಕ್ಷಣೆ, ಸಾರ್ವಜನಿಕ ಶಾಂತಿ ಭಂಗ ಸಂಭವವೆಂದು ಕಂಡುಬಂದಾಗ ಪ್ರತಿಬಂಧಕಾತ್ಮಕ ಕ್ರಮಗಳನ್ನು ಆದೇಶಿಸುವುದು ಮುಂತಾದವು. ತಮ್ಮ ಉಪವಿಭಾಗದ ವ್ಯಾಪ್ತಿಯಲ್ಲಿ ಕಾಯ್ದೆ ಸುವ್ಯವಸ್ಥೆ ಪರಿಸ್ಥಿತಿ ಕುರಿತಂತೆ ಜಿಲ್ಲಾಧಿಕಾರಿಗೆ ಆಗಿಂದಾಗ್ಗೆ ವರದಿ ಮಾಡುವ ಜವಾಬ್ದಾರಿ ಇವರದೇ ಆಗಿದೆ. ಅವರ ಉಪವಿಭಾಗಕ್ಕೆ ಸಂಬಂಧಿಸಿದ ಒಂದು ಅಥವಾ ಹೆಚ್ಚಿನ ರಾಜ್ಯ ಶಾಸಕಾಂಗದ ಚುನಾವಣಾ ಕ್ಷೇತ್ರದ ನಿರ್ವಚನಾಧಿಕಾರಿಯಾಗಿಯೂ ಸಹಾಯಕ ಆಯುಕ್ತರು ಕಾರ್ಯನಿರ್ವಹಿಸಬೇಕು. ರೈತರ ಆತ್ಮಹತ್ಯೆ ಪ್ರಕರಣಗಳಲ್ಲಿ ಪರಿಹಾರ ನೀಡಲು ಪ್ರಮಾಣ ಪತ್ರ ನೀಡುವುದು, ವಿದ್ಯುತ್ ದುರ್ಬಳಕೆ ತಡೆಗಟ್ಟುವುದು, ಕಸ್ಟೋಡಿಯಲ್ ಡೆತ್, ಸೋಲೇಷಿಯಂ ಫಂಡ್ ನಿಂದ ಪರಿಹಾರ ನೀಡುವಿಕೆ (Hit and Run case) ಮತೀಯ ಗಲಭೆಯ ಸಂತ್ರಸ್ಥರಿಗೆ ಪರಿಹಾರ ನೀಡುವುದು, ಸಾಲ್ವೆನ್ಸಿ ಸರ್ಟಿಫಿಕೇಟ್ (ಎರಡು ಲಕ್ಷಗಳವರೆಗೆ) ಜನನ ಮರಣ ದಾಖಲಾತಿ, ಆರಾಧನಾ ಯೋಜನೆ, ರಾಷ್ಟ್ರೀಯ ಕೌಟುಂಬಿಕ ನೆರವು ಯೋಜನೆ, ಕ.ಭೂ.ಕಂ.ಕಾಯ್ದೆ ೧೯೬೪ ರ ಕಲಂ ೯೪ಎಬಿಸಿ ಕೆಳಗೆ ಸಕ್ರಮೀಕರಣ, ಭೂಪರಿವರ್ತನೆ, ಸಾರ್ವಜನಿಕ ಉಪದ್ರವ ನಿವಾರಣೆ, ಪಡಿತರ ಚೀಟಿ, ಪಡಿತರ ಸಾಮಗ್ರಿ ವಿತರಣೆ, ಮುಂತಾದ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕೆಳಗಿನ ಅಧಿಕಾರಿಗಳ ಕಾರ್ಯವೈಖರಿಯನ್ನು ಪರಿಶೀಲಿಸುವುದು ಹಾಗೂ ಮೇಲಿನ ಅಧಿಕಾರಿಗಳ ಕೆಲಸ ಕಾರ್ಯಗಳಲ್ಲಿ ಸಹಕರಿಸುವುದು.

### ತಹಸೀಲ್ದಾರರು

ತಹಸೀಲ್ದಾರರು ಉಪವಿಭಾಗಾಧಿಕಾರಿಯ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುವ, ಒಂದು ತಾಲೂಕಿನ ಮೇಲೆ ಅಧಿಕಾರ ಹೊಂದಿರುವ ಅಧಿಕಾರಿಯಾಗಿರುತ್ತಾರೆ. ತಮ್ಮ ಮೇಲಧಿಕಾರಿಯ ಮೂಲಕ ಜಿಲ್ಲಾಧಿಕಾರಿಗೆ ಜವಾಬ್ದಾರರಾಗಿರುವ ಇವರು ತಾಲೂಕಿನಲ್ಲಿ ಸರಕಾರದ ಪ್ರತಿನಿಧಿ ಎನಿಸಿಕೊಂಡಿರುತ್ತಾರೆ. ತಮ್ಮ ತಾಲೂಕಿನಲ್ಲಿ ಭೂ ಕಂದಾಯ ವಸೂಲಾತಿಗೆ ಜವಾಬ್ದಾರರಾದ ಇವರು ತಾಲೂಕು ಆಡಳಿತಕ್ಕೆ ಸಂಬಂಧಿಸಿದಂತೆ ಭೂ ಕಂದಾಯ ಅಧಿನಿಯಮ, ಭೂ ಸುಧಾರಣಾ ಅಧಿನಿಯಮ ಮುಂತಾದ ಕಾಯ್ದೆಗಳಡಿ ದತ್ತವಾಗಿರುವ ಅಧಿಕಾರದಡಿ ಅನೇಕ ಕರ್ತವ್ಯಗಳನ್ನು ನಿರ್ವಹಿಸುವರು. ಗ್ರಾಮಲೆಕ್ಕಿಗರು ಮತ್ತು ಕಂದಾಯ ನಿರೀಕ್ಷಕರು ದಕ್ಷತೆ ಹಾಗೂ ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳಬೇಕಾದುದು ತಹಸೀಲ್ದಾರರ ಕರ್ತವ್ಯಗಳಲ್ಲೊಂದು. ಇವರು ಹಕ್ಕು ಬದಲಾವಣೆಗಳನ್ನು ನಿಷ್ಕರ್ಷಿಸಿ, ವಿವಾದಾತ್ಮಕ ಮೊಕದ್ದಮೆಗಳ ಸಂಬಂಧ ಸೂಕ್ತ ಆದೇಶ ಅಥವಾ ತೀರ್ಪುಗಳನ್ನು ನೀಡುವುದು, ಬೆಳೆ ವಹಿವಾಟುಗಳನ್ನು ಪರಾಮರ್ಶಿಸುವುದು ಮತ್ತು ಗ್ರಾಮಠಾಣಗಳನ್ನು ತಪಾಸಿಸುವುದು. ಭೂ ಸುಧಾರಣಾ ಕಾಯ್ದೆಯ ಉಲ್ಲಂಘನೆ ಪ್ರಕರಣಗಳ ವಿರುದ್ಧ ಕ್ರಮ ಪ್ರಾರಂಭಿಸುವ ಜವಾಬ್ದಾರಿ ತಹಸೀಲ್ದಾರರದೇ ಆಗಿರುತ್ತದೆ. ಅಲ್ಲದೆ, ಭೂ ಅಭಿವೃದ್ಧಿಗಾಗಿ ಪಡೆದುಕೊಂಡ

ಸಾಲಗಳಿಂದ ನಡೆಸಿರುವ ಕಾರ್ಯಗಳನ್ನು ಇವರೇ ತಪಾಸಣೆ ಮಾಡಬೇಕು. ತಾಲೂಕು ಮಟ್ಟದ ಸಮಸ್ಯೆಗಳಾದ ಸರ್ಕಾರಿ ಭೂಮಿ ಒತ್ತುವರಿ, ಕೃಷಿ ಭೂಮಿಗೆ ಮಂಜೂರಾದ ಸಾಲಗಳ ಮರುವಸೂಲಾತಿ, ಕಂದಾಯ, ನೀರಾವರಿ ಶುಲ್ಕ, ಪೋಟ್ ಹಿಸ್ಸಾ ಅಳತೆ ವೆಚ್ಚ ಮುಂತಾದ ಸರ್ಕಾರಿ ಬಾಕಿಗಳ ವಸೂಲಾತಿ ಮುಂತಾದವನ್ನು ಇವರೇ ನಿರ್ವಹಿಸಬೇಕು. ಭೂ ಕಂದಾಯ ಅಧಿನಿಯಮ, ಭೂ ಸುಧಾರಣಾ ಅಧಿನಿಯಮ ಮತ್ತು ತಾಲೂಕಿನ ಆಡಳಿತ ಕುರಿತಾದ ನಿಯಮಗಳ ಜಾರಿ ಇವರಿಗೇ ಸೇರಿವೆ. ಆಹಾರ ಧಾನ್ಯ ಎತ್ತುವಳಿ (ಲೆವಿ), ನ್ಯಾಯ ಬೆಲೆ ಅಂಗಡಿಗಳ ಮೂಲಕ ಅಗತ್ಯವಸ್ತುಗಳ ಹಂಚಿಕೆ, ಅಗತ್ಯವಸ್ತುಗಳ ದಾಸ್ತಾನು ತನಿಖೆ ಇವರದೇ ಜವಾಬ್ದಾರಿ. ಅಗತ್ಯ ವಸ್ತುಗಳ ಅಧಿನಿಯಮ ಮತ್ತು ನಿಯಮಾವಳಿಗಳಂತೆ ತಹಸೀಲ್ದಾರರಿಗೆ ಅನೇಕ ಅಧಿಕಾರಗಳು ಮತ್ತು ಜವಾಬ್ದಾರಿಗಳಿವೆ. ವೃದ್ಧರ ಪಿಂಚಣಿ, ವಿಧವೆಯರು ಮತ್ತು ಅಂಗವಿಕಲರಿಗೆ ಮಾಸಾಶನ ಮಂಜೂರಾತಿ ಅಧಿಕಾರ ಇವರಿಗೇ ಇದೆ. ಚುನಾವಣೆಗಳಿಗೆ ಸಂಬಂಧಿಸಿದಂತೆ ಇವರು ವಿಧಾನಸಭಾ ಕ್ಷೇತ್ರದ ಸಹಾಯಕ ನಿರ್ವಾಚನಾ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುವರು. ಮತದಾರರ ಪಟ್ಟಿ ತಯಾರಿಕೆ, ಪರಿಷ್ಕರಣೆ ಮತ್ತು ಚುನಾವಣಾ ಯಂತ್ರದ ಉಸ್ತುವಾರಿ ಇವರದೇ ಜವಾಬ್ದಾರಿಗಳಾಗಿವೆ. ಇವರು ತಾಲೂಕು ದಂಡಾಧಿಕಾರಿಯಾಗಿಯೂ ಕಾರ್ಯನಿರ್ವಹಿಸುವರು. ಭೂ ನ್ಯಾಯಮಂಡಳಿಯ ಕಾರ್ಯದರ್ಶಿಯಾಗಿ ಇವರು ಕಾರ್ಯನಿರ್ವಹಿಸುವರು. ಜಾತಿ, ಆದಾಯ, ಮುಂತಾದ ಪ್ರಮಾಣಪತ್ರಗಳನ್ನು ಇವರೇ ನೀಡುವರು. ಜನನ–ಮರಣ, ರಾಷ್ಟ್ರೀಯತೆ ಮತ್ತು ಸಾಲ್ವೆನ್ಸಿ ಪ್ರಮಾಣಪತ್ರಗಳನ್ನು ನೀಡುವ ಅಧಿಕಾರವೂ ಇವರಿಗಿದೆ. ಕರ್ನಾಟಕ ಸಾಲ ವಿಮೋಚನೆ ಅಧಿನಿಯಮ, ಕರ್ನಾಟಕ ಮನರಂಜನಾ ಅಧಿನಿಯಮ, ಶಸ್ತ್ರಾಸ್ತ್ರ ಕಾಯ್ದೆ (೧೯೫೮) ಮತ್ತು ಶಸ್ತ್ರಾಸ್ತ್ರ ನಿಯಮಗಳು ಮುಂತಾದ ಕಾಯ್ದೆಗಳನ್ನು ಜಾರಿಗೊಳಿಸುವುದು ಇವರದೇ ಜವಾಬ್ದಾರಿ. ವಾರ್ಷಿಕ ಜಮಾಬಂದಿ ಕಾಲದಲ್ಲಿ ಎಲ್ಲಾ ಲೆಕ್ಕಪತ್ರಗಳನ್ನು ನಿಯಮಾನುಸಾರ ಸಿದ್ಧಗೊಳಿಸಿ ಒದಗಿಸಬೇಕಾದ್ದು ಇವರದೇ ಕರ್ತವ್ಯವಾಗಿದೆ. ಭೂ ಕಂದಾಯ ಮಾಫಿ ಸಂಬಂಧ ತಹಸೀಲ್ದಾರರ ಪಾತ್ರ ಬಹಳ ಮುಖ್ಯವಾದುದು. ಸುಸ್ತಿದಾರರಿಂದ ಸರ್ಕಾರಿ ಬಾಕಿಗಳ ವಸೂಲಾತಿಗಾಗಿ ಅವರ ಆಸ್ತಿಪಾಸ್ತಿಗಳನ್ನು ವಿಲೇವಾರಿ ಮಾಡುವ ಅಧಿಕಾರವೂ ತಹಸೀಲ್ದಾರರಿಗಿದೆ. ಈಗ ಭೂ ದಾಖಲೆಗಳ ನಿರ್ವಹಣೆ ಮತ್ತು ಮೋಜಣಿ ವ್ಯವಸ್ಥೆಗಳೆರಡೂ ತಹಸೀಲ್ದಾರರ ಕಾರ್ಯಭಾರದ ವ್ಯಾಪ್ತಿಗೇ ಒಳಪಟ್ಟಿರುವುದರಿಂದ, ಜಮೀನಿನ ಹಕ್ಕು ದಾಖಲೆಗಳನ್ನು ಕಾಲೋಚಿತಗೊಳಿಸುವುದು ಮತ್ತು ಸರ್ವೆ ನಂಬರುಗಳು ಅವುಗಳ ವಿಸ್ತೀರ್ಣ ನಿರ್ವಹಣೆಗಳೆರಡೂ ಪ್ರಕ್ರಿಯೆಗಳನ್ನು ತಹಸೀಲ್ದಾರರೇ ನಿರ್ವಹಿಸಲು ಜವಾಬ್ದಾರರಾಗಿರುತ್ತಾರೆ. ಸರ್ಕಾರದ ಆದೇಶ ಕಂಇ ೨೦೯ ಎಂಎಎಸ್ ೨೦೦೨(ಭಾ– I) ದಿನಾಂಕ ೦೩–೦೬–೨೦೧೧ರಂತೆ ತಹಶೀಲ್ದಾರ ಕಛೇರಿಯ ಒಂದು ಶಿರಸ್ತೇದಾರ್ ಹುದ್ದೆ ಮತ್ತು ಉಪ ವಿಭಾಗಾಧಿಕಾರಿಗಳ ಕಛೇರಿಯ ವ್ಯವಸ್ಥಾಪಕ ಹುದ್ದೆಯನ್ನು 'ಬಿ' ಗ್ರೇಡ್ ತಹಶೀಲ್ದಾರ್ ಹುದ್ದೆಗೆ ಮೇಲ್ದರ್ಜೆಗೇರಿಸಲಾಗಿದೆ.

## ಕ್ಷೇತ್ರಾಭಿವೃದ್ಧಿ ಅಧಿಕಾರಿ

ಪ್ರತಿಯೊಂದು ತಾಲೂಕು ಒಂದು ಸಮುದಾಯ ಅಭಿವೃದ್ಧಿ ಘಟಕವಾಗಿದೆ. ಇದಕ್ಕೆ ಓರ್ವ ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬಿ.ಡಿ.ಓ.) ಇದ್ದು ತಾಲೂಕಿನ ಎಲ್ಲಾ ಅಭಿವೃದ್ಧಿ ಕಾರ್ಯಗಳ ಉಸ್ತುವಾರಿ ಮಾಡುತ್ತಾರೆ. ಮೊದಲು ತಾಲೂಕು ಅಭಿವೃದ್ಧಿ ಮಂಡಳಿಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ ಇವರು ತಾಲೂಕು ಅಭಿವೃದ್ಧಿ ಸಮಿತಿಯ ಕಾರ್ಯದರ್ಶಿಯೂ ಆಗಿದ್ದರು. ಈಗ ಪಂಚಾಯತ್ ಮತ್ತು ಸ್ಥಳೀಯ ಮಂಡಳಿಗಳ ಕಾಯ್ದೆಯಂತೆ ಅಸ್ತಿತ್ವಕ್ಕೆ ಬಂದಿರುವ ತಾಲೂಕು ಪಂಚಾಯತ್‌ನ ಕಾರ್ಯನಿರ್ವಹಣಾಧಿಕಾರಿ ಆಗಿರುತ್ತಾರೆ. ಆದರೆ ಏಪ್ರಿಲ್ ೧, ೧೯೮೭ ರಿಂದ ಇವರ ಕಂದಾಯ ಪ್ರಕಾರ್ಯಗಳನ್ನು ಹಿಂತೆಗೆದುಕೊಳ್ಳಲಾಗಿದ್ದು, ತಾಲೂಕು ಪಂಚಾಯತ್‌ನ ಉಸ್ತುವಾರಿಯಲ್ಲಿ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ಇವರ ಮುಖ್ಯ ಕರ್ತವ್ಯವಾಗಿದೆ. ಇವರಿಗೆ ನೆರವಾಗಲು ಓರ್ವ ವ್ಯವಸ್ಥಾಪಕ ಮತ್ತು ಇತರೆ ಸಿಬ್ಬಂದಿ ಇರುತ್ತಾರೆ.

## ಶಿರಸ್ತೇದಾರ

ಪ್ರತಿಯೊಂದು ತಾಲೂಕಿನಲ್ಲಿ ತಹಸೀಲ್ದಾರರಿಗೆ ಸಹಾಯಕರಾಗಿ ಶಿರಸ್ತೇದಾರ ಅಥವಾ ಉಪ ತಹಸೀಲ್ದಾರರ ನೇಮಕವಾಗಿರುತ್ತದೆ. ಕರ್ನಾಟಕ ಭೂ ಕಂದಾಯ ನಿಯಮಾವಳಿ, ೧೯೬೬ರ ಪ್ರಕಾರ ಶಿರಸ್ತೇದಾರ ಅಥವಾ ತತ್ಸಮಾನ ಅಥವಾ ಹೆಚ್ಚಿನ ಅಧಿಕಾರವುಳ್ಳ ಇಲಾಖೆಯ ಬೇರೆ ಅಧಿಕಾರಿಯು ಹಕ್ಕು ದಾಖಲೆಗಳ ತಯಾರಿಕೆ ಮತ್ತು ನಿರ್ವಹಣೆ ಸಂಬಂಧ ಉಂಟಾಗುವ ವಿವಾದಗಳನ್ನು ಆಲಿಸಿ ಸೂಕ್ತ ಆದೇಶಗಳನ್ನು ನೀಡಬಹುದಾಗಿದೆ. ನಾಡಕಛೇರಿಯ ಕಾರ್ಯಭಾರ ಇರುವ ಶಿರಸ್ತೇದಾರರು ಕರ್ನಾಟಕ ಭೂ ಕಂದಾಯ ನಿಯಮಾವಳಿ ೧೯೬೬ರ ೯೪ನೇ ಕಲಮಿನಡಿಯಲ್ಲಿ ಸರ್ಕಾರಿ ಜಮೀನಿನ ಅನಧಿಕೃತ ಸ್ವಾಧೀನಾನುಭವದ ಮೊಕದ್ದಮೆಗಳನ್ನು ವಿಲೇವಾರಿ ಮಾಡುವ ಅಧಿಕಾರವನ್ನು ಪಡೆದಿರುತ್ತಾರೆ. ಇತ್ತೀಚೆಗೆ ಗಣಕೀಕರಣ ಕಾರ್ಯದ ಮೇಲ್ವಿಚಾರಣೆ, ಹಕ್ಕು ಬದಲಾವಣೆ ಕುರಿತಾದ ವಿವಾದಗಳಿಗೆ ಸಂಬಂಧಿಸಿದ ಆದೇಶಗಳನ್ನು ನಮೂದು ಮಾಡುವುದು ಮುಂತಾದ ಕಾರ್ಯಗಳನ್ನು ಸಹ ಇವರು ಮಾಡಬೇಕು. ತಾಲೂಕು ಶಿರಸ್ತೇದಾರ್, ಹಕ್ಕು ದಾಖಲೆ ಶಿರಸ್ತೇದಾರ್, ಚುನಾವಣಾ ಶಿರಸ್ತೇದಾರ್, ಸಂಧ್ಯಾ ಸುರಕ್ಷಾ ಯೋಜನೆ ಶಿರಸ್ತೇದಾರ್ ಹಾಗೂ ಹೆಚ್ಚುವರಿ ಶಿರಸ್ತೇದಾರ್ ಎಂಬುದಾಗಿ ಐದು ಜನ ಶಿರಸ್ತೇದಾರ್‌ಗಳು ಇರುತ್ತಾರೆ. ಇತ್ತೀಚಿನ ಆದೇಶದಂತೆ ತಾಲೂಕು ಕಛೇರಿಯ ಒಂದು ಶಿರಸ್ತೇದಾರ್ ಹುದ್ದೆ ಗ್ರೇಡ್ II ತಹಶೀಲ್ದಾರ್ ಹುದ್ದೆಯಾಗಿರುತ್ತದೆ.

## ರಾಜಸ್ವ ನಿರೀಕ್ಷಕ

ಹೋಬಳಿಗೆ ಒಬ್ಬರಂತೆ ಕಂದಾಯ ಅಥವಾ ರಾಜಸ್ವ ನಿರೀಕ್ಷಕರಿದ್ದು, ಇವರು ತಹಸೀಲ್ದಾರರ ಕಾರ್ಯಕಾರಿ ಸಹಾಯಕರಾಗಿರುತ್ತಾರೆ. ಪ್ರತಿಯೊಂದು ತಾಲೂಕನ್ನು ಅನೇಕ ಹೋಬಳಿಗಳನ್ನಾಗಿ ವಿಭಜಿಸಲಾಗಿರುತ್ತದಷ್ಟೆ. ಇವುಗಳನ್ನು ರಾಜಸ್ವ ವಲಯ ಎಂದೂ ಕರೆಯುವ ರೂಢಿ ಇದೆ. ಪ್ರತಿಯೊಂದು ರಾಜಸ್ವ ವಲಯದಲ್ಲಿಯೂ ನಿರ್ದಿಷ್ಟ ಗ್ರಾಮಗಳು ಮತ್ತು ಹಳ್ಳಿಗಳು ಸೇರ್ಪಡೆಯಾಗಿರುತ್ತವೆ. ಇದು ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಪ್ರಕಾರ ಒಂದು ಆಡಳಿತ ಘಟಕವಾಗಿರುತ್ತದೆ. ಒಂದು ರಾಜಸ್ವ ವಲಯಕ್ಕೆ ಓರ್ವ ಕಂದಾಯ ನಿರೀಕ್ಷಕನನ್ನು ನೇಮಕ ಮಾಡಲಾಗುತ್ತಿದ್ದು, ಇದರಲ್ಲಿ ವಿಸ್ತೀರ್ಣಕ್ಕನುಗುಣವಾಗಿ ಗ್ರಾಮಗಳ ಸರ್ಕಲ್‌ಗೆ ಒಬ್ಬರಂತೆ ೧೦ ರಿಂದ ೨೦ ಗ್ರಾಮಲೆಕ್ಕಿಗರಿರುತ್ತಾರೆ. ಕಂದಾಯ ನಿರೀಕ್ಷಕರು ತಮ್ಮ ವಲಯದ ಎಲ್ಲಾ ಗ್ರಾಮಲೆಕ್ಕಿಗರೊಡನೆ ಸಂಪರ್ಕದಲ್ಲಿರಬೇಕು ಮತ್ತು ಮೇಲಧಿಕಾರಿಯಾದ ತಹಸೀಲ್ದಾರರ ನಿರ್ದೇಶನದಂತೆ ಕಾರ್ಯನಿರ್ವಹಿಸಬೇಕು. ಭೂ ಕಂದಾಯ ಅಧಿನಿಯಮ ೧೯೬೪ ಮತ್ತು ಭೂ ಸುಧಾರಣಾ ಅಧಿನಿಯಮ ೧೯೬೧ ಇವುಗಳ ಕಾರ್ಯಾಚರಣೆಗೆ ಇವರು ಹೊಣೆಗಾರರಾಗಿರುತ್ತಾರೆ. ಮುಖ್ಯವಾಗಿ ಓರ್ವ ಕಂದಾಯ ಅಧಿಕಾರಿಯಾಗಿದ್ದರೂ, ಇವರು ಮೇಲಾಧಿಕಾರಿಗಳ ಕಛೇರಿಯಿಂದ ತಿಳಿಸಲಾಗುವ ಅನೇಕ ಕಾರ್ಯಗಳನ್ನು ಮಾಡಬೇಕಾಗಿರುತ್ತದೆ. ಬೆಳೆ ಕಟಾವು ಪ್ರಯೋಗ ನಡೆಸುವುದು, ಸರ್ಕಾರಿ ಬಾಕಿ ವಸೂಲಿಗಾಗಿ ಅಗತ್ಯ ಕ್ರಮ ಜರುಗಿಸುವುದು, ಪ್ರಕೃತಿ ವಿಕೋಪ ಸಂಭವಿಸಿದಾಗ ಕ್ರಮ ತೆಗೆದುಕೊಳ್ಳುವುದು, ಅಭಾವ ಪರಿಸ್ಥಿತಿ ನಿಭಾವಣೆ, ಆಹಾರ ವಿತರಣೆ, ಲೆವಿ ಸಂಗ್ರಹಣೆ, ಮತದಾರರ ಪಟ್ಟಿ ತಯಾರಿಕೆ, ಚುನಾವಣಾ ಕೆಲಸಕಾರ್ಯಗಳು, ಗ್ರಾಮಸಭೆ, ಮೇಲಾಧಿಕಾರಿಗಳಿಂದ ಬರುವ ಪತ್ರಗಳಿಗೆ ವರದಿ ಸಲ್ಲಿಸುವುದು. ಶಿಷ್ಟಾಚಾರ ನಿರ್ವಹಣೆ, ಮುಂತಾದವುಗಳನ್ನು ನಿರ್ವಹಿಸಬೇಕು. ಭೂ ಕಂದಾಯ, ಅಭಿವೃದ್ಧಿ ಶುಲ್ಕ, ನೀರಾವರಿ ದರ, ತಕಾವಿ ಸಾಲಗಳು ಮುಂತಾದವುಗಳ ವಸೂಲಾತಿ, ಗ್ರಾಮಲೆಕ್ಕಿಗರ ಲೆಕ್ಕಪುಸ್ತಕಗಳ ಪರಿಶೀಲನೆ, ಸರ್ಕಾರಿ ಭೂಮಿಗಳ ಸೀಮಾ ತಪಾಸಣೆ, ಇತ್ಯಾದಿ. ಸರ್ಕಾರದ ಭೂ ದಾಖಲೆಗಳ ತಯಾರಿಕೆ ಭೂ ಸ್ವಾಧೀನ, ಕಂದಾಯ ಹಕ್ಕು ಸಂಬಂಧಿತ ಕಡತ ತಯಾರಿಸುವುದು ಮತ್ತು ಇತರೆ ರಾಜಸ್ವಕ್ಕೆ ಸಂಬಂಧಿಸಿದ ಲೆಕ್ಕಪತ್ರಗಳನ್ನು ತಯಾರಿಸಿ ತಹಸೀಲ್ದಾರರಿಗೆ ಒಪ್ಪಿಸುವುದು ಇವರದೇ ಜವಾಬ್ದಾರಿ. ಇಲಾಖೆಯ ಗಣಕೀಕರಣ ಕಾರ್ಯಕ್ಕೆ ಸಂಬಂಧಿಸಿದಂತೆ ಹಕ್ಕು ಬದಲಾವಣೆ ಆದೇಶಗಳನ್ನು

ಹೊರಡಿಸುವುದು, ನಿರ್ವಾಹಕರು ನಮೂದಿಸಿದ ವಿವರಗಳನ್ನು ಅನುಮೋದಿಸುವುದು, ಹಕ್ಕು ಬದಲಾವಣೆ ವಹಿಯಲ್ಲಿ ಗ್ರಾಮಲೆಕ್ಕಿಗರು ಅಗತ್ಯ ನಮೂದುಗಳನ್ನು ಮಾಡಿರುವುದನ್ನು ಖಚಿತಪಡಿಸಿಕೊಳ್ಳುವುದು ಮುಂತಾದ ಜವಾಬ್ದಾರಿಗಳನ್ನು ಇವರು ನಿರ್ವಹಿಸಬೇಕು.

## ಗ್ರಾಮಲೆಕ್ಕಿಗರು

ಈಗ ಗ್ರಾಮಲೆಕ್ಕಿಗರ ಹುದ್ದೆಯು ಅನುವಂಶಿಕವಾದುದಲ್ಲ. ಗ್ರಾಮಲೆಕ್ಕಿಗರನ್ನು ಜಿಲ್ಲಾಧಿಕಾರಿ ನೇಮಕ ಮಾಡುತ್ತಾರೆ. ಇವರನ್ನು ಗ್ರಾಮಕ್ಕೆ ಅಥವಾ 'ವೃತ್ತ' ಎಂದು ಕರೆಯಲಾಗುವ ಗ್ರಾಮಗಳ ಗುಂಪಿಗೆ ನೇಮಕ ಮಾಡಲಾಗುವುದು. ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪ರಲ್ಲಿ ಅಥವಾ ಅದರ ಮೇರೆಗೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ಅದರ ಮೇರೆಗೆ ಗೊತ್ತುಪಡಿಸಿರುವ ಕರ್ತವ್ಯಗಳನ್ನು ಇವರು ನೆರವೇರಿಸಬೇಕು. ಗ್ರಾಮಲೆಕ್ಕಿಗರು ರಾಜಸ್ವ ನಿರೀಕ್ಷಕನ ಪರಿವೀಕ್ಷಣೆ ಮತ್ತು ನಿಯಂತ್ರಣಕ್ಕೆ ನೇರವಾಗಿ ಒಳಪಟ್ಟಿರುತ್ತಾರೆ. ಗ್ರಾಮಲೆಕ್ಕಿಗನು ಗ್ರಾಮಮಟ್ಟದಲ್ಲಿ ಕಂದಾಯ ಆಡಳಿತದ ಮುಖ್ಯ ಕಾರ್ಯನಿರ್ವಾಹಕನಾಗಿರುವುದರಿಂದ, ಕಂದಾಯ ವಸೂಲಿ ಮಾಡುವುದು ಮುಖ್ಯ ಕೆಲಸ. ಗ್ರಾಮಸ್ಥರಿಗೆ ಸಿಗುವುದಕ್ಕಾಗಿ ಕೇಂದ್ರಸ್ಥಾನದಲ್ಲಿ ವಾಸ ಮಾಡಬೇಕು.

ಪಂಚಾಯತಿಯ ವರಮಾನವು ವರ್ಷಕ್ಕೆ ₹ ೧೨,೦೦೦ಗಳಿಗಿಂತ ಕಡಿಮೆ ಇರುವಲ್ಲಿ ಅಥವಾ ಪಂಚಾಯತಿಯು ಪ್ರತ್ಯೇಕ ಕಾರ್ಯದರ್ಶಿಯನ್ನು ನೇಮಕ ಮಾಡಿಕೊಂಡಿರದಿದ್ದಲ್ಲಿ, ಗ್ರಾಮಲೆಕ್ಕಿಗನು ಪಂಚಾಯತಿಯ ಪದನಿಮಿತ್ತ ಕಾರ್ಯದರ್ಶಿಯಾಗಿ ಕೆಲಸ ಮಾಡಬೇಕಾಗಿತ್ತು. ಪಂಚಾಯತಿ ಕಾರ್ಯದರ್ಶಿಯು ಕರ್ನಾಟಕ ಗ್ರಾಮ ಪಂಚಾಯತಿಗಳ ಅಧಿನಿಯಮ, ೧೯೬೯ನ್ನು ಕಾರ್ಯರೂಪಕ್ಕೆ ತರಲು ಜವಾಬ್ದಾರನಾಗಿರುತ್ತಿದ್ದನು.

ಆದರೆ ಈಗ ಪಂಚಾಯತ್ ರಾಜ್ ವ್ಯವಸ್ಥೆಗೆ ಹೊಸ ಸ್ವರೂಪ ಬಂದ ನಂತರ ಸಂಪೂರ್ಣವಾಗಿ ಗ್ರಾಮಪಂಚಾಯ್ತಿ ಕಾರ್ಯದರ್ಶಿಯೇ ನಿರ್ವಹಿಸುವನು. ತನ್ನ ಮಟ್ಟದಲ್ಲಿ ಕಂದಾಯ ಆಡಳಿತದ ಎಲ್ಲಾ ವಿಷಯಗಳ ಬಗ್ಗೆ ಗ್ರಾಮಲೆಕ್ಕಿಗನು ಜವಾಬ್ದಾರನಾಗಿರುತ್ತಾನೆ. ಕಂದಾಯವನ್ನು ವಸೂಲು ಮಾಡಿ ಖಜಾನೆಗೆ ಜಮಾ ಮಾಡುವುದು, ಬೆಳೆಗಳ ನಮೂದುಗಳನ್ನು ಮಾಡುವುದು, ಮಹಜರುಗಳನ್ನು ಏರ್ಪಡಿಸುವುದು, ನೋಟೀಸುಗಳನ್ನು ಜಾರಿಮಾಡುವುದು ಮತ್ತು ಅವನ ವರಿಷ್ಠಾಧಿಕಾರಿಗಳು ವಹಿಸಬಹುದಾದ ಕೆಲಸಗಳನ್ನು ನಿರ್ವಹಿಸುತ್ತಾನೆ, ಮತ್ತು ಜನನ ಮರಣ, ಖೇತ್ವಾರು, ಹಕ್ಕುದಾಖಲಾತಿ ಮತ್ತು ಗೇಣಿ, ಬೆಳೆ ತನಿಖೆ ವಹಿ, (ಆರ್.ಟಿ.ಸಿ) ಖಾತೆ, ಖಿರ್ದಿ, ರಸೀತಿ ಪುಸ್ತಕ, ಹಕ್ಕು ಬದಲಾವಣೆ(ಮ್ಯುಟೇಷನ್) ಮುಂತಾದ ರಿಜಿಸ್ಟರುಗಳನ್ನು ನಿರ್ವಹಿಸುವುದು. ವಾರ್ಷಿಕ ಲೆಕ್ಕಪತ್ರಗಳನ್ನು ಜುಲೈ ೧ರಂತೆ (ಸಾಲ್ಬಾದಿ) ಸಿದ್ದಪಡಿಸಿ ಜಮಾಬಂದಿಗೆ ಒಪ್ಪಿಸುವುದು, ಇತ್ಯಾದಿ. ಈಗ ಇಲಾಖೆಯ ಗಣಕೀಕರಣ ಕಾರ್ಯದಲ್ಲಿ ಇವರು ಮುಖ್ಯ ಪಾತ್ರವಹಿಸಬೇಕಿದೆ. ಹಕ್ಕು ಬದಲಾವಣೆ ವಹಿ ಬರೆಯುವುದರ ಜೊತೆಗೆ, ಅದರಲ್ಲಿ ಗಣಕಯಂತ್ರ ನಮೂದು CE ಸಂಖ್ಯೆ ಇರುವುದನ್ನು ಖಾತರಿಪಡಿಸಿಕೊಳ್ಳುವುದು, ಹಕ್ಕು ಬದಲಾವಣೆ ವಹಿಯಲ್ಲಿ ಅಗತ್ಯ ನಮೂದು ಮಾಡುವ ಮುನ್ನ ಅದು ಗಣಕಯಂತ್ರದಲ್ಲಿ ನಮೂದಾಗಿರುವುದನ್ನು ಖಾತರಿಪಡಿಸಿಕೊಳ್ಳುವುದು, ಹಕ್ಕು ಬದಲಾವಣೆ ವಹಿಯಲ್ಲಿ ಸಂಖ್ಯೆ ಸಹಿತ ಗಣಕ ಯಂತ್ರ ನಮೂದು ಸಂಖ್ಯೆಯನ್ನು ಬರೆಯುವುದು ಮುಂತಾದ ಜವಾಬ್ದಾರಿಗಳನ್ನು ಇವರು ನಿರ್ವಹಿಸಬೇಕು.

## ನಾಡ ಕಛೇರಿ

ಆಡಳಿತವನ್ನು ವಿಕೇಂದ್ರೀಕರಿಸುವ ನಿಟ್ಟಿನಲ್ಲಿ ಪ್ರಾಯೋಗಿಕವಾಗಿ ಪ್ರತೀ ತಾಲೂಕಿನ ಆಯ್ದ ಒಂದು ಹೋಬಳಿ ಕೇಂದ್ರದಲ್ಲಿ ಆಗಸ್ಟ್ ೧೫, ೧೯೮೬ರಿಂದ ನಾಡಕಛೇರಿಯನ್ನು ತೆರೆಯಲಾಯಿತು. ನಾಡಕಛೇರಿಯ ಮುಖ್ಯಸ್ಥರಾಗಿ ಓರ್ವ ಶಿರಸ್ತೇದಾರ ಅಥವಾ ಉಪ ತಹಸೀಲ್ದಾರರಿರುತ್ತಾರೆ. ಇವರಿಗೆ ತಾಲೂಕು ಮಟ್ಟದಲ್ಲಿ ತಹಸೀಲ್ದಾರರು ಚಲಾಯಿಸುತ್ತಿದ್ದ ಅಧಿಕಾರಗಳನ್ನು ಪ್ರತಿ ನಿಯುಕ್ತಿಗೊಳಿಸುವ ಮೂಲಕ ಹೋಬಳಿಯ ಮಟ್ಟದಲ್ಲಿಯೇ ರೈತಾಪಿ ಜನರ ಕುಂದುಕೊರತೆಗಳನ್ನು ಸಾಧ್ಯವಾದ ಮಟ್ಟಿಗೆ ತೀರಿಸಲು ಅನುಕೂಲ ಮಾಡಿಕೊಡಲಾಗಿದೆ, ಅನಗತ್ಯವಾಗಿ ತಮ್ಮ ಕೆಲಸಗಳಿಗಾಗಿ ತಾಲೂಕು ಕಛೇರಿಗೆ ಎಡತಾಕುವ, ಇದರಿಂದಾಗಿ ವ್ಯಯವಾಗುವ ಶ್ರಮ ಹಾಗೂ ಸಮಯವನ್ನು ಉಳಿಸಲಾಗಿದೆ. ನಾಡಕಛೇರಿಯ ಉಪಯುಕ್ತತೆಯನ್ನು ಕಂಡುಕೊಂಡ ಸರ್ಕಾರವು ಆಗಸ್ಟ್ ೧೫, ೧೯೮೭ ರಿಂದ ಪ್ರತೀ ತಾಲೂಕಿನ ಎರಡನೆಯ ಹೋಬಳಿಗೆ ಈ ಪ್ರಯೋಗವನ್ನು ವಿಸ್ತರಿಸಿದೆ. ಇದೀಗ ಕಸಬಾ ಹೋಬಳಿ ಹೊರತುಪಡಿಸಿದಂತೆ ಉಳಿದ ಹೋಬಳಿಗಳಿಗೂ ನಾಡ ಕಛೇರಿ ತೆರೆಯುವುದನ್ನು ವಿಸ್ತರಿಸಿ ಸರ್ಕಾರ ಆದೇಶಿಸಿದೆ. ರಾಜ್ಯದಲ್ಲಿ ಈಗಾಗಲೇ ३೨೯ ನಾಡಕಛೇರಿಗಳಿದ್ದು, ಸರ್ಕಾರದ ಆದೇಶ ಕಂ ಇ ३३ ಡಿ ಎಸ್ಪಿ ೨೦೧೨ ದಿನಾಂಕ ೫.೬.೧೦೧೨ರಂತೆ ೨೭೨ ಹೋಬಳಿಗಳಲ್ಲಿ ನಾಡ ಕಛೇರಿ ಪ್ರಾರಂಭಿಸಲು ಆದೇಶ ಮಾಡಲಾಗಿದೆ. ಇದರಿಂದ ಸಾರ್ವಜನಿಕರಿಗೆ ಬಹಳ ಅನುಕೂಲವಾಗಿದೆ. ೧೭೬ ಕಸಬಾ ಹೋಬಳಿಗಳ ಬಾಬ್ತು ತಾಲೂಕು ಕಛೇರಿಯಲ್ಲಿಯೇ ಸಾರ್ವಜನಿಕ ಸೇವೆ ಒದಗಿಸಲಾಗುವುದು.

ವೃದ್ಧಾಪ್ಯವೇತನ, ವಿಧವಾ ವೇತನ, ಅಂಗವಿಕಲರ ಭತ್ಯೆ, ನೈಸರ್ಗಿಕ ವಿಕೋಪಗಳಾದ ಬೆಂಕಿ ಅನಾಹುತ, ಪ್ರವಾಹಪೀಡೆ ಸಂದರ್ಭಗಳಲ್ಲಿ ಪರಿಹಾರ, ಹಕ್ಕು ಬದಲಾವಣೆ ಪ್ರಕರಣಗಳ ಇತ್ಯರ್ಥ, ಅವಶ್ಯಕ ಸಾಮಗ್ರಿಗಳ ಸಂಗ್ರಹಣೆ ತನಿಖೆ ಮತ್ತು ಜಪ್ತಿ ಕ್ರಮ, ಸರ್ಕಾರದ ವರಮಾನಗಳ ವಸೂಲಾತಿ ಮತ್ತು ಖಜಾನೆಗೆ ಜಮೆ ಮಾಡುವುದು, ಬೇಡಿಕೆ ವಸೂಲಿ ಮತ್ತು ಬಾಕಿ (ಡಿ.ಸಿ.ಬಿ.) ಲೆಕ್ಕಪತ್ರಗಳ ನಿರ್ವಹಣೆ, ನೀರು ದರ, ಅಭಿವೃದ್ಧಿ ಕೊಡುಗೆಗಳ ವಸೂಲಿ, ದಂಡ ವಸೂಲಿ, ಜಪ್ತಿ, ಕಂದಾಯ ಮತ್ತು ಗ್ರಾಮಾಡಳಿತ ಕುರಿತಾದ ದಾಖಲೆಪತ್ರಗಳ ಪ್ರಮಾಣಿತ ಪ್ರತಿಗಳನ್ನು ನೀಡುವುದು, ಜನನ ಮರಣ, ಮುಜರಾಯಿ ಸಂಸ್ಥೆಗಳು, ಪಡಿತರ ಕಾರ್ಡ್, ಚುನಾವಣಾಕಾರ್ಯ, ಮೇಲಧಿಕಾರಿಗಳು ಸೂಚಿಸುವ ಇನ್ನಿತರೆ ಸರ್ಕಾರದ ಕೆಲಸಗಳು. ನಾಡಕಛೇರಿಗಳಿಗೆ ವರ್ಗಾಯಿಸಲಾಗಿರುವ ಮುಖ್ಯ ಪ್ರಕಾರ್ಯಗಳಾಗಿವೆ. ನಾಡಕಛೇರಿಯ ಮುಖ್ಯಸ್ಥರ ನೆರವಿಗೆ ಒಬ್ಬ ಸಹಾಯಕ, ಒಬ್ಬ ಬೆರಳಚ್ಚುಗಾರ ಮತ್ತು "ಡಿ" ವೃಂದದ ಒಬ್ಬ ನೌಕರನ ಸೇವೆಯನ್ನು ಒದಗಿಸಲಾಗಿದೆ.

**ಗ್ರಾಮ ಸಹಾಯಕ:** ಹಿಂದೆ ತೋಟಿ, ತಳಾರಿ ಮುಂತಾದ ಕೆಳದರ್ಜೆ ಗ್ರಾಮಾಧಿಕಾರಿಗಳು ನಿರ್ವಹಿಸುತ್ತಿದ್ದ ಕೆಲಸಕಾರ್ಯಗಳನ್ನು ಮಾಡುವ ಸಲುವಾಗಿ ಗ್ರಾಮಲೆಕ್ಕಿಗರಿಗೆ ಸಹಾಯಕರಾಗಿ ಈ ಹುದ್ದೆಯನ್ನು ಸೃಷ್ಟಿಸಲಾಯಿತು. ಸರ್ಕಾರದ ಆದೇಶ ನಂ. ಆರ್‌ಡಿ ३, ಎಂ.ಎ.ಎಸ್.೭೭ ದಿನಾಂಕ ೧೯–೦೯–೧೯೭೮ ರಂತೆ ಈ ಹುದ್ದೆಗಳು ಪ್ರಾರಂಭವಾದವು. ತಹಶೀಲ್ದಾರ್‌ರವರು ಇವರನ್ನು ನೇಮಕ ಮಾಡುವ ಅಧಿಕಾರವುಳ್ಳವರಾಗಿರುವರು. ಗರಿಷ್ಟ ವಯೋಮಿತಿ ೬೫ ವರ್ಷ. ಸರ್ಕಾರ ನಿಗದಿಪಡಿಸುವ ಗೌರವಧನವನ್ನು ತಹಶೀಲ್ದಾರ್‌ರವರು ಪಾವತಿಸುವರು. ಇವರನ್ನು ನೇಮಕ ಮಾಡುವಾಗ ಹಿಂದೆ ಕೆಳದರ್ಜೆ ಗ್ರಾಮಾಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ಕುಟುಂಬದ ಸದಸ್ಯರಿಗೆ ಆದ್ಯತೆ ನೀಡಲಾಗುತ್ತದೆ.

ಈ ಗ್ರಾಮ ಸಹಾಯಕರು, ಸರ್ಕಾರಿ ಬಾಕಿ ವಸೂಲಿಯಲ್ಲಿ ಗ್ರಾಮ ಲೆಕ್ಕಿಗರಿಗೆ ನೆರವಾಗಬೇಕು. ಗ್ರಾಮಗಳಲ್ಲಿನ ಜನನ, ಮರಣ, ಮುಂತಾದ ಮಾಹಿತಿಯನ್ನು ಗ್ರಾಮಲೆಕ್ಕಿಗರಿಗೆ ನೀಡುವುದು. ಸರ್ಕಾರಿ ಕೆಲಸಕ್ಕೆ ಸಂಬಂಧಿಸಿದಂತೆ ನೋಟೀಸು ಜಾರಿಗೊಳಿಸಲು, ಚಾವಡಿಯಲ್ಲಿ ಪ್ರದರ್ಶಿಸಲು, ಮಹಜರಿನಲ್ಲಿ ಸಹಕರಿಸಲು, ಜನರನ್ನು ಚಾವಡಿಗೆ

ಕರೆತರಲು, ಸ್ಥಳ ಪರಿಶೀಲನೆ, ಕ್ಷೇತ್ರ ವೀಕ್ಷಣೆ, ಅಳತೆ ಮುಂತಾದ ಸಂದರ್ಭದಲ್ಲಿ ಸಹಕರಿಸುವುದು, ಗ್ರಾಮದಿಂದ ತಾಲೂಕು ಕಛೇರಿಗೆ ವರದಿ, ಟಪ್ಪಾಲು ಒಯ್ಯುವುದು, ಬೆಳೆ ಕಟಾವು, ಗಣತಿಕಾರ್ಯ, ಚುನಾವಣೆ, ಮುಂತಾದ ಕಂದಾಯ ಇಲಾಖೆಯ ಗ್ರಾಮ ಮಟ್ಟದ ಎಲ್ಲಾ ರೀತಿಯ ಕೆಲಸಕಾರ್ಯಗಳಲ್ಲಿಯೂ ಗ್ರಾಮ ಲೆಕ್ಕಿಗರಿಗೆ ಸಹಾಯಕನಾಗಿರುವುದು, ಮಳೆಮಾಪಕ ಕೇಂದ್ರದಲ್ಲಿ ಮಳೆಬಿದ್ದ ಬಗ್ಗೆ ಮಾಹಿತಿ ನೀಡುವುದು.

## ವಿಶೇಷ ಕೋಶ

ಕ್ಷೇತ್ರ ಇಲಾಖೆಯ ಮುಖ್ಯಸ್ಥರನ್ನು ಹೊರತುಪಡಿಸಿ ಕಂದಾಯ ಆಡಳಿತದ ವಿವಿಧ ಹಂತಗಳಲ್ಲಿ ಭೂ ಮಾಪನ ಮತ್ತು ಭೂ ದಾಖಲೆ, ನೋಂದಣಿ ಮತ್ತು ಮುದ್ರಾಂಕ, ಮುಜರಾಯಿ ಇಲಾಖೆಗಳಲ್ಲಿ ಕಿರುಕುಳಗಳ ಬಗ್ಗೆ ದೂರು ಮತ್ತು ಇತರ ದುರಾಚರಣೆ ಬಗ್ಗೆ ತನಿಖೆ ನಡೆಸಲು ಕಂದಾಯ ಇಲಾಖೆಯಲ್ಲಿ ವಿಶೇಷಕೋಶವನ್ನು ಸೃಜಿಸಲಾಗಿದೆ. ಈ ಕೋಶದ ವಿಶೇಷ ಅಧಿಕಾರಿ ಮತ್ತು ಪದನಿಮಿತ್ತ ಉಪಕಾರ್ಯದರ್ಶಿಯವರು ಈ ಎಲ್ಲಾ ವಿಷಯಗಳನ್ನು ಕುರಿತು ವಿಚಾರಣೆ ನಡೆಸಲು ಅಧಿಕಾರ ಹೊಂದಿರುತ್ತಾರೆ. ಸಂಬಂಧಪಟ್ಟ ಕ್ಷೇತ್ರ ಕಛೇರಿಗಳಲ್ಲಿ ಈ ಸಂಬಂಧ ಏಕಾಏಕಿ ತಪಾಸಣೆ ನಡೆಸುವ ಅಧಿಕಾರವನ್ನೂ ಈ ವಿಶೇಷ ಕೋಶಕ್ಕೆ ನೀಡಲಾಗಿದೆ.

## ಸಾರ್ವಜನಿಕ ಕುಂದುಕೊರತೆಗಳು

ಕಂದಾಯ ಇಲಾಖೆಯಲ್ಲಿ ವಿಶೇಷ ಅಧಿಕಾರಿ ಮತ್ತು ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿಯನ್ನು ಸಾರ್ವಜನಿಕ ಕುಂದುಕೊರತೆ ಕೋಶಕ್ಕೆ ನಾಮನಿರ್ದೇಶನ ಮಾಡಲಾಗಿದೆ. ಜಿಲ್ಲಾಧಿಕಾರಿಗಳು ಈ ಬಗ್ಗೆ ಪ್ರತಿ ತಿಂಗಳೂ ಪರಿಶೀಲನೆ ನಡೆಸಿ ಸಾರ್ವಜನಿಕ ಕುಂದುಕೊರತೆಗಳ ಪ್ರಕರಣಗಳನ್ನು ಆದ್ಯತೆ ಮೇಲೆ ನಿರ್ವಹಿಸಲು ಸೂಕ್ತ ನಿರ್ದೇಶನ ನೀಡಲಾಗಿದೆ.

## ಮಾಹಿತಿ ಹಕ್ಕು

ಸಾರ್ವಜನಿಕರಿಗೆ ಮಾಹಿತಿಯನ್ನು ನೀಡುವ ಸಲುವಾಗಿ ಕೇಂದ್ರ ಸರ್ಕಾರವು ಮಾಹಿತಿ ಹಕ್ಕು ಕಾಯ್ದೆ ೨೦೦೫ನ್ನು ಜಾರಿಗೆ ತಂದಿದೆ. ಈ ಅಧಿನಿಯಮದಡಿ ಕಂದಾಯ ಇಲಾಖೆಗೆ ಸಂಬಂಧಿಸಿದ ಕಛೇರಿಗಳಲ್ಲಿ ಸಕ್ಷಮ ಪ್ರಾಧಿಕಾರ ಮತ್ತು ಮೇಲ್ಮನವಿ ಪ್ರಾಧಿಕಾರವನ್ನು ಪ್ರಕಟಿಸಲಾಗಿದೆ. ಜನರ ಕೋರಿಕೆ ಮೇಲೆ ಮಾಹಿತಿಯನ್ನು ಒದಗಿಸುವ ಜವಾಬ್ದಾರಿ ಸಕ್ಷಮ ಪ್ರಾಧಿಕಾರದ್ದಾಗಿದ್ದು, ಅದು ನೀಡಲು ವಿಫಲವಾದ ಅಥವಾ ನಿರಾಕರಿಸಿದ ಪ್ರಕರಣಗಳನ್ನು ಪರಿಶೀಲಿಸಿ ಸೂಕ್ತ ನಿರ್ಧಾರ ತೆಗೆದುಕೊಳ್ಳುವ ಅಧಿಕಾರವನ್ನು ಮೇಲ್ಮನವಿ ಪ್ರಾಧಿಕಾರಕ್ಕೆ ನೀಡಲ್ಪಟ್ಟಿದೆ. ಪ್ರತಿ ಕಛೇರಿಯಲ್ಲಿ ನಿರ್ವಹಿಸಲಾಗುತ್ತಿರುವ ವಿಷಯಗಳ ವಿವರಗಳು ಮತ್ತು ಅವುಗಳನ್ನು ನಿರ್ವಹಿಸುತ್ತಿರುವ ಸಿಬ್ಬಂದಿಯ ವಿವರಗಳನ್ನು ಸಾರ್ವಜನಿಕರ ತಿಳಿವಳಿಕೆಗಾಗಿ ಪ್ರಕಟಿಸಲಾಗಿದೆ.

## ನಾಗರೀಕ ಸನ್ನದು

ಸಾರ್ವಜನಿಕರ ಉಪಯೋಗಕ್ಕಾಗಿ ಕಂದಾಯ ಇಲಾಖೆಯು ವಿವಿಧ ಸೌಲಭ್ಯಗಳನ್ನು ಒದಗಿಸುತ್ತಿದೆ. ಮಾಹಿತಿ ಮತ್ತು ಸೇವೆಗಳ ಸೌಲಭ್ಯವನ್ನು ಜನ ಸಾಮಾನ್ಯರಿಗೆ ನೀಡುವ ಸಲುವಾಗಿ ನಾಗರೀಕ ಸನ್ನದು ಪ್ರಕಟಿಸಲ್ಪಟ್ಟಿದೆ. ಇದು ಸಾರ್ವಜನಿಕರು ಇಲಾಖೆಯಿಂದ ಏನೇನು ಸೇವೆ, ಮಾಹಿತಿ/ದಾಖಲೆ ಮತ್ತು ಸೌಲಭ್ಯಗಳನ್ನು ಪಡೆಯಲು ಹಕ್ಕುಳ್ಳವರಾಗಿರುತ್ತಾರೆ ಎಂಬುದನ್ನು ಸ್ಪಷ್ಟವಾಗಿ ತಿಳಿಸುತ್ತದೆ. ಇವುಗಳಲ್ಲಿ ಅನೇಕ ತೆರನಾದ ಬೇಬಾಕಿ ಪ್ರಮಾಣ ಪತ್ರಗಳು, ಜಾತಿ/ಆದಾಯ ಪತ್ರಗಳು, ವಾಸ ದೃಢೀಕರಣ ಪತ್ರ, ರಾಷ್ಟ್ರೀಯತೆ ದೃಢೀಕರಣ ಪತ್ರ, ಕೃಷಿಕ/ಕೃಷಿ ಕಾರ್ಮಿಕ ಪ್ರಮಾಣಪತ್ರಗಳು, ಭೂ ಮೌಲ್ಯ ದೃಢೀಕರಣ ಪತ್ರ, ಖಾತೆ/

ಹಕ್ಕು ಬದಲಾವಣೆ ಪತ್ರ, ವಿಭಜನೆ ಮತ್ತು ವಾರಸುದಾರರ ಖಾತೆ ಬದಲಾವಣೆ, ಭೂ ಪರಿವರ್ತನೆ, ಹೊಸ ಪಡಿತರ ಚೀಟಿ, ಬೆಳೆ ನಾಶ ಪರಿಹಾರ, ವಿಧವಾ ವೇತನ, ಅಂಗವಿಕಲ ವೇತನ, ವೃದ್ದಾಪ್ಯ ವೇತನ, ಬಂದೂಕು ಪರವಾನಗಿ ಮತ್ತು ನವೀಕರಣ ಮುಂತಾದವು ಸೇರಿರುತ್ತವೆ.

**'ಸಕಾಲ' ಸೇವಾಖಾತರಿ ಮಸೂದೆ:** ಕರ್ನಾಟಕ ಸರ್ಕಾರವು 'ಕರ್ನಾಟಕ ನಾಗರೀಕರಿಗೆ ಸೇವೆಗಳ ಖಾತರಿ ಅಧಿನಿಯಮ ೨೦೧೧ನ್ನು ಜಾರಿಗೊಳಿಸುವ ಮೂಲಕ ಜನತೆಗೆ 'ಸೇವಾಖಾತರಿ' ಯನ್ನೊದಗಿಸುತ್ತಿದೆ. ಇದರ ಪ್ರಕಾರ ಪ್ರತಿಯೊಬ್ಬ ನಾಗರೀಕರೂ ಗೊತ್ತು ಮಾಡಿದ ಕಾಲ ಮಿತಿಯೊಳಗೆ ಸೇವೆಯನ್ನು ಪಡೆಯುವ ಹಕ್ಕು ಹೊಂದುತ್ತಾರೆ. ಅದಕ್ಕಾಗಿ ಸದರಿ ಅಧಿನಿಯಮದಲ್ಲಿ, ಸಾರ್ವಜನಿಕ ಪ್ರಾಧಿಕಾರದ ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿ ಮತ್ತು ಆತನ ಅಧೀನ ಸಾರ್ವಜನಿಕ ನೌಕರನು ಗೊತ್ತು ಮಾಡಿದ ಕಾಲದೊಳಗೆ ಅನುಸೂಚಿಯಲ್ಲಿ ನಿರ್ದಿಷ್ಟ ಪಡಿಸಿದ ನಾಗರಿಕ ಸಂಬಂಧಿ ಸೇವೆಯನ್ನು ಪಡೆಯಲು ಅರ್ಹರಾದ ವ್ಯಕ್ತಿಗಳಿಗೆ ಒದಗಿಸತಕ್ಕದ್ದು. ಹಾಗೂ ಅದನ್ನು ತಮ್ಮ ತಮ್ಮ ಕಛೇರಿಗಳ ಸೂಚನಾ ಫಲಕದ ಮೇಲೂ ಪ್ರಕಟಿಸಬೇಕು. ಅದಕ್ಕಾಗಿ ಸಕ್ಷಮ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಿಯನ್ನು ನೇಮಿಸಲಾಗಿದೆ. ಸೇವೆ ನೀಡುವಲ್ಲಿ ಸಾರ್ವಜನಿಕ ನೌಕರನಿಂದ ಉಂಟಾದ ವಿಳಂಬಕ್ಕೆ ಹೊಣೆಗಾರನನ್ನಾಗಿ ಮಾಡುವುದು ಮತ್ತು ಕರ್ತವ್ಯ ಲೋಪವೆಸಗಿದ ಸಾರ್ವಜನಿಕ ನೌಕರನಿಗೆ, ಗೊತ್ತು ಪಡಿಸಿದ ವೆಚ್ಚವನ್ನು ಜಮೆಮಾಡುವಂತೆ ಅಥವಾ ಅದನ್ನು ಆತನ ಸಂಬಳದಿಂದ ಕಡಿತಗೊಳಿಸಲು ಆದೇಶ ಮಾಡಬಹುದಾಗಿದೆ. ಅಂದರೆ ಪ್ರತಿ ದಿನದಲ್ಲಿ ಕನಿಷ್ಠ ₹ ೨೦ ರಿಂದ ಗರಿಷ್ಠ ₹ ೫೦೦ರ ವರೆಗೆ ಪರಿಹಾರ ಧನವನ್ನು ಸಂಬಂಧ ಪಟ್ಟವರು ನಾಗರೀಕರಿಗೆ ನೀಡಬೇಕು. ಇಂತಹ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸುವ ಹಕ್ಕನ್ನೂ ಸಹ ಕೊಡಮಾಡಿದ್ದು, ಮೇಲ್ಮನವಿ ಪ್ರಾಧಿಕಾರವೇ ಅಂತಿಮವಾಗಿರುತ್ತೆ.

ಪ್ರಾಯೋಗಿಕವಾಗಿ ಮಾರ್ಚ್ ೧, ೨೦೧೨ರಿಂದ ಬೀದರ್, ಚಿತ್ರದುರ್ಗ, ಧಾರವಾಡ ಮತ್ತು ಉಡುಪಿ ಜಿಲ್ಲೆಗಳ ಒಂದೊಂದು ತಾಲ್ಲೂಕಿನಲ್ಲಿ ಜಾರಿಗೊಳಿಸಲಾಗುತ್ತಿದೆ. ಇದರಲ್ಲಿ ೧೫೧ ಸೇವಾ ಸೌಲಭ್ಯಗಳನ್ನೊದಗಿಸುವ ೧೧ ಇಲಾಖೆಗಳು ಒಳಗೊಂಡಿವೆ. ನಾಗರಿಕ ಸಂಬಂಧಿ ಸೇವೆ ಪಡೆದುಕೊಳ್ಳುವ ಯಾರುಬೇಕಾದರೂ ಆನ್‌ಲೈನ್‌ನಲ್ಲಿ ಮಾಹಿತಿ ಪಡೆಯುವ, ಮೇಲ್ವಿಚಾರಣೆ ನಡೆಸುವ ಹಕ್ಕನ್ನು ಹೊಂದಿರುತ್ತಾರೆ. ವಿದ್ಯುನ್ಮಾನ ಆಡಳಿತ ಭಾಗವಾದ ಈ ಸೌಲಭ್ಯ ಸಾರ್ವಜನಿಕರಿಗೆ ಅತ್ಯಂತ ಉಪಯುಕ್ತವಾಗಬಲ್ಲದು.

## ಸಾಮಾಜಿಕ ಭದ್ರತೆ ಮತ್ತು ಪಿಂಚಣಿ ಯೋಜನೆ

ಕರ್ನಾಟಕ ಸರ್ಕಾರವು ಅಸಹಾಯಕ, ಅಶಕ್ತ ವ್ಯಕ್ತಿಗಳಿಗಾಗಿ ಹಾಗೂ ಅಸಹಾಯಕ ವಿಧವೆಯರಿಗೆ ಮತ್ತು ಅಂಗವಿಕಲರಿಗೆ ಅನೇಕ ಸಾಮಾಜಿಕ ಭದ್ರತೆ ಯೋಜನೆಗಳನ್ನು ಜಾರಿಗೊಳಿಸುತ್ತಾ ಬಂದಿದೆ. ಇವುಗಳು ತಾಲ್ಲೂಕು ಮಟ್ಟದಲ್ಲಿ ತಹಸೀಲ್ದಾರರಿಂದ ಕಾರ್ಯಗತವಾಗುತ್ತಿವೆ. ಇಂತಹ ಯೋಜನೆಗಳನ್ನು ಉತ್ತಮ ರೀತಿಯಲ್ಲಿ ಕಾರ್ಯಗತಗೊಳಿಸುವ ಸಲುವಾಗಿ ಮೇ ೨೦೦೭ ರಿಂದ ಕಂದಾಯ ಇಲಾಖೆಯಡಿಯಲ್ಲಿ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯವನ್ನು ಸೃಜಿಸಲಾಗಿದೆ. ಸದರಿ ನಿರ್ದೇಶನಾಲಯವು ಈ ಕೆಳ ಕಾಣಿಸಿರುವ ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ಯೋಜನೆಗಳನ್ನು ನಿರ್ವಹಿಸುತ್ತದೆ.

೧. ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆ
೨. ನಿರ್ಗತಿಕ ವಿಧವಾ ವೇತನ
೩. ವಿಕಲಚೇತನರ ವೇತನ
೪. ಸಂಧ್ಯಾ ಸುರಕ್ಷಾ ಯೋಜನೆ

೫. ಆದರ್ಶ ವಿವಾಹ ಯೋಜನೆ
೬. ರಾಷ್ಟ್ರೀಯ ಕುಟುಂಬ ನೆರವು ಯೋಜನೆ
೭. ಅಂತ್ಯ ಸಂಸ್ಕಾರ ನೆರವು ಯೋಜನೆ
೮. ಆಮ್ ಆದ್ಮಿ ಬೀಮಾ (ಜನಶ್ರೀ) ಯೋಜನೆ.

ಇವುಗಳಲ್ಲಿ ಸಂಧ್ಯಾ ಸುರಕ್ಷಾ ಯೋಜನೆ, ಆದರ್ಶವಿವಾಹ ಯೋಜನೆಗೆ ಕೇಂದ್ರದ ಪಾಲು ಇರುವುದಿಲ್ಲ. ರಾಜ್ಯವೇ ಪೂರ್ಣ ಭರಿಸುತ್ತದೆ. ರಾಷ್ಟ್ರೀಯ ಕುಟುಂಬ ನೆರವು, ಅಂತ್ಯ ಸಂಸ್ಕಾರ ಯೋಜನೆಗೆ ಕೇಂದ್ರ ಪೂರ್ಣ ಪಾಲು ಭರಿಸುತ್ತದೆ. ಉಳಿದಂತೆ ಕೇಂದ್ರ ಮತ್ತು ರಾಜ್ಯಗಳೆರಡೂ ಸಮಪಾಲು (೫೦%) ಭರಿಸುತ್ತವೆ. ಆಮ್ ಆದ್ಮಿ ಬೀಮಾ ಯೋಜನೆಯನ್ನು ಎಲ್.ಐ.ಸಿ ಮೂಲಕ ಭರಿಸಲಾಗುವುದು.

**ಕೋಷ್ಟಕ–೯.೨: ಚಾಮರಾಜನಗರ ಜಿಲ್ಲೆಯಲ್ಲಿನ ಸಾಮಾಜಿಕ ಭದ್ರತಾ ಯೋಜನೆಗಳ ಫಲಾನುಭವಿಗಳ ವಿವರಗಳು (ಯೋಜನೆ ಪ್ರಾರಂಭದಿಂದ ೨೦೧೦–೧೧ರವರೆಗೆ)**

| ಕ್ರ. ಸಂ. | ವರ್ಷ | ವೃದ್ಧಾಪ್ಯ ವೇತನ | ವಿಧವಾ ವೇತನ | ಅಂಗವಿಕಲ ವೇತನ (₹ ೪೦೦) | ಅಂಗವಿಕಲ ವೇತನ (₹ ೧೦೦೦) | ಸಂಧ್ಯಾ ಸುರಕ್ಷಾ ಯೋಜನೆ | ರಾಷ್ಟ್ರೀಯ ಕುಟುಂಬ ನೆರವು ಯೋಜನೆ | ಅಂತ್ಯ ಸಂಸ್ಕಾರ ಯೋಜನೆ | ಆದರ್ಶ ವಿವಾಹ ಯೋಜನೆ |
|---|---|---|---|---|---|---|---|---|---|
| ೧ | ಯೋಜನೆ ಪ್ರಾರಂಭದಿಂದ ೧೯೯೫ರವರೆಗೆ | ೧೬೬೪೨ | ೧೪೬೩೧ | ೧೦೬೩೮ | ೦ | ೦ | ೦ | ೦ | ೦ |
| ೨ | ೧೯೯೫–೯೬ | ೧೮೯೬ | ೧೫೯೨ | ೩೧೫ | ೦ | ೦ | ೦ | ೦ | ೦ |
| ೩ | ೧೯೯೬–೯೭ | ೨೧೧೬ | ೧೩೧೯ | ೩೧೮ | ೦ | ೦ | ೦ | ೦ | ೦ |
| ೪ | ೧೯೯೭–೯೮ | ೪೦೭೬ | ೧೫೫೬ | ೩೨೬ | ೦ | ೦ | ೦ | ೦ | ೦ |
| ೫ | ೧೯೯೮–೯೯ | ೪೦೬೯ | ೨೩೫೫ | ೩೧೫ | ೦ | ೦ | ೦ | ೦ | ೦ |
| ೬ | ೧೯೯೯–೦೦ | ೪೦೨೨ | ೧೯೩೫ | ೩೭೯ | ೦ | ೦ | ೦ | ೦ | ೦ |
| ೭ | ೨೦೦೦–೦೧ | ೨೯೮೬ | ೨೨೫೨ | ೩೬೮ | ೦ | ೦ | ೦ | ೦ | ೦ |
| ೮ | ೨೦೦೧–೦೨ | ೨೬೭೬ | ೧೪೫೫ | ೩೫೪ | ೦ | ೦ | ೦ | ೦ | ೦ |
| ೯ | ೨೦೦೨–೦೩ | ೩೪೬೪ | ೨೭೮೮ | ೩೭೭ | ೦ | ೦ | ೦ | ೦ | ೦ |
| ೧೦ | ೨೦೦೩–೦೪ | ೪೭೫೮ | ೨೧೮೭ | ೭೯೨ | ೦ | ೦ | ೦ | ೦ | ೦ |
| ೧೧ | ೨೦೦೪–೦೫ | ೩೮೬೪ | ೧೭೦೬ | ೬೩೦ | ೦ | ೦ | ೦ | ೦ | ೦ |
| ೧೨ | ೨೦೦೫–೦೬ | ೪೨೦೭ | ೧೨೩೧ | ೬೨೭ | ೦ | ೦ | ೦ | ೦ | ೦ |
| ೧೩ | ೨೦೦೬–೦೭ | ೬೪೮೮ | ೧೯೧೬ | ೬೨೩ | ೦ | ೦ | ೦ | ೧೫೮೮ | ೦ |
| ೧೪ | ೨೦೦೭–೦೮ | ೫೧೯೯ | ೨೫೪೪ | ೧೩೮೧ | ೦ | ೮೮೬ | ೯೧೫ | ೨೭೧೦ | ೦ |
| ೧೫ | ೨೦೦೮–೦೯ | ೨೯೦೨ | ೨೧೫೦ | ೧೨೧೨ | ೩೮೫ | ೯೨೬೨ | ೩೭೧ | ೨೮೭೫ | ೧೯ |
| ೧೬ | ೨೦೦೯–೧೦ | ೪೫೪ | ೩೭೦೧ | ೯೯೩ | ೨೦೧೪ | ೧೦೮೩೭ | ೧೧೯ | ೨೯೯೫ | ೨೩ |
| ೧೭ | ೨೦೧೦–೧೧ | ೦ | ೩೦೩೬ | ೭೧೩ | ೧೮೩೨ | ೬೪೫೯ | ೬೨೧ | ೨೬೬೦ | ೧೭ |
| | ಒಟ್ಟು | **೬೯೮೧೯** | **೪೮೩೫೪** | **೨೦೩೬೧** | **೪೨೩೧** | **೨೭೪೪೪** | **೨೦೨೬** | **೧೨೮೨೮** | **೫೯** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳು, ಚಾಮರಾಜನಗರ*

## ಕಂದಾಯ ವ್ಯವಸ್ಥೆ

ಭೂ ಕಂದಾಯವು ಅತ್ಯಂತ ಪ್ರಾಚೀನ ತೆರಿಗೆಗಳಲ್ಲೊಂದಾಗಿದ್ದು, ಅದನ್ನು ಹೊರಿಸದ ದೇಶ ಯಾವುದೂ ಇಲ್ಲ ಎನ್ನಬಹುದು. ಬಹಳ ಪುರಾತನ ಕಾಲಗಳಲ್ಲಿ ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಜಾರಿಯಲ್ಲಿದ್ದ ಭೂ ಕಂದಾಯ ದರಗಳತ್ತ ವಿಶೇಷ ಗಮನ ಸೆಳೆಯುವುದು ಇಲ್ಲಿ ಅಪ್ರಸ್ತುತವಾಗಲಾರದು. ಪ್ರಾಚೀನ ಈಜಿಪ್ಟ್‌ನಲ್ಲಿ ಫೆರೋ (Pharaoh)ನ ಕಾಯ್ದೆ ಪ್ರಕಾರ ಮೊದಲು ಯಾವ ಪ್ರಮಾಣದಲ್ಲಿ ಭೂ ಕಂದಾಯವನ್ನು ಪಡೆಯಲು ಹಕ್ಕುಳ್ಳವನಾಗಿದ್ದನೆಂದು ಸ್ಪಷ್ಟವಾಗಿ ತಿಳಿದಿಲ್ಲ. ಜೆ.ಯಿ.ಸ್ವೇನ್ ಎಂಬ ಇತಿಹಾಸಕಾರನು ಹೇಳುವುದೇನೆಂದರೆ, "ಕೃಷಿಯು ಈಜಿಪ್ಷಿಯನ್ನರ ಅತ್ಯಂತ ಮುಖ್ಯವಾದ ಕಸುಬಾಗಿತ್ತು. ಗುಲಾಮರು ಎಲ್ಲಾ ಕೆಲಸಗಳನ್ನು ಮಾಡುತ್ತಿದ್ದರು. ಆದರೆ ಸರಕಾರಿ ಅಧಿಕಾರಿಗಳು ಮತ್ತು ವಿಜ್ಞಾನಿಗಳು ಅದನ್ನು ಅಭಿವೃದ್ಧಿಪಡಿಸುವ ಕಾರ್ಯದಲ್ಲಿ ಸಹಾಯ ನೀಡುತ್ತಿದ್ದರು. ಸರಕಾರಿ ಅಧಿಕಾರಿಗಳು ಜಾಗರೂಕತೆಯಿಂದ ಕೃಷಿ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸುತ್ತಿದ್ದರು. ಯಾವ ಯಾವ ಬೆಳೆಗಳನ್ನು ಯಾವಯಾವ ಕ್ಷೇತ್ರಗಳಲ್ಲಿ ಬಿತ್ತಬೇಕೆಂದು ನಿರ್ಧರಿಸುತ್ತಿದ್ದರು ಮತ್ತು ಸರಕಾರದ ಪಾಲನ್ನು (ಶೇ. ೧೦ ರಿಂದ ೨೦) ಧಾನ್ಯರೂಪದಲ್ಲಿ ಸುಗ್ಗಿಯ ಕಾಲದಲ್ಲಿ ವಸೂಲು ಮಾಡುತ್ತಿದ್ದರು. ಸರಕಾರದ ಅಭಿಯಂತರರು ಮತ್ತು ವಿಜ್ಞಾನಿಗಳು ನೀರಾವರಿ ಯೋಜನೆಗಳನ್ನು ನಿರ್ಮಿಸುತ್ತಿದ್ದರು, ಬಿತ್ತನೆ ಕಾರ್ಯ ನಡೆಸಲು ಸೂಕ್ತವಾದ ಕಾಲವನ್ನು ಸೂಚಿಸುವ ಪಟ್ಟಿಯನ್ನು ಸಿದ್ಧಪಡಿಸುತ್ತಿದ್ದರು ಮತ್ತು ಜಮೀನನ್ನು ಅಳತೆ ಮಾಡುವ ವಿಧಾನಗಳನ್ನು ಹಂಚಿಕೆ ಮಾಡುತ್ತಿದ್ದರು". ರೋಮನ್ನರು ಈಜಿಪ್ಟ್‌ನ್ನು ಆಕ್ರಮಿಸಿಕೊಂಡಾಗ ಕಂಡಂತೆ, ಅಲ್ಲಿ ಭೂ ಕಂದಾಯ ದರ ಸಾಮಾನ್ಯವಾಗಿ ಐದನೇ ಒಂದು (೧/೫) ಭಾಗವಾಗಿತ್ತು: ಉಳಿದೆಲ್ಲಾ ರೋಮನ್ ಪ್ರಾಂತ್ಯಗಳಲ್ಲಿ ಅದು ಕೇವಲ ಹತ್ತನೇ ಒಂದು (೧/೧೦) ಭಾಗ ಮಾತ್ರವಾಗಿತ್ತು.

ಗ್ರೀಸ್ ದೇಶದಲ್ಲಿ ಸಹ ಕೃಷಿಕನು ಉತ್ಪನ್ನದ ೧/೧೦ ಭಾಗವನ್ನು ಮಾತ್ರ ಸರಕಾರಕ್ಕೆ ಕೊಡುತ್ತಿದ್ದನು. ಕೃಷಿ ಯೋಗ್ಯವಲ್ಲದ ಭೂಮಿಯನ್ನು ಗೋಮಾಳವನ್ನಾಗಿ ಎಲ್ಲರೂ ಉಪಯೋಗಿಸಬಹುದಾಗಿತ್ತು ಮತ್ತು ಅಲ್ಲಿ ಮೇಯುತ್ತಿದ್ದ ಪ್ರಾಣಿಗಳಲ್ಲಿ ಹತ್ತರಲ್ಲಿ ಒಂದನ್ನು ಸರಕಾರಕ್ಕೆ ಒಪ್ಪಿಸಬೇಕಾಗಿತ್ತು. ಅಂದರೆ, ಸಾರ್ವಜನಿಕ ಗೋಮಾಳದಿಂದ ಉಂಟಾಗುತ್ತಿದ್ದ ಉತ್ಪನ್ನದಿಂದಲೂ ೧/೧೦ ಭಾಗವನ್ನು ಸರಕಾರ ಪಡೆದುಕೊಳ್ಳುತ್ತಿತ್ತು. ಪ್ರಾಚೀನ ಬ್ಯಾಬಿಲೋನಿಯಾ ಮತ್ತು ಅಸ್ಸೀರಿಯಾದಲ್ಲಿ ಹಮ್ಮುರಬಿ ಜಾರಿಗೊಳಿಸಿದ್ದ ನ್ಯಾಯಸೂತ್ರಗಳ ಪ್ರಕಾರ ೧/೧೦ ರಷ್ಟು ಉತ್ಪನ್ನವನ್ನು ಭೂ ಕಂದಾಯವನ್ನಾಗಿ ನೀಡಬೇಕಾಗಿತ್ತು. ಬಹುತೇಕ ಎಲ್ಲಾ ಇಸ್ಲಾಮಿಕ್ ದೇಶಗಳಲ್ಲಿ ಪ್ರಾರಂಭದ ದಿನಗಳಿಂದಲೂ ೧/೧೦ರಷ್ಟು ದರದಲ್ಲಿ (Asherra) ಭೂ ಕಂದಾಯವನ್ನು ಸಂಗ್ರಹಿಸುವ ರೂಢಿ ಇದೆ.

ಪ್ರಾಚೀನ ಚೀನಾದಲ್ಲಿ ೧/೧೦ ರಷ್ಟು ಉತ್ಪನ್ನವನ್ನು ಸರ್ಕಾರದ ಪಾಲೆಂದು ತೆಗೆದಿರಿಸಿ ಉಳಿದದ್ದನ್ನು ಭೂ ಮಾಲೀಕ ಮತ್ತು ಕೃಷಿಕ ತಮ್ಮೊಳಗೆ ಒಪ್ಪಂದ ಮಾಡಿಕೊಂಡಿದ್ದ ಪ್ರಕಾರ ಭಾಗ ಮಾಡಿಕೊಳ್ಳುತ್ತಿದ್ದರು. ಪ್ರಾಚೀನ ಬರ್ಮಾ (ಇಂದಿನ ಮ್ಯಾನ್‌ಮಾರ್)ದಲ್ಲಿ ಕೂಡ ಕೃಷಿ ಭೂಮಿಯ ಮೇಲೆ ವಿಧಿಸುತ್ತಿದ್ದ ಕಂದಾಯ ೧/೧೦ರಷ್ಟು ಮಾತ್ರವೇ ಆಗಿತ್ತು. ಆರ್.ಎಸ್.ವೈದ್ಯನಾಥ ಅಯ್ಯರ್ ಹೇಳುವಂತೆ, "ಇಡೀ ಏಷಿಯಾ ಮತ್ತು ಯುರೋಪಿನಲ್ಲಿ ಹೀಗೆ ಭೂ ಕಂದಾಯದ ಸಾಮಾನ್ಯ ದರವು ಉತ್ಪನ್ನದ ಕೇವಲ ೧/೧೦ರಷ್ಟಿತ್ತು: ಆದರೆ, ಕೃಷಿ ಚಟುವಟಿಕೆಗಳ ಖರ್ಚುಗಳನ್ನು ಕಳೆದು ಒಟ್ಟು ಉತ್ಪನ್ನ ಅಥವಾ ನಿವ್ವಳ ಉತ್ಪನ್ನ ಇವೆರಡರಲ್ಲಿ ಯಾವುದನ್ನು ಆಧಾರವಾಗಿಟ್ಟುಕೊಂಡು ಈ ದರವನ್ನು ನಿರ್ಧರಿಸಲಾಗುತ್ತಿತ್ತೆಂಬುದು ಸ್ಪಷ್ಟವಾಗಿ ತಿಳಿಯದು".

ಪ್ರಾಚೀನ ಭಾರತದ ಹಣಕಾಸು ಆಡಳಿತ ಕುರಿತಾದ ಮನುವಿನ ಹೇಳಿಕೆಯ ಪ್ರಕಾರ, ರಾಜ್ಯಾದಾಯದ ಅತಿ ಮುಖ್ಯ ಮೂಲವೆಂದರೆ, ಭೂ ಕಂದಾಯ. ಅದನ್ನು ಜಮೀನಿನ ಫಲವತ್ತತೆ, ಕೃಷಿ ಕಾರ್ಯಗಳಿಗಾಗುತ್ತಿದ್ದ ವೆಚ್ಚಗಳು ಮತ್ತು ದೈಹಿಕ ಶ್ರಮದ ಆಧಾರದ ಮೇಲೆ ನಿಷ್ಕರ್ಷೆ ಮಾಡಲಾಗುತ್ತಿತ್ತು. ಭೂ ಕಂದಾಯದ ಬಗ್ಗೆ ಹೇಳುವುದಾದರೆ, ಮನು ಮೂರು ದರಗಳನ್ನು ಗೊತ್ತು ಮಾಡಿದ್ದನು. ಅವುಗಳೆಂದರೆ ಆರನೇ (೧/೬) ಭಾಗ, ಎಂಟನೇ ಒಂದು (೧/೮) ಭಾಗ, ಮತ್ತು ಹನ್ನೆರಡನೇ ಒಂದು (೧/೧೨) ಭಾಗ. ಮನು ಮೂರು ದರಗಳನ್ನು ಗೊತ್ತುಪಡಿಸಿದ್ದರೂ, ಸುಭಿಕ್ಷದ ವರ್ಷಗಳಲ್ಲಿ ಅವನ ಸಾಮಾನ್ಯ ಭೂ ಕಂದಾಯ ದರ ಕೇವಲ ಹನ್ನೆರಡನೇ ಒಂದು (೧/೧೨) ಭಾಗ ಮಾತ್ರವಾಗಿತ್ತು. ಯುದ್ಧವೇ ಮೊದಲಾದ ರಾಷ್ಟ್ರೀಯ ಆಪತ್ತಿನ ವರ್ಷಗಳಲ್ಲಿ ಪರಿಸ್ಥಿತಿಯ ಗಂಭೀರತೆಗೆ ಅನುಗುಣವಾಗಿ ೧/೮, ೧/೬ ಅಥವಾ ೧/೪ರಷ್ಟು ದರದಲ್ಲಿ ಭೂ ಕಂದಾಯವನ್ನು ಹೆಚ್ಚಿಸಲು ಅವನು ಸಮ್ಮತಿಸಿದ್ದನು. ಇದು ಜಮೀನಿನ ಒಟ್ಟು ಉತ್ಪನ್ನದ ಮೇಲೆ ಆಧರಿಸಲ್ಪಡುತ್ತಿರಲಿಲ್ಲ; ಕೃಷಿಯಿಂದ ಬಂದ ಲಾಭದ ಮೇಲೆ ಭೂಕಂದಾಯವನ್ನು ನಿಗದಿ ಮಾಡಲಾಗುತ್ತಿತ್ತು.

ಮೌರ್ಯ ಚಕ್ರಾಧಿಪತ್ಯದ ಕಾಲದಲ್ಲಿ ರಾಜ್ಯಾದಾಯದ ಪ್ರಮುಖ ಮೂಲ ಭೂಕಂದಾಯವೇ ಆಗಿತ್ತು. ಜಮೀನಿನ ಉತ್ಪನ್ನದಲ್ಲಿ ರಾಜನ ಭಾಗವು ಸಾಮಾನ್ಯವಾಗಿ ೧/೬ ಇರುತ್ತಿತ್ತು; ಆದರೆ, ಕೆಲವೊಮ್ಮೆ ೧/೮ ಅಥವಾ ೪ ಇರುತ್ತಿದ್ದುದೂ ಉಂಟು. ಭೂಕಂದಾಯವನ್ನು "ಅಗ್ರೋನೊಮಿ" ಎಂಬ ಅಧಿಕಾರಿಯು ವಸೂಲಿ ಮಾಡುತ್ತಿದ್ದನೆಂದು ಗ್ರೀಕ್ ಬರಹಗಾರರು ಹೇಳಿದ್ದಾರೆ. ಇವನನ್ನು ಕೌಟಿಲ್ಯನು "ಸಮಾಹರ್ತೃ" ಎಂದು ಕರೆದಿದ್ದಾನೆ. ಎಲ್ಲಾ ವಿಧವಾದ ಕಂದಾಯಗಳ ವಸೂಲಿ ಸಮಾಹರ್ತೃವಿನ ಕರ್ತವ್ಯವಾಗಿತ್ತು. ತೆರಿಗೆಯನ್ನು ನಗದುರೂಪದಲ್ಲಿ ಅಥವಾ ವಸ್ತುರೂಪದಲ್ಲಿ ಸಲ್ಲಿಸಲು ಅವಕಾಶವಿತ್ತು. ಜಲ ಸೌಕರ್ಯವನ್ನನುಸರಿಸಿ ನೀರಿನ ತೆರಿಗೆ ವಿಧಿಸಲಾಗುತ್ತಿತ್ತು. ಕೌಟಿಲ್ಯನು ಹೇಳಿರುವುದೇನೆಂದರೆ, "ಸ್ವದೇಹ ಶ್ರಮದಿಂದಲೂ, ತನ್ನ ಹಣದ ವೆಚ್ಚದಿಂದಲೂ ಕಟ್ಟಿಸಿದ ಸೇತುವೆ, ಕೆರೆ ಮುಂತಾದವುಗಳಿಂದ ನೀರನ್ನು ಗಡಿಗೆಗಳಲ್ಲಿ ಕೈಗಳಿಂದ ಹೊತ್ತು ಬೆಳೆಸಿದ ಬೆಳೆಯಿಂದ ಐದನೆಯ ಒಂದು ಭಾಗವನ್ನು ಏತ, ಕಪಿಲೆ ಮುಂತಾದವುಗಳಿಂದ ನೀರನ್ನೆತ್ತಿ ಬೆಳೆಸಿದ ಬೆಳೆಯಿಂದ ನಾಲ್ಕನೆಯ ಒಂದು ಭಾಗವನ್ನೂ, ಉದಕ ಭಾಗವಾಗಿ ಕಂದಾಯ ಕೊಡಬೇಕು. "ನದಿ, ಕೆರೆ, ಬಾವಿ, ಕೊಳ, ಸರೋವರ, ಮುಂತಾದವುಗಳಿಂದ ತೂಬಿನ ಮೂಲಕ ನೀರನ್ನು ಹಾಯಿಸಿಕೊಂಡು ಬೆಳೆಸಿದ ಬೆಳೆಯಲ್ಲಿ ನಾಲ್ಕನೆಯ ಒಂದು ಭಾಗವನ್ನು ಕಂದಾಯವಾಗಿ ಸಲ್ಲಿಸಬೇಕು".

ಸಮಾಹರ್ತೃವು ಉಕ್ಕಡಗಳಲ್ಲೆತ್ತುವ ಸುಂಕ, ದಂಡ, ಉಪವನ, ಮದ್ಯ, ಎಣ್ಣೆ, ಮನೆ ನಿವೇಶನ, ಕ್ಷೌರವಸ್ತು, ಗಣಿ, ಕಾಡು, ಪಶುಸಮೂಹ, ಸಂಚಾರ ಮಾರ್ಗಗಳು ಮುಂತಾದ ಇಪ್ಪತ್ತೆರಡು ಬಾಬುಗಳಿಂದ ತೆರಿಗೆಗಳನ್ನು ಸಂಗ್ರಹಿಸುವ ಜವಾಬ್ದಾರಿ ಹೊಂದಿದ್ದನು. ಮೌರ್ಯರ ಸರಕಾರವು ಕೃಷಿ, ಕೈಗಾರಿಕೆ ಮತ್ತು ವ್ಯಾಪಾರಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ನೇರವಾಗಿ ಪಾಲ್ಗೊಂಡು ಹೆಚ್ಚಿನ ಆದಾಯವನ್ನು ಪಡೆದುಕೊಳ್ಳುತ್ತಿತ್ತು.

ಗುಪ್ತರ ಕಾಲದಲ್ಲಿ ಭೂ ಉತ್ಪನ್ನದ ರಾಜನ ಪಾಲು ಸಾಮಾನ್ಯವಾಗಿ ಆರನೇ ಒಂದು ಭಾಗವಾಗಿತ್ತು. ಸರ್ಕಾರಕ್ಕೆ ಗಣಿಗಳು, ಬಂದರುಗಳು, ಕೋಟೆಗಳು, ಹಾಯ್ಗಡ, ರಾಜರ ಸ್ವಂತ ಜಮೀನು ಮುಂತಾದ ಮೂಲಗಳಿಂದಲೂ ವಿವಿಧ ತೆರಿಗೆಗಳು ಸಂದಾಯವಾಗುತ್ತಿದ್ದವು. ತೆರಿಗೆಗಳನ್ನು ನಗದು, ಧಾನ್ಯ ಅಥವಾ ವಸ್ತುರೂಪದಲ್ಲಿ ಸಂಗ್ರಹಿಸುವ ರೂಢಿ ಇತ್ತು. ರಾಷ್ಟ್ರಕ್ಕೆ ಯುದ್ಧವೇ ಮುಂತಾದ ಆಪತ್ತುಗಳು ಒದಗಿ ಬಂದಾಗ ತೆರಿಗೆಗಳ ದರವನ್ನು ಹೆಚ್ಚಿಸುವ ಪದ್ಧತಿ ಇತ್ತು.

ರಾಷ್ಟ್ರಕೂಟ ದೊರೆಗಳ ಕಾಲದಲ್ಲಿ ಭೂ ಕಂದಾಯವನ್ನು 'ಭೋಗಕರ' ಎಂದು ಕರೆಯುತ್ತಿದ್ದರು. ಅದರ ದರ ಉತ್ಪನ್ನದ ಸುಮಾರು ನಾಲ್ಕನೇ ಒಂದು ಭಾಗದಷ್ಟಿರುತ್ತಿತ್ತು. ದುಷ್ಕಾಳ (ಬರ) ಉಂಟಾದ ಸಂದರ್ಭಗಳಲ್ಲಿ ಕಂದಾಯವನ್ನು ಮಾಫಿ ಮಾಡುವ ಪದ್ಧತಿ ಇತ್ತು. ಕಂದಾಯವನ್ನು ಧಾನ್ಯರೂಪದಲ್ಲಿ ಎರಡು ಅಥವಾ ಮೂರು ಕಂತುಗಳಲ್ಲಿ ಸಲ್ಲಿಸುವ ಅವಕಾಶವಿತ್ತು.

ಈ ಎಲ್ಲಾ ರಾಜವಂಶಗಳು ಚಾಮರಾಜನಗರ ಜಿಲ್ಲಾ ಪ್ರದೇಶದಲ್ಲಿ ನೇರ ಆಡಳಿತ ನಡೆಸಲಿಲ್ಲವಾದರೂ ಅವುಗಳ ಸಾಮಂತ ಅಥವಾ ಆಶ್ರಿತ ರಾಜವಂಶಗಳಲ್ಲಿ ಕೆಲವು ಈ ಪ್ರದೇಶವನ್ನು ನಿಯಂತ್ರಿಸುತ್ತಿದ್ದುವೆಂದು ಹೇಳಬಹುದು. ಅಲ್ಲದೆ, ಧರ್ಮಶಾಸ್ತ್ರಕಾರರಾದ ಮನು, ಕಾಮಂದಕ, ಆಪಸ್ತಂಭ, ಕೌಟಿಲ್ಯ ಮುಂತಾದವರು ರೂಪಿಸಿದ ನಿಯಮಗಳನ್ನು ಸರಿಸುಮಾರು ಭಾರತದ ಎಲ್ಲಾ ಭಾಗಗಳಲ್ಲಿಯೂ ಅನುಸರಿಸುವ ಪರಂಪರೆ ಇತ್ತು.

ಚಾಮರಾಜನಗರ ಜಿಲ್ಲೆಯ ಕಂದಾಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಸಾಮಗ್ರಿಗಳೆಂದರೆ ಲಭ್ಯವಿರುವ ಕೆಲವು ಶಿಲಾಶಾಸನಗಳು, ಭೂ ಮೋಜಣಿ ದಾಖಲೆಗಳು ಇತ್ಯಾದಿ. ಪ್ರಾಚೀನ ಕಾಲದಿಂದಲೂ ಭೂಮಿಯನ್ನು ಅಳತೆ ಮಾಡುವ ಪರಿಪಾಠವಿದ್ದು 'ಕಮ್ಮ', 'ಮತ್ತರು', 'ನಿವರ್ತನ', 'ಕುಳ' ಮುಂತಾದ ಹೆಸರುಗಳಿಂದ ಭೂಮಿಯ ವಿಸ್ತೀರ್ಣವನ್ನು ಗುರ್ತಿಸುತ್ತಿದ್ದರು. ಆದರೆ ಬಹುತೇಕ ಸಂದರ್ಭಗಳಲ್ಲಿ ಭೂಮಿಯ ಅಳತೆಯನ್ನು 'ಬೀಜವರಿ' ಲೆಕ್ಕದಲ್ಲಿ ದಾಖಲಿಸಿರುವುದು ಕಂಡುಬರುತ್ತದೆ. ಕ್ರಿ.ಶ.೧೪೧೭ರ ಶಾಸನ (ಗುಂಡ್ಲುಪೇಟೆ ೧೪೯)ವೊಂದು ಎಡತಲೆಯ ೪೦ ಖಂಡುಗದ ಗದ್ದೆ ಮತ್ತು ಕೆಲಸೂರಿನ ೮ ಖಂಡುಗದ ಜಮೀನು ಎಂದು ಉಲ್ಲೇಖಿಸಿದೆ. ಇಂತಹ ದಾಖಲೆಗಳು ಚಾಮರಾಜನಗರ ಜಿಲ್ಲೆ ಮತ್ತು ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ೧೧ನೇ ಶತಮಾನಕ್ಕೂ ಹಿಂದಿನಿಂದ ಕಂಡುಬಂದಿವೆ ಎನ್ನಬಹುದು. ಭೂಕಂದಾಯವೇ ಅಲ್ಲದೆ ಬೇರೆ ಕೆಲವು ತೆರಿಗೆಗಳನ್ನು ಜನತೆಯ ಮೇಲೆ ಹೇರಲಾಗಿತ್ತು. ಮನೆ ತೆರಿಗೆ, ಒಳವು ಮತ್ತು ಹೊರವು ತೆರಿಗೆ (Entry and Exit Taxes), ವೃತ್ತಿ ತೆರಿಗೆಗಳಾದ ಗಾಣ ತೆರಿಗೆ, ಕುಂಬಾರದೆರೆ, ಅಗಸದೆರೆ, ಬಂಡಿದೆರೆ, ಮುಂತಾದವು ಅವುಗಳಲ್ಲಿ ಸೇರಿದ್ದವು. ಒಣಭೂಮಿ ಅಥವಾ ಹೊಲಗಳ ಮೇಲೆ ಉತ್ಪನ್ನದ ಐದನೇ ಒಂದರಷ್ಟು (೧/೫) ಮತ್ತು ತರಿ ಭೂಮಿ ಅಥವಾ ಗದ್ದೆಗಳ ಮೇಲೆ ಉತ್ಪನ್ನದ ಮೂರನೇ ಒಂದರಷ್ಟು (೧/೩) ಕಂದಾಯವನ್ನು ಹೊಯ್ಸಳರ (ಕ್ರಿ.ಶ.೯೫೦–ಕ್ರಿ.ಶ.೧೩೪೦) ಕಾಲದಲ್ಲಿ ಗೊತ್ತುಪಡಿಸಲಾಗಿತ್ತು.

ವಿಜಯನಗರದ ಅರಸರ ಕಾಲ (ಕ್ರಿ.ಶ.೧೩೩೬–ಕ್ರಿ.ಶ.೧೫೬೫)ದಲ್ಲಿ ವಿದ್ಯಾರಣ್ಯ ತೀರ್ಥರು ಪರಾಶರ ಸ್ಮೃತಿಯ ಮೇಲೆ ಭಾಷ್ಯವೊಂದನ್ನು ಬರೆದರು. ಹಿಂದು ಸ್ಮೃತಿಕಾರರು ಹೇಳಿದ್ದಂತೆ, ಜಮೀನಿನ ಉತ್ಪನ್ನದ ಆರನೇ ಒಂದು (೧/೬) ಭಾಗವನ್ನು ರಾಜನ ನ್ಯಾಯಯುತ ಭಾಗವೆಂದು ತಿಳಿಯಲಾಗಿತ್ತು. ವಿದ್ಯಾರಣ್ಯರು ರಾಜ ಭಾಗವನ್ನು ಸಾಧ್ಯವಾದ ಮಟ್ಟಿಗೆ ನಗದುರೂಪದಲ್ಲಿ ನೀಡುವ ಪದ್ಧತಿಯನ್ನು ಬಲಪಡಿಸಲೆತ್ನಿಸಿದರು. ಪದಾರ್ಥರೂಪದಲ್ಲಿ ನೀಡಲಾಗುತ್ತಿದ್ದ ಭೂ ಕಂದಾಯವನ್ನು ನಗದುರೂಪಕ್ಕೆ ಪರಿವರ್ತಿಸಲು ಅಗತ್ಯ ನಿಯಮಗಳನ್ನು ಅವರು ರೂಪಿಸಿದರು. ಅವು ಜಮೀನಿನ ವಿಸ್ತೀರ್ಣ, ಅದನ್ನು ಬಿತ್ತಲು ಬೇಕಾಗುವ ಬೀಜದ ಪರಿಮಾಣ ಮತ್ತು ಧಾನ್ಯದ ಬೆಲೆ ಮುಂತಾದ ಅಂಶಗಳ ಮೇಲೆ ನಿಂತಿದ್ದವು. ಜಮೀನಿನ ಒಟ್ಟು ಉತ್ಪನ್ನದಲ್ಲಿ ೧/೨ ಭಾಗ ಕೃಷಿ ಸಂಬಂಧದ ವೆಚ್ಚಗಳು ಮತ್ತು ಕೃಷಿಕನ ಕುಟುಂಬದ ಪೋಷಣೆಗಾಗಿಯೂ, ಉಳಿದದ್ದರಲ್ಲಿ ೧/೪ ಭಾಗ ಜಮೀನಿನ ಒಡೆಯನಿಗೆ ಮತ್ತು ೧/೪ ಭಾಗ ರಾಜನಿಗೆ ಹೋಗುತ್ತಿತ್ತು.

ಬಿತ್ತನೆಗಾಗಿ ಬಳಕೆಯಾಗುವ ಬೀಜದ ಪರಿಮಾಣವನ್ನಲಂಬಿಸಿ ಜಮೀನಿನ ವಿಸ್ತಾರವನ್ನು ನಿರ್ಧರಿಸಲಾಗುತ್ತಿತ್ತು. ಒಂದು ಕೊಳಗ ಬೀಜ ಬಿತ್ತನೆಯಾಗುವ ಜಮೀನಿನಿಂದ, ಮಣ್ಣಿನ ತರಹೆ ಅಥವಾ ಬಗೆಯ ಪ್ರಕಾರ ೩ ರಿಂದ ೧೦ ಗದ್ಯಾಣ ಕಂದಾಯವನ್ನು ವಿಧಿಸಲಾಗುತ್ತಿತ್ತು. ಕಪಿಲೆ ಬಾವಿಗಳಿಂದ ನೀರುಣಿಸಲಾಗುತ್ತಿದ್ದ ಜಮೀನನ್ನು ನಗದು ಕಂದಾಯ ಪಾವತಿಯ ಷರತ್ತಿನ ಮೇಲೆ ನೀಡಲಾಗುತ್ತಿತ್ತು ಆದರೆ ಕೆರೆ ನೀರಾವರಿಯಿಂದ ಸಾಗುವಳಿಯಾಗುತ್ತಿದ್ದ ಜಮೀನಿನ ಮೇಲೆ ಉತ್ಪನ್ನದ ಅರ್ಧಭಾಗವನ್ನು ಕಂದಾಯವಾಗಿ ನೀಡಬೇಕಿತ್ತು; ಕೆಲವು ಪ್ರದೇಶಗಳಲ್ಲಿ ಪ್ರತಿಯೊಂದು ನೇಗಿಲಿನ ಮೇಲೆ ೨ ಅಥವಾ ೩ ಪಗೋಡಾಗಳ ಅಧಿಕ ಕರವನ್ನು ವಸೂಲು ಮಾಡುತ್ತಿದ್ದುದೂ ಉಂಟು.

ಕೃಷ್ಣದೇವರಾಯ ಮತ್ತು ಅಚ್ಯುತರಾಯನ ಆಡಳಿತಾವಧಿಯಲ್ಲಿ ಅಧ್ಯಾದೇಶಗಳ ಮೂಲಕ ಕಂದಾಯವನ್ನು ವಸೂಲು ಮಾಡುವ ಪದ್ಧತಿಯನ್ನು ಬಲಪಡಿಸಿ ಲೆಕ್ಕಪತ್ರಗಳನ್ನಿಡುವ ಸುಧಾರಿತ ವ್ಯವಸ್ಥೆ ಜಾರಿಗೊಳಿಸಲ್ಪಟ್ಟಿತು. ತೋಟಗಳು ಮತ್ತು ಇತರೆ ನೆಡುತೋಪುಗಳಿಂದ ಗಣನೀಯ ಪ್ರಮಾಣದಲ್ಲಿ ಕಂದಾಯ ವಸೂಲಾಗುತ್ತಿತ್ತು. ಕೌಲು ಅಥವಾ ಏರುತ್ತಾ ಸಾಗುವ ಭೂ ಕಂದಾಯ ಪದ್ಧತಿ ಪ್ರಕಾರ ಜಮೀನುಗಳನ್ನು ಕೃಷಿಗೆ ಒಳಪಡಿಸಲು ನೀಡಲಾಗುತ್ತಿತ್ತು. ಕೆರೆಕಟ್ಟೆಗಳು ಮತ್ತು ನದಿಕಾಲುವೆಗಳನ್ನು ನಿರ್ಮಿಸಲು ಮತ್ತು ಸುಸ್ಥಿತಿಯಲ್ಲಿಡಲು ಸರ್ಕಾರವು ಶ್ರಮಿಸುತ್ತಿತ್ತು. 'ಅಠವಣೆ' ಎಂಬ ಹೆಸರಿನಿಂದ ತೆರಿಗೆಗಳಿಗೆ ಸಂಬಂಧಿಸಿದ ಒಂದು ಪ್ರತ್ಯೇಕ ಇಲಾಖೆಯು ಸ್ಥಾಪಿಸಲ್ಪಟ್ಟಿತ್ತು. ಹಿಂದಿನಂತೆಯೇ, ಭೂ ಕಂದಾಯ ಮಾತ್ರವೇ ಅಲ್ಲದೇ ಬೇರೆ ಕೆಲವು ರೀತಿಯ ತೆರಿಗೆಗಳೂ ವಿಧಿಸಲ್ಪಟ್ಟಿದ್ದವು. ಕ್ರಿ.ಶ.೧೫೨೧ರ ಗುಂಡ್ಲುಪೇಟೆಯ ೧೩೪ನೇ ಶಾಸನದಲ್ಲಿ ಬೆಟ್ಟದ ಕಾವಲು, ಭೋಗರದೆರೆ, ಗಾಣಕಾರತೆರೆ, ದಸುಗತೆರಿಗೆ, ಮಗ್ಗಸುಂಕ, ಅಗಸದೆರೆ, ಕುಂಬಾರದೆರೆ ಮುಂತಾದ ತೆರಿಗೆಗಳನ್ನು ಹೆಸರಿಸಿದೆ.

ವಿಜಯನಗರದ ತೆರಿಗೆ ಪದ್ಧತಿಯನ್ನೇ ಅದರ ಸಾಮಂತರಾಜರು ಮತ್ತು ಇತರರು ಅನುಸರಿಸುತ್ತಾ ಬಂದರು. ಮೈಸೂರಿನ ಖ್ಯಾತ ದೊರೆ ಚಿಕ್ಕದೇವರಾಜ ಒಡೆಯರು (ಕ್ರಿ.ಶ.೧೬೭೩–೧೭೦೪) ಅನೇಕ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವ ಮೂಲಕ ರಾಜ್ಯಾದಾಯವನ್ನು ಹೆಚ್ಚಿಸಿದರು. ಪ್ರತೀ ಕುಡು ವಿಸ್ತೀರ್ಣದ ಒಣ ಜಮೀನಿನ ಮೇಲೆ ಎರಡು ಚಿನ್ನದ ಪಣಂ ತೆರಿಗೆಯನ್ನು ಆಕರಿಸಲಾಯಿತು. ತೋಟಗಳಲ್ಲಿರುವ ೧,೦೦೦ ತೆಂಗಿನ ಮರಗಳಿಗೆ ೩೦, ೧೮, ೨೫, ೧೮, ೧೫ ವರಹಗಳ ಮೇರೆಗೆ ಆಯಾ ತೋಟದ ಫಲಗಳನ್ನು ನೋಡಿ ಕಂದಾಯವನ್ನು ನಿಬಂಧನೆ ಮಾಡಿದ್ದಲ್ಲದೆ, ಕೆಲವು ಸೀಮೆಗಳಲ್ಲಿ ತೋಟಕ್ಕೆ ಪೂರ್ವದಿಂದಲೂ ಕಂದಾಯದ ಪದ್ಧತಿ ಇಲ್ಲದ್ದರಿಂದ, ಅಡಕೆ ತೆಂಗಿನಲ್ಲಿ ಆದ ಫಲಕ್ಕೆ ವಾರವನ್ನು ತೆಗೆದುಕೊಳ್ಳುವಂತೆಯೂ, ತೆಂಗಿನಮರಕ್ಕೆ ಕಂದಾಯ ಕೊಡುವ ಪದ್ಧತಿಯಿರುವ ಸೀಮೆಗಳಲ್ಲಿ ಅಡಕೆ ಮರಕ್ಕೂ ಆಯಾ ಸೀಮೆಯ ಪದ್ಧತಿಯ ಮೇಲೆ ಕಂದಾಯವನ್ನು ಕೊಡುವಂತೆಯೂ ನಿಬಂಧನೆ ಮಾಡಿದರು. ಕೆರೆಯ ಹಿಂದುಗಡೆಯಲ್ಲಿಯೂ ಕಾಲುವೆಗಳ ಸಮೀಪದಲ್ಲಿಯೂ ಹೊಸದಾಗಿ ಅಡಕೆ ತೆಂಗು ತೋಟವನ್ನು ಮಾಡಲು ರೈತರಿಗೆ ಸಾಗುವಳಿಗೆ ಕೊಡಬೇಕಾದರೆ, ೧೦೦ ಬಾಳೆಯ ಬುಡಕ್ಕೆ ೩ ಹಣ ಕಂದಾಯದ ಮೇರೆಗೆ ತೆಗೆದುಕೊಂಡು ಅಡಕೆ, ತೆಂಗು ಫಲಕ್ಕೆ ಬಂದ ಮೇಲೆ ಬಾಳೆಯ ಕಂದಾಯವನ್ನು ಬಿಟ್ಟುಕೊಟ್ಟು ಅಡಕೆ, ತೆಂಗಿಗೆ ಮಾತ್ರ ಆಯಾ ಸೀಮೆಯ ಪದ್ಧತಿಯ ಮೇರೆಗೆ ವಾರ ಅಥವಾ ಕಂದಾಯವನ್ನು ತೆಗೆದುಕೊಳ್ಳುವಂತೆ ನಿಬಂಧನೆ ಮಾಡಿದರು. ಹೊಲದಲ್ಲಿರುವ ಹುಣಸೆ, ಹಲಸಿನ ಮರಗಳಿಗೆ ಮಾತ್ರ ಫಲವಿದ್ದಂತೆ ೧ ರಿಂದ ೨ ಹಣದವರೆಗೆ ಮರವಳಿ ಕಂದಾಯವನ್ನು ನಿಷ್ಕರ್ಷೆ ಮಾಡಿದರು.

ಅನಂತರ ಗಿಡಗೆಂಟೆ ಕಟ್ಟಿರುವ ಭೂಮಿಗೆ ಆಯಾ ಸೀಮೆಯ ಪದ್ಧತಿ ಪ್ರಕಾರ ಪೂರ್ವದಲ್ಲಿ ಶ್ಯಾನುಭೋಗನ ಲೆಕ್ಕದ ಮೇರೆಗೆ ೧೬ ಹಣ ಹುಟ್ಟುವ ಉತ್ತಮ ಭೂಮಿಯಲ್ಲಿ ಗಿಡಗೆಂಟೆಗಳನ್ನು ಕಡಿದು ರೈತರು ಸಾಗುವಳಿ ಮಾಡಿದರೆ, ೫ ವರ್ಷದವರೆಗೂ ಮೂರರಲ್ಲಿ ಒಂದು ಪಾಲು ಕಂದಾಯ ತೆಗೆದುಕೊಳ್ಳುವಂತೆಯೂ, ಇದೇ ಮೇರೆಗೆ ಇರುವ ೧೨ ಹಣ ಹುಟ್ಟುವ ಮಧ್ಯಮ ಭೂಮಿಗೆ ನಾಲ್ಕರಲ್ಲಿ ಒಂದು ಪಾಲು, ೨ ಹಣವನ್ನು ಕಂದಾಯವಾಗಿ ತೆಗೆದುಕೊಂಡು ಅನಂತರ ಅರಮನೆಯ ಪದ್ಧತಿಯ ಮೇರೆಗೆ ನಿಜ ಕಂದಾಯವನ್ನು ತೆಗೆದುಕೊಳ್ಳುವಂತೆಯೂ ನಿಬಂಧನೆ ಮಾಡಿದರು. ಕೆಲವು ಸೀಮೆಗಳಲ್ಲಿ ರೈತರು ಕಡಿಮೆಯಾಗಿ ಗಿಡಗೆಂಟೆ ಕಟ್ಟಿರುವ ಭೂಮಿಯು ಹೆಚ್ಚಾಗಿದ್ದುದರಿಂದ ಸಾಗುವಳಿ ಮಾಡುವುದಕ್ಕೆ ರೈತರಿಗೆ ಹಿಸ್ಸೆ ಕಂದಾಯವೆಂಬುದಾಗಿ ನೇಮಕ ಮಾಡಿಕೊಟ್ಟರು.

ಕೆಲವು ರೈತರು ಕಂದಾಯ ಮತ್ತು ವಾರದ ದವಸವನ್ನು ಅರಮನೆಗೆ ನೀಡಲು ನಿರಾಕರಿಸಿದ್ದರಿಂದ ಅವರನ್ನು ನಿಗ್ರಹಿಸಿದ ಚಿಕ್ಕದೇವರಾಜ ಒಡೆಯರು ರೈತರನ್ನು ತಗ್ಗಿಸುವ ನಿಮಿತ್ತವಾಗಿಯೂ, ಅವರ ಮನೆಗೆ ಕೂಡಿ ಬರುವಂತೆಯೂ ಹೆಚ್ಚಾಗಿ ಮನೆದೆರಿಗೆ ಮೊದಲಾದ ೧೯ ಬಾಬುಗಳನ್ನು ಗೊತ್ತುಪಡಿಸಿದರು: ೧) ಮನೆದೆರಿಗೆ, ೨) ಹುಲ್ಲು ಹಣ, ೩) ದೇವರಾಯವಟ್ಟ, ೪) ಏರಸುಂಕ, ೫) ಸಮಯಾಚಾರ, ೬) ದನಕರು ಮಾರಿದ್ದಕ್ಕೆ ಸುಂಕ, ೭) ಕುರಿದೆರಿಗೆ, ೮) ಗುಳುವಿನ ಪೊಮ್ಮು, ೯) ಅಂಗಡಿವಸರ, ೧೦) ಕೂಟಾಚಾರ, ೧೧) ಉಬ್ಬೆ ಕಾಣಿಕೆ, ೧೨) ಅಂಗಡಿಪಟ್ಟಡಿ, ೧೩) ಗಿಡಕಾವಲು, ೧೪) ಜಾತಿಮಣಿಯ, ೧೫) ಉಪ್ಪಿನ ಮೋಳ, ೧೬) ಕೌದಿಯ ತೆರಿಗೆ.

ಹೈದರಾಲಿ (೧೭೬೧–೧೭೮೨) ಚಿಕ್ಕದೇವರಾಯನು ಬಿಟ್ಟುಹೋಗಿದ್ದ ಹಣಕಾಸು ವ್ಯವಸ್ಥೆಯನ್ನು ಮುಂದುವರೆಸಿಕೊಂಡು ಬಂದನು. ಆದರೆ, ಆಗ ಸಂಗ್ರಹವಾಗುತ್ತಿದ್ದ ಕಂದಾಯದ ಜೊತೆಗೆ ನುರಿತ ಅಥವಾ ಜನಪ್ರಿಯ ಅಮೀಲರು ಗುಟ್ಟಾಗಿ ಸುಲಿಯುತ್ತಿದ್ದ ಮತ್ತು ನಂತರ ಪತ್ತೆ ಮಾಡಲ್ಪಟ್ಟ ಹೆಚ್ಚುವರಿ ಕಂದಾಯವನ್ನೂ ಸ್ಥಿರ ಕಂದಾಯಕ್ಕೆ ಸೇರಿಸಿದನು. ಇವನ ಕಾಲದಲ್ಲಿ ರಾಜಾದಾಯ ೪೦ ಲಕ್ಷದಿಂದ ಒಂದು ಕೋಟಿ ೧೦ ಲಕ್ಷಕ್ಕೇರಿತು. ರೈತರ ಮೇಲೆ ಅಧಿಕಾರಿಗಳು ನಡೆಸುತ್ತಿದ್ದ ದೌರ್ಜನ್ಯ ಮತ್ತು ಕಂದಾಯದ ಹಣದ ದುರುಪಯೋಗವನ್ನು ಪರಿಣಾಮಕಾರಿಯಾಗಿ ತಡೆಯಲು ಎಲ್ಲಾ ತಾಲೂಕುಗಳಲ್ಲಿಯೂ ಹರಿಕಾರರನ್ನು ನೇಮಿಸಲಾಗಿರುತ್ತಿತ್ತು. ಕಂದಾಯಕ್ಕೆ ಸಂಬಂಧಿಸಿದ ಎಲ್ಲಾ ದೂರುಗಳು ಮತ್ತು ಪಾಳು ಜಮೀನುಗಳ ಬಗ್ಗೆ ಅವರು ತನಿಖೆ ಮಾಡಿ ವರದಿ ನೀಡುತ್ತಿದ್ದರು. ಟಿಪ್ಪು ಸುಲ್ತಾನನು (೧೭೮೨–೧೭೯೯) ಹಳೇ ನಿಬಂಧನೆಗಳನ್ನು ರದ್ದುಪಡಿಸಿ ಹೊಸ ಪದ್ಧತಿಯನ್ನು ಜಾರಿಗೊಳಿಸಿದನು. ಅವನು ರಾಜ್ಯವನ್ನು ೫೦೦೦ ಪಗೋಡಾಗಳ ಕಂದಾಯಕ್ಕೆ ಒಂದು ತುಕಡಿಯಂತೆ ವಿಂಗಡಿಸಿದನು ಮತ್ತು ಪ್ರತಿ ತುಕಡಿಗೂ ಕಂದಾಯ ಸಂಗ್ರಹ, ಸುಫರ್ದು ಮತ್ತು ನಿರ್ವಹಣೆಗಾಗಿ ಪ್ರತ್ಯೇಕ ಅಧಿಕಾರಿಯನ್ನು ನೇಮಕ ಮಾಡಿದನು. ಇಪ್ಪತ್ತು ಅಥವಾ ಮೂವತ್ತು ತುಕಡಿಗಳಿಗೆ ಓರ್ವ 'ಅಸೋಫ'ನೆಂಬ ಮೇಲಧಿಕಾರಿ ಇರುತ್ತಿದ್ದನು, ಮತ್ತು 'ಅಸೋಫ' ಕಛೇರಿಯ ಪ್ರಧಾನಾಧಿಕಾರಿಯಾಗಿ ಒಬ್ಬ ಅಧ್ಯಕ್ಷ ಇರುತ್ತಿದ್ದನು. ಹೈದರ ಕಾಲದಲ್ಲಿದ್ದ 'ಹರಿಕಾರ'ರನ್ನು ಟಿಪ್ಪು ಸೇವೆಯಿಂದ ತೆಗೆದುಹಾಕಿದನು. ಅವನು ಜಾರಿಗೆ ತಂದ 'ನಿಬಂಧನೆಗಳು' (Revenue Regulations) ಹೆಚ್ಚು ಕಡಿಮೆ ಚಿಕ್ಕದೇವರಾಜ ಒಡೆಯರು ಹೊರಡಿಸಿದ್ದ ನಿಬಂಧನೆಗಳನ್ನೇ ಹೋಲುತ್ತಿದ್ದು, ಹೆಸರುಗಳನ್ನು ಬದಲಾಯಿಸುವ ಮೂಲಕ ಹೊಸತೆಂಬಂತೆ ತೋರ್ಪಡಿಸಲಾಗಿತ್ತು. ಹೈದರ್ ಮತ್ತು ಟಿಪ್ಪು ಸಾಧ್ಯವಾದಷ್ಟು ಕಂದಾಯವನ್ನು ಹೆಚ್ಚಿಸಲು ಹೆಚ್ಚುವರಿ ಉಪಕರಗಳು ಮತ್ತು ಪಟ್ಟಿಗಳನ್ನು ವಿಧಿಸುತ್ತಿದ್ದರು.

## ದಿವಾನ್ ಪೂರ್ಣಯ್ಯನವರ ಆಡಳಿತ ಸುಧಾರಣೆಗಳು

ಶ್ರೀರಂಗಪಟ್ಟಣದ ಪತನಾನಂತರ (೧೭೯೯), ಮೈಸೂರು ಸಂಸ್ಥಾನವನ್ನು ಅದರ ಕಾನೂನುಬದ್ಧ ವಾರಸುದಾರ ಮಹಾರಾಜ ಕೃಷ್ಣರಾಜ ಒಡೆಯರಿಗೆ ಬ್ರಿಟಿಷರು ಹಿಂತಿರುಗಿಸಿದರು. ದಿವಾನ್ ಪೂರ್ಣಯ್ಯ ರಾಜ ಪ್ರತಿನಿಧಿಯಾಗಿಯೂ ಕರ್ತವ್ಯ ನಿರ್ವಹಿಸಬೇಕಾಯಿತು. ರಾಜ್ಯದ ಕಂದಾಯ ಆಡಳಿತ ಆಗ ಸಂಪೂರ್ಣ ಗೊಂದಲ ಮತ್ತು ಅಸ್ತವ್ಯಸ್ತದಿಂದ ತುಂಬಿತ್ತು. ಹಿಂದಿನ ಅಧಿಕಾರಿಗಳು ಎಸಗಿದ್ದ ವಂಚನೆ, ದುರಾಡಳಿತ ಮತ್ತು ದುರುಪಯೋಗಗಳು ಮಾತ್ರವೇ ಅಲ್ಲದೇ ಪಾಳೇಗಾರರು ಮತ್ತು ಇತರೆ ಪ್ರಭಾವಿ ವ್ಯಕ್ತಿಗಳು ಮುಂದೆ ಮಾಡುತ್ತಿದ್ದ ವ್ಯತಿರಿಕ್ತ ಹಕ್ಕುಗಳು ಆ ಪರಿಸ್ಥಿತಿಗೆ ಕಾರಣಗಳಾಗಿದ್ದವು. ಸರ್ಕಾರದ ಆದಾಯವು ಆಗ ನಾಲ್ಕು ಮೂಲಗಳಿಂದ ಬರುತ್ತಿತ್ತು. ಅಂದರೆ, ಭೂಕಂದಾಯ, ಸಾಯರು, ಅಬಕಾರಿ ಮತ್ತು ಹೊಗೆಸೊಪ್ಪು. ಒಣಭೂಮಿಯ ಕೃಷಿಕರು ಉತ್ಪನ್ನದ ಅಂದಾಜು ಮೌಲ್ಯದ ೧/೩ರಷ್ಟನ್ನು ಭೂಕಂದಾಯವನ್ನಾಗಿ ನೀಡಬೇಕಾಗಿತ್ತು. ತರಿ ಜಮೀನಿನ ಕೃಷಿಕರು ಅಂದಾಜು ಉತ್ಪನ್ನದ ೧/೪ರಷ್ಟನ್ನು ಧಾನ್ಯ ಅಥವಾ ನಗದು ರೂಪದಲ್ಲಿ ನೀಡಬೇಕಾಗಿತ್ತು. ತೋಟಗಳು ಒಂದು ಗೊತ್ತಾದ ನಗದು ಕಂದಾಯವನ್ನು ನೀಡುತ್ತಿದ್ದವು.

ಅಧಿಕಾರವನ್ನು ವಹಿಸಿಕೊಂಡ ಹೊಸತರಲ್ಲಿಯೇ ಪೂರ್ಣಯ್ಯ ಎಲ್ಲಾ ತೆರನಾದ ಕಂದಾಯದ ಬಾಕಿಗಳನ್ನು ಮನ್ನಾ ಮಾಡಿದರು ಮತ್ತು ಹಳೇ ದರಗಳನ್ನು ಆಕರಿಸುವ ಮೂಲಕ ವಿಪರೀತ ಒತ್ತಡದಲ್ಲಿದ್ದ ಕೃಷಿಕರಿಗೆ ಸ್ವಲ್ಪಮಟ್ಟಿನ ಪರಿಹಾರವನ್ನು ಒದಗಿಸಿದರು. ಹೀಗೆ ಅವರು ಮೀರ್‌ಸಾದಕನ ಆರ್ಥಿಕ ದೌರ್ಜನ್ಯಕ್ಕೆ ಹೆದರಿ ತಮ್ಮ ತಮ್ಮ ಜಮೀನುಗಳನ್ನು ತೊರೆದು ಓಡಿಹೋಗಿದ್ದ ಭಾರಿ ಸಂಖ್ಯೆಯ ಕೃಷಿಕರು ಪುನಃ ಅವರ ಜಮೀನುಗಳಿಗೆ ಹಿಂತಿರುಗುವಂತೆ ಮಾಡುವಲ್ಲಿ ಯಶಸ್ವಿಯಾದರು. ಟಿಪ್ಪುಸುಲ್ತಾನನು ಜಪ್ತಿ ಮಾಡಿಕೊಂಡಿದ್ದ ದೇವಾಲಯಗಳು, ಮಠಗಳು ಮತ್ತು ಇತರೆ ಧಾರ್ಮಿಕ ಮತ್ತು ದತ್ತಿ ಸಂಸ್ಥೆಗಳಿಗೆ ಸೇರಿದ್ದ ಹಳೇ ಇನಾಂ ಜಮೀನುಗಳು ಮತ್ತು ತಸ್ದೀಕು ಭತ್ಯೆಗಳನ್ನು ಹಿಂದಕ್ಕೆ ನೀಡಿದ ಮತ್ತೊಂದು ಕ್ರಮವು ಎಲ್ಲರ ಮೆಚ್ಚುಗೆ ಗಳಿಸಿತು. ರಾಜ್ಯಾದ್ಯಂತ ಪೂರ್ಣಯ್ಯ ಅಡಿಕೆ, ತೆಂಗು ಮತ್ತು ಇತರೆ ಮರಗಿಡಗಳ ತೋಟಗಳ ಮೇಲಿನ ಆಸ್ತಿಯ ಹಕ್ಕನ್ನು ಹಿಡುವಳಿದಾರರಿಗೆ ಸ್ಥಿರಗೊಳಿಸಿದರು. ಭೂ ಕಂದಾಯ ಆಡಳಿತವನ್ನು ಕ್ರಮಗೊಳಿಸುವ ಪೂರ್ಣಯ್ಯನವರ ಪ್ರಯತ್ನಗಳೂ ಪ್ರಾರಂಭದಲ್ಲಿಯೇ ಅವರು ತೆಗೆದುಕೊಂಡ ಸಾಮಾನ್ಯ ಪೈಮಾಯಿಷ್ ಅಥವಾ ಭೂ ಮೋಜಣಿ ಕಾರ್ಯವು ಪ್ರಮುಖವಾದ ಒಂದು ಹೆಜ್ಜೆಯಾಗಿದೆ. ಆ ಮೂಲಕ ಕೆಲವು ಜಿಲ್ಲೆಗಳಲ್ಲಿ ದಿವಾನರು ಜಮೀನುಗಳ ಮೇಲೆ ಒಂದು ಕ್ರಮಬದ್ಧವಾದ ಮತ್ತು ಯಥೋಚಿತ ಕಂದಾಯವನ್ನು ನಿಷ್ಕರ್ಷೆ ಮಾಡಲು ಸಮರ್ಥರಾದರು. ಆದರೂ ಆ ಕಾಲದ ಪರಿಸ್ಥಿತಿಯಲ್ಲಿ ಅಳತೆ ಕಾರ್ಯವು ದೋಷರಹಿತವಾಗಿದ್ದಿರಲು ಸಾಧ್ಯವೇ ಇರಲಿಲ್ಲ. ನಿಜವಾಗಿ ಆ ಕಾರ್ಯವು ಅಪೂರ್ಣವೂ, ಅವ್ಯವಸ್ಥಿತವೂ ಆಗಿ ಉಳಿಯಿತು. ಕಬ್ಬನ್ನು ಬೆಳೆಯುತ್ತಿದ್ದ ಜಮೀನುಗಳ ಮೇಲೆ ಅತಿ ಹೆಚ್ಚು ಕಂದಾಯವನ್ನು ವಿಧಿಸಲಾಗುತ್ತಿತ್ತು. ಅದು ಒಂದು ಖಂಡಿಗೆ ೧೦ ರಿಂದ ೭೨ ಪಗೋಡಾಗಳವರೆಗೂ ಮೈದಾನದ ತಾಲೂಕುಗಳಲ್ಲಿ ಇರುತ್ತಿತ್ತು. ಅತ್ಯಂತ ಹೆಚ್ಚು ಮೊತ್ತವನ್ನು ನೀಡಲು ಒಪ್ಪುತ್ತಿದ್ದ ಬಿಡ್ಡುದಾರರಿಗೆ ಹಳ್ಳಿಗಳನ್ನು ಗೇಣಿಗೆ ನೀಡುತ್ತಿದ್ದ ಹಿಂದಿನ ಪದ್ಧತಿಯನ್ನು ಪೂರ್ಣಯ್ಯ ಸಂಪೂರ್ಣವಾಗಿ ನಿಲ್ಲಿಸಿದರು.

## ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದ (೧೮೧೧–೧೮೩೧) ಆಡಳಿತ ಸುಧಾರಣೆಗಳು

ಪೂರ್ಣಯ್ಯನವರ ಕಾಲದಲ್ಲಿ ಕಂದಾಯ ಆಡಳಿತವನ್ನು ಸಂಪೂರ್ಣವಾಗಿ ಸರಕಾರದ ನೇರ ಆಡಳಿತಕ್ಕೆ ಒಳಪಡಿಸಲಾಯಿತು. ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಆಳ್ವಿಕೆಯಲ್ಲಿ ಅದೇ ವ್ಯವಸ್ಥೆಯನ್ನು

ಮುಂದುವರೆಸಲಾಯಿತು. ಇವರು ಸನ್ ೧೮೪೯ನೇ ಇಸವಿಯಲ್ಲಿ ಮುಲ್ಕಿ ಮುಂತಾದ ಬಾಬುಗಳಲ್ಲಿ ತಾಲೂಕು ಅಮೀಲರುಗಳಿಗೆ ಒಂದು ಹುಕುಂನಾಮೆಯನ್ನು ಸಾದರಪಡಿಸಿದರು. ಇದರಲ್ಲಿ ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ಇಪ್ಪತ್ತೊಂದು ಅಂಶಗಳನ್ನು ಕುರಿತು ವಿವರವಾಗಿ ಹುಕುಂನಾಮೆ ಹೊರಡಿಸಲಾಗಿದೆ. ಹುಕುಂನಾಮೆಯ ಕೆಲವು ಕಲಂಗಳು ಅಂದಿನ ಕಂದಾಯ ಆಡಳಿತದ ಬಗೆಗೆ ಬೆಳಕು ಚೆಲ್ಲುತ್ತವೆ. ಬಿ.ರಾಮಕೃಷ್ಣರಾವ್ ಹೇಳುವಂತೆ, "ಇದರಿಂದ ಸೀಮೆಯ ಆಡಳಿತವನ್ನೂ ಕಾಲಸ್ಥಿತಿಯನ್ನೂ ಅರಿತು ಸರ್ಕಾರಕ್ಕೆ ಅನುಕೂಲ, ಪ್ರಜೆಗೆ ಪ್ರಯೋಜನ, ರೈತಪರವರ್ಷಿ ಇವುಗಳ ಮೇಲೆ ಸಂಪೂರ್ಣ ದೃಷ್ಟಿಯಿಟ್ಟು ಸರ್ಕಾರದ ಉದ್ಯೋಗಸ್ಥರು ಮಾಡತಕ್ಕ ಕೆಲಸಗಳ ವಿಷಯದಲ್ಲಿಯೂ, ಜಮಾ ಖರ್ಚು ಮುಂತಾದ ಬಾಬುಗಳಲ್ಲಿಯೂ ಖಾವಂದರವರು ವಿಚಕ್ಷಣೆಯಿಂದ ಆಜ್ಞೆ ದಯಪಾಲಿಸಿದ ಕ್ರಮವು ವ್ಯಕ್ತವಾಗುತ್ತೆ".

ಮುಲ್ಕಿ ಆಡಳಿತದ ಆದಾಯ ವಿಚಾರದಲ್ಲಿ 'ಷರ್ತಿ' ಎಂಬ ಪೂರ್ವ ಪದ್ಧತಿಯೊಂದಿತ್ತು. 'ಷರ್ತಿ' ಎಂದರೆ ತಾಲೂಕಿನ ವರಮಾನವನ್ನು ಗುತ್ತಿಗೆಗೆ ಕೊಡುವ ಏರ್ಪಾಡು. ಈ ಸಂಪ್ರದಾಯವು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿಯೂ ನಡೆಯಿತು. ಗುತ್ತಿಗೆ ಮಾಡಿಕೊಳ್ಳುವ ಅಮಲ್‌ದಾರರು ಒಟ್ಟು ತಾಲೂಕಿಗೆ ಸಾಲಿಯಾನ ಇಷ್ಟು ಮೊಬಲಗನ್ನು ಕೊಡಬೇಕು; ಇದಕ್ಕೆ ಕಡಿಮೆಯಾದರೆ ಅದನ್ನು ಅವರೇ ಸೇರಿಸಿ ಪ್ರಮಾಣದ ಮೇಲೆ ಅಂದಾಜು ಮಾಡುತ್ತಿದ್ದರು. ಖಂಡಿ (ಖಂಡುಗ), ಕೊಳಗ (ಅಥವಾ ಕುಡು), ಬಳ್ಳ, ಸೇರು ಮುಂತಾದ ಭೂ ಅಳತೆಗಳು ರೂಢಿಯಲ್ಲಿದ್ದವು. ಆದರೆ, ಈ ಅಳತೆ ಅಥವಾ ತೂಕಗಳಲ್ಲಿ ಯಾವುದೇ ಏಕರೂಪತೆ ಇರಲಿಲ್ಲ ಮತ್ತು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸಗಳಿರುತ್ತಿದ್ದವು. ಇದರಿಂದ ಉಂಟಾಗುತ್ತಿದ್ದ ಗೊಂದಲ ನಿವಾರಣೆ ಮಾಡಲು ದಿವಾನ್ ಪೂರ್ಣಯ್ಯನವರು ೧೬೦ ಸೇರುಗಳುಳ್ಳ 'ಕೃಷ್ಣರಾಜ ಖಂಡಿ' ಎಂಬ ಒಂದು ಏಕರೂಪದ ಅಳತೆಯನ್ನು ಪರಿಚಯಿಸಿದ್ದನು. ಇದು ಭೂ ಮಾಪನ ಮತ್ತು ತೀರುವೆ ಕಾರ್ಯ ಸಂಪೂರ್ಣಗೊಳ್ಳುವವರೆಗೂ (೧೮೯೯–೧೯೦೦) ಉಪಯೋಗದಲ್ಲಿತ್ತು. 'ಖಂಡಿ' ಎಂಬುದು ಒಂದು ಒಣ ಅಳತೆಯಾಗಿದ್ದು ಜಮೀನಿನ ಭಾಗವೊಂದನ್ನು ವಿವರಿಸಲು ಎಲ್ಲೆಡೆಯೂ ಬಳಕೆಯಾಗುತ್ತಿತ್ತು; ಮತ್ತು ಒಂದು 'ಖಂಡಿ' ಜಮೀನು ಎಂದರೆ ಬಿತ್ತನೆಗಾಗಿ ಒಂದು ಖಂಡಿ ಬೀಜ ಬೇಕಾಗುತ್ತಿದ್ದ ವಿಸ್ತೀರ್ಣವುಳ್ಳ ಜಮೀನು ಎಂದು ತಿಳಿಯಬಹುದಾಗಿತ್ತು. ಯಾವುದೇ ನಿರ್ದಿಷ್ಟ ವಿಸ್ತೀರ್ಣವುಳ್ಳ ತರಿ ಭೂಮಿ ಅಷ್ಟೇ ವಿಸ್ತೀರ್ಣದ ಒಣ ಭೂಮಿ ತೆಗೆದುಕೊಳ್ಳುವುದಕ್ಕಿಂತ ನಾಲ್ಕು ಪಟ್ಟು ಬಿತ್ತನೆ ಬೀಜವನ್ನು ತೆಗೆದುಕೊಳ್ಳುತ್ತಿದ್ದುದರಿಂದ ಒಂದು ಖಂಡಿ ಹಣ ಭೂಮಿಯು ಒಂದು ಖಂಡಿ ತರಿಭೂಮಿಗಿಂತ ನಾಲ್ಕು ಪಟ್ಟು ವಿಸ್ತೀರ್ಣವುಳ್ಳದಾಗಿರುತ್ತಿತ್ತು. ಕರ್ನಲ್ ವಿಲ್ಕ್ಸ್ ಪ್ರಕಾರ, ಹೆಚ್ಚು ಹುಟ್ಟುವಳಿಯಾದುದೆಲ್ಲಾ ಸರ್ಕಾರಕ್ಕೆ ಸೇರಿಸತಕ್ಕದ್ದು. ಅಮಲ್‌ದಾರರು ರೈತರಿಗೆ ತೊಂದರೆಯುಂಟು ಮಾಡಕೂಡದು. ಯಾವ ವಿಧವಾದ ಹೊಸ ತೆರಿಗೆಯನ್ನೂ ದಾಖಲು ಮಾಡಕೂಡದು. ಬಟಾಯಿ ಸರ್ಕಾರದ ಪಾಲಿನ ದವಸವನ್ನು ಕೊಂಡುಕೊಳ್ಳುವಂತೆ ರೈತರನ್ನು ನಿರ್ಬಂಧಪಡಿಸಕೂಡದು ಮುಂತಾದ ನಿಯಮಗಳು ಹೇಳಲ್ಪಟ್ಟಿದ್ದವು. ಈ ಪದ್ಧತಿ ಕೆಲವು ಕಡೆಗಳಲ್ಲಿ ಮಾತ್ರ ಆಚರಣೆಯಲ್ಲಿತ್ತೆನ್ನಲಾಗಿದೆ.

ಕ್ರಿ.ಶ.೧೭೯೯ಕ್ಕಿಂತ ಮೊದಲು ಮೈಸೂರು ಭಾಗದ ಯಾವುದೇ ಸಾಮಾನ್ಯ ಭೂ ಕಂದಾಯ ಮೋಜಣಿ ನಡೆದಿದ್ದಂತೆ ಕಾಣಿಸದು ಆದರೆ ಟಿಪ್ಪುವಿನೊಡನೆ ನಡೆಸಿದ ಯುದ್ಧಗಳು ಅಂತ್ಯಗೊಂಡ ಒಡನೆಯೇ, ಮುಂದೆ ಭಾರತದ ಸರ್ವೆಯರ್ ಜನರಲ್ಲನಾಗಿ ನೇಮಕಗೊಂಡ ಕರ್ನಲ್ ಮೆಕೆಂಜಿ ಒಂದು ಸಾಮಾನ್ಯ ಟೊಪೊಗ್ರ್ಯಾಫಿಕಲ್ ಸರ್ವೆಯನ್ನು ಮಾಡಿದನು. ಪೂರ್ಣಯ್ಯ ಪ್ರಯತ್ನಿಸಿದ ಪೈಮಾಯಿಷ್ ಬಹಳ ಅಪರಿಪೂರ್ಣವಾಗಿತ್ತಲ್ಲದೇ ಕಾಲಸಂದಂತೆ ಅದಕ್ಕೆ ಸಂಬಂಧಿಸಿದ ದಾಖಲೆಗಳು ಬಹಳ ಲೋಪವುಳ್ಳವಾಗಿದ್ದವು.

ಸನ್ ೧೮೩೧ರಿಂದ ಮಹಾರಾಜರ ಪರವಾಗಿ ರಾಜ್ಯವನ್ನು ಬ್ರಿಟಿಷ್ ಸರಕಾರವು ನೇಮಿಸಿದ ಕಮಿಷನ್ ಆಳಲು ಪ್ರಾರಂಭಿಸಿತು. ಮೈಸೂರಿನಲ್ಲಿ ಜಾರಿಯಲ್ಲಿದ್ದ ವಿವಿಧ ರೀತಿಯ ಗೇಣಿ ಪದ್ಧತಿಗಳನ್ನು ತನಿಖೆ ಮಾಡಿ ಅನೇಕ ಅಸಂಬದ್ಧತೆಗಳನ್ನು ತೆಗೆದುಹಾಕಿದರು ಮತ್ತು ಹಳೇ ಪದ್ಧತಿಯನ್ನು ಅದರ ಅನೇಕ ವಿವರಗಳಲ್ಲಿ ಸಡಿಲಗೊಳಿಸಿದರು. ಕಂದಾಯ ದರವನ್ನು ಬಹಳ ಮೇಲಕ್ಕೇರಿಸಿರುವುದು ಖಚಿತವಾದ ಸಂದರ್ಭಗಳಲ್ಲಿ ನಗದು ಕಂದಾಯದ ಮೊತ್ತವನ್ನು ಕಡಿಮೆ ಮಾಡಲಾಯಿತು. ಸುಗ್ಗಿಗೆ ಮುನ್ನ ಖಿಸ್ತನ್ನು ವಸೂಲಿ ಮಾಡುವ ಪದ್ಧತಿಯನ್ನು ರದ್ದುಗೊಳಿಸಲಾಯಿತು ಮತ್ತು ಸುಗ್ಗಿ ಕಾಲಕ್ಕೆ ಹೊಂದಿಕೊಳ್ಳುವಂತೆ ಐದು ಕಂತುಗಳಲ್ಲಿ ಕಂದಾಯ ಪಾವತಿ ಮಾಡಲು ರೈತರಿಗೆ ಅವಕಾಶ ಕಲ್ಪಿಸಿಕೊಡಲಾಯಿತು. ಬಟಾಯಿ ಪದ್ಧತಿ ರೂಢಿಯಲ್ಲಿದ್ದ ಕಡೆಗಳಲ್ಲಿ ನಗದು ಕಂದಾಯ ಪಾವತಿಸುವ ಪದ್ಧತಿಗೆ ರೈತರನ್ನು ಒಪ್ಪಿಸಲು ಯತ್ನಿಸಲಾಯಿತು. ರೈತರು ಬದಲಾವಣೆಗೆ ಸಮ್ಮತಿಸದ ಸಂದರ್ಭಗಳಲ್ಲಿ ಬಟಾಯಿ ಪದ್ಧತಿಯ ತೊಂದರೆಗಳನ್ನು ನಿವಾರಿಸಿ ಸಹಾಯ ಮಾಡಲಾಯಿತು. ಸಾಯರು ತೆರಿಗೆಯಡಿ ಸುಮಾರು ೭೬೯ ಬಾಬುಗಳನ್ನು ರದ್ದುಗೊಳಿಸಿ ತೆರಿಗೆದಾರರಿಗೆ ಪರಿಹಾರ ಒದಗಿಸಲಾಯಿತು.

ಹಿಂದೆ ಎಲ್ಲಾ ಜಮೀನುಗಳನ್ನು ಬಜೆಟ್ ಪದ್ಧತಿಯಡಿಯಲ್ಲಿ ಕೆಳಗಿನಂತೆ ವರ್ಗೀಕರಿಸಲಾಗಿತ್ತು:

ಅ) ಗ್ರಾಮವಾರು ಆಕರಣೆ

೧) ಖಾಯಂ ಗುತ್ತ ಅಥವಾ ಸ್ಥಾಯಿ ಆಕರಣೆಯಾಗಿರುವ ಗ್ರಾಮಗಳು

೨) ಜೋಡಿ ಅಥವಾ ಲಘುಕಂದಾಯ ವಿಧಿಸಲಾದ ಗ್ರಾಮಗಳು

೩) ಶ್ರಯ (Improvement of land by cultivation) ಅಥವಾ ಹೆಚ್ಚುತ್ತಾ ಹೋಗುವ ಕಂದಾಯ ಜಾರಿಯಲ್ಲಿರುವ ಗ್ರಾಮಗಳು

೪) ಕಾಲಾವಧಿ ಇಜಾರೆ ಅಥವಾ ಒಂದು ವರ್ಷಕ್ಕೆ ಮಾತ್ರ ಗೇಣಿ ನೀಡಲಾಗಿರುವ ಗ್ರಾಮಗಳು

ಆ) ವೈಯಕ್ತಿಕ ಆಕರಣೆಗಳು

ಸರಕಾರಿ ೧) ರೈತವಾರಿ (ಕಂದಾಯ)

೨) ಬಟಾಯಿ ಅಥವಾ ಉತ್ಪತ್ತಿಯನ್ನು ಭಾಗ ಮಾಡಿಕೊಳ್ಳುವ ಪದ್ಧತಿ.

**ಇನಾಂ ಜಮೀನು:** ಅರ್ಧಮಾನ್ಯ ಅಥವಾ ಉತ್ತಾರ, ಇತ್ಯಾದಿ. ಇವುಗಳಲ್ಲಿ ಗ್ರಾಮ ಸೇವಕರುಗಳಿಗೆ, ಬ್ರಾಹ್ಮಣರಿಗೆ, ಫಕೀರರಿಗೆ ಮತ್ತು ದೇವಸ್ಥಾನಗಳಿಗೆ ನೀಡಲಾಗಿದ್ದ ಜಮೀನುಗಳು ಮತ್ತು ಛತ್ರಗಳು, ತೋಪುಗಳು ಮುಂತಾದವನ್ನು ನಿರ್ವಹಿಸಲೆಂದು ನೀಡಲಾಗಿದ್ದ ಜಮೀನುಗಳು ಸೇರ್ಪಡೆಯಾಗಿದ್ದವು.

ಜಮೀನುಗಳನ್ನು ಒಣಭೂಮಿ, ತರಿ ಅಥವಾ ನೀರಾವರಿಯುಳ್ಳ ಭೂಮಿ ಮತ್ತು ಬಾಗಾಯತು ಎಂದು ಮೂರು ವರ್ಗಗಳಾಗಿ ವಿಂಗಡಿಸಲಾಗಿತ್ತು. ಮೈಸೂರಿನಲ್ಲಿ ಜಮೀನಿನ ವಿಸ್ತೀರ್ಣವನ್ನು ನಿಜವಾದ ಅಳತೆ ಮೂಲಕ ನಿರ್ಧರಿಸುತ್ತಿರಲಿಲ್ಲ. ಆದರೆ ಅದನ್ನು ಬಿತ್ತಲು ಬೇಕಾಗುವ ಬೀಜದ ಒಟ್ಟಾರೆ ಉತ್ಪನ್ನದಲ್ಲಿ ಸರಕಾರದ ಪಾಲು ಸುಮಾರು ಶೇಕಡಾ ೪೦ ರಷ್ಟಿರುತ್ತಿತ್ತು ಮತ್ತು ಶೇಕಡಾ ೬೦ ಕೃಷಿಕನ ಶ್ರಮ, ಖರ್ಚು ಮತ್ತು ಲಾಭವಾಗಿ ಉಳಿದುಕೊಳ್ಳುತ್ತಿತ್ತು. ಸಾಕುಪ್ರಾಣಿಗಳಿಂದ ಉಂಟಾಗುತ್ತಿದ್ದ ಆದಾಯವು ಕೂಡ ರೈತನದೇ ಆಗಿರುತ್ತಿತ್ತು. ಅಷ್ಟಗ್ರಾಮ ಅಥವಾ ಮೈಸೂರು ವಿಭಾಗದಲ್ಲಿ ೩೨ ಒಣಭೂಮಿ ಮೇಲಣ ಕಂದಾಯದ ದರಗಳು ಚಾಲ್ತಿಯಲ್ಲಿದ್ದವು. ತರಿ

ಮತ್ತು ಬಾಗಾಯತು ಭೂಮಿಗಳ ಮೇಲೆ ಕ್ರಮವಾಗಿ ೫ ಮತ್ತು ೧೨ ದರಗಳು ಚಾಲ್ತಿಯಲ್ಲಿದ್ದವು; ಇಂದಿನ ಚಾಮರಾಜನಗರ ಜಿಲ್ಲೆಯ ಪ್ರದೇಶಗಳು ಆಗ ಮೈಸೂರು ವಿಭಾಗದಲ್ಲಿದ್ದವು. ಬಹುಪಾಲು ರೈತರು ಶಾಶ್ವತ ಹಿಡುವಳಿದಾರರ ಯಾವುದೇ ಹಕ್ಕುಗಳನ್ನು ಹೊಂದಿರದೆ ಅತಂತ್ರಸ್ಥಿತಿಯಲ್ಲಿದ್ದರು. ಇನಾಂದಾರರು, ಪ್ರಭಾವಿ ಅಧಿಕಾರಿಗಳು ಮತ್ತು ಗ್ರಾಮಗಳಲ್ಲಿನ ಬಲಾಢ್ಯ ವ್ಯಕ್ತಿಗಳು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿಕೊಂಡು ಭೂಕಂದಾಯವನ್ನೇ ನೀಡದೆ ಅನುಭವಿಸಿಕೊಂಡು ಬರುತ್ತಿದ್ದುದು ಸಾಮಾನ್ಯವಾಗಿತ್ತು.

ಅಂತಹ ಪರಿಸ್ಥಿತಿಯನ್ನು ಅಧ್ಯಯನ ಮಾಡಿದ ಮೈಸೂರಿನ ಚೀಫ್ ಕಮೀಷನ್‌ರಾಗಿದ್ದ ಎಲ್.ಬಿ.ಬೌರಿಂಗನು ಒಂದು ಕ್ರಮವಾದ ಭೂ ಮೋಜಣಿ ಮತ್ತು ತೀರುವೆ ಮಾಡುವ ಮೂಲಕ ಮಾತ್ರ ಸರ್ಕಾರದ ಹಿತಾಸಕ್ತಿಗಳನ್ನು ರಕ್ಷಿಸಿಕೊಂಡು ಭೂಕಂದಾಯವನ್ನು ಹೆಚ್ಚಿಸಲು ಸಾಧ್ಯ ಎಂದು ಇಂಡಿಯಾ ಸರಕಾರಕ್ಕೆ ಶೃತಪಡಿಸಿದನು. ಸರಕಾರದ ಮತ್ತು ರೈತರ ಕ್ರಮವಾದ ಹಕ್ಕುಗಳನ್ನು ನಿರ್ದಿಷ್ಟವಾಗಿ ರೂಪಿಸಲು, ನ್ಯಾಯೋಚಿತ ಮತ್ತು ಮಿತವಾದ ಕಂದಾಯವನ್ನು ಗೊತ್ತುಪಡಿಸಲು ಭೂಕಂದಾಯ ಸರ್ವೆ ಮತ್ತು ಸೆಟಲ್‌ಮೆಂಟ್ ಕಾರ್ಯವನ್ನು ಆದ್ಯತೆಯ ಮೇಲೆ ಪ್ರಾರಂಭಿಸಬೇಕೆಂಬುದನ್ನು ಇಂಡಿಯಾ ಸರಕಾರವು ಒಪ್ಪಿಕೊಂಡಿತು.

ಆ ತೀರ್ಮಾನದಂತೆ ೧೮೬೩-೬೪ರಲ್ಲಿ ರೆವೆನ್ಯೂ ಸರ್ವೆ ಮತ್ತು ಸೆಟಲ್‌ಮೆಂಟ್ ಕಾರ್ಯ ಪ್ರಾರಂಭಿಸಲ್ಪಟ್ಟಿತು. ಮುಂಬಯಿ ಪ್ರೆಸಿಡೆನ್ಸಿಯಲ್ಲಿ ಜಾರಿಗೊಳಿಸಿದ್ದ ಪದ್ಧತಿಯನ್ನೇ ಮೈಸೂರಿನಲ್ಲಿಯೂ ಅನ್ವಯಿಸಲಾಯಿತು. ಮೂಲ ಸರ್ವೆ ಮತ್ತು ಸೆಟಲ್‌ಮೆಂಟ್ ಕಾರ್ಯವು ೧೮೯೮-೯೯ರಲ್ಲಿ ಸಂಪೂರ್ಣವಾಯಿತು. ಇದರಿಂದಾಗಿ, ಭೂ ಕಂದಾಯದ ಒಟ್ಟು ಸಂಗ್ರಹವು ₹ ೬೭,೯೯,೭೩೮ರಿಂದ (೧೮೬೨-೬೩) ₹ ೯೭,೩೦,೫೯೬ಕ್ಕೆ (೧೮೯೮-೯೯) ಏರಿತು. ಮೂಲ ಮೋಜಣಿ ಮತ್ತು ತೀರುವೆಯಲ್ಲಿ ನಿಗದಿಯಾದ ಕಂದಾಯದ ದರಗಳನ್ನು ೩೦ ವರ್ಷಗಳ ಅವಧಿಯವರೆಗೆ ಮಾರ್ಪಡಿಸುವುದಿಲ್ಲ ಎಂಬ ಗ್ಯಾರಂಟಿಯನ್ನು ನೀಡಲಾಗಿತ್ತು.

## ಭೂ ಮಾಪನ ಮತ್ತು ಕಂದಾಯ ಆಕರಣಗಳು

ಭೂ ಮಾಪನ ಮತ್ತು ಕಂದಾಯ ಆಕರಣೆ ಕಾರ್ಯದಲ್ಲಿ ಕಂಡುಬರುವ ವಿವಿಧ ಘಟ್ಟಗಳೆಂದರೆ:

೧) ಸಂಬಂಧಿಸಿದ ಪ್ರದೇಶದಲ್ಲಿ ಕಂಡುಬರುವ ವಿವಿಧ ವರ್ಣನೆಯ ಅಂದರೆ ಖುಷ್ಕಿ, ತರಿ ಮತ್ತು ಬಾಗಾಯತು ಭೂಮಿಗಳನ್ನು ಒಂದು ಪೂರ್ವ ನಿರ್ಧಾರಿತ ಕನಿಷ್ಠ ವಿಸ್ತೀರ್ಣವುಳ್ಳ ಸರ್ವೆ ನಂಬರುಗಳನ್ನಾಗಿ ವಿಭಜಿಸುವುದು ಮತ್ತು ಸರಹದ್ದು ತೋರಿಸುವ ಕಲ್ಲುಗಳನ್ನು ಹಾಕಿಸಿ ವಿವಾದಗಳಿದ್ದಲ್ಲಿ ಇತ್ಯರ್ಥಪಡಿಸುವುದು.

೨) ಮಣ್ಣಿನ ವೈಲಕ್ಷಣ್ಯಗಳು, ನೀರಿನ ಆಸರೆ ಮತ್ತು ಸೌಕರ್ಯಗಳಿಗನುಗುಣವಾಗಿ ಕ್ಷೇತ್ರಗಳನ್ನು ವರ್ಗೀಕರಿಸುವುದು. ಒಣ (ಖುಷ್ಕಿ) ಭೂಮಿಯ ವರ್ಗೀಕರಣದಲ್ಲಿ ಮಣ್ಣಿನ ವೈಲಕ್ಷಣ್ಯಗಳನ್ನು ಮಾತ್ರ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು.

೩) ಒಂದು ನಿರ್ದಿಷ್ಟ ಪ್ರದೇಶದಲ್ಲಿರುವ ಹಳ್ಳಿಗಳನ್ನು ಹವಾಗುಣ, ಮಾರುಕಟ್ಟೆ ಸೌಕರ್ಯದ ಲಭ್ಯತೆ ಮತ್ತು ಬೇಸಾಯದ ಸ್ಥಿತಿಗತಿ, ಇತ್ಯಾದಿ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಪ್ರತ್ಯೇಕ ಗುಂಪುಗಳನ್ನಾಗಿ ವಿಂಗಡಿಸಿ ಪ್ರತಿಯೊಂದು ಗುಂಪಿಗೂ ಒಂದು ಗರಿಷ್ಟ ದರವನ್ನು ನಿಗದಿ ಮಾಡಲಾಗುತ್ತಿತ್ತು. ಒಂದು

ಹಳ್ಳಿಯಲ್ಲಿರುವ ಕ್ಷೇತ್ರಗಳಿಗೆ ವರ್ಗೀಕರಣವು ಹೇಗೋ ಒಂದು ತಾಲೂಕಿನಲ್ಲಿರುವ ಹಳ್ಳಿಗಳಿಗೆ ಗುಂಪುಗೂಡಿಸುವುದು ಹಾಗೆ ಎನ್ನಲಾಗಿದೆ. ಪ್ರತಿಯೊಂದು ಗುಂಪಿಗೂ ಒಂದು ಗರಿಷ್ಟ ದರವನ್ನು ನಿಗದಿ ಮಾಡಲಾಗುತ್ತಿತ್ತು. ಪ್ರತಿ ಗುಂಪಿನ ಈ ಗರಿಷ್ಟ ದರವನ್ನು ಪ್ರತಿ ಭೂಮಿಯ ವರ್ಗೀಕರಣ ಮೌಲ್ಯಕ್ಕೆ ಅನ್ವಯಿಸುವ ಮೂಲಕ ಆಕರಣೆ ದರವನ್ನು ನಿರೂಪಿಸಲಾಗುತ್ತಿತ್ತು ಮತ್ತು ಅದನ್ನು ಆ ಹಳ್ಳಿಯಲ್ಲಿರುವ ಶ್ರೇಷ್ಠ ಅಥವಾ ಕಡಿಮೆ ದರ್ಜೆಯ ವಿವಿಧ ತೆರನಾದ ಕ್ಷೇತ್ರಗಳಿಗೆ ನ್ಯಾಯೋಚಿತವಾಗಿ ವಿಧಿಸಲಾಗುತ್ತಿತ್ತು. ಒಂದು ಸರ್ವೆ ನಂಬರಿನ "ಆಕಾರ" ಅಥವಾ ಆಕರಣೆಯು ಈ ದರ ಮತ್ತು ಸರ್ವೆ ನಂಬರಿನ ಕ್ಷೇತ್ರಫಲದ ಗುಣಲಬ್ದ ಎನ್ನಲಾಗಿದೆ. "ಆಕಾರ ಬಂದ್" ವಹಿಯಲ್ಲಿ ಸರ್ವೆ ನಂಬರು, ಅದರ ವಿಸ್ತೀರ್ಣ ಮತ್ತು ಆಕರಣೆಯ ದರ ಮತ್ತು ವಿವಿಧ ರೀತಿಯ ಕ್ಷೇತ್ರಗಳ ಮೇಲಿನ ಆಕರಣೆ (ಕಂದಾಯ) ಮುಂತಾದ ವಿವರಗಳನ್ನೆಲ್ಲಾ ನಮೂದಿಸಲಾಗುತ್ತಿತ್ತು.

ಚಾಮರಾಜನಗರ ತಾಲೂಕಿನ ೩೦ ಹಳ್ಳಿಗಳಿಗೆ ೧೮೭೭ರಲ್ಲಿ ಮತ್ತು ೧೨೫ ಹಳ್ಳಿಗಳಿಗೆ ೧೮೯೪ರಲ್ಲಿ ಭೂ ಮಾಪನ ಮತ್ತು ಕಂದಾಯ ನಿಗದಿ ಕಾರ್ಯವನ್ನು ಪರಿಚಯಿಸಲಾಯಿತು. ಗುಂಡ್ಲುಪೇಟೆ ತಾಲೂಕಿನ ೧೭೯ ಹಳ್ಳಿಗಳ ಭೂ ಮಾಪನ ಮತ್ತು ಕಂದಾಯ ನಿಗದಿ ಕಾರ್ಯವನ್ನು ೧೮೯೧ರಲ್ಲಿ ಪೂರ್ಣಗೊಳಿಸಲಾಯಿತು. ಯಳಂದೂರು ತಾಲೂಕಿನ ೨೮ ಹಳ್ಳಿಗಳ (ಜಹಗೀರು ಹಳ್ಳಿಗಳು ೨೨ ಮತ್ತು ೬ ಇನಾಂ ಹಳ್ಳಿಗಳು) ಭೂ ಮಾಪನ ಮತ್ತು ಕಂದಾಯ ನಿಗದಿ ಕಾರ್ಯವನ್ನು ೧೮೯೪ರಲ್ಲಿ ಪೂರ್ಣಗೊಳಿಸಲಾಯಿತು.

ರಾಜ್ಯಗಳ ಪುನರ್ವಿಂಗಡಣೆ ವಿಧೇಯಕದಂತೆ ೧೯೫೬ರಲ್ಲಿ ವಿಶಾಲ ಮೈಸೂರು ರಾಜ್ಯಕ್ಕೆ ಹಿಂದಿನ ಮದ್ರಾಸ್ ಪ್ರಾಂತದ ಕೊಯಮತ್ತೂರು ಜಿಲ್ಲೆಯಿಂದ ಬೇರ್ಪಡಿಸಿ ಸೇರಿಸಲಾದ ಕೊಳ್ಳೇಗಾಲ ತಾಲೂಕಿನ ಭೂಮಾಪನ ಮತ್ತು ಕಂದಾಯ ನಿಗದಿ ಕಾರ್ಯವನ್ನು ಮದ್ರಾಸ್ ಪ್ರಾಂತದ ಪದ್ಧತಿಯ ಪ್ರಕಾರ ೧೮೮೦–೮೧ರಲ್ಲಿ ನಡೆಸಲಾಗಿತ್ತು. ಆಗ ತಾಲೂಕಿನಲ್ಲಿ ೧೫೨ ಹಳ್ಳಿಗಳಿದ್ದು, ೩ ಶ್ರೋತ್ರಿಯಂ ಮತ್ತು ೫೮ ಬೆಟ್ಟಗಾಡು ಪ್ರದೇಶದಲ್ಲಿದ್ದವು.

ಚಾಮರಾಜನಗರ ತಾಲೂಕಿನ ಪ್ರಥಮ ಮರುಮೋಜಣಿ ಮತ್ತು ಆಕರಣೆ (ಭೂ ಕಂದಾಯ) ನಿಗದಿ ಕಾರ್ಯವನ್ನು ಮುಗಿಸಿ ೧೫೨ ಹಳ್ಳಿಗಳಿಗೆ ಇಸವಿ ೧೯೨೬ರಲ್ಲಿ ಜಾರಿಗೆ ನೀಡಲಾಯಿತು. ಗುಂಡ್ಲುಪೇಟೆ ತಾಲೂಕಿನ ೧೬೧ ಹಳ್ಳಿಗಳಿಗೆ ಸಂಬಂಧಿಸಿದಂತೆ ಕೂಡ ಈ ಕಾರ್ಯವನ್ನು ೧೯೨೬ರಲ್ಲಿಯೇ ಮಾಡಲಾಯಿತು. ಯಳಂದೂರು ತಾಲೂಕಿನಲ್ಲಿ ೧೯೨೬ರ ಪ್ರಥಮ ಮರುಮೋಜಣಿ ಕಾರ್ಯವನ್ನು ನಡೆಸಲಿಲ್ಲ. ಕೊಳ್ಳೇಗಾಲ ತಾಲೂಕಿನಲ್ಲಿ ಪ್ರಥಮ ಮರುಮೋಜಣಿ ಕಾರ್ಯವನ್ನು ೧೯೧೩–೧೪ರಲ್ಲಿ ನಡೆಸಲಾಯಿತು. ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲೂಕುಗಳ ಮರುಮೋಜಣಿ ಸಮಯದಲ್ಲಿ ನಡೆಸಿದ ಕ್ರಮಗಳೆಂದರೆ:

ಅ) ಕ್ಷೇತ್ರಗಳ ಮರುಮಾಪನೆ
ಆ) ಭೂಮಿಯ ಉಪವಿಂಗಡಣೆ
ಇ) ಭೂಮಿಯ ಎಲ್ಲೆಗಳನ್ನು ಪರಿವೀಕ್ಷಿಸಿ ಕಾಣೆಯಾಗಿದ್ದ ಕಲ್ಲುಗಳನ್ನು ಪುನಃ ಹಾಕಿದ್ದು.

## ಕೋಷ್ಟಕ ೯.೩: ಚಾಮರಾಜನಗರ ಜಿಲ್ಲೆಯಲ್ಲಿ ಮೂಲ ಮತ್ತು ಪ್ರಥಮ ಪರಿಷ್ಕೃತ ಮೋಜಣಿ ಮತ್ತು ಆಕರಣೆಗೆ ಸಂಬಂಧಿಸಿದ ವಿವರಗಳು

| ತಾಲ್ಲೂಕಿನ ಹೆಸರು | ಆಕರಣೆಯ ವರ್ಷ | | | ಗರಿಷ್ಠ ದರ | | | ಸರಾಸರಿ ದರ | | |
|---|---|---|---|---|---|---|---|---|---|
| | ಮೂಲ | ಪರಿಷ್ಕೃತ | ವರ್ಣನೆ ಮತ್ತು ಗುಂಪು | ಮೂಲ ರೂ. ಆ. ಪೈ | ಪರಿಷ್ಕೃತ ರೂ. ಆ. ಪೈ | ಮೂಲ ಆಕರಣೆಗೆ ಹೋಲಿಸಿದರೆ % ಹೆಚ್ಚಳ | ಮೂಲ ರೂ. ಆ. ಪೈ | ಪರಿಷ್ಕೃತ ರೂ. ಆ. ಪೈ | ಮೂಲ ಆಕರಣೆಗೆ ಹೋಲಿಸಿದರೆ % ಹೆಚ್ಚಳ |
| ಚಾಮರಾಜನಗರ (೩೦ ಹಳ್ಳಿಗಳು) | ೧೮೭೭-೭೮ | ೧೯೨೬-೨೭ | ಖುಷ್ಕಿ I | ೨ ೦ ೦ | ೨ ೮ ೦ | ೨೫ | ೧ ೬ ೪ | ೧ ೧೧ ೧೦ | ೨೫ |
| | | | II | ೧ ೧೨ ೦ | ೨ ೨ ೦ | ೨೧ | ೦ ೧೩ ೩ | ೧ ೦ ೧ | ೨೧ |
| | | | ತರಿ I ಕೆರೆ | ೫ ೮ ೦ | ೭ ೦ ೦ | ೨೭ | ೪ ೪ ೦ | ೫ ೬ ೧೧ | ೨೭ |
| | | | ಕಾಲುವೆ | ೯ ೦ ೦ | ೧೦ ೦ ೦ | ೧೧ | ೪ ೬ ೭ | ೪ ೧೪ ೮ | ೧೧ |
| | | | ಒಟ್ಟು ತರಿ | | | | ೪ ೪ ೯ | ೫ ೬ ೮ | ೨೬ |
| | | | ತರಿ II ಕೆರೆ | ೫ ೦ ೦ | ೬ ೮ ೦ | ೩೦ | | | |
| | | | ಕಾಲುವೆ | ೯ ೦ ೦ | ೧೦ ೦ ೦ | ೧೧ | | | |
| | | | ಒಟ್ಟು ತರಿ | | | | ೩ ೨ ೦ | ೪ ೧ ೨ | ೩೦ |
| | | | ಬಾಗಾಯತು I | ೧೫ ೦ ೦ | ೧೨ ೦ ೦ | ೨೦ | ೪ ೨ ೨ | ೪ ೧೨ ೫ | ೧೫ |
| | | | ಬಾಗಾಯತು II | | | | ೨ ೬ ೧೧ | ೨ ೦ ೦ | ೧೮ |
| ಚಾಮರಾಜನಗರ (೧೩ ಹಳ್ಳಿಗಳು) | ೧೮೯೪-೯೫ | ೧೯೨೬-೨೭ | ಖುಷ್ಕಿ I | ೨ ೪ ೦ | ೨ ೧೨ ೦ | ೨೨ | ೧ ೪ ೭ | ೧ ೯ ೦ | ೨೧ |
| | | | ಖುಷ್ಕಿ II | ೧ ೧೪ ೦ | ೨ ೬ ೦ | ೨೭ | ೦ ೧೩ ೭ | ೧ ೧ ೨ | ೨೬ |
| | | | ಖುಷ್ಕಿ III | ೧ ೮ ೦ | ೨ ೦ ೦ | ೩೩ | ೦ ೧೦ ೮ | ೦ ೧೪ ೩ | ೩೩ |
| | | | ಖುಷ್ಕಿ IV | ೦ ೧೨ ೦ | ೧ ೦ ೦ | ೩೩ | ೦ ೫ ೭ | ೦ ೭ ೫ | ೩೩ |
| | | | ತರಿ I ಕೆರೆ | ೮ ೦ ೦ | ೯ ೦ ೦ | ೧೨ | ೩ ೧೦ ೧೦ | ೪ ೨ ೭ | ೧೩ |
| | | | ಕಾಲುವೆ | ೯ ೦ ೦ | ೧೦ ೦ ೦ | ೧೧ | ೫ ೧ ೨ | ೫ ೯ ೪ | ೧೦ |
| | | | ಒಟ್ಟು ತರಿ | | | | ೪ ೧೧ ೧ | ೫ ೩ ೦ | ೧೨ |
| | | | ತರಿ II ಕೆರೆ | ೮ ೦ ೦ | ೮ ೦ ೦ | | ೩ ೧೪ ೩ | ೩ ೧೪ ೩ | |
| | | | ಕಾಲುವೆ | ೯ ೦ ೦ | ೯ ೦ ೦ | | ೨ ೫ ೭ | ೨ ೯ ೪ | –೧ |
| | | | ಒಟ್ಟು ತರಿ | | | | ೩ ೧೩ ೦ | ೩ ೧೨ ೧೦ | –೧ |
| | | | ತರಿ III ಕೆರೆ | ೭ ೦ ೦ | ೭ ೦ ೦ | | ೩ ೬ ೨ | ೩ ೬ ೨ | |
| | | | ಕಾಲುವೆ | ೯ ೦ ೦ | ೯ ೦ ೦ | | | ೪ ೦ ೦ | |
| | | | ಒಟ್ಟು ತರಿ | | | | ೩ ೬ ೨ | ೩ ೭ ೭ | ೩ |
| | | | ತರಿ IV ಕೆರೆ | ೭ ೦ ೦ | ೭ ೦ ೦ | | | | |
| | | | ಕಾಲುವೆ | ೯ ೦ ೦ | ೯ ೦ ೦ | | | | |
| | | | ಬಾಗಾಯತು I | | | | ೫ ೨ ೨ | ೪ ೧೪ ೧೧ | –೪ |
| | | | ಬಾಗಾಯತು II | ೧೨ ೦ ೦ | ೧೨ ೦ ೦ | | ೩ ೪ ೧ | ೩ ೧೧ ೨ | ೧೪ |
| | | | ಬಾಗಾಯತು III | | | | ೨ ೧೫ ೧ | ೩ ೧೦ ೮ | ೨೫ |

| ತಾಲ್ಲೂಕಿನ ಹೆಸರು | ಆಕರಣೆಯ ವರ್ಷ | | | ಗರಿಷ್ಠ ದರ | | | ಸರಾಸರಿ ದರ | | |
|---|---|---|---|---|---|---|---|---|---|
| | ಮೂಲ | ಪರಿಷ್ಕೃತ | ವರ್ಣನೆ ಮತ್ತು ಗುಂಪು | ಮೂಲ | ಪರಿಷ್ಕೃತ | ಮೂಲ ಆಕರಣೆಗೆ ಹೋಲಿಸಿದರೆ % ಹೆಚ್ಚಳ | ಮೂಲ | ಪರಿಷ್ಕೃತ | ಮೂಲ ಆಕರಣೆಗೆ ಹೋಲಿಸಿದರೆ % ಹೆಚ್ಚಳ |
| | | | | ರೂ. ಆ. ಪೈ | ರೂ. ಆ. ಪೈ | | ರೂ. ಆ. ಪೈ | ರೂ. ಆ. ಪೈ | |
| ಗುಂಡ್ಲುಪೇಟೆ | ೧೮೯೧-೯೨ | ೧೯೨೬-೨೭ | ಖುಷ್ಕಿ I | ೧ ೬ ೦ | ೧ ೧೨ ೦ | ೨೭ | ೦ ೧೧ ೨ | ೦ ೧೪ ೨ | ೨೭ |
| | | | ಖುಷ್ಕಿ II | ೧ ೨ ೦ | ೧ ೮ ೦ | ೩೩ | ೦ ೯ ೩ | ೦ ೧೨ ೨ | ೩೩ |
| | | | ಖುಷ್ಕಿ III | ೦ ೧೨ ೦ | ೧ ೦ ೦ | ೩೩ | ೦ ೫ ೮ | ೦ ೭ ೬ | ೩೨ |
| | | | ತರಿ I | ೭ ೦ ೦ | ೭ ೮ ೦ | ೭ | ೩ ೧೦ ೧೦ | ೩ ೧೪ ೨ | ೬ |
| | | | ತರಿ II | ೬ ೦ ೦ | ೬ ೮ ೦ | ೮ | ೨ ೧೫ ೨ | ೩ ೫ ೧ | ೧೩ |
| | | | ತರಿ III | ೫ ೦ ೦ | ೫ ೮ ೦ | ೧೦ | | | |
| | | | ಬಾಗಾಯತು I | | | | ೩ ೫ ೭ | ೨ ೧೪ ೭ | -೧೩ |
| | | | ಬಾಗಾಯತು II | ೮ ೦ ೦ | ೮ ೦ ೦ | | ೩ ೧೧ ೧೦ | ೨ ೧೪ ೮ | -೨೨ |
| | | | ಬಾಗಾಯತು III | | | | ೨ ೩ ೭ | ೨ ೨ ೬ | -೩ |
| ಯಳಂದೂರು | ೧೮೯೪-೯೫ | | | | | | | | |

## ೧೯೬೪ರ ಪರಿಷ್ಕೃತ ಭೂಕಂದಾಯ ವ್ಯವಸ್ಥೆ

ರಾಜ್ಯಗಳ ಪುನರ್ವಿಂಗಡಣೆ ಮಸೂದೆ, ೧೯೫೬ರ ಪ್ರಕಾರ ೦೧-೧೧-೧೯೫೬ ರಿಂದ ನವ ಮೈಸೂರು ರಾಜ್ಯ (ಇಂದಿನ ಕರ್ನಾಟಕ) ಅಸ್ತಿತ್ವಕ್ಕೆ ಬಂದಿತಷ್ಟೆ. ಇದರಲ್ಲಿ ಗಡಿ ರಾಜ್ಯಗಳಾದ ಮುಂಬಯಿ(೪), ಹೈದರಾಬಾದ್(೩), ಮದ್ರಾಸ್(೧) ಮತ್ತು ಕೊಡಗು(೧)ಗಳಿಂದ ಒಂಭತ್ತು ಕನ್ನಡ ಮಾತನಾಡುವ ಜಿಲ್ಲೆಗಳು ಹಳೇ ಮೈಸೂರು ಸಂಸ್ಥಾನದ ಹತ್ತು (೧೯೫೩ರಲ್ಲಿ ಮೈಸೂರಿಗೆ ಸೇರಿಸಲ್ಪಟ್ಟಿದ್ದ ಬಳ್ಳಾರಿ ಜಿಲ್ಲೆ ಸೇರಿ) ಜಿಲ್ಲೆಗಳೊಡನೆ ವಿಲೀನಗೊಂಡಿದ್ದವು. ನೂತನ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಪ್ರತ್ಯೇಕ ರೀತಿಯ ಭೂ ಮೋಜಣಿ ಮತ್ತು ಭೂ ಕಂದಾಯ ವ್ಯವಸ್ಥೆಗಳು ಜಾರಿಯಲ್ಲಿದ್ದವು. ಸರಿ ಸುಮಾರು ಎಲ್ಲಾ ಜಿಲ್ಲೆಗಳೂ ಪರಿಷ್ಕೃತ ಭೂ ಕಂದಾಯ ನಿಗದಿಗೆ ತಕ್ಕದಾಗಿದ್ದವು. ಈ ಅವಕಾಶವನ್ನು ಬಳಸಿಕೊಂಡು ರಾಜ್ಯಾದ್ಯಂತ ಏಕರೂಪದ ಪರಿಷ್ಕೃತ ಆಕರಣೆಯನ್ನು ಜಾರಿಗೆ ತರಲು ಸರಕಾರವು ಯೋಚಿಸಿತು. ಬಹುತೇಕ (೧೯ರಲ್ಲಿ ೧೬) ಜಿಲ್ಲೆಗಳಲ್ಲಿ ಆಕರಣೆಯು ಅನುಭವಿಕ ಪದ್ಧತಿಯ ಮೇಲೆ ರೂಪುಗೊಂಡಿದ್ದು ದರಗಳು ಒಂದೇ ತೆರನಾಗಿರಲಿಲ್ಲ ಅಥವಾ ತುಲನಾರ್ಹವಾಗಿಯೂ ಇರಲಿಲ್ಲ.

ನಿಶ್ಚಿತ ಪ್ರದೇಶವೊಂದಕ್ಕೆ ಸಂಬಂಧಿಸಿದಂತೆ ಕಂಡುಕೊಂಡ ಒಟ್ಟಾರೆ ಆಕರಣೆಯನ್ನು ಹಂಚಿಕೆ ಮಾಡುವಾಗ ಆ ಪ್ರದೇಶದ ಸಾಪೇಕ್ಷ ಉತ್ಪಾದಕತೆಯನ್ನು ಪರಿಗಣನೆಗೆ ತೆಗೆದುಕೊಳ್ಳಲಾಗುತ್ತಿದ್ದರೂ, ಆಕರಣೆಯು ಮುಖ್ಯವಾಗಿ ಆ ಪ್ರದೇಶದ ಭೂ ಕಂದಾಯದ ಇತಿಹಾಸದ ಮೇಲೆ ಆಧಾರಗೊಂಡಿರುತ್ತಿತ್ತು. ಅನೇಕ ಸಂದರ್ಭಗಳಲ್ಲಿ ವಾಸ್ತವವಾಗಿ ಅನುಭವಿಕ ಪದ್ಧತಿಯ ಮೇಲೆ ಹೇರಲಾಗಿದ್ದ ಆಕರಣೆಯು ಆ ಪ್ರದೇಶದ ಉತ್ಪಾದನಾ ಸಾಮರ್ಥ್ಯಕ್ಕೆ ಎಳ್ಳಷ್ಟೂ ಹೊಂದಿಕೆಯಾಗುತ್ತಿರಲಿಲ್ಲ. ಆಕರಣೆ ಮಾಡಲು ತೆಗೆದುಕೊಳ್ಳುತ್ತಿದ್ದ ದೀರ್ಘ ಅವಧಿಯು ಅನುಭವಿಕ

ಪದ್ಧತಿಯ ಅಸಮಾನತೆಗಳಿಗೆ ಒಂದು ಕಾರಣವಾಗಿದ್ದರೆ, ಅದೇ ಅವಧಿಯಲ್ಲಾಗುತ್ತಿದ್ದ ಬೆಲೆಗಳ ವಿಪರೀತ ಸ್ಥಿತ್ಯಂತರವು ಇನ್ನೊಂದು ಕಾರಣವಾಗಿತ್ತು. ರಾಜ್ಯಾದ್ಯಂತ ಒಟ್ಟಾರೆ ಉತ್ಪನ್ನದ ಅಥವಾ ನಿವ್ವಳ ಉತ್ಪನ್ನದ ಒಂದು ನಿರ್ದಿಷ್ಟಪಡಿಸಿದ ಭಾಗವನ್ನು ಆಕರಣೆಯನ್ನಾಗಿ ಸ್ವೀಕರಿಸುವ ಮೂಲಕ ಮತ್ತು ನಗದು ಆಕರಣೆಯನ್ನು ರಾಜ್ಯಾದ್ಯಂತ ಅದೇ ಅವಧಿಯಲ್ಲಿ ಪ್ರಚಲಿತವಿರುವ ಬೆಲೆಗಳ ಆಧಾರದ ಮೇಲೆ ಗೊತ್ತುಪಡಿಸುವುದರ ಮೂಲಕ ಏಕರೂಪತೆಯನ್ನು ಕಾಯ್ದುಕೊಳ್ಳುವುದು ಸಾಧ್ಯವಿತ್ತು. ಪರಿಷ್ಕೃತ ಆಕರಣೆಗಳು ನಿಜವಾಗಿ ಹೆಚ್ಚು ಸಮಯ ತಗಲುವಂಥವು, ಆದರೆ ೧೯೫೩–೫೪ರಲ್ಲಿ ತೆರಿಗೆ ವಿಚಾರಣಾ ಆಯೋಗ ಶಿಫಾರಸು ಮಾಡಿದ್ದ ಉತ್ಕೃಷ್ಟತೆಯ ಪ್ರಮಾಣೀಕರಣ ಪದ್ಧತಿಯು ಅಸಮಾನತೆಗಳನ್ನು ಹೋಗಲಾಡಿಸಲು ಸಮರ್ಥವಾಗಿರಲಿಲ್ಲ. ರಾಜ್ಯಾದ್ಯಂತ ಒಟ್ಟಾರೆ ಉತ್ಪನ್ನದ ಮೇಲಾಗಲೀ ಅಥವಾ ನಿವ್ವಳ ಉತ್ಪನ್ನದ ಮೇಲಾಗಲೀ ಒಂದೇ ಸಮನಾದ ಪ್ರಮಾಣವನ್ನು ಸಾಧ್ಯವಾದ ಮಟ್ಟಿಗಾದರೂ ಹೊಂದಿರುವಂತಹ ಪರಿಷ್ಕರಿಸಿದ ಆಕರಣೆಯು ಅನಿವಾರ್ಯವೆನಿಸಿತ್ತು. ಇಷ್ಟೇ ಅಲ್ಲದೆ, ಆ ಹಿಂದಣ ೬೦ ವರ್ಷಗಳಲ್ಲಿ ಬೆಳೆ ಮಾದರಿಯಲ್ಲಿ ಸಾಕಷ್ಟು ಮಾರ್ಪಾಡುಗಳು ಉಂಟಾಗಿದ್ದು, ಅನೇಕ ಪ್ರದೇಶಗಳಲ್ಲಿ ವಾಣಿಜ್ಯ ಬೆಳೆಗಳು ಲಾಭದಾಯಕವಾಗಿದ್ದುದನ್ನು ಗಮನಿಸಲಾಯಿತು.

ರಾಜ್ಯಾದ್ಯಂತ ಅನ್ವಯಿಸಬಹುದಾದ ಏಕರೂಪದ ಭೂ ಕಂದಾಯ ವ್ಯವಸ್ಥೆಯೊಂದನ್ನು ರೂಪಿಸುವುದಕ್ಕಾಗಿ ಭೂ ಮೋಜಣಿ ಮತ್ತು ಭೂ ಕಂದಾಯ ಇಲಾಖೆಯ ಉಪಆಯುಕ್ತರನ್ನು ರಾಜ್ಯ ಸರ್ಕಾರವು ನೇಮಕ ಮಾಡಿತು. ಆ ಅಧಿಕಾರಿಯು ನೆರೆ ರಾಜ್ಯಗಳಲ್ಲಿ ಜಾರಿಯಲ್ಲಿದ್ದ ಕಂದಾಯ ಪದ್ಧತಿಗಳನ್ನು ಅಭ್ಯಾಸ ಮಾಡಿ, ತೆರಿಗೆ ಸುಧಾರಣಾ ಆಯೋಗದ ಪ್ರಶ್ನಾವಳಿ ಮತ್ತು ಶಿಫಾರಸ್ಸುಗಳನ್ನು ಗಮನದಲ್ಲಿರಿಸಿಕೊಂಡು ವಿಶಾಲ ಮೈಸೂರು ರಾಜ್ಯಕ್ಕೆ ಸೂಕ್ತವೆನಿಸುವ ಏಕರೂಪದ ಭೂ ಕಂದಾಯ ವ್ಯವಸ್ಥೆಯೊಂದನ್ನು ಸಿದ್ಧಪಡಿಸಿ ಒಪ್ಪಿಸಿದರು. ಅವರ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿದ ರಾಜ್ಯ ಸರ್ಕಾರವು ಅದಕ್ಕೆ ತನ್ನ ಒಪ್ಪಿಗೆ ನೀಡಿತು.

ಸರ್ವೆ ಸೆಟಲ್‌ಮೆಂಟ್ ಮತ್ತು ಭೂ ದಾಖಲೆಗಳ ಇಲಾಖೆಯ ಕಮೀಷನ್ನರಿಗೆ ಸಮಗ್ರ ಭೂ ಮೋಜಣಿ ಮತ್ತು ಭೂ ಕಂದಾಯ ಪರಿಷ್ಕರಣೆ ಕಾರ್ಯಗಳ ಸಂಪೂರ್ಣ ಹೊಣೆಯನ್ನು ವಹಿಸಲಾಯಿತು. ತೆರಿಗೆ ವಿಚಾರಣಾ ಆಯೋಗದ ಶಿಫಾರಸ್ಸಿನಂತೆ, ಹಳೇ ಮೈಸೂರು ಪ್ರದೇಶವನ್ನು ಈ ಕಾರ್ಯಕ್ಕಾಗಿ ೧೬ ವಲಯಗಳನ್ನಾಗಿ ವಿಂಗಡಿಸಲಾಯಿತು; ಇಡೀ ರಾಜ್ಯದಲ್ಲಿ ಒಟ್ಟು ೪೧ ವಲಯಗಳನ್ನು ಪ್ರಕಟಿಸಲಾಗಿತ್ತು. ಭೂ ಕಂದಾಯ ಆಕರಣೆ ಪದ್ಧತಿಯು ಹಳೇ ಮೈಸೂರು, ಮುಂಬಯಿ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಮತ್ತು ಕೊಡಗಿನಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಹೊರತುಪಡಿಸಿ ಬಹಳ ಮಟ್ಟಿಗೆ ಒಂದೇ ವಿಧವಾದುದಾಗಿತ್ತು. ರಾಜ್ಯಾದ್ಯಂತ ವಿವಿಧ ವಲಯಗಳಲ್ಲಿ ಕಂದಾಯ ಪರಿಷ್ಕರಣೆ ಕಾರ್ಯವನ್ನು ೧೯೬೦–೬೧ರಿಂದಲೇ ಪ್ರಾರಂಭಿಸಲಾಯಿತು. ಈ ಕಾರ್ಯವನ್ನು ಕ್ಷಿಪ್ರವಾಗಿ ಮಾಡಿ ಮುಗಿಸಲು ಮೂರು ಘಟ್ಟಗಳನ್ನುಳ್ಳ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು; ಅಂದರೆ, (೧) ಪೂರ್ವಭಾವಿ ವಿಚಾರಣೆ, (೨) ಪ್ರಾತಿನಿಧಿಕ ಹಳ್ಳಿಗಳಲ್ಲಿ ತೀವ್ರ ವಿಚಾರಣೆ ಮತ್ತು (೩) ಕರಡು ಆಕರಣೆ ವರದಿಯ ತಯಾರಿಕೆ.

ಈ ನೂತನ ಭೂ ಕಂದಾಯ ಪರಿಷ್ಕರಣೆಯಲ್ಲಿ ಪರಿಚಯಿಸಲಾದ 'ವಲಯ' (zone) ಪದ್ಧತಿಯ ಪರಿಕಲ್ಪನೆ ವಿಶಿಷ್ಟವಾದುದಾಗಿದೆ. ಸರ್ಕಾರದ ಅಥವಾ ಸರ್ಕಾರದಿಂದ ಅಧಿಕಾರ ಪಡೆದ ಪ್ರಾಧಿಕಾರದ ಅಭಿಪ್ರಾಯದಲ್ಲಿ ಪ್ರಾಕೃತಿಕ ಸ್ವರೂಪ, ಹವಾಮಾನ ಮತ್ತು ಮಳೆ, ಪ್ರದೇಶದ ಪ್ರಮುಖ ಬೆಳೆಗಳು, ಮಣ್ಣಿನ ವಿಶೇಷ ಗುಣಗಳು

ಇವೆಲ್ಲವುಗಳ ಪರಿಶೀಲನೆಯಿಂದ ಒಂದು ಬಗೆಯ ಮತ್ತು ಒಂದಕ್ಕೊಂದು ಸಮೀಪದ ಆದರೆ ಒಂದು ಅಥವಾ ಹೆಚ್ಚಿನ ಜಿಲ್ಲೆಗಳ ಒಂದು ತಾಲೂಕು ಅಥವಾ ತಾಲೂಕುಗಳ ಗುಂಪುಗಳು ಒಂದು ವಲಯದಲ್ಲಿ ಸೇರುತ್ತವೆ. ಇಲ್ಲಿ ಗಮನಿಸಬೇಕಾದ ವಿಷಯವೆಂದರೆ ಇಂಥ ವಲಯಗಳ ರಚನೆಯಲ್ಲಿ ಎಷ್ಟೇ ಎಚ್ಚರಿಕೆ ವಹಿಸಿದರೂ ಸ್ಥಳದಿಂದ ಸ್ಥಳಕ್ಕೆ ಸ್ವಲ್ಪವಾದರೂ ವ್ಯತ್ಯಾಸ ಕಂಡುಬರುವುದು ಸಹಜ. ಮೇಲೆ ಹೇಳಿದ ವಿವರಗಳಿಗನುಗುಣವಾಗಿ ಒಂದು ಪ್ರಮಾಣಿತ ದರವನ್ನು ಒಂದು ಗುಂಪಿನ ಪ್ರತಿ ವರ್ಗದ ಭೂಮಿಗೆ ಗೊತ್ತುಪಡಿಸಲಾಯಿತು. ಮೇಲೆ ಹೇಳಿದ ಅನೇಕ ಅಂಶಗಳ ಸಾಪೇಕ್ಷ ಮಹತ್ವಾನುಸಾರ ಗುಂಪಿನೊಳಗಿನ ಪ್ರತಿ ಕ್ಷೇತ್ರಕ್ಕೆ ಆಕರಣೆ ಗೊತ್ತುಪಡಿಸಲಾಯಿತು. ವರ್ಗೀಕರಣ ಮೌಲ್ಯವನ್ನು ಅರಿಯಲು ಕೃಷಿ ಭೂಮಿಯನ್ನು ನಾಲ್ಕು ವರ್ಗಗಳಾಗಿ ವಿಂಗಡಿಸಲಾಯಿತು – ಖುಷ್ಕಿ, ತರಿ, ಬಾಗಾಯತು ಮತ್ತು ಪ್ಲಾಂಟೇಷನ್ (ಕಾಫಿ, ಟೀ, ರಬ್ಬರ್ ಇತ್ಯಾದಿ).

ರಾಜ್ಯದ ಎಲ್ಲಾ ವಲಯಗಳ ಕಂದಾಯ ಆಕರಣೆ ವಿಚಾರಣೆ ಕಾರ್ಯದ ವರದಿಯು ೧೯೬೩–೬೪ರಲ್ಲಿ ಸರಕಾರಕ್ಕೆ ಸಲ್ಲಿಸಲ್ಪಟ್ಟಿತು. ಇಂದಿನ ಚಾಮರಾಜನಗರ ಜಿಲ್ಲೆಯು ಮೂರು ತಾಲೂಕುಗಳಾದ ಚಾಮರಾಜನಗರ, ಗುಂಡ್ಲುಪೇಟೆ ಮತ್ತು ಯಳಂದೂರು ತಾಲೂಕುಗಳ ಭೂ ಕಂದಾಯ ಆಕರಣೆಯ ಮರು ನಿಗದಿ ಕಾರ್ಯವು ನವೆಂಬರ್ ೧೯೬೧ರಿಂದ ಪ್ರಾರಂಭವಾಗಿ ಏಪ್ರಿಲ್ ೧೯೬೩ರ ವೇಳೆಗೆ ಸಂಪೂರ್ಣಗೊಂಡಿತು. ಈ ಮೂರು ತಾಲೂಕುಗಳನ್ನು ವಲಯ (XII) ಎಂದು ಪರಿಗಣಿಸಲಾಗಿತ್ತು. ಈ ಎರಡನೇ ಕಂದಾಯ ಪರಿಷ್ಕರಣೆಯಲ್ಲಿ ಚಾಮರಾಜನಗರ ತಾಲೂಕಿನ ೧೮೯ ಹಳ್ಳಿಗಳು (೩೦ ಇನಾಂ ಹಳ್ಳಿಗಳು ಸೇರಿ), ಗುಂಡ್ಲುಪೇಟೆ ತಾಲೂಕಿನ ೧೬೦ ಹಳ್ಳಿಗಳು (ಒಂದು ಇನಾಂ ಹಳ್ಳಿ ಸೇರಿ) ಮತ್ತು ಯಳಂದೂರು ತಾಲೂಕಿನ ೨೮ ಹಳ್ಳಿಗಳು (೨೨ ಜಹಗೀರು ಹಳ್ಳಿಗಳು ಮತ್ತು ೬ ಇನಾಂ ಹಳ್ಳಿಗಳು ಸೇರಿ) ಒಳಗೊಂಡಿದ್ದವು. ಮದ್ರಾಸ್ ಪ್ರಾಂತ್ಯದಿಂದ ರಾಜ್ಯಪುನರ್ವಿಂಗಡಣೆ ಸಮಯದಲ್ಲಿ ಮೈಸೂರಿನೊಡನೆ ವಿಲೀನಗೊಂಡಿದ್ದ ಕೊಳ್ಳೇಗಾಲ ತಾಲೂಕು ಒಂದು ಪ್ರತ್ಯೇಕ ವಲಯವಾಗಿತ್ತು. ಪ್ರಸ್ತುತ ಮರು ಸರ್ವೆ ಮತ್ತು ಪರಿಷ್ಕೃತ ಕಂದಾಯ ನಿಗದಿಯಾದಾಗ ಈ ತಾಲೂಕಿನಲ್ಲಿ ಒಟ್ಟು ೮೯ ಹಳ್ಳಿಗಳಿದ್ದವು.

ರಾಜ್ಯಾದ್ಯಂತ ಏಕರೂಪದ ಪರಿಷ್ಕೃತ ಭೂ ಕಂದಾಯ ಆಕರಣೆಯನ್ನು ಜಾರಿಗೆ ಕೊಡಲು ಅಗತ್ಯವಾಗಿದ್ದ ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪ (ಅಧಿನಿಯಮ ಸಂಖ್ಯೆ ೧೨ (೧೯೬೪)ಕ್ಕೆ ಶಾಸನ ಸಭೆಯು ಅಂಗೀಕಾರ ನೀಡಿತು. ಇದೊಂದು ಏಕರೂಪದ ಶಾಸನವಾಗಿದ್ದು ರಾಜ್ಯದಲ್ಲಿ ಭೂಮಿ ಮತ್ತು ಭೂ ಕಂದಾಯ ಆಡಳಿತಕ್ಕೆ ಸಂಬಂಧಿಸಿದಂತೆ ಜಾರಿಯಲ್ಲಿದ್ದ ಬೇರೆ ಬೇರೆ ಶಾಸನಗಳನ್ನು ಕ್ರೋಢೀಕರಿಸಿ ತಿದ್ದುಪಡಿ ಮಾಡಿದೆ. ಈ ಅಧಿನಿಯಮವನ್ನು ದಿನಾಂಕ ೦೧–೦೪–೧೯೬೪ ರಿಂದ ಜಾರಿಗೆ ಕೊಡಲಾಯಿತು.

ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ ರ ಪ್ರಕಾರ ಪ್ರಕಟಣೆ ಮಾಡಿ ಜಾರಿಗೆ ಕೊಡಲಾದ ಇಂದಿನ ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತಿರುವ ದ್ವಿತೀಯ ಪರಿಷ್ಕೃತ ಆಕರಣೆಯ ಪ್ರಮಾಣಿತ ದರಗಳನ್ನು ತೋರಿಸುವ ತಃಖ್ತೆಯನ್ನು ಕೆಳಗೆ ನೋಡಬಹುದು.

**ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ ತಾಲೂಕುಗಳು, ವಲಯಗಳು, ಗುಂಪುಗಳು ಆಕರಣೆಯ ಪ್ರಮಾಣಿತ ದರಗಳ ವಿವರಗಳನ್ನು ತೋರಿಸುವ ತಃಖ್ತೆ.**

| ತಾಲೂಕಿನ ಹೆಸರು | ವಲಯ ಸಂಖ್ಯೆ | ಗುಂಪು | ಪ್ರತಿ ಗುಂಪಿನಲ್ಲಿರುವ ಹಳ್ಳಿಗಳ ಸಂಖ್ಯೆ | ಎಕರೆವಾರು ಪ್ರಮಾಣಿತ ದರಗಳು | | | | | |
|---|---|---|---|---|---|---|---|---|---|
| | | | | ಖುಷ್ಕಿ | | ತರಿ | | ಬಾಗಾಯತು | |
| | | | | ₹ | ಪೈ | ₹ | ಪೈ | ₹ | ಪೈ |
| ಚಾಮರಾಜನಗರ | XII | I | ೧೦೩ | ೪ | ೦೬ | ೧೫ | ೬೪ | ೧೮ | ೦೪ |
| | | II | ೮೬ | ೨ | ೧೫ | ೧೫ | ೬೪ | ೧೧ | ೮೭ |
| ಗುಂಡ್ಲುಪೇಟೆ | XII | II | ೧೬೦ | ೨ | ೧೫ | ೧೫ | ೬೪ | ೧೧ | ೮೭ |
| ಯಳಂದೂರು | XII | I | ೨೮ | ೪ | ೦೬ | ೧೫ | ೬೪ | ೧೮ | ೦೪ |
| ಕೊಳ್ಳೇಗಾಲ | ಕೊಳ್ಳೇಗಾಲ ವಲಯ | I | ೫೯ | ೫ | ೧೦ | ೧೨ | ೨೧ | ೮ | ೦೦ |
| | | II | ೩೦ | ೨ | ೪೯ | ೧೨ | ೨೧ | ೬ | ೦೦ |

ಪ್ಲಾಂಟೇಷನ್ ಬೆಳೆಗಳಿಗೆ ಸಂಬಂಧಿಸಿದಂತೆ ಪ್ರಮಾಣಿತ ದರಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ ೧೨೦ ಎಸ್‌ಎಸ್‌ಟಿ ೭೧, ದಿನಾಂಕ ೩೦/೦೮/೧೯೭೬ ರಂತೆ ರಾಜ್ಯದಲ್ಲಿ ಗೊತ್ತುಪಡಿಸಿದ ಎಂಟು ವಲಯಗಳಲ್ಲಿ ಸೇರಿರುವ ಎಲ್ಲಾ ಗುಂಪುಗಳಿಗೆ ಜಾರಿಗೆ ನೀಡಲಾಯಿತು. ಇಂದಿನ ಚಾಮರಾಜನಗರ ಜಿಲ್ಲೆಗೆ ಸಂಬಂಧಿಸಿದಂತೆ ಕೆಳಗಿನ ತಃಖ್ತೆ ಅಗತ್ಯ ವಿವರಗಳನ್ನು ನೀಡುತ್ತದೆ.

| ವಲಯ ಸಂಖ್ಯೆ | ಗುಂಪಿನ ಸಂಖ್ಯೆ | ಪ್ರಮಾಣಿತ ದರ |
|---|---|---|
| XII | ಚಾಮರಾಜನಗರ | |
| | I | ೧೧-೨೫ |
| | II | |
| ಕೊಳ್ಳೇಗಾಲ ವಲಯ | I | ೧೧-೨೫ |
| | II | |

## ಪ್ರಮಾಣಿತ ದರ

ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಪ್ರಕಾರ 'ಪ್ರಮಾಣಿತ ದರ' ಎಂದರೆ ಶೇಕಡಾ ೧೦೦ರಷ್ಟು ವರ್ಗೀಕರಣ ಮೌಲ್ಯ ಹೊಂದಿರುವ ವರ್ಗವೊಂದರ ಒಂದು ಎಕರೆ ಪ್ರದೇಶದ ಸರಾಸರಿ ಇಳುವರಿಯ ಶೇಕಡ ನಾಲ್ಕರಷ್ಟು ಮೌಲ್ಯಕ್ಕೆ ಸಮನಾದುದು. ಪ್ಲಾಂಟೇಷನ್ ಭೂಮಿ ಸಂಬಂಧ ಪ್ರಮಾಣಿತ ದರ ಎಂದರೆ ಶೇಕಡಾ ೧೦೦ರಷ್ಟು ವರ್ಗೀಕರಣ ಮೌಲ್ಯ ಹೊಂದಿರುವ ಒಂದು ಎಕರೆ ಪ್ರದೇಶದ ಸರಾಸರಿ ಇಳುವರಿಯ ಶೇಕಡ ಒಂದರಷ್ಟು ಮೌಲ್ಯಕ್ಕೆ ಸಮವಾದುದು. ಪ್ರಮಾಣಿತ ದರವನ್ನು ಲೆಕ್ಕ ಹಾಕುವಾಗ ಸೆಟಲ್‌ಮೆಂಟ್ ಅಧಿಕಾರಿಯು ಜಮೀನಿನ ಸರಾಸರಿ ಉತ್ಪನ್ನದ ನಿರ್ದಿಷ್ಟ ಪಾಲನ್ನು ಹಣದ ರೂಪದಲ್ಲಿ ಪರಿಗಣಿಸಬೇಕಾಗಿತ್ತು. ಇದು ಆ ಪ್ರದೇಶದ ಹವಾಮಾನ, ಮಳೆ ಪ್ರಮಾಣ, ಸಂಪರ್ಕ ಮತ್ತು ಸಾರಿಗೆ ಸೌಲಭ್ಯಗಳ ಲಭ್ಯತೆ, ಮಾರುಕಟ್ಟೆಗಳ ಸಾಮೀಪ್ಯತೆ, ಒಕ್ಕಲುತನದ ದರ್ಜೆ, ಪಶುಸಂಗೋಪನೆಯ ಸ್ಥಿತಿಗತಿಗಳು ಮುಂತಾದ ಅಂಶಗಳನ್ನು ಅವಲಂಬಿಸುತ್ತಿತ್ತು. ಮಳೆ ಪ್ರಮಾಣವನ್ನು ನಿರ್ಧರಿಸುವಾಗ ಹಿಂದಿನ ೩೦ ವರ್ಷಗಳ

ಅವಧಿಯ ಮಾಹಿತಿಯನ್ನು ಅವಲಂಬಿಸಲಾಗುತ್ತಿತ್ತು. ಜೊತೆಗೆ, ಹಿಂದಿನ ಹತ್ತು ವರ್ಷಗಳ ಅವಧಿಯಲ್ಲಿ ಬೆಳೆ ಕಟಾವು ಪ್ರಯೋಗಗಳನ್ನು ನಡೆಸಿ ಕಂಡುಕೊಂಡ ಫಲಿತಾಂಶಗಳನ್ನು ಸಹ ಗಣನೆಗೆ ತೆಗೆದುಕೊಳ್ಳಲಾಗಿತ್ತು. ಈ ಪ್ರಕಾರ ಪ್ರತಿಯೊಂದು ವರ್ಗದ ಜಮೀನಿನ ಮುಖ್ಯ ಬೆಳೆಗಳ ಒಟ್ಟು ಉತ್ಪನ್ನದ ಆಧಾರದ ಮೇಲೆ ನಿರ್ಧರಿತವಾದ ಪ್ರಮಾಣಿತ ದರಗಳನ್ನು ಕುರಿತು ಭೂ ಕಂದಾಯ ನಿಗದಿ ಕುರಿತಂತೆ ಶಿಫಾರಸ್ಸುಗಳನ್ನು ಸೆಟಲ್‌ಮೆಂಟ್ ಅಧಿಕಾರಿಗಳು ಮಾಡಿದ್ದರು. ಆ ಹೊಸ ದರಗಳು ಮತ್ತು ಭೂ ಕಂದಾಯ ವ್ಯವಸ್ಥೆಯ ವರದಿಗಳನ್ನು ಸಾರ್ವಜನಿಕರ ಆಕ್ಷೇಪಣೆ ಸಲ್ಲಿಕೆಗಾಗಿ ಪ್ರಕಟಿಸಲಾಗಿತ್ತು. ಸಾರ್ವಜನಿಕರು ಮುಂದೆ ಮಾಡಿದ ಆಕ್ಷೇಪಣೆಗಳನ್ನು ಪರಿಶೀಲಿಸಿದ ನಂತರ ಜಿಲ್ಲಾಧಿಕಾರಿಯು ತಮ್ಮ ಅಭಿಪ್ರಾಯಗಳೊಡನೆ ಭೂ ಕಂದಾಯ ಆಯುಕ್ತರ ಮುಖೇನ ಸರ್ಕಾರಕ್ಕೆ ಸಲ್ಲಿಸಿದ್ದರು. ರಾಜ್ಯ ವಿಧಾನಮಂಡಲದ ಎರಡೂ ಸದನಗಳ ಪರಿಶೀಲನೆಯ ನಂತರ ಪ್ರಮಾಣಿತ ದರಗಳನ್ನು ವಲಯವಾರಾಗಿ ಅಂಗೀಕರಿಸಲಾಯಿತು ಮತ್ತು ಡಿಸೆಂಬರ್ ೧೯೬೫ರಲ್ಲಿ ರಾಜ್ಯಪತ್ರದಲ್ಲಿ ಅಧಿಸೂಚನೆಯೊಡನೆ ಪ್ರಕಟಿಸಲಾಯಿತು.

ಇದಾದ ನಂತರವೂ, ಮುಖ್ಯವಾಗಿ ಮಲೆನಾಡು ಜಿಲ್ಲೆಗಳ ಜನರು ಸಲ್ಲಿಸಿದ ಮನವಿಗಳ ಫಲಿತವಾಗಿ ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪ಕ್ಕೆ ಸೂಕ್ತ ತಿದ್ದುಪಡಿ ಅಂಗೀಕರಿಸಿ, ರಾಜ್ಯ ಸರ್ಕಾರವು ಭೂ ಕಂದಾಯ ದರಗಳು ಇನ್ನೂ ಚಾಲ್ತಿಯಲ್ಲಿರುವ ಅವಧಿಯೊಳಗೇ ದರಗಳ ಪುನರ್ನಿಗದಿ ಮಾಡಬೇಕಾದ ಅವಶ್ಯಕತೆ ಇದೆಯೆಂದು ಮನವರಿಕೆಯಾದಲ್ಲಿ, ಸೂಕ್ತ ಕಾರಣಗಳನ್ನು ಬರಹದಲ್ಲಿ ನೀಡಿ ಪ್ರಮಾಣಿತ ದರಗಳಲ್ಲಿ ಗೋಚರವಾದ ಅಸಮಾನತೆಗಳನ್ನು ದೂರ ಮಾಡಲು ಅಧಿಕಾರ ಪಡೆದುಕೊಂಡಿತು. ಹೊಸ ಭೂ ಕಂದಾಯದ ದರಗಳು ರಾಜ್ಯದ ೩೯ ವಲಯಗಳಲ್ಲಿ ದಿನಾಂಕ ೧-೭-೧೯೬೫, ೧-೭-೧೯೭೦ ಮತ್ತು ೧-೭-೧೯೭೬ರಿಂದ ಮೂರು ಹಂತಗಳಲ್ಲಿ ಜಾರಿಗೆ ತರಲ್ಪಟ್ಟವು.

## ನೀರಿನ ಕರಗಳು

ಅನುಕೂಲದ ಕಾರಣದಿಂದ ಅದರೊಡನೆ ಒಗ್ಗೂಡಿಸದೇ ಇದ್ದರೂ ನೀರಿನ ಕರವು ಭೂ ಕಂದಾಯದ ಒಂದು ಭಾಗವೇ ಆಗಿರುತ್ತದೆ. ಸರ್ವೆ ಸೆಟಲ್‌ಮೆಂಟ್ ಜಾರಿಗೆ ಕೊಟ್ಟಿರುವ ಹಳ್ಳಿಯ ಜಮೀನುಗಳ ಮೇಲೆ ತಾತ್ಕಾಲಿಕ ನೀರಿನ ಕರ ವಿಧಿಸುವ ಅಧಿಕಾರ ಜಿಲ್ಲಾಧಿಕಾರಿಗೆ ಇರಲಿಲ್ಲ. ಆ ದರವನ್ನು ನಿಗದಿಪಡಿಸುವ ಅಧಿಕಾರ ಭೂ ದಾಖಲೆಗಳ ಇಲಾಖೆಯದಾಗಿತ್ತು. ಹಳೆಯ ಮೈಸೂರು ರಾಜ್ಯದಲ್ಲಿ ಜಾರಿಯಲ್ಲಿದ್ದ "ಮೈಸೂರು ಭೂ ಕಂದಾಯ ಕೈಪಿಡಿ"(ಸಂಪುಟ ೧, ೧೯೨೧)ಯ ೧೩೪ನೇ ಕಂಡಿಕೆಯಲ್ಲಿ ಇದನ್ನು ಹೇಳಲಾಗಿದೆ. ಅಲ್ಲೇ ಹೇಳಿರುವಂತೆ (ನೋಟಿಫಿಕೇಷನ್ ಸಂಖ್ಯೆ ಆರ್:೬೭-ಎಲ್‌ಆರ್:೪೩೭-೦೮-೪, ದಿನಾಂಕ ೬ನೇ ಜುಲೈ ೧೯೧೦) ತರಿ ಮತ್ತು ಬಾಗಾಯತು ದರಗಳನ್ನು ಪರಿಷ್ಕರಣೆ ಮಾಡಲಾಗಲೀ ಅಥವಾ ತನ್ನದೇ ಸೂಚನೆ ಮೇರೆಗೆ ನೀರು ಸರಬರಾಜನ್ನು ಉತ್ತಮಪಡಿಸಲಾಗಿದೆ ಎಂಬ ಕಾರಣಕ್ಕೆ ಖುಷ್ಕಿ ಜಮೀನುಗಳ ಮೇಲೆ ನೀರಿನ ಕರವನ್ನು ವಿಧಿಸಲಾಗಲೀ ಓರ್ವ ಜಮಾಬಂದಿ ಅಧಿಕಾರಿಗೆ ಕಾನೂನಿನ ಪ್ರಕಾರ ಕ್ಷಮತೆ ಇರಲಿಲ್ಲ. ನಿಯಮಗಳಡಿ ವರ್ಧಿಸಿದ ದರಗಳನ್ನು ವಿಧಿಸಲು ಸಕಾರಣಗಳಿದ್ದಲ್ಲಿ, ಅಂತಹ ದರಗಳನ್ನು ವಿಧಿಸಲು ಅಗತ್ಯವಾದ ಕ್ರಮಗಳನ್ನು ಸ್ಥಳೀಯ ಕಂದಾಯ ಅಧಿಕಾರಿಗಳು ತೆಗೆದುಕೊಳ್ಳಬಹುದಾಗಿತ್ತು. ಸರ್ಕಾರದ ಖರ್ಚಿನಲ್ಲಿ ನೀರನ್ನು ಒದಗಿಸಲಾಗಿದ್ದ ಎಲ್ಲಾ ಜಮೀನುಗಳ ಮೇಲೂ ತರಿ ದರಗಳನ್ನು ವಿಧಿಸುವ ಅವಕಾಶ ೧೮೭೩ರಿಂದಲೂ ರೂಢಿಯಲ್ಲಿತ್ತು. ಹಿಡುವಳಿದಾರರು ಅಂತಹ ನೀರನ್ನು ಬಳಸಲು ಒಪ್ಪಿಗೆ ನೀಡದಿದ್ದರೂ ಸಹ, ಅವರಿಗೆ ಹಿಂದಿನ ದರಗಳನ್ನು ಮುಂದುವರೆಸಬೇಕೆಂದು ಕೋರುವ ಅವಕಾಶ ಇರಲಿಲ್ಲ. ಸರಳವಾಗಿ ಹೇಳಬೇಕೆಂದರೆ, ಸರಕಾರದಿಂದ ನಿರ್ವಹಿಸಲ್ಪಡುತ್ತಿದ್ದ ಯಾವುದೇ ಜಲಮೂಲದಿಂದ ಕೃಷಿಕಾರ್ಯಕ್ಕಾಗಿ ನೀರನ್ನು ಬಳಸುವ

ಅವಕಾಶವಿರುವ ಎಲ್ಲಾ ಜಮೀನುಗಳ ಮೇಲೂ ನೀರಿನ ಕರವನ್ನು ತಪ್ಪದೇ ವಿಧಿಸಲಾಗುತ್ತಿತ್ತು. ಖುಷ್ಕಿ ಜಮೀನು ಸರಕಾರಿ ನೀರಿನ ಸರಬರಾಜಿನಿಂದಾಗಿ 'ತರಿ'ಯಾಗಿ ಪರಿವರ್ತನೆಗೊಂಡಲ್ಲಿ ಅಂತಹದೇ ವರ್ಗದ ತರಿ ಜಮೀನಿನ ಮೇಲೆ ಅದರ ನೆರೆಗ್ರಾಮದಲ್ಲಿ ವಿಧಿಸಲಾಗುತ್ತಿದ್ದ ಕಂದಾಯವನ್ನೇ ವಿಧಿಸಲು ಅವಕಾಶವಿತ್ತು. ಸುಧಾರಿತ ನೀರು ಸರಬರಾಜಿನ ತೆರಿಗೆ ಅಥವಾ ಬೇಸಿಗೆ ಕಾಲದಲ್ಲಿ ಸರಬರಾಜು ಮಾಡುತ್ತಿದ್ದ ನೀರಿನ ತೆರಿಗೆ ದರಗಳನ್ನು ಭೂ ಮಾಪನ ಮತ್ತು ಕಂದಾಯ ಇಲಾಖೆಯು ಅದೇ ರೀತಿಯಲ್ಲಿ ನಿಷ್ಕರ್ಷೆ ಮಾಡುತ್ತಿತ್ತು. ಸರ್ವೆ ಸೆಟಲ್‌ಮೆಂಟ್ ಸಮಯದಲ್ಲಿ ಅದನ್ನು ಭೂ ಕಂದಾಯದೊಡನೆ ವಿಲೀನಗೊಳಿಸಿ ಬಿಡಲಾಗುತ್ತಿತ್ತು. ಏಕೆಂದರೆ, ಭೂ ಕಂದಾಯವನ್ನು ನಿಗದಿಪಡಿಸಿದ ೩೦ ವರ್ಷಗಳ ಅವಧಿಯ ನಂತರ ಪರಿಷ್ಕರಣೆ ಮಾಡಬಹುದಾಗಿದ್ದರೆ, ನೀರಾವರಿ ತೆರಿಗೆಯನ್ನು ಅದಕ್ಕೂ ಕಡಿಮೆ ಅವಧಿಯೊಳಗೇ ಮರು ಪರಿಷ್ಕರಿಸುವ ಅವಕಾಶವಿರುತ್ತದೆ.

ಹಾಲಿ ಜಾರಿಯಲ್ಲಿರುವ ಕ್ರಮವೆಂದರೆ, ರಾಜ್ಯ ಸರಕಾರದ ಆಸ್ತಿಯೆಂದೆಣಿಸಲ್ಪಟ್ಟಿರುವ ನೀರಿನ ಮೂಲದಿಂದ ನೀರನ್ನು ಪಡೆದುಕೊಳ್ಳುತ್ತಿರುವ ಜಮೀನುಗಳ ಮೇಲೆ ಖುಷ್ಕಿ ದರಗಳನ್ನು ಆಕರಿಸುವುದರ ಜೊತೆಗೆ ಕರ್ನಾಟಕ ನೀರಾವರಿ (ಅಭಿವೃದ್ಧಿ ಕರ ಮತ್ತು ನೀರು ಕರ ವಸೂಲಿ) ಅಧಿನಿಯಮ ೧೯೫೭ರ ಪ್ರಕಾರ ಅನ್ವಯಿಸಬಹುದಾದ ನೀರಿನ ದರಗಳನ್ನು ವಿಧಿಸಲಾಗುತ್ತದೆ. ರಾಜ್ಯ ಸರಕಾರದ ಆಸ್ತಿಯೆಂದೆಣಿಸಲ್ಪಡದ ಮೂಲದಿಂದ ನೀರನ್ನು ಒದಗಿಸಿಕೊಂಡು ತರಿ ಅಥವಾ ಬಾಗಾಯತು ಬೆಳೆಗಳನ್ನು ಬೆಳೆಯುತ್ತಿರುವ ಜಮೀನುಗಳ ಮೇಲೆ ಅವುಗಳ ಸರಾಸರಿ ಫಸಲಿನ ನಗದು ಮೌಲ್ಯದ ಶೇಕಡಾ ನಾಲ್ಕರಷ್ಟು ಒಟ್ಟುಗೂಡಿಸಿದ ತರಿ ಅಥವಾ ಬಾಗಾಯತು ದರವನ್ನು ವಿಧಿಸಲಾಗುತ್ತದೆ. ಹೊಸ ಭೂ ಕಂದಾಯ ವ್ಯವಸ್ಥೆಯಲ್ಲಿ ನೀರು ದರವನ್ನು ಭೂ ಕಂದಾಯದೊಡನೆ ವಿಲೀನಗೊಳಿಸಿರುವುದಿಲ್ಲ. ನೀರು ದರವನ್ನು ೧೯೬೫ರಲ್ಲಿ ಜಾರಿಗೆ ಕೊಡಲಾಯಿತು. ನೀರಿನ ದರಗಳನ್ನು ಶೇಕಡಾ ೩೩$^1/_3$ರಷ್ಟು ವರ್ಧಿಸಿ ೧೯೬೬ರಿಂದ ಜಾರಿಗೆ ತರಲಾಯಿತು. ನೀರು ದರಗಳ ಪ್ರಶ್ನೆಯನ್ನು ಕೂಲಂಕಷವಾಗಿ ಪರಿಶೀಲಿಸಲು ಸಮಿತಿಯೊಂದನ್ನು ಸರಕಾರವು ನೇಮಕ ಮಾಡಿತು. ಅದು ಸಮಗ್ರ ಅಧ್ಯಯನದ ನಂತರ ನೀರಿನ ದರಗಳನ್ನು ಕಡಿಮೆ ಮಾಡಬಹುದೆಂತಲೂ ಮತ್ತು ಕಾಲುವೆಗಳ ನಿರ್ವಹಣೆ ಶುಲ್ಕವನ್ನು ಮುಂದುವರೆಸುವ ಅಗತ್ಯವಿಲ್ಲವೆಂದೂ ಶಿಫಾರಸ್ಸುಗಳನ್ನು ಮಾಡಿತು. ಇದನ್ನು ಸರ್ಕಾರವು ಒಪ್ಪಿಕೊಂಡು ಸೂಕ್ತ ಆದೇಶಗಳನ್ನು ಹೊರಡಿಸಿತು. ಆದರೆ, ಇದಾದ ಸ್ವಲ್ಪ ಕಾಲದಲ್ಲಿಯೇ ಸರಕಾರವು ತನ್ನದೇ ಆದೇಶಗಳನ್ನು ಪುನರ್ವಿಮರ್ಶಿಸಬೇಕಾದ ಸ್ಥಿತಿ ಉಂಟಾಯಿತು. ನೀರಾವರಿ ಯೋಜನೆಗಳ ಮೇಲಣ ವೆಚ್ಚ ಯದ್ವಾತದ್ವಾ ಏರುತ್ತಿದ್ದ ಪರಿಣಾಮವಾಗಿ ಸರಕಾರವು ನಿರ್ವಹಣೆ ಶುಲ್ಕ ವಸೂಲಿಯನ್ನು ಪುನ: ಜಾರಿಗೆ ತಂದಿತು. ಇದನ್ನು ಕರ್ನಾಟಕ ನೀರಾವರಿ ಅಧಿನಿಯಮ, ೧೯೬೫ರ ಪ್ರಕಾರ ೧ನೇ ಜನವರಿ ೧೯೬೬ರಿಂದ ವಿಧಿಸಲಾಗುತ್ತಿದೆ. ಸರಕಾರದ ಜಲಮೂಲಗಳ ಸರಬರಾಜು ವ್ಯಾಪ್ತಿಯಲ್ಲಿ ಬರುವ ಜಮೀನುಗಳ ಮೇಲೆ ವಿಧಿಸಬಹುದಾದ ನೀರಿನ ದರಗಳನ್ನು ಕರ್ನಾಟಕ ನೀರಾವರಿ (ಅಭಿವೃದ್ಧಿ ಕರ ಮತ್ತು ನೀರು ಕರ ವಸೂಲಿ) (ತಿದ್ದುಪಡಿ) ನಿಯಮಗಳು, ೧೯೭೧ರ ಪ್ರಕಾರ, ಆದರೆ ೧ನೇ ಜುಲೈ ೧೯೬೫ರಿಂದಲೇ ಜಾರಿಗೆ ಬಂದಿರುವಂತೆ ವಿಧಿಸಲಾಯಿತು. ಈ ದರಗಳನ್ನು ಹೆಚ್ಚಿಸಿ ೧೯೭೨ರಲ್ಲಿ ಮತ್ತು ೧೯೭೬ರಲ್ಲಿ ಪರಿಷ್ಕರಿಸಲಾಗಿತ್ತು.

ಸರಕಾರದ ೧೯೮೦ರ ಅಧಿಸೂಚನೆಯನ್ವಯ ನೀರಿನ ದರಗಳನ್ನು ಈ ಕೆಳಗಿನಂತೆ ಆಕರಣೆ ಮಾಡಬೇಕಾಗಿರುತ್ತದೆ.

೧) ಬೃಹತ್ ಮತ್ತು ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ಬರುವ ಜಮೀನುಗಳಿಗೆ ದಿನಾಂಕ ೧ನೇ ಜುಲೈ ೧೯೮೫ರಿಂದ ನೀರಿನ ದರಗಳನ್ನು ಆಕರ ಮಾಡಬೇಕಾಗುತ್ತದೆ. ಇದಕ್ಕೆ (ಅಂದರೆ, ೧-೭-೧೯೮೫) ಪೂರ್ವದಲ್ಲಿ (ಅಂದರೆ, ೧-೭-೧೯೮೫ ರಿಂದ ೩೦-೦೬-೧೯೮೫ರವರೆಗೆ) ಹಳೆಯ ನೀರಿನ ದರಗಳನ್ನು ದಿನಾಂಕ ೧ನೇ ಜೂನ್ ೧೯೭೬ರ ದರದಂತೆ ಆಕರಣೆ ಮಾಡಬೇಕಾಗಿತ್ತು.

೨) ವಾಸ್ತವಿಕವಾಗಿ, ನೀರಾವರಿ ಆಗದೇ ಇರುವ ಮಧ್ಯಮ ನೀರಾವರಿ ಕಾಮಗಾರಿಗಳ ಕೆಳಗೆ ಬರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ಅರ್ಧದಷ್ಟನ್ನು ಮಾತ್ರ ಆಕರಣೆ ಮಾಡಬೇಕು.

೩) ಸಣ್ಣ ನೀರಾವರಿ ಕೆರೆಗಳ ಕೆಳಗೆ ಬರುವ ಜಮೀನುಗಳಿಗೆ (ಹೈಯರ್ ರೀಚಸ್) ನಿಗದಿಪಡಿಸಿದ ನೀರಿನ ದರದ ಅರ್ಧದಷ್ಟು ಮತ್ತು ಕೆಳಗಡೆ (ಲೋಯರ್ ರೀಚಸ್) ಇರುವ ಜಮೀನುಗಳಿಗೆ ನಿಗದಿಪಡಿಸಿದ ನೀರಿನ ದರದ ಕಾಲುಭಾಗದಷ್ಟು ಆಕರಣೆ ಮಾಡಬೇಕು. ಕನಿಷ್ಠ ದರವು ತರಿ ಆಕಾರ ಮತ್ತು ಖುಷ್ಕಿ ಆಕಾರದ ನಡುವಿನ ಅಂತರದ ಎರಡು ಪಟ್ಟು ಇರಬೇಕು. ಹೈಯರ್ ಮತ್ತು ಲೋಯರ್ ರೀಚಸ್‌ಗಳಂತೆಯೇ, ಕಡಿತಗೊಂಡ ನೀರಿನ ದರಗಳ ಆಕರಣೆಯು ೧ನೇ ಜುಲೈ ೧೯೭೬ರಿಂದ ಜಾರಿಗೆ ತರಲ್ಪಟ್ಟಿತ್ತು.

ಉಲ್ಲೇಖಿಸಿರುವ ಸರಕಾರದ ಅಧಿಸೂಚನೆಯ ಕಂಡಿಕೆ (೫)ರಲ್ಲಿ ಆದೇಶಿಸಿರುವಂತೆ ಸಣ್ಣ ನೀರಾವರಿ ಕೆರೆಗಳ ಅಡಿಯಲ್ಲಿ ಬರುವ ಜಮೀನುಗಳಿಗೆ ೩೦ನೇ ಜೂನ್ ೧೯೭೬ರವರೆಗೆ ಆಕರಣೆ ಆದ ನೀರಿನ ದರಗಳ ವಸೂಲಿ ಆಗದೇ ಇದ್ದ ಬಾಕಿಯನ್ನು ಸರಕಾರವು ಮನ್ನಾ ಮಾಡಿತು. ಈ ಕುರಿತು ಸರಕಾರದ ಆದೇಶವನ್ನು ದಿನಾಂಕ ೨೪–೦೭–೧೯೮೫ರಂದು ಹೊರಡಿಸಿದ್ದು ಆ ನೀರಿನ ದರಗಳನ್ನು ಜಾರಿಗೆ ತರಲು ಕರ್ನಾಟಕ ನೀರಾವರಿ (ನೀರಿನ ಕರ ಆಕರಣೆ) ನಿಯಮಗಳು, ೧೯೬೫ಕ್ಕೆ ತಿದ್ದುಪಡಿಯನ್ನು ಸರಕಾರದವರು ದಿನಾಂಕ ೦೪–೧೧–೧೯೮೭ರಂದು ಹೊರಡಿಸಿದರು.

ನೀರಿನ ಕರಕ್ಕೆ ಸಂಬಂಧಿಸಿದ ನಿಯಮಗಳನ್ನು ೧೯೬೫ರಲ್ಲಿ ಹೊರಡಿಸಲಾಯಿತು. ನೀರಾವರಿ ಯೋಜನೆಗಳ ನಿರ್ವಹಣೆಗಾಗಿ ಖರ್ಚಾಗುವ ಹಣವನ್ನು ಮರುಭರ್ತಿ ಮಾಡಿಕೊಳ್ಳುವುದು ಮತ್ತು ಸಾಲದ ಮೇಲಿನ ಬಡ್ಡಿ ಮತ್ತು ಮೇಲ್ವೆಚ್ಚಗಳನ್ನು ಭರಿಸುವುದು ನೀರಿನ ಕರ ವಸೂಲಿಯ ಮುಖ್ಯ ಗುರಿಗಳಾಗಿವೆ. ನೀರಿನ ಕರಕ್ಕೆ ಸಂಬಂಧಿಸಿದ ನಿಯಮಗಳನ್ನು ೧೯೬೬ ರಿಂದ ಜಾರಿಗೊಳಿಸಲಾಗಿತ್ತು, ಆಗ ನಿಗದಿ ಮಾಡಿದ್ದ ದರ ಶೇಕಡಾ ೩೩ ೧/೩ ಆಗಿತ್ತು. ನಂತರ, ೧೯೭೨ ಮತ್ತು ೧೯೮೧ರ ನಡುವೆ ಅನೇಕ ತಿದ್ದುಪಡಿಗಳನ್ನು ಮಾಡಿ ಈ ಕೆಳಗೆ ಕಾಣಿಸಿರುವ ದರಗಳನ್ನು (ಪ್ರತಿ ಎಕರೆಗೆ ₹ಗಳಲ್ಲಿ) ಅಂತಿಮಗೊಳಿಸಲಾಯಿತು; ಕಬ್ಬು (೧೨ ತಿಂಗಳುಗಳ ಅವಧಿಯ ಬೆಳೆ) ₹ ೧೫೦ ಮತ್ತು (೧೩ ರಿಂದ ೧೮ ತಿಂಗಳುಗಳ ಅವಧಿಯ ಬೆಳೆ) ₹ ೨೨೪; ಭತ್ತ, ₹ ೪೫; ಗೋಧಿ, ₹ ೨೪; ರಾಗಿ, ಸಜ್ಜೆ, ಗೆಣಸು, ತಂಬಾಕು, ಕೊತ್ತಂಬರಿ, ₹ ೨೪; ಕಾಳುಗಳು, ₹ ೧೮; ಗೊಬ್ಬರ ಅವಲಂಬಿತ ಬೆಳೆಗಳು, ₹ ೯; ಮತ್ತು ತೋಟದ ಬೆಳೆಗಳು, ₹ ೫೦.

## ಭೂ ಕಂದಾಯ ಲೆಕ್ಕ

ಭೂ ಕಂದಾಯ ನಿಗದಿ ಕಾರ್ಯಗಳು ಪೂರ್ಣಗೊಂಡ ನಂತರ ಸರ್ವೇಕ್ಷಣೆ ಮತ್ತು ಸೆಟಲ್‌ಮೆಂಟ್ ಇಲಾಖೆಯು ಒಂದು ಸೆಟಲ್‌ಮೆಂಟ್ ರಿಜಿಸ್ಟರನ್ನು ಸಿದ್ಧಪಡಿಸುತ್ತದೆ. ಇದರಲ್ಲಿ ಪ್ರತಿ ಸರ್ವೆ ಸಂಖ್ಯೆಯ ಮೇಲೆ ನಿಗದಿ ಮಾಡಿರುವ ಆಕರಣೆ, ಕೃಷಿಗೊಳಪಡಿಸದಿರುವ ಜಮೀನು(ಸರ್ವೆಸಂಖ್ಯೆಗನುಸಾರವಾಗಿ)ಗಳ ವಿವರಗಳು, ಭೂ ಮಾಲೀಕನ ಹೆಸರು ಮತ್ತು ನೋಂದಾಯಿತ ಅನುಭವದಾರನ ಹೆಸರು ಮುಂತಾದ ಮಾಹಿತಿ ಅಡಕವಾಗಿರುತ್ತದೆ. ಇದಲ್ಲದೆ, ಇನ್ನೊಂದು ವಹಿಯನ್ನೂ ಸಹ ತಯಾರಿಸಲಾಗುತ್ತದೆ. ಇದನ್ನು 'ಆಕರ ಬಂದ್' ಎಂದು ಕರೆಯುವರು. ಈ ವಹಿಯಲ್ಲಿ ಒಂದು ಹಳ್ಳಿಯ ಸರ್ವೆ ಸಂಖ್ಯೆಗಳು ಜಮೀನುಗಳ ಒಟ್ಟು ವಿಸ್ತೀರ್ಣ, ಆಕರಣೆಯ ದರಗಳು, ಮುಂತಾದ ವಿಷಯಗಳು ವಿವರವಾಗಿ ನಮೂದಿಸಲ್ಪಟ್ಟಿರುತ್ತದೆ. ಇದರ ಆಧಾರದ ಮೇಲೆ ಗ್ರಾಮಲೆಕ್ಕಿಗನು ಖೇತ್ವಾರು ವಹಿಯನ್ನು ಸಿದ್ಧಪಡಿಸುತ್ತಾನೆ. ಎಲ್ಲಾ ಕಂದಾಯ ಲೆಕ್ಕಗಳಿಗೆ ಇದು ಆಧಾರವಾಗಿರುತ್ತದೆ. ಇದರಲ್ಲಿ ಈ 'ಖೇತ್ವಾರು ಪತ್ರಿಕೆ'ಯಲ್ಲಿ ಆಯಾ ಗ್ರಾಮದ ಎಲ್ಲಾ ಸರ್ವೆ ಸಂಖ್ಯೆಗಳಲ್ಲಿ

ಅಡಕವಾಗಿರುವ ಜಮೀನುಗಳನ್ನು ಕುರಿತಾದ ವಾಸ್ತವಾಂಶಗಳಿರುತ್ತವೆ. ಬೇರೆ ಪದಗಳಲ್ಲಿ ಹೇಳಬೇಕೆಂದರೆ, ಇದರಲ್ಲಿ ಪ್ರತಿ ಭೂ ಮಾಲೀಕನ ಹೆಸರಿನಲ್ಲಿರುವ ಜಮೀನಿನ ವಿಸ್ತೀರ್ಣ, ಆಕರಣೆ, ನೀರಾವರಿ ದರ, ಭೂ ವರ್ಗೀಕರಣ, ಗೇಣಿದಾರನ ಹಕ್ಕಿನ ಸ್ವರೂಪ, ಮುಂತಾದ ವಿವರಗಳಿರುತ್ತವೆ. ಗೇಣಿ ಹಕ್ಕು ದಾಖಲೆ ಮತ್ತು ಬೆಳೆಗಳ ಮಾಹಿತಿಯನ್ನೊಳಗೊಂಡ 'ರೆಕಾರ್ಡ್ ಆಫ್ ಟೆನೆನ್ಸಿ ಅಂಡ್ ಕ್ರಾಪ್ಸ್ ಸರ್ಟಿಫಿಕೇಟ್' ವಹಿಯ ಮೂಲ ಪ್ರತಿಯನ್ನು ಗ್ರಾಮಲೆಕ್ಕಿಗನು ತನ್ನ ವಶದಲ್ಲಿಟ್ಟುಕೊಂಡು ಅದರ ಯಥಾ ನಕಲೊಂದನ್ನು ತಯಾರಿಸಿ ತಾಲೂಕು ಕಛೇರಿಯಲ್ಲಿ ಇರಿಸಬೇಕು. ಹಕ್ಕುಗಳ ಬದಲಾವಣೆಗೆ ಸಂಬಂಧಿಸಿದ ವಿವರಗಳು ಸ್ವೀಕೃತವಾದಂತೆಲ್ಲಾ ಅವುಗಳನ್ನು ಪರಿಶೀಲಿಸಿ ಈ ವಹಿಯಲ್ಲಿ ನಮೂದಿಸುತ್ತಾ ಇರಬೇಕು. ಪ್ರತಿ ಐದು ವರ್ಷಗಳಿಗೊಮ್ಮೆ ಈ ವಹಿಯನ್ನು ಹೊಸತಾಗಿ ಬರೆಯಬೇಕೆಂಬ ನಿಯಮವಿದೆ. ಖಾತೆ ವಹಿಯನ್ನು ಪ್ರತಿ ವರ್ಷದ ಜುಲೈ ೧ನೇ ತಾರೀಖಿನಂದು ಆರಂಭಿಸಬೇಕು. ಗ್ರಾಮಲೆಕ್ಕಿಗನು ತನ್ನಲ್ಲಿರುವ ರಸೀತಿ ಪುಸ್ತಕದಲ್ಲಿ ರೈತರಿಂದ ಪಡೆದ ಎಲ್ಲಾ ಮೊತ್ತಗಳ ಬಗ್ಗೆ ಸೂಕ್ತ ನಮೂದುಗಳನ್ನು ತಪ್ಪದೇ ಮಾಡಬೇಕು. ಬೇಡಿಕೆ, ವಸೂಲಿ ಮತ್ತು ಬಾಕಿ (ಡಿ.ಸಿ.ಬಿ.) ತಃಖ್ತೆಯಲ್ಲಿ ಆಯಾ ತಿಂಗಳಿನಲ್ಲಿ ಆದ ವಹಿವಾಟಿನ ವಿವರಗಳನ್ನು ಅವನು ಬರೆದಿಡಬೇಕು ಮತ್ತು ಕಂದಾಯ ವರ್ಷದ ಅಂತ್ಯದಲ್ಲಿ ಅಂದರೆ ಜೂನ್ ೩೦ರಂದು ಅಖೈರುಗೊಳಿಸಬೇಕು. ಈ ವಹಿಯಲ್ಲಿರುವ ಮಾಹಿತಿಯ ಆಧಾರದ ಮೇಲೆ ಪ್ರತಿ ಗ್ರಾಮದ ಐಟಂವಾರು ಕಂದಾಯದ ಲೆಕ್ಕವನ್ನು ಅಖೈರುಗೊಳಿಸಬೇಕು.

ಸೆಟಲ್‌ಮೆಂಟ್ ದಾಖಲೆಗಳ ಆಧಾರದ ಮೇಲೆ ಬರೆಯಲಾದ ಭೂ ಕಂದಾಯ ಲೆಕ್ಕಪತ್ರಗಳಲ್ಲಿ ಅಥವಾ ಮರು ಸರ್ವೇಕ್ಷಣೆ ಮತ್ತು ಸೆಟಲ್‌ಮೆಂಟ್ ಸಂದರ್ಭದಲ್ಲಿ ಅಂತಹ ಮರು ಕಂದಾಯ ನಿಗದಿ ದಾಖಲೆಗಳ ಆಧಾರದ ಮೇಲೆ ಕಂದಾಯವನ್ನು ಕೊಡಲು ಜವಾಬ್ದಾರನಾಗಿರುವ ವ್ಯಕ್ತಿಗಳೆಂದು ಸೆಟಲ್‌ಮೆಂಟ್ ದಾಖಲೆಗಳಲ್ಲಿ ಹೆಸರಿಸಲಾದ ವ್ಯಕ್ತಿಗಳನ್ನು ಕಂದಾಯ ವಹಿಗಳಲ್ಲಿ "ಖಾತೇದಾರರು" ಎಂದು ನಮೂದಿಸಿರಲಾಗುತ್ತದೆ. ಭೂ ಕಂದಾಯವನ್ನು ಸರಕಾರಕ್ಕೆ ಕಾಲಕಾಲಕ್ಕೆ ಸಲ್ಲಿಸಬೇಕಾದ ಹೊಣೆಗಾರಿಕೆ ಖಾತೇದಾರರುಗಳದ್ದೇ ಆಗಿರುತ್ತದೆ. ಒಂದು ಜಮೀನು ಅಥವಾ ಕ್ಷೇತ್ರದಲ್ಲಿ ಆಸಕ್ತಿ ಅಥವಾ ಹಕ್ಕನ್ನು ಹೊಂದಿರುವ ಬೇರೆ ಯಾರೇ ಇದ್ದರೂ ಅವರು ಒಂದು ಸ್ಪೆಷಲ್ ನೋಟೀಸ್ ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ರಿಜಿಸ್ಟರ್ ಮಾಡಿಸಿಕೊಳ್ಳಬೇಕು. ಇಂತಹವರಿಗೆ ಆ ಜಮೀನಿಗೆ ಸಂಬಂಧಿಸಿದಂತೆ ಆಗಿಂದಾಗ್ಗೆ ಆಗುವ ಎಲ್ಲಾ ವ್ಯವಹಾರ ಅಥವಾ ಬದಲಾವಣೆಗಳನ್ನು ಕುರಿತ ಮಾಹಿತಿಯನ್ನು ಒದಗಿಸಲಾಗುತ್ತದೆ.

ಕಾಲ ಸಂದಂತೆಲ್ಲಾ, ಕಂದಾಯ ಲೆಕ್ಕಪತ್ರಗಳಲ್ಲಿರುವ ನಮೂದುಗಳಿಗೂ ಮತ್ತು ಭೂ ಮಾಲೀಕತ್ವ ಕುರಿತಾದ ನೈಜ ಅಥವಾ ವಾಸ್ತವ ಸಂಗತಿಗಳಿಗೂ ವ್ಯತ್ಯಾಸಗಳು ಹೆಚ್ಚುತ್ತಾ ಬಂದು ಅನೇಕ ಗೊಂದಲಗಳು ಸೃಷ್ಟಿಯಾದವು. ಇಂತಹ ಪರಿಸ್ಥಿತಿಗೆ ಕಾರಣವಾಗಿದ್ದುದು ಮತ್ತು ವಿಶೇಷ ಸೂಚನಾ ವಹಿಯಲ್ಲಿ ರಿಜಿಸ್ಟರಾದವರನ್ನು ಹೊರತುಪಡಿಸಿ ಖಾತೇದಾರರು ಬೇರೆ ಎಲ್ಲರ ಹಕ್ಕುಗಳನ್ನು ಮಾನ್ಯ ಮಾಡಲು ನಿರಾಕರಿಸುತ್ತಿದ್ದುದು ಮತ್ತು ಒಂದು ಕನಿಷ್ಠ ವಿಸ್ತೀರ್ಣಕ್ಕಿಂತ ಕಡಿಮೆ ಇರುವ ಸರ್ವೆ ಸಂಖ್ಯೆಯನ್ನು ವಿಭಜಿಸುವ ವಿರುದ್ಧ ಜಾರಿಯಲ್ಲಿದ್ದ ನಿಷೇಧ ಎನ್ನಲಾಗಿದೆ. ಸ್ವಾಮ್ಯದಲ್ಲಾದ ಪ್ರತಿ ಬದಲಾವಣೆಯೊಡನೆ ಖಾತೆಗಳ ಕಡ್ಡಾಯ ಮಾರ್ಪಾಟು ಮಾಡಲಾಗಲೀ ಮತ್ತು ಕಂದಾಯದ ಲೆಕ್ಕಪತ್ರಗಳಲ್ಲಿ ಹಿಸ್ಸೆದಾರರು, ಭೋಗ್ಯ ಮಾಡಿಕೊಂಡವರು ಮುಂತಾದವರ ಹಕ್ಕುಗಳನ್ನು ಮಾನ್ಯ ಮಾಡಲಾಗಲೀ, ನಿಯಮಗಳು ಅನುವು ಮಾಡಿಕೊಡುತ್ತಿರಲಿಲ್ಲ. ಅನೇಕ ವೇಳೆ ಕಂದಾಯ ವಸೂಲು ಮಾಡುವ ಅಧಿಕಾರಿಗಳಿಗೂ ಕಂದಾಯ ಕೊಡಲು ಹೊಣೆ ಹೊತ್ತಿರುವ ವ್ಯಕ್ತಿ ಯಾರೆಂಬ ಬಗ್ಗೆ ಸರಿಯಾದ ಮಾಹಿತಿಯೇ ಇಲ್ಲದೆ ತೊಂದರೆಯಾಗುತ್ತಿತ್ತು. ಭೂ ಕಂದಾಯ ಬಾಕಿ ಪಾವತಿಗೆ ಸಂಬಂಧಿಸಿದ ಹಾಗೆ ಜಮೀನುಗಳನ್ನು ಹರಾಜು ಮಾಡುವ ಪ್ರಕ್ರಿಯೆ ಪ್ರಾರಂಭಿಸಲು ಅಥವಾ ಹಾಗೆ ಮಾರಾಟ ಮಾಡಿದ

ಜಮೀನುಗಳನ್ನು ಕೊಡುವವರ ಹೆಸರಿಗೆ ದೃಢಪಡಿಸಲು ತೊಂದರೆಗಳೂ ಉಂಟಾಗುತ್ತಿದ್ದವು. ಜಾರಿಯಲ್ಲಿದ್ದ ಕಾನೂನು ಪ್ರಕಾರ ಹಿಡುವಳಿದಾರರ ಹಕ್ಕುಗಳನ್ನು ನಮೂದು ಮಾಡಿಕೊಳ್ಳಲು ಅಥವಾ ರಕ್ಷಿಸಲು ಇದ್ದ ಅನರ್ಹತೆಗಳನ್ನು ಕುರಿತಂತೆ ಪದೇ ಪದೇ ದೂರುಗಳು ಸಲ್ಲಿಸಲ್ಪಡುತ್ತಿದ್ದವು. ಇಂತಹ ಅನೇಕ ಸಮಸ್ಯೆಗಳಿಗೆ ಪರಿಹಾರ ದೊರಕಿಸುವ ಕ್ರಮವಾಗಿ "ರೆಕಾರ್ಡ್ ಆಫ್ ರೈಟ್ಸ್ ರೆಗ್ಯುಲೇಷನ್ (೧೯೨೭ರ X) ಮತ್ತು ಅದರಡಿ ರೂಪಿಸಲಾದ ನಿಯಮಗಳನ್ನು ಸರಕಾರವು ಜಾರಿಯಲ್ಲಿ ತಂದಿತು. ಇದರ ಪ್ರಕಾರ ಪ್ರತಿಯೊಂದು ಹಳ್ಳಿಯಲ್ಲಿಯೂ ಅಲ್ಲಿರುವ ಎಲ್ಲಾ ಜಮೀನುಗಳಿಗೆ ಅನ್ವಯಿಸುವಂತಹ ಒಂದು ರೆಕಾರ್ಡ್ ಆಫ್ ರೈಟ್ಸ್ ಎಂಬ ವಹಿಯನ್ನು ತಯಾರಿಸಬೇಕಿರುತ್ತದೆ. ಈ ರೆಗ್ಯುಲೇಷನ್ ಪ್ರಕಾರ ಯಾವುದೇ ವ್ಯಕ್ತಿಯು ಉತ್ತಾರಾಧಿಕಾರ, ಜೀವಂತವಾಗುಳಿದಿರುವಿಕೆ, ಪಿತ್ರಾರ್ಜಿತ ಭಾಧ್ಯತೆ, ಪಾಲು ಮಾಡಿಕೊಳ್ಳುವುದು, ಖರೀದಿ, ಅಡಮಾನ, ದಾನ ಅಥವಾ ಕಾಣಿಕೆ, ಭೋಗ್ಯ ಅಥವಾ ಇನ್ನಿತರೆ ಯವುದೇ ರೀತಿಯಲ್ಲಿ ಹಿಡುವಳಿದಾರ, ಅನುಭವದಾರ, ಮಾಲೀಕ, ಭೋಗ್ಯದಾರ, ಜಮೀನುದಾರ ಅಥವಾ ಗೇಣಿದಾರ ಅಥವಾ ನಿಯೋಜಿತ ಪ್ರತಿನಿಧಿಯಾಗಿ ಬಾಡಿಗೆ ಅಥವಾ ಉತ್ಪನ್ನದ ಮೇಲೆ ಯಾವುದೇ ಹಕ್ಕನ್ನು ಪಡೆದುಕೊಂಡಲ್ಲಿ ಹಾಗೆ ಹಕ್ಕನ್ನು ಪಡೆದುಕೊಂಡ ಮೂರು ತಿಂಗಳೊಳಗಾಗಿ ಅಂತಹ ಹಕ್ಕಿನ ಬಗ್ಗೆ ಅದಕ್ಕೆಂದೇ ನೇಮಕವಾಗಿರುವ ಅಧಿಕಾರಿಗೆ ಲಿಖಿತ ಮೂಲಕವಾಗಲೀ, ಮೌಖಿಕವಾಗಿಯಾಗಲೀ, ವರದಿ ಮಾಡಬೇಕಾಗಿರುತ್ತದೆ.

ಈ ರೆಗ್ಯುಲೇಷನ್ ಸರ್ವೆ ಸಂಖ್ಯೆಗಳ ಉಪವಿಭಜನೆ ಮಾಡಲು ಮತ್ತು ಅಂತಹ ಉಪ ವಿಭಜನೆ ಪ್ರಕಾರ ಭೂಕಂದಾಯವನ್ನು ಮರುನಿಗದಿ ಮಾಡಲು ಅವಕಾಶ ಕಲ್ಪಿಸಿತು. ಈ ರೀತಿ ಮಾಡಲಾದ ಬದಲಾವಣೆಗಳನ್ನು ಕಂದಾಯ ಲೆಕ್ಕಪತ್ರಗಳಲ್ಲಿ ಸೂಕ್ತ ರೀತಿಯಲ್ಲಿ ನಮೂದು ಮಾಡಲು ಕೂಡ ಅವಕಾಶ ಕಲ್ಪಿಸಲಾಯಿತು. ಇದರಿಂದ ಮೇಲೆ ಹೇಳಿದ ಅನೇಕ ತೊಂದರೆಗಳ ನಿವಾರಣೆಯಾದುದೇ ಅಲ್ಲದೆ ತಕಾವಿ ಸಾಲ ಮತ್ತು ಭೂ ಅಭಿವೃದ್ಧಿ ಸಾಲ ನೀಡಿಕೆ, ಕಂದಾಯ ಮಾಫಿ ಮಾಡುವಿಕೆ, ವಸೂಲಿ ತಡೆ ಹಿಡಿಯುವಿಕೆ, ಪರಿಹಾರ ನೀಡಿಕೆ ಮುಂತಾದ ವಿಷಯಗಳಲ್ಲಿ ಉದ್ಭವಿಸುತ್ತಿದ್ದ ಗೊಂದಲಗಳ ಪರಿಹಾರವೂ ಸಾಧ್ಯವಾಯಿತು. ಸಾಧ್ಯವಾದ ಮಟ್ಟಿಗೆ ಜಮೀನು ಕುರಿತಾದ ವ್ಯಾಜ್ಯಗಳನ್ನು ಕಡಿಮೆ ಮಾಡುವಲ್ಲಿ ಮತ್ತು ಜಮೀನು ವಿವಾದಗಳನ್ನು ಕೋರ್ಟುಗಳು ಬಗೆಹರಿಸುವಲ್ಲಿ ದಾಖಲೆಗಳನ್ನು ಅನಗತ್ಯ ವೆಚ್ಚಗಳಿಲ್ಲದೇ ನೋಂದಾಯಿಸುವಲ್ಲಿ ರೆಕಾರ್ಡ್ ಆಫ್ ರೈಟ್ಸ್ ಕಾಯಿದೆ ರೈತಾಪಿ ಜನರಿಗೆ ವರವಾಗಿ ಪರಿಣಮಿಸಿ, ಸಾಕಷ್ಟು ರಕ್ಷಣೆ ದೊರೆಯಿತು.

## ಜಮಾಬಂದಿ

ಕಂದಾಯ ಇಲಾಖೆಯಲ್ಲಿ ಜಮಾಬಂದಿ ಕಾರ್ಯ ಬಹಳ ಹಿಂದಿನಿಂದಲೂ ನಡೆಯುತ್ತಾ ಬಂದಿದೆ. ಸರಕಾರಕ್ಕೆ ರೈತರಿಂದ ಬರಬೇಕಾಗಿರುವ ವಾರ್ಷಿಕ ಪಾಲನ್ನು ನಿಗದಿಪಡಿಸುವುದೇ ಜಮಾಬಂದಿಯ ಕೆಲಸ. ಸಂಕ್ಷಿಪ್ತವಾಗಿ ಹೇಳುವುದಾದರೆ, ಪ್ರತಿ ವರ್ಷ ಪ್ರತಿಯೊಂದು ಗ್ರಾಮದ ಆಡಳಿತದ ಪರಿಶೀಲನೆ, ಹಿಂದಿನ ಕಂದಾಯ ವರ್ಷದ ಲೆಕ್ಕಪತ್ರಗಳ ಮತ್ತು ಹಕ್ಕು ದಾಖಲೆಗಳ ಪರಿಷ್ಕರಣೆ, ಹಿಂದಿನ ವರ್ಷದ ಗ್ರಾಮಾಡಳಿತದಲ್ಲಿ ಪತ್ತೆಯಾದ ಲೋಪದೋಷಗಳನ್ನು ಸರಿಪಡಿಸುವುದು. ಸರಕಾರದ ವಿವಿಧ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪರಿವೀಕ್ಷಣೆ ಮತ್ತು ರೈತರಿಂದ ಸರಕಾರಕ್ಕೆ ಬರಬೇಕಾದ ಕಂದಾಯ ನಿಶ್ಚಯ, ಮುಂತಾದವು ಜಮಾಬಂದಿ ಕಾರ್ಯಕ್ರಮದಲ್ಲಿ ಸೇರಿರುವ ಕಾರ್ಯಗಳಾಗಿವೆ.

ಜಮಾಬಂದಿಯಲ್ಲಿ ದಿಟ್ಟಂ ಜಮಾಬಂದಿ ಮತ್ತು ಹುಜೂರ್ ಜಮಾಬಂದಿ ಎಂದು ಎರಡು ವಿಧಗಳಿದ್ದು, ಎರಡನ್ನೂ ಪ್ರತಿ ವರ್ಷ ತಪ್ಪದೇ ನಡೆಸಬೇಕಾಗಿರುತ್ತದೆ. ಪ್ರತೀ ವರ್ಷ ಜುಲೈ ೧ರಂದು ಸಾಲ್‌ಜಾಡ್

ಅಥವಾ ವಾರ್ಷಿಕ ಲೆಕ್ಕಗಳನ್ನು ಅಂತಿಮಗೊಳಿಸಿದ ತರುವಾಯ ತಹಸೀಲ್ದಾರನು ಕಂದಾಯ ಬಾಕಿಯನ್ನು ನಿರ್ಧರಿಸುವ ಕಾರ್ಯಕ್ಕೆ "ದಿಟ್ಟಂ" ಅಥವಾ ತಾಲೂಕು ಜಮಾಬಂದಿ ಎನ್ನುವರು. ಇದು ತಾಲೂಕು ಕಛೇರಿಯ ಸಿಬ್ಬಂದಿ ನಡೆಸಬೇಕಾದ ಲೆಕ್ಕಗಳ ಹೊಂದಾಣಿಕೆ ಮತ್ತು ಪ್ರಾಥಮಿಕ ಪರಿಶೀಲನೆಯ ಕೆಲಸ. ವಾರ್ಷಿಕ ತಃಖ್ತೆಗಳನ್ನು ಪರಿಶೀಲಿಸಿ ತಹಸೀಲ್ದಾರನು ದೃಢೀಕರಿಸಬೇಕು. "ದಿಟ್ಟಂ" ಜಮಾಬಂದಿಯನ್ನು ಗ್ರಾಮಲೆಕ್ಕಿಗನ ಕೇಂದ್ರಕಾರ್ಯಸ್ಥಾನದಲ್ಲಿ ನಡೆಸುವ ಪದ್ಧತಿಯಿದೆ. ತಹಸೀಲ್ದಾರನು ವರ್ಷದಲ್ಲಿ ತನ್ನ ತಾಲೂಕಿನ ಎಲ್ಲಾ ಗ್ರಾಮಗಳಿಗೂ ಭೇಟಿ ಕೊಟ್ಟಿರಬೇಕು.

"ದಿಟ್ಟಂ" ಜಮಾಬಂದಿ ನಡೆಸುವಾಗ ತಹಸೀಲ್ದಾರನು ನಡೆಸಬೇಕಾದ ಕಾರ್ಯಗಳಲ್ಲಿ ಮುಖ್ಯವಾದವುಗಳನ್ನು ಹೀಗೆ ಪಟ್ಟಿ ಮಾಡಬಹುದು:

೧) ತಹಸೀಲ್ದಾರನು ತನ್ನ ತಾಲೂಕಿನ ಒಟ್ಟು ಹಳ್ಳಿಗಳಲ್ಲಿ ಶೇ. ೮೦ ಹಳ್ಳಿಗಳ ಲೆಕ್ಕಪತ್ರಗಳ ತಪಾಸಣೆಯನ್ನಾದರೂ ತಾನೇ ನಡೆಸಬೇಕು. ನಂತರ ಚಾಲ್ತಿ ಬೇಡಿಕೆ ಮತ್ತು ಅಂದಿನವರೆಗೆ ಬಾಕಿ ಉಳಿದಿರುವ ಹಿಂದಿನ ಸಾಲುಗಳ ಬೇಡಿಕೆ ಕುರಿತಾದ ಲೆಕ್ಕಪತ್ರಗಳನ್ನು ಎಚ್ಚರಿಕೆಯಿಂದ ತಯಾರಿಸಿ ಹುಜೂರು ಜಮಾಬಂದಿ ನಡೆಸುವ ಅಧಿಕಾರಿಯ ಅಂತಿಮ ಒಪ್ಪಿಗೆಗಾಗಿ ಹಾಜರುಪಡಿಸಬೇಕು.

೨) ಪಹಣಿಯನ್ನು ಕೂಲಂಕಷವಾಗಿ ಪ್ರಮಾಣಿಸಿ ನೋಡಬೇಕು. ಅದನ್ನು ಕ್ರಮಬದ್ಧವಾಗಿ ಮತ್ತು ಸರಿಯಾಗಿ ಕ್ಲುಪ್ತ ಸಮಯದಲ್ಲಿ ಗ್ರಾಮಲೆಕ್ಕಿಗನು ತಯಾರಿಸಿರುವನೆಂಬುದನ್ನು ಸ್ಥಳೀಯ ವಿಚಾರಣೆಗಳ ಮೂಲಕ ಖಚಿತಪಡಿಸಿಕೊಳ್ಳಬೇಕು.

೩) ಸಾಮಾನ್ಯವಾಗಿ "ತಕರಾರು ಫೈಸಲ್ ತಃಖ್ತೆ"ಯಲ್ಲಿ ಬರುವ ವಿಷಯಗಳೆಂದರೆ ಸರಕಾರಿ ಜಮೀನುಗಳು ಮತ್ತು ನೀರಿನ ಅನಧಿಕಾರದ ಉಪಯೋಗ. ಇದೇ ರೀತಿ, ದರಕಾಸ್ತಿನಡಿ ಮಾಡಲಾದ ಎಲ್ಲಾ ಷರತ್ತುಗಳಿಗೊಳಪಟ್ಟಿರುವ ಭೂ ಮಂಜೂರಾತಿ ಪ್ರಕರಣಗಳನ್ನು ತಕರಾರು ತಃಖ್ತೆಯಲ್ಲಿ ನಮೂದಿಸಿ ಜಮಾಬಂದಿ ಅಧಿಕಾರಿಯ ಮುಂದೆ ಮಂಡಿಸಲಾಗುವುದು. ಭೂಮಿ ನೀಡುವಾಗ ಹಾಕಲಾಗಿರುವ ಯಾವುದಾದರೂ ಷರತ್ತುಗಳನ್ನು ಉಲ್ಲಂಘಿಸಲಾಗಿದೆಯೇ ಎಂಬುದನ್ನು ಅವರು ಪರಿಶೀಲಿಸುವರು. ಸರಕಾರಿ ಜಮೀನುಗಳನ್ನು ಅನಧಿಕೃತವಾಗಿ ವಶದಲ್ಲಿಟ್ಟುಕೊಂಡಿರುವ ವ್ಯಕ್ತಿಗಳ ಮೇಲೆ ವಿಧಿಸಲಾಗಿರುವ ದಂಡದ ವಿವರಗಳನ್ನು ತಕರಾರು ತಃಖ್ತೆಯಲ್ಲಿ ಗ್ರಾಮಲೆಕ್ಕಿಗನು ನಮೂದಿಸಿರಬೇಕು. ಬಾಕಿ ಇರುವ ಇಂತಹ ಪ್ರಕರಣಗಳ ಬಗ್ಗೆ ಜಮಾಬಂದಿ ಸಮಯದಲ್ಲಿ ಸೂಕ್ತ ಕ್ರಮ ತೆಗೆದುಕೊಂಡು ಸರಕಾರಕ್ಕೆ ಬರಬೇಕಾದ ಆದಾಯ ಸೋರಿ ಹೋಗದಂತೆ ಎಚ್ಚರಿಕೆ ವಹಿಸಬೇಕು.

೪) ಕಳೆದ ವರ್ಷದ ವಾರ್ಷಿಕ ಲೆಕ್ಕಗಳ ತ:ಖ್ತೆಯ ಮೇಲೆ ಆಧರಿಸಿ ತಯಾರಿಸಲಾಗುವ ಕಮ್ಮಿ–ಜಾಸ್ತಿ ತಃಖ್ತೆಯಲ್ಲಿ ನಮೂದಾದ ಪ್ರಕರಣಗಳ ಮೇಲೆ ಜಮಾಬಂದಿ ಕಾಲದಲ್ಲಿ ಸೂಕ್ತ ಆದೇಶಗಳನ್ನು ನೀಡಬೇಕು. ಜಮಾಬಂದಿ ಅಧಿಕಾರಿಯ ಆದೇಶದ ಪ್ರಕಾರ ಕಂದಾಯವನ್ನು ಹೆಚ್ಚು ಅಥವಾ ಕಮ್ಮಿ ಮಾಡುವ ಮೂಲಕ ಭೂಕಂದಾಯದಲ್ಲಿ ತಪ್ಪು ಬೇಡಿಕೆ ಅಥವಾ ಬೇರಾವುದೇ ಕಾರಣದಿಂದಾಗಿ ಕಂಡುಬರುವ ಯಾವುದೇ ವ್ಯತ್ಯಾಸವನ್ನು ಜಮಾಬಂದಿ ಕಾಲದಲ್ಲಿ ಸರಿಪಡಿಸಬೇಕು.

೫) ಭೂ ಕಂದಾಯ, ನೀರಿನ ಕರ, ನಿರ್ವಹಣೆ ಕರ, ಅಭಿವೃದ್ಧಿ ಕರ, ಸಾಲಗಳು ಮುಂತಾದ ಕಂದಾಯದ ಎಲ್ಲಾ ಬಾಬುಗಳ ಕುಳವಾರು ಬಾಕಿಪಟ್ಟಿಯನ್ನು ಜುಲೈ ೧ನೇ ತಾರೀಖಿನೊಳಗಾಗಿ ಸಿದ್ಧಪಡಿಸಿಕೊಟ್ಟುಕೊಂಡಿರಬೇಕು. ಇದನ್ನು ಜಮಾಬಂದಿ ಅಧಿಕಾರಿಯು ಪರಿಶೋಧಿಸಬೇಕು.

೬) ಬಾಕಿ ಇರುವ ಹಕ್ಕು ಪರಿವರ್ತನೆ ಮತ್ತು ವ್ಯಾಜ್ಯ ಪ್ರಕರಣಗಳನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮದ ೧೨೮ನೇ ಪರಿಚ್ಛೇದದ ಪ್ರಕಾರ ಇತ್ಯರ್ಥಪಡಿಸಿ ಭೂ ದಾಖಲೆಗಳನ್ನು ಅಂದಿನವರೆಗೆ ಸರಿಪಡಿಸಲು ಜಮಾಬಂದಿ ಅಧಿಕಾರಿಯು ಒತ್ತು ನೀಡಬೇಕು.

೭) ವಾರ್ಷಿಕ ಲೆಕ್ಕಪತ್ರಗಳ ಮರು ಹೊಂದಾಣಿಕೆಯನ್ನು ತಹಸೀಲ್ದಾರನು ಜಮಾಬಂದಿ ಕಾಲದಲ್ಲಿ ಸಂಪೂರ್ಣಗೊಳಿಸಬೇಕು.

೮) ಗ್ರಾಮಲೆಕ್ಕಿಗರು ಮತ್ತು ತಾಲೂಕು ಕಛೇರಿಗಳಲ್ಲಿ ಇಟ್ಟುಕೊಂಡಿರುವ ವಿವಿಧ ಸಾಲಗಳಿಗೆ ಸಂಬಂಧಿಸಿದ ಲೆಡ್ಜರುಗಳನ್ನು ಪರಿಶೋಧಿಸಿ ಮರುಹೊಂದಾಣಿಕೆ ಮಾಡಬೇಕು.

೯) ವಿಲೇವಾರಿಗೆ ಲಭ್ಯವಿರುವ ಜಮೀನುಗಳ ಪಟ್ಟಿಗಳನ್ನು ಪರಿಷ್ಕರಿಸಬೇಕು.

೧೦) ಭೂ ಮಂಜೂರಾತಿ ನಿಯಮಗಳು ಮತ್ತು ಭೂ ಸುಧಾರಣಾ ಅಧಿನಿಯಮದ ಪ್ರಕಾರ ಜಮೀನುಗಳನ್ನು ನಿರ್ದಿಷ್ಟ ಅವಧಿಯವರೆಗೆ ಪರಭಾರೆ ಮಾಡಕೂಡದೆಂಬ ಷರತ್ತಿನ ಉಲ್ಲಂಘನೆಯಾಗಿಲ್ಲವೆಂಬುದನ್ನು ಸ್ಥಳೀಯ ವಿಚಾರಣೆ ಮೂಲಕ ದೃಢೀಕರಿಸಿಕೊಳ್ಳಬೇಕು.

೧೧) ಜನನ–ಮರಣಗಳ ವಹಿಯ ನಿಖರತೆಯನ್ನು ಸ್ಥಳೀಯ ವಿಚಾರಣೆಗಳಿಂದ ಖಚಿತಪಡಿಸಿಕೊಳ್ಳಬೇಕು.

೧೨) ಹಕ್ಕುಪತ್ರಗಳು ಮತ್ತು ಇತರೆ ದಸ್ತಾವೇಜುಗಳ ಪರಿಶೋಧನೆ ಮೂಲಕ ಪಟ್ಟಾಗಳ ಹಸ್ತಾಂತರ ಕುರಿತಾದ ವ್ಯಾಜ್ಯಗಳನ್ನು ಪರಿಹರಿಸಬೇಕು.

ಇವೇ ಅಲ್ಲದೆ, ತಹಸೀಲ್ದಾರನು ಸರಕಾರದಿಂದ ಪ್ರಾರಂಭವಾಗಿರುವ ಸಾಮಾಜಿಕ–ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಗಂಭೀರ ಆಸಕ್ತಿಯನ್ನು ತೋರಿಸಬೇಕು. ದಿಟ್ಟಂ ಜಮಾಬಂದಿಯ ಕಾಲದಲ್ಲಿ ಹಳ್ಳಿಗಳಿಗೆ ಭೇಟಿ ಕೊಟ್ಟಾಗ ಅವನು ಕೆಳಗಿನ ಕಾರ್ಯಗಳನ್ನು ತಪ್ಪದೇ ಗಮನಿಸಬೇಕು.

(೧) ಪರಿಶಿಷ್ಟ ಜಾತಿ ಮತ್ತು ಪಂಗಡದವರು ಹಾಗೂ ಇತರೆ ದುರ್ಬಲ ವರ್ಗದ ಜನರು ವಾಸಿಸುವ ಪ್ರದೇಶಗಳಲ್ಲಿ ಸಾರ್ವಜನಿಕ ಸೌಕರ್ಯಗಳಾದ ಕುಡಿಯುವ ನೀರು, ವಿದ್ಯುತ್ ಸರಬರಾಜು, ರಸ್ತೆಗಳು ಮುಂತಾದವುಗಳನ್ನು ಒದಗಿಸುವಲ್ಲಿ ಆಗಿರುವ ಪ್ರಗತಿ.

(೨) ಗೃಹರಹಿತ ಅಥವಾ ನಿವೇಶನ ರಹಿತ ವ್ಯಕ್ತಿಗಳನ್ನು ಗುರುತಿಸಿ ಅವರಿಗೆ ಮನೆ/ಮನೆ ನಿವೇಶನ ನೀಡಲು ಬೇಕಾದ ಕ್ರಮವನ್ನು ತೆಗೆದುಕೊಳ್ಳುವುದು.

(೩) ಗೃಹರಹಿತರು ಮತ್ತು ನಿವೇಶನ ರಹಿತರಿಗೂ ಗುರ್ತಿಸಲ್ಪಟ್ಟಿರುವ ಪ್ರದೇಶ, ಗಡಿ ಗುರ್ತಿಸುವ ಕಾರ್ಯದ ಪ್ರಗತಿಯನ್ನು ಪರಿಶೀಲಿಸಬೇಕು ಮತ್ತು ಈಗಾಗಲೇ ಗೃಹ ಅಥವಾ ನಿವೇಶನದ ಹಂಚಿಕೆಯಾಗಿರುವವರಿಗೆ ಅವುಗಳ ಸ್ವಾಧೀನತೆ ನೀಡಲು ಕ್ರಮ ತೆಗೆದುಕೊಳ್ಳಬೇಕು.

(೪) ಕೃಷಿ ಮಜೂರಿ ಅಧಿನಿಯಮದಲ್ಲಿ ಗೊತ್ತುಪಡಿಸಿರುವಷ್ಟು ಮಜೂರಿಯನ್ನು ಕೃಷಿಕಾರ್ಮಿಕರಿಗೆ ನೀಡಲಾಗುತ್ತಿದೆಯೇ ಇಲ್ಲವೇ ಎಂಬುದನ್ನು ಸ್ಥಳೀಯ ವಿಚಾರಣೆ ಮೂಲಕ ತಹಸೀಲ್ದಾರನು ಖಾತರಿಪಡಿಸಿಕೊಳ್ಳಬೇಕು.

(೫) ಕರ್ನಾಟಕ ಋಣ ಪರಿಹಾರ ಅಧಿನಿಯಮ ೧೯೮೦ರ ಅಡಿಯಲ್ಲಿ ಸಾಧಿಸಲಾದ ಪ್ರಗತಿಯ ಪರಿಶೀಲನೆ, ಜೀತದಾಳು ಪದ್ಧತಿಯ (ರದ್ದತಿ) ಅಧಿನಿಯಮ, ೧೯೭೬ವನ್ನು ಜಾರಿಗೆ ತರುವಲ್ಲಿ ಉಂಟಾಗಿರುವ ಪ್ರಗತಿಯ ಪರಿಶೀಲನೆ ಮತ್ತು ವಾರ್ಷಿಕ ಕಾರ್ಮಿಕ ಒಪ್ಪಂದದ ಸೋಗಿನಲ್ಲಿ

ಜೀತದಾಳು ಪದ್ಧತಿಯು ಮರುಹುಟ್ಟು ಪಡೆದಿದೆಯೇ ಎಂಬುದನ್ನು ಸ್ಥಳೀಯ ವಿಚಾರಣೆಗಳ ಮೂಲಕ ತಿಳಿದುಕೊಳ್ಳಲು ಯತ್ನಿಸಬೇಕು.

(೬) ಭೂ ಸುಧಾರಣೆ ಅಧಿನಿಯಮದ ಪ್ರಕಾರ ಗೇಣಿದಾರರು, ಕೃಷಿಕಾರ್ಮಿಕರು ಮತ್ತು ಕುಶಲಕರ್ಮಿಗಳಿಗೆ ನಿವೇಶನಗಳ ಮೇಲೆ ಮಾಲೀಕತ್ವದ ಹಕ್ಕು ನೀಡಿಕೆಯಲ್ಲಿ ಆಗಿರುವ ಪ್ರಗತಿಯನ್ನು ತಹಸೀಲ್ದಾರನು ಪರಿಶೀಲಿಸಬೇಕು.

(೭) ಗ್ರಾಮದಲ್ಲಿ ಅಗತ್ಯ ವಸ್ತುಗಳ ಹಂಚಿಕೆಗಾಗಿ ಮಾಡಲಾಗಿರುವ ಏರ್ಪಾಟುಗಳನ್ನು ಪರಿಶೀಲಿಸಬೇಕು.

ಹುಜೂರು ಜಮಾಬಂದಿಯನ್ನು ದಿಟ್ಟಂ ಜಮಾಬಂದಿ ಕಾರ್ಯ ಮುಗಿದ ನಂತರ ಸಾಮಾನ್ಯವಾಗಿ ಅಕ್ಟೋಬರ್–ಡಿಸೆಂಬರ್ ಮಾಹೆ ಒಳಗೆ ಸಂಬಂಧಿಸಿದ ಜಿಲ್ಲಾಧಿಕಾರಿ ಅಥವಾ ಅವರಿಂದ ನಿರ್ದೇಶಿತರಾದ ಉಪವಿಭಾಗಾಧಿಕಾರಿ ಅಥವಾ ತತ್ಸಮಾನ ಅಧಿಕಾರವುಳ್ಳ ಇತರೆ ಅಧಿಕಾರಿ ನಡೆಸಬಹುದು. ಇದನ್ನು ಹೋಬಳಿ ಮಟ್ಟದಲ್ಲಿ ನಡೆಸಲಾಗುತ್ತದೆ. ಜಿಲ್ಲಾಧಿಕಾರಿಯು ಪ್ರತಿ ಉಪವಿಭಾಗದ ಕನಿಷ್ಟ ಒಂದು ತಾಲೂಕಿನ ಹುಜೂರು ಜಮಾಬಂದಿಯನ್ನಾದರೂ ಸ್ವತಃ ನಡೆಸಬೇಕು. ಈ ಜಮಾಬಂದಿಯು ಆಡಳಿತದ ಪ್ರಾಥಮಿಕ ಘಟಕವಾದ ಗ್ರಾಮ ಮತ್ತು ತಾಲೂಕುಮಟ್ಟದಲ್ಲಿ ಪ್ರತಿ ವರ್ಷ ಎಲ್ಲಾ ಭೂ ಮಾಲೀಕರು ಮತ್ತು ರೈತರಿಂದ ಸರ್ಕಾರಕ್ಕೆ ಸಲ್ಲಬೇಕಾದ ಮೊಬಲಗನ್ನು ಅಂತಿಮವಾಗಿ ನಿರ್ಧರಿಸುವ ಸಮಯವಾಗಿರುತ್ತದೆ. ಇದರಿಂದಾಗಿ 'ಕಿಸ್ತು' (ವಸೂಲಿಯು) ಜನವರಿ ತಿಂಗಳಿನಿಂದ, ಅಂದರೆ ಬೆಳೆ ಕಟಾವಾಗುವ ಅಥವಾ ಫಸಲು ಸಾಮಾನ್ಯವಾಗಿ ಕೈ ಸೇರುವ ಸಮಯದಲ್ಲಿ ಶುರುವಾಗುತ್ತದೆ. ಗೊತ್ತುಪಡಿಸಲಾದ ಕಂದಾಯದ ಮೊತ್ತವನ್ನು ಸಂಬಂಧಿಸಿದ ಎಲ್ಲಾ ಬಾಕಿದಾರರಿಗೂ ಸಾಕಷ್ಟು ಮುಂಚಿತವಾಗಿ ತಿಳಿಸಿದರೆ ವಸೂಲಿ ಕಾರ್ಯವು ಸುಗಮವಾಗಿ ನೆರವೇರುತ್ತದೆ. ಹೀಗಾಗಿ, ಜಮಾಬಂದಿ ಕಾರ್ಯವನ್ನು ಪೂರ್ವ ನಿರ್ಧಾರಿತ ವೇಳೆಗೆ ಸರಿಯಾಗಿ ನಡೆಸಬೇಕು. ಎಲ್ಲಾ ರೀತಿಯ ವಹಿಗಳು ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ದಿಟ್ಟಂ ಜಮಾಬಂದಿಗಿಂತ ಸಾಕಷ್ಟು ಮುಂಚಿತವಾಗಿ ಗ್ರಾಮಲೆಕ್ಕಿಗನು ಬರೆದು ಸಿದ್ಧಪಡಿಸಿಟ್ಟುಕೊಂಡಿರಬೇಕಾದ್ದು ಮುಖ್ಯ.

ಜಮಾಬಂದಿ ಅಧಿಕಾರಿಗಳು ಪರಿಶೀಲನೆ ಹಾಗೂ ವಿಚಾರಣೆ ಕಾರ್ಯಗಳನ್ನು ಅಲ್ಲಿ ಹಾಜರಿರುವ ಗ್ರಾಮಸ್ಥರ ಸಮಕ್ಷಮ ಒಂದೊಂದಾಗಿ ವಿಲೇವಾರಿ ಮಾಡಬೇಕು. ಸಂಬಂಧಿಸಿದ ಎಲ್ಲಾ ರೈತರ ಸಭೆಯೊಂದನ್ನು ಕರೆದು ಅವರುಗಳ ದೂರುಗಳು ಮತ್ತು ಅಹವಾಲುಗಳನ್ನು ಕೇಳುವುದರ ಜೊತೆಗೆ ಎಲ್ಲಾ ತೆರನಾಗಿರುವ ಗ್ರಾಮದ ಲೆಕ್ಕಪತ್ರಗಳ ಪರಿಶೋಧನೆ ಕಾರ್ಯವನ್ನು ಮಾಡಬೇಕು. ಹಿಂದಿನ ಸಾಲಿನ ಕಂದಾಯ ವರ್ಷದಲ್ಲಿ ವಸೂಲಾದ ಮತ್ತು ಮಾಫಿ ಮಾಡಲಾದ ಮೊಬಲಗುಗಳನ್ನು ತಾಲೂಕು ಕಛೇರಿಯ ಲೆಡ್ಜರು (ಖಾತೆ/ಖಿರ್ದಿ ಪುಸ್ತಕ) ಗಳೊಂದಿಗೆ ತಾಳೆ ನೋಡಿದಾಗ ಬರುವ ಮೊಬಗಲು ವಸೂಲಾಗದೇ ಉಳಿದಿರುವ 'ವಾರ್ಷಿಕ ಬಾಕಿ' ಆಗಿರುತ್ತದೆ. ಜುಲೈ ೧ ರಂದು ಬಾಕಿ ಇರುವ ಮೊಬಲಗಿಗೆ ಕುಳವಾರು ಬಾಕಿಪಟ್ಟಿಗಳನ್ನು ತಯಾರಿಸಿ (ಉಪಕರ ಅಥವಾ ಸೆಸ್ಸುಗಳೊಂದಿಗೆ) ತಹಸೀಲ್ದಾರನ ಸಹಿ ಮಾಡಿಸಿ ಖಿರ್ದಿ ಪುಸ್ತಕದ ಪ್ರಥಮ ಪುಟದಲ್ಲಿ ಅಂಟಿಸಬೇಕು. ನಂತರ, ಗ್ರಾಮ ನಮೂನೆ ೭ರ ಪ್ರಕಾರ ಘೋಷ್ವಾರೆ ಹಾಕಬೇಕು. ಇದನ್ನು ಜಮಾಬಂದಿ ಕಮ್ಮಿ–ಜಾಸ್ತಿ ಘೋಷ್ವಾರೆ ಎಂದು ಕರೆಯುತ್ತಾರೆ. ಇದರಲ್ಲಿ ಇಡೀ ವರ್ಷದ ಎಲ್ಲ ವಿವರಗಳೂ ಇರುತ್ತದೆ. ಜಮಾಬಂದಿ ಅಧಿಕಾರಿಗಳು ನೀಡಿದ ವರದಿಯ ಪ್ರತಿಯನ್ನು ೧೫ ದಿನಗಳೊಳಗಾಗಿ ಸರಕಾರಕ್ಕೆ ಮಾಹಿತಿಗೆಂದು ಕಳುಹಿಸಬೇಕು.

ಸರಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ:೭೬:ಟಿಆರ್‌ಆರ್:೭೮, ದಿನಾಂಕ ೧ನೇ ಜನವರಿ ೧೯೭೯ರ ಪ್ರಕಾರ ಜಮಾಬಂದಿಯ ಕಾಲದಲ್ಲಿ ಹುಜೂರು ಜಮಾಬಂದಿಗಾಗಿ ತೆರಳಿರುವ ಅಧಿಕಾರಿಗಳು ನಿರ್ವಹಿಸಬೇಕಾಗಿರುವ ಪ್ರಧಾನ ಕರ್ತವ್ಯಗಳು ಇಂತಿವೆ.

೧) ಪ್ರತಿ ತಾಲೂಕಿನ ಗ್ರಾಮಗಳ ಒಟ್ಟು ಸಂಖ್ಯೆಯಲ್ಲಿ ಕನಿಷ್ಟ ಶೇ. ೨೦ ಗ್ರಾಮಗಳ ಲೆಕ್ಕಪತ್ರಗಳನ್ನಾದರೂ ಹುಜೂರು ಜಮಾಬಂದಿ ನಡೆಸುವ ಅಧಿಕಾರಿಯು ಪರೀಕ್ಷೆ ಮಾಡಬೇಕು. ಹಳ್ಳಿಗಳ ಆಯ್ಕೆಯನ್ನು ಇಷ್ಟಪ್ರಕಾರ ಮಾಡಬಹುದಾಗಿದ್ದರೂ, ತಾಲೂಕು ಕೇಂದ್ರ ಕಛೇರಿಯಿಂದ ಹೆಚ್ಚು ದೂರದಲ್ಲಿರುವ ಅಥವಾ ಸಾಮಾನ್ಯವಾಗಿ ಅಧಿಕಾರಿಗಳು ಭೇಟಿ ನೀಡದೇ ಇರುವಂತಹ ಕೆಲವು ಹಳ್ಳಿಗಳನ್ನಾದರೂ ಪರೀಕ್ಷೆಗೆ ಒಳಪಡಿಸಬೇಕು. ಆ ಅವಧಿಯಲ್ಲಿ ಬೆಳಕಿಗೆ ಬರುವ ಲೋಪದೋಷಗಳನ್ನು ಅಲ್ಲಿಯೇ ಮತ್ತು ಆಗಲೇ ತಿದ್ದಿ ಸರಿಪಡಿಸಬೇಕು. ಬರಲಿರುವ ಸಾಲಿನ ಕಂದಾಯ ಬೇಡಿಕೆ ನಿಗದಿಯನ್ನು ಅಂತಿಮಗೊಳಿಸಬೇಕು. ತಹಸೀಲ್ದಾರನು ಗಮನಿಸಿರುವ ಎಲ್ಲಾ ಅಂಶಗಳನ್ನೂ ಹುಜೂರು ಜಮಾಬಂದಿ ನಡೆಸುವ ಅಧಿಕಾರಿಯು ಮೇಲ್ವಿಚಾರಣೆ ಮಾಡಬೇಕು.

೨) ಭೂ ಸುಧಾರಣಾ ಅಧಿನಿಯಮದ ಉಪಬಂಧಗಳಿಗೆ ವಿರುದ್ಧವಾಗಿ ಹಿಂದಿನ ವರ್ಷಗಳಲ್ಲಿ ಗೇಣಿದಾರರಿಗೆ ಯಾವುದಾದರೂ ಗುತ್ತಿಗೆಗಳನ್ನು ನೀಡಲಾಗಿದೆಯೇ ಎಂಬುದನ್ನು ಪರಿಶೀಲನೆ ಮಾಡಬೇಕು.

೩) ಭೂ ಮಂಜೂರಾತಿ ಮತ್ತು ಭೂ ಸುಧಾರಣಾ ಅಧಿನಿಯಮದಡಿ ಬಿಟ್ಟುಕೊಟ್ಟ ಹೆಚ್ಚುವರಿ ಜಮೀನುಗಳ ಮಂಜೂರಾತಿ ಪ್ರಕರಣಗಳನ್ನು ಪರಿಶೀಲಿಸಬೇಕು. ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಮೀಸಲಾಗಿರುವ ಶೇ. ೫೦ರಷ್ಟು ಪ್ರದೇಶವನ್ನು ಅಂತಹ ವರ್ಗಗಳ ಅರ್ಜಿದಾರರಿಗೆ ನೀಡಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಇತ್ಯರ್ಥಕ್ಕಾಗಿ ಕಾದಿರುವ ಭೂ ಮಂಜೂರಾತಿ ಪ್ರಕರಣಗಳು ಮತ್ತು ಅದಕ್ಕೆ ಕಾರಣಗಳು ಏನೆಂಬುದನ್ನು ನಿರ್ದಿಷ್ಟವಾಗಿ ಪರೀಕ್ಷಿಸಬೇಕು.

೪) ಯಾವುದಾದರೂ ನಿರ್ದಿಷ್ಟ ಉದ್ದೇಶಕ್ಕಾಗಿ ಕಾಯ್ದಿರಿಸಿದ ಸರಕಾರಿ ಜಮೀನುಗಳ ಒತ್ತುವರಿ ಆಗಿದೆಯೇ ಎಂಬುದನ್ನು ಗಮನಿಸಿ, ಅಗತ್ಯವೆನಿಸಿದರೆ ಕ್ಷೇತ್ರ ತಪಾಸಣೆ ಮೂಲಕ ಪರಿಶೀಲಿಸಿರಬೇಕು. ನೀರಾವರಿ ಸೌಲಭ್ಯವಿರುವ ಒಣ ಜಮೀನುಗಳ ಅಕ್ಕಪಕ್ಕದಲ್ಲಿರುವ ಜಮೀನುಗಳಿಗೆ ಅಕ್ರಮವಾಗಿ ಸರಕಾರಿ ಜಲಮೂಲದಿಂದ ನೀರನ್ನು ಕಳ್ಳತನದಿಂದ ಹಾಯಿಸಿಕೊಳ್ಳಲಾಗುತ್ತಿದೆಯೇ ಎಂಬುದನ್ನು ಪರೀಕ್ಷಿಸಬೇಕು. ತಪಾಸಣೆ ಸಮಯದಲ್ಲಿ ಪತ್ತೆಯಾಗುವ ಒತ್ತುವರಿ ಮತ್ತು ಸರಕಾರಿ ಜಮೀನುಗಳ ಅಕ್ರಮ ಅನುಭೋಗ ಪ್ರಕರಣಗಳ ವಿಲೇವಾರಿ ಮಾಡಬೇಕು. ಯಾವುದೇ ಹಕ್ಕುಗಳಿಲ್ಲದಿದ್ದರೂ ಸರ್ಕಾರಿ ಜಮೀನುಗಳ ಒತ್ತುವರಿ ಮಾಡಿರುವವರನ್ನು ಒಕ್ಕಲೆಬ್ಬಿಸಬೇಕು.

೫) ಹಿಡುವಳಿಗಳನ್ನು ತುಂಡಿಸಿರುವ ಪ್ರಕರಣಗಳನ್ನು ಸ್ಥಳೀಯ ವಿಚಾರಣೆ ಮೂಲಕ ಪತ್ತೆ ಹಚ್ಚಬೇಕು.

೬) ವಿವಿಧ ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಂಡಿರುವ ಜಮೀನುಗಳ ಸಂಬಂಧ ಆಕಾರಬಂದ್‌ಗಳನ್ನು ಸೂಕ್ತವಾಗಿ ತಿದ್ದುಪಡಿ ಮಾಡುವವರೆಗೆ ಕಂದಾಯವನ್ನು ಇಳಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

೭) ಅಭಿವೃದ್ಧಿ ತೆರಿಗೆ, ನೀರಿನ ದರ ಮತ್ತು ನಿರ್ವಹಣೆ ಕರಗಳ ಬೇಡಿಕೆ ಪಟ್ಟಿಯನ್ನು ಪರಿಶೋಧಿಸಿ ಅವುಗಳನ್ನು ಪಾವತಿಸಲಾಗುತ್ತಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

೮) ಸರಕಾರಕ್ಕೆ ಬರಬೇಕಾಗಿರುವ ಬಾಕಿಗಳ ವಸೂಲಿಗಳನ್ನು ವಿವಿಧ ಶೀರ್ಷಿಕೆಗಳಡಿ ಪರಿಶೋಧಿಸಿ ಮಾಹೆಯಾನ ಗುರಿಗಳನ್ನು ಹಾಗೂ ಸಂಗ್ರಹ ಗುರಿಗಳನ್ನು ನಿಗದಿಪಡಿಸಬೇಕು.

೯) ಇತ್ಯರ್ಥವಾಗದೇ ಉಳಿದಿರುವ ಪೋಡಿ ದಾಖಲೆಗಳ ಪಟ್ಟಿಯನ್ನು ಪರಶೀಲಿಸಬೇಕು.

೧೦) ಗಡಿ ರೇಖೆಗಳು, ಕೆರೆಗಳು ಮತ್ತು ಕೆರೆ ದಂಡೆಗಳನ್ನು ತಪಾಸಣೆ ಮಾಡಿ ಅವುಗಳ ನಿರ್ವಹಣೆ ಸಂಬಂಧ ರೂಪಿಸಿರುವ ನಿಯಮಗಳ ಪಾಲನೆಯಾಗುತ್ತಿರುವುದನ್ನು ಮನದಟ್ಟು ಮಾಡಿಕೊಳ್ಳಬೇಕು.

೧೧) ಕೃಷಿ ಇಲಾಖೆಯು 'ಸಿ' ಮತ್ತು 'ಡಿ' ಎಂದು ವರ್ಗೀಕರಿಸಿರುವ ಎಲ್ಲಾ ಜಮೀನುಗಳನ್ನು ಪರಿಶೋಧಿಸಿ ಅರಣ್ಯ ಬೆಳೆಸುವ ಸಂಬಂಧ ಅರಣ್ಯ ಇಲಾಖೆಯು ತೆಗೆದುಕೊಂಡಿರುವ ಕ್ರಮಗಳನ್ನು ಖಚಿತಪಡಿಸಿಕೊಳ್ಳಬೇಕು. ಈ ಬಗ್ಗೆ ಅರಣ್ಯ ಇಲಾಖೆಯು ಕಾರ್ಯಪ್ರವೃತ್ತವಾಗದಿರುವುದು ಕಂಡುಬಂದರೆ ಕೂಡಲೇ ವರದಿಯೊಂದನ್ನು ಸರ್ಕಾರಕ್ಕೆ ಕಳುಹಿಸಿ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಬೇಕು.

ಇಷ್ಟೇ ಅಲ್ಲದೇ, ಅಭಿವೃದ್ಧಿ ಆಡಳಿತ ಕುರಿತಂತೆ ಸಹ ಹುಜೂರು ಜಮಾಬಂದಿ ನಡೆಸುವ ಅಧಿಕಾರಿ ವಿಶೇಷ ಗಮನವನ್ನು ನೀಡಬೇಕು. ಅವುಗಳೆಂದರೆ:

(೧) ಕ್ಷೇತ್ರಾಭಿವೃದ್ಧಿ ಅಧಿಕಾರಿ (ಬಿ.ಡಿ.ಓ.) ಮಂಜೂರು ಮಾಡಿರುವ (ಈಗ ವಿವಿಧ ಬ್ಯಾಂಕುಗಳ ಮೂಲಕ) ವಿವಿಧ ರೀತಿಯ ಸಾಲಗಳ ವಿವರಗಳನ್ನು ತಹಸೀಲ್ದಾರನಿಗೆ ವಸೂಲು ಮಾಡಲು ಅಗತ್ಯ ದಾಖಲಾತಿಗಳೊಡನೆ ಕಳುಹಿಸಲಾಗಿದೆಯೇ ಎಂಬುದನ್ನು ಪರಿಶೀಲಿಸಬೇಕು.

(೨) ಕೃಷಿ ಉತ್ಪನ್ನ ಕಾರ್ಯಕ್ರಮ, ಸುಧಾರಿತ ಬೀಜಗಳು, ರಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳ ಮಾರಾಟ ಮತ್ತು ಕೃಷಿ ಹಿಡುವಳಿ ಮತ್ತು ಸಾಲ ನೀಡಿಕೆಗಾಗಿ ಮಾಡಿರುವ ಏರ್ಪಾಟುಗಳ ಪರಿಶೀಲನೆ.

(೩) ನೀರಾವರಿ ಬಾವಿಗಳ ನಿರ್ಮಾಣದಲ್ಲಿ ಸಾಧಿಸಿರುವ ಪ್ರಗತಿ ಮತ್ತು ಪಂಪುಸೆಟ್ಟುಗಳ ವಿದ್ಯುದೀಕರಣ ಕಾರ್ಯಕ್ರಮದ ಪರಿಶೀಲನೆ.

(೪) ಕುಟುಂಬ ಕಲ್ಯಾಣ ಯೋಜನೆಯ ವಿಮರ್ಶೆ.

ಇವೇ ಅಲ್ಲದೆ, ಹುಜೂರು ಜಮಾಬಂದಿ ಅಧಿಕಾರಿಯು ಸರಕಾರದಿಂದ ಪ್ರಾರಂಭವಾಗಿರುವ ಸಾಮಾಜಿಕ–ಆರ್ಥಿಕ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಆಸಕ್ತಿ ವಹಿಸಬೇಕು. ಮುಖ್ಯವಾಗಿ ಹರಿಜನ–ಗಿರಿಜನರು ಮತ್ತು ದುರ್ಬಲ ವರ್ಗದ ಜನರ ಉದ್ಧಾರಕ್ಕಾಗಿ ಪ್ರಾರಂಭಿಸಿರುವ ಯೋಜನೆಗಳ ಲಾಭ ಅವರುಗಳಿಗೆ ತಲುಪುತ್ತಿರುವ ಬಗ್ಗೆ ಪರಿಶೀಲಿಸಬೇಕು.

ಅಭಿವೃದ್ಧಿ ಇಲಾಖೆಗಳಿಂದ ಗ್ರಾಮ ಪಂಚಾಯತಿ ಮಟ್ಟದಲ್ಲಿಯೂ ಜಮಾಬಂದಿ ಕಾರ್ಯಕ್ರಮ ನಡೆಸಿ ಕೆಳಕಂಡವುಗಳನ್ನು ಸಾರ್ವಜನಿಕವಾಗಿಯೂ ಪರಿಶೀಲಿಸುವರು.

(೧) ಒದಗಿಸಲಾಗಿರುವ ನಾಗರೀಕ ಸೌಲಭ್ಯಗಳ ಪರಿಶೀಲನೆ.
(೨) ಮನೆ ನಿವೇಶನಗಳ ನೀಡಿಕೆ ಪರಿಸ್ಥಿತಿಯ ಪರಿಶೀಲನೆ
(೩) ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿಪರಿಶೀಲನೆ.
(೪) ರಾಷ್ಟ್ರೀಯ ಗ್ರಾಮೀಣ ನೀರು ಸರಬರಾಜು ಯೋಜನೆ ಅನ್ವಯ ಕುಡಿಯುವ ನೀರಿನ ಲಭ್ಯತೆಯ ಪರಿಶೀಲನೆ.
(೫) ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ಪರಿಶೀಲನೆ.

## ಭೂ ಕಂದಾಯದ ವಸೂಲಿ

ಭೂ ಕಂದಾಯವು ಹಿಂದೆ ರಾಜ್ಯಾದಾಯದ ಪ್ರಮುಖ ಮೂಲವಾಗಿತ್ತು. ಆದರೆ, ಇತ್ತೀಚಿನ ವರ್ಷಗಳಲ್ಲಿ ಭೂ ಕಂದಾಯವನ್ನು ಅತಿ ಕನಿಷ್ಟ ಮಟ್ಟಕ್ಕೆ ಇಳಿಸಲಾಗಿದೆ. ಕರ್ನಾಟಕ ಭೂ ಕಂದಾಯ ಅಧಿನಿಯಮ, ೧೯೬೪ರ ಅಧ್ಯಾಯ ೨ ರ ಕಲಂ ೬ (ಬಿ) ಅನ್ವಯ ಭೂ ಕಂದಾಯ ಎಂದರೆ, ಯಾವುದೇ ವ್ಯಕ್ತಿಯು ಭೂಮಿಯನ್ನು ಹೊಂದಿರುವುದಕ್ಕಾಗಿ ನಗದು ಅಥವಾ ಫಸಲಿನ ರೂಪದಲ್ಲಿ ರಾಜ್ಯ ಸರಕಾರಕ್ಕೆ ವರ್ಷಂಪ್ರತಿ ನೀಡಬೇಕಾದ ಮೊತ್ತ. ಇದು ಆ ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಉಪಬಂಧಗಳ ಮೇರೆಗೆ ಪಾವತಿ ಮಾಡಬಹುದಾದ ಯಾವುದೇ ತೆರಿಗೆ, ಉಪಕರ ಅಥವಾ ಇತರೆ ಸುಂಕಗಳನ್ನು ಒಳಗೊಂಡಿರುತ್ತದೆ. ಕರ್ನಾಟಕ ಭೂ ಕಂದಾಯ, ೧೯೮೮ರ ಅಧ್ಯಾಯ ೧ ಕಲಂ ೪೫ರ ಅನ್ವಯ ಕೃಷಿ ಅಥವಾ ಇನ್ನಾವುದೇ ಉದ್ದೇಶಕ್ಕೆ ಬಳಕೆಯಾಗುತ್ತಿರುವ ಎಲ್ಲಾ ಜಮೀನುಗಳಿಗೆ ಎಲ್ಲೇ ಇದ್ದರೂ ನಿಯಮಾನುಸಾರ ರಾಜ್ಯ ಸರಕಾರಕ್ಕೆ ಭೂ ಕಂದಾಯವನ್ನು ಸಂದಾಯ ಮಾಡಲೇಬೇಕು. ಸರಕಾರದ ಆದೇಶ ಸಂಖ್ಯೆ: ಆರ್‌ಡಿ:೩೪೨:ಟಿಆರ್‌ಎಂ:೨೦೦೦, ದಿನಾಂಕ ೩೦ನೇ ಜನವರಿ ೨೦೦೧ರಲ್ಲಿ ೧೦ ಎಕರೆಗಳಿಗಿಂತ ಕಡಿಮೆ ಇರುವ ಒಣ ಭೂಮಿಗೆ ಭೂ ಕಂದಾಯವನ್ನು ಮನ್ನಾ ಮಾಡಲಾಗಿದೆ. ಕೇವಲ ನಿರ್ವಹಣಾ ಕರವಾಗಿ ಒಂದು ರೂಪಾಯಿಯನ್ನು ಮಾತ್ರ ತೆಗೆದುಕೊಳ್ಳಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಗಾಗಿ ಭೂ ಹಿಡುವಳಿದಾರರಿಂದ ವಸೂಲಿ ಮಾಡುವ ಭೂ ಕಂದಾಯದಲ್ಲಿ ಶೇಕಡವಾರು ವಿವಿಧ ಅಭಿವೃದ್ಧಿ ಕರಗಳನ್ನು ವಸೂಲಿ ಮಾಡಲಾಗಿರುತ್ತದೆ. ಪ್ರಸ್ತುತ ಈ ದರಗಳು ಕೆಳಗೆ ತೋರಿಸಿರುವಂತೆ ಇವೆ:

೧. ವಿದ್ಯಾಕರ – ಭೂ ಕಂದಾಯದ ಶೇ.೧೦
೨. ಆರೋಗ್ಯ ಕರ – ಭೂ ಕಂದಾಯದ ಶೇ. ೧೫
೩. ಸ್ಥಳೀಯ ಕರ – ಭೂ ಕಂದಾಯದ ಶೇ. ೫೦

ಕರ್ನಾಟಕ ಭೂ ಕಂದಾಯ ಅಧಿನಿಯಮದ ಕಲಂ ೮೦ರ ಅನ್ವಯ ವಿಶಿಷ್ಟವಾಗಿ ಮಾಫಿ ಮಾಡಲ್ಪಟ್ಟ ಹೊರತು ಯಾವತ್ತೂ ಭೂಮಿಯು, ಅದು ವ್ಯವಸಾಯದ ಅಥವಾ ಇತರೆ ಉದ್ದೇಶಗಳ ಸಲುವಾಗಿ ವಿನಿಯೋಗಿಸಲ್ಪಟ್ಟಿರಲಿ ಅಥವಾ ಇಲ್ಲದೇ ಇರಲಿ, ರಾಜ್ಯ ಸರಕಾರಕ್ಕೆ ಭೂ ಕಂದಾಯವನ್ನು ಸಂದಾಯಿಸಲೇಬೇಕು. ಕೊರಕಲು ಭೂಮಿಯ ಸಂಬಂಧದಲ್ಲಿ ಕಂದಾಯವನ್ನು ಕಡಿಮೆ ಮಾಡುವ ಅವಕಾಶವನ್ನು ಕಲಂ ೮೨ರಲ್ಲಿ ಒದಗಿಸಲಾಗಿದೆ. ಭೂ ಕಂದಾಯ ಅಧಿನಿಯಮದ ಕಲಂ ೮೭ರನ್ವಯ ಭೂ ಕಂದಾಯವು ಭೂಮಿಯ ಮೇಲಣ ಪ್ರಮುಖ ಹೊಣೆಗಾರಿಕೆಯಾಗಿದೆ. ಭೂ ಕಂದಾಯವನ್ನು ಪಾವತಿ ಮಾಡಲು ವಿಫಲವಾದಲ್ಲಿ ತಹಶೀಲ್ದಾರರು ಸೂಕ್ತ ಆದೇಶ ಹೊರಡಿಸುವ ಮೂಲಕ ಆ ಭೂಮಿಯನ್ನು ಮಾತ್ರವೇ ಅಲ್ಲದೆ ಅದರ ಮೇಲಿರುವ ಎಲ್ಲಾ ಗಿಡ–ಮರಗಳು, ಬೆಳೆಗಳು ಕಟ್ಟಡಗಳು ಮತ್ತು ಅದಕ್ಕೆ ಲಗತ್ತಾಗಿರುವ ಇತರೆ ಯಾವುದೇ ವಸ್ತುಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದಾಗಿದೆ.

ಭೂ ಕಂದಾಯವನ್ನು ಸಕಾಲಕ್ಕೆ ನೀಡಬೇಕಾದ ಜವಾಬ್ದಾರಿಯು ಮುಖ್ಯವಾಗಿ ಖಾತೆದಾರ ಅಥವಾ ನೊಂದಾಯಿತ ಅನುಭವದಾರನ ಮೇಲಿರುತ್ತದೆ. ಅವನು ಕಂದಾಯ ಪಾವತಿಸಲು ವಿಫಲನಾದಲ್ಲಿ ಆ ಮೊತ್ತವನ್ನು ಜಂಟಿ ಅನುಭವದಾರನಿಂದ ಅಥವಾ ಆ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಇತರೆ ವ್ಯಕ್ತಿಗಳಿಂದ ವಸೂಲು ಮಾಡಿಕೊಳ್ಳಲಾಗುವುದು. ಖಾತೆದಾರನು ಒಂದು ಹಿಡುವಳಿಯ ಸಂಪೂರ್ಣ ಕಂದಾಯ ನೀಡಲು ಬದ್ಧನು. ಬೇಡಿಕೆ ಮತ್ತು ಇನ್ನಿತರ ಸೂಚನಾ ಪತ್ರಗಳನ್ನು ಮೊದಲು ಅವನಿಗೇ ನೀಡಬೇಕು. ಅವನು ಕಂದಾಯ ನೀಡಲು ತಪ್ಪಿದಲ್ಲಿ, ಜಂಟಿ ಅನುಭವದಾರ ಅಥವಾ ಇತರೆ ವ್ಯಕ್ತಿಗಳಿಂದ ಕಂದಾಯದ ಮೊತ್ತವನ್ನು ಸ್ವೀಕರಿಸಬಹುದು. ಕಂದಾಯ ಬಾಕಿಗಾಗಿ ಸುಸ್ತಿದಾರನ ಜಮೀನನ್ನು ಹರಾಜು ಮಾಡುವ ನಿರ್ಧಾರಕ್ಕೆ ಅಧಿಕಾರಿಗಳು ಬಂದಾಗ ಕೂಡ ಮೊದಲು ನೋಂದಾಯಿತ ಅನುಭವದಾರನಿಗೇ ಸೂಚನಾ ಪತ್ರವನ್ನು ನೀಡಬೇಕು.

ಹಳೆಯ ಮೈಸೂರು ಸಂಸ್ಥಾನದಲ್ಲಿ ಫೆಬ್ರವರಿ, ಮಾರ್ಚ್, ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಕಂತುಗಳಲ್ಲಿ ಭೂ ಕಂದಾಯ ಸಂದಾಯ ಮಾಡುವ ಅವಕಾಶವನ್ನು ಒದಗಿಸಲಾಗಿದ್ದಿತು. ಪ್ರಸ್ತುತ ಕಂದಾಯ ಮತ್ತು ಇತರೆ ಬಾಕಿಗಳ ವಸೂಲಿ ಜನವರಿ ೧ ರಿಂದ ಪ್ರಾರಂಭವಾಗಿ ಜೂನ್ ೩೦ಕ್ಕೆ ಮುಗಿಯುತ್ತದೆ. ಈ ಅವಧಿಯನ್ನು 'ಕಿಸ್ತು' ಅಥವಾ ವಸೂಲಿ ಸಮಯ ಎನ್ನುವರು. ಈ ಅವಧಿಯಲ್ಲಿ ಸಾಮಾನ್ಯವಾಗಿ ಬೆಳೆಕೊಯ್ಲು ಆಗಿದ್ದು ದವಸ ಧಾನ್ಯ ಮಾರಿ ರೈತರು ಕೈಯಲ್ಲಿ ಹಣ ಇಟ್ಟುಕೊಂಡಿರುವುದರಿಂದ ಇದು ಕಂದಾಯ ಬಾಕಿ ವಸೂಲಿಗೆ ಸೂಕ್ತ ಕಾಲವಾಗಿರುತ್ತದೆ. ಭೂ ಕಂದಾಯವನ್ನು ನಾಲ್ಕು ಸಮನಾದ ಕಂತುಗಳಲ್ಲಿ ಪ್ರತಿವರ್ಷ ಜನವರಿ, ಫೆಬ್ರವರಿ, ಮಾರ್ಚ್ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಆಯಾ ತಿಂಗಳಿನ ೨೦ನೇ ದಿನಾಂಕದೊಳಗೆ ಪಾವತಿ ಮಾಡಬೇಕು. ಐದು ರೂಪಾಯಿಗಳಿಗಿಂತ ಕಡಿಮೆ ಮೊತ್ತದ ಕಂದಾಯವನ್ನು ಒಂದೇ ಕಂತಿನಲ್ಲಿ ಜನವರಿ ೨೦ನೇ ದಿನಾಂಕಕ್ಕೆ ಮುನ್ನವೇ ಪಾವತಿ ಮಾಡಬೇಕು. ಕಂದಾಯ ವರ್ಷದ ಮೊದಲನೇ ದಿನ ಅಂದರೆ ಜುಲೈ ೧ನೇ ತೇದಿ ಮತ್ತು ಮೇಲೆ ಹೇಳಿರುವ ಕಂದಾಯ ಸಲ್ಲಿಕೆ ದಿನಾಂಕಗಳ ಮಧ್ಯದ ಅವಧಿಯನ್ನು ರಿಯಾಯಿತಿ ಅವಧಿ ಎಂದು ಪರಿಗಣಿಸಲಾಗುತ್ತದೆ. ಇಡೀ ವಾರ್ಷಿಕ ಕಂದಾಯವನ್ನು ಒಂದೇ ಕಂತಿನಲ್ಲಿ ಪಾವತಿಸುವವರು ಜನವರಿ ೩೦ನೇ ದಿನಾಂಕದೊಳಗೆ ಪಾವತಿ ಮಾಡಬಹುದು.

ಗ್ರಾಮಲೆಕ್ಕಿಗನು ಪ್ರಕರಣದ (೧)ನೇ ಒಳ ಪ್ರಕರಣದ ಮೇರೆಗೆ ೩೭ನೇ ನಮೂನೆಯಲ್ಲಿ ಒಂದು ಬೇಡಿಕೆ ಸೂಚನೆಯನ್ನು (ಡಿಮ್ಯಾಂಡ್ ನೋಟೀಸ್) ಖಾತೆದಾರನಿಗೆ ಜಾರಿ ಮಾಡಬೇಕು. ಇದನ್ನು ಕಳುಹಿಸಿದ ಏಳು ದಿನಗಳೊಳಗೆ ಆ ವ್ಯಕ್ತಿಯು ಪಾವತಿ ಮಾಡದೇ ಇದ್ದಲ್ಲಿ ಗ್ರಾಮಲೆಕ್ಕಿಗನು ಸಂಗತಿಯನ್ನು ಕಂದಾಯ ನಿರೀಕ್ಷಕರ ಮೂಲಕ ತಹಶೀಲ್ದಾರ್‌ರ ಗಮನಕ್ಕೆ ತರಬೇಕು. ತಹಶೀಲ್ದಾರ್‌ನು ಸುಸ್ತಿದಾರನ ಚರಾಸ್ತಿಯನ್ನು ಜಪ್ತಿ ಮಾಡಬೇಕೆಂದು ನಿರ್ದೇಶಿಸಿದಲ್ಲಿ ಗ್ರಾಮಲೆಕ್ಕಿಗನು ಹಾಗೆ ಮಾಡಬಹುದು. ಸಂಬಂಧಿಸಿದ ಕಂದಾಯ ನಿರೀಕ್ಷಕನು ಆ ಚರಾಸ್ತಿಯನ್ನು ಸಾಕಷ್ಟು ಪ್ರಚಾರ ನೀಡಿದ ನಂತರ ನಿಯಮಾನುಸಾರ ಸುಸ್ತಿದಾರನ ಜಪ್ತಿ ಮಾಡಿದ ಸ್ವತ್ತನ್ನು ನಿರ್ದಿಷ್ಟಪಡಿಸಿದ ದಿನಾಂಕದಂದು ಮಾರಾಟ ಪ್ರಕ್ರಿಯೆಯನ್ನು ನಡೆಸಬಹುದು. ಗ್ರಾಮಲೆಕ್ಕಿಗನು ವಸೂಲು ಮಾಡಿದ ತಿಂಗಳ ೨೫ನೇ ದಿನಾಂಕದೊಳಗೆ ಸರ್ಕಾರಕ್ಕೆ ಜಮೆ ಮಾಡಬೇಕು.

## ಮಾಫಿಗಳು

ಸಾಮಾನ್ಯವಾಗಿ ಕಂದಾಯ ಮಾಫಿಗಳನ್ನು ಅಪವಾದಾತ್ಮಕ ಎಂದೇ ಹಿಂದೆ ಭಾವಿಸಲಾಗುತ್ತಿತ್ತು ಮತ್ತು ಸರ್ವೆ ದರಗಳನ್ನು ನಿಗದಿ ಮಾಡಿದ ನಂತರ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ಮಾಫಿಗಳನ್ನು ನೀಡುತ್ತಿರಲಿಲ್ಲ ಎನ್ನಬಹುದು. ಕೆರೆ ಮುಂತಾದ ನೀರಾವರಿ ಮೂಲಗಳು ಬಿರುಕು ಬಿಡುವುದರಿಂದ ಅದರ ಕೆಳಗಣ ತರಿ

ಜಮೀನುಗಳಿಗೆ ನೀರು ದೊರಕದೇ ಹೋದಾಗ ಕಂದಾಯ ಮಾಫಿಗಳನ್ನು ಮಾಡಲು ಮಾರ್ಚ್ ೧೮೯೦ರಲ್ಲಿ ನಿಯಮಗಳನ್ನು ರೂಪಿಸಲಾಯಿತು. ತರಿ ಕಂದಾಯದ ಬದಲು, ಅಂತಹ ಸಂದರ್ಭಗಳಲ್ಲಿ ಮೊದಲನೇ ವರ್ಷ ತರಿ ಕಂದಾಯದ ಅರ್ಧದಷ್ಟು ಮೊತ್ತವನ್ನು ಮಾತ್ರ ವಸೂಲ್ಮಾಡಬೇಕೆಂದು ಆದೇಶ ನೀಡಲಾಯಿತು; ಮತ್ತು ಒಡೆದುಹೋಗಿರುವ ಕೆರೆ ಅಥವಾ ಜಲಾಶಯವನ್ನು ದುರಸ್ತು ಅಥವಾ ಪುನರ್ನಿರ್ಮಾಣ ಮಾಡಿ ಮೊದಲಿನಂತೆಯೇ ನೀರು ಸರಬರಾಜನ್ನು ಪುನರಾರಂಭಿಸುವವರೆಗೆ ಅರ್ಧದಷ್ಟು ಕಂದಾಯವನ್ನು ಮಾಫಿ (remission) ಎಂದು ಪರಿಗಣಿಸಬೇಕೆಂದು ಸೂಚನೆ ನೀಡಲಾಯಿತು. ಕೆರೆ ಮುಂತಾದ ಜಲಾಶಯಗಳು ಒಡೆದು ಹೋಗಿದ್ದಾಗ್ಯೂ ಅವುಗಳ ಸನ್ನಿವೇಶದಿಂದಾಗಿ ತರಿ ಬೆಳೆಗಳನ್ನು ಬೆಳೆಯಲು ಸಾಧ್ಯವಿರುವಂತಹ ಸಂದರ್ಭಗಳಲ್ಲಿ ಯಾವುದೇ ರೀತಿಯ ಕಂದಾಯ ಮಾಫಿಗಳನ್ನು ಜಲಮೂಲವೊಂದನ್ನು ತೊರೆದುಬಿಟ್ಟಂತಹ ಪ್ರಕರಣಗಳಲ್ಲಿ, ಸತತ ಮೂರು ವರ್ಷಗಳವರೆಗೆ ಯಾವುದೇ ತರಿ ಬೆಳೆಯನ್ನು ಬಿತ್ತಲು ಸಾಧ್ಯವಾಗದೇ ಹೋದಾಗ ತಾತ್ಕಾಲಿಕ ಆಕರಣೆಯಾಗಿ ಅದೇ ಊರಿನಲ್ಲಿ ಚಾಲ್ತಿಯಲ್ಲಿರುವ ಗರಿಷ್ಠ ಖುಷ್ಕಿ ದರಗಳನ್ನು 'ಬೆಂಗಾರು ಕಂದಾಯ' ಎಂದು ವಿಧಿಸಬಹುದೆಂದು ೧೯೩೫ರಲ್ಲಿ ಆದೇಶಿಸಲಾಯಿತು. ಬಾಗಾಯತು ಜಮೀನುಗಳ ವಿಷಯವಾಗಿ, ೧೯೧೩ರಲ್ಲಿಯೇ ಮಾಡಲಾಗಿದ್ದ ನಿರ್ಧಾರವೆಂದರೆ, ವೈಯಕ್ತಿಕ ಸಂಕಷ್ಟಗಳು ಉಂಟಾದ ಸಂದರ್ಭಗಳಲ್ಲಿ ಸರಕಾರದ ಗಮನಕ್ಕೆ ತಂದು ಅರ್ಹತಾನುಸಾರ ಮಾಫಿಗಳನ್ನು ನೀಡಲು ಕ್ರಮ ತೆಗೆದುಕೊಳ್ಳಬಹುದೆಂದು ತೀರ್ಮಾನಿಸಲಾಗಿತ್ತು.

ಕೆರೆ ನೀರಾವರಿಯಾಗುವ ಜಮೀನುಗಳ ಸಂಬಂಧವಾಗಿ ೧೯೩೨ನೇ ಇಸವಿಯಲ್ಲಿ ಈ ಕೆಳಕಾಣಿಸಿರುವ ಕಂದಾಯ ಮಾಫಿ ನಿಯಮಗಳನ್ನು ಜಾರಿಗೆ ಕೊಡಲಾಯಿತು (ಆರ್ ೨೭೮೯-೧೯-ಆರ್‌ಎಂ ೯೯-೩೧-೪, ದಿನಾಂಕ ೨೪-೧೧-೧೯೩೨):

(೧) ಸಾಕಷ್ಟು ಮಳೆಯಾಗದ ಕಾರಣದಿಂದ ಯಾವುದಾದರೊಂದು ಪ್ರದೇಶದಲ್ಲಿ ಅಧಿಕ ಸಂಖ್ಯೆಯ ಕೆರೆಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾದಾಗ ಮತ್ತು ತಳಪರಗಿ(ತಲಪುರಿಕೆ)ಗಳು, ಯಾವುದಾದರೂ ಇದ್ದಲ್ಲಿ, ಒಣಗಿ ಹೋದಾಗ ಜಿಲ್ಲಾಧಿಕಾರಿಯು ಸರಕಾರಕ್ಕೆ ಆ ಪ್ರದೇಶದ ಸ್ಥಿತಿಗತಿಯ ಬಗ್ಗೆ ಬೆಳೆಯ ಆಣೆವಾರಿಯನ್ನು ಸರ್ಕಾರದ ಸುತ್ತೋಲೆ ಆರ್.ಡಿ.೫೭ ಟಿ.ಆರ್. ಎಂ ೯೩ ದಿನಾಂಕ ೧೭-೦೮-೧೯೫೮ರ ಕೆಲ ಮಾರ್ಗಸೂಚಿಯಂತೆ ಮಾಡಿಸಿ, ಕಂದಾಯ ಆಯುಕ್ತರ ಮುಖಾಂತರ ಸಮಗ್ರ ವರದಿಯೊಂದನ್ನು ಜನವರಿ ಮಾಹೆ ಅಂತ್ಯಗೊಳ್ಳುವ ಮೊದಲು ಕಳುಹಿಸಬೇಕು.

(೨) ಸ್ವಲ್ಪವಾದರೂ ಪರಿಹಾರವನ್ನು ಸಂಕಷ್ಟಕ್ಕೊಳಗಾಗಿರುವ ಪ್ರದೇಶದ ರೈತರಿಗೆ ಒದಗಿಸುವ ಅಗತ್ಯವಿದೆ ಎಂದು ಸರಕಾರಕ್ಕೆ ಮನವರಿಕೆಯಾದಲ್ಲಿ, ಅಂತಹ ಕೆರೆಗಳು ಮತ್ತು ತಳಪರಗಿಗಳ ಕೆಳಗಿನ ತರಿ ಮತ್ತು ಬಾಗಾಯತು ಕಂದಾಯ ದರಗಳಲ್ಲಿ ೧/೨ದಷ್ಟು ಮೀರದಂತೆ ಮಾಫಿ ಮಾಡಲು ಒಪ್ಪಿ ಪ್ರಕಟಣೆಯೊಂದನ್ನು ಹೊರಡಿಸಬೇಕು.

(೩) ಇಂತಹ ಪ್ರಕಟಣೆಯನ್ನು ಸರಕಾರವು ಬಾಧೆಗೊಳಗಾದ ಪ್ರದೇಶದ ಸಂಬಂಧ ಹೊರಡಿಸಿದ ನಂತರ ಹಿಡುವಳಿದಾರರಿಗೆ ವ್ಯಕ್ತಿಗತವಾಗಿ ಪರಿಹಾರ ನೀಡುವ ಅಧಿಕಾರ ಜಿಲ್ಲಾಧಿಕಾರಿಯದು.

(೪) ಒಂದು ಪ್ರದೇಶವು ಬಾಧೆಗೊಳಗಾಗಿದೆ ಎನ್ನಲಾದ ನಿರ್ದಿಷ್ಟ ಕೆರೆ ಅಥವಾ ತಳಪರಿಗೆ ಕೆಳಗೆ ಇರುವ ಅರ್ಧಕ್ಕೂ ಹೆಚ್ಚು ತರಿ ಮತ್ತು ಬಾಗಾಯತು ಜಮೀನುಗಳು, ಅಡಿಕೆ ಮತ್ತು ತೆಂಗಿನಂತಹ ಸದಾಕಾಲವೂ ಇರುವ ಬೆಳೆ ಜಮೀನುಗಳನ್ನು ಹೊರತುಪಡಿಸಿ, ಸಾಗುವಳಿಯಾಗದೇ ಉಳಿದಿದ್ದರೆ,

ಅಥವಾ ಸಾಗುವಳಿಯಾಗಿದ್ದರೂ, ಕೈಗೆ ಬಂದಿರುವ ಫಸಲು ನಾಲ್ಕು ಆಣೆಗಳಿಗಿಂತಲೂ (ಅಂದರೆ ಶೇ. ೨೫) ಕಡಿಮೆ ಇದೆಯೋ ಅಂತಹ ಸಂದರ್ಭಗಳಲ್ಲಿ ಮಾತ್ರ ಕಂದಾಯ ಮಾಫಿ ಮಾಡಲಾಗುವುದು. ಸತತವಾಗಿ ಅಡಿಕೆ ಮತ್ತು ತೆಂಗು ಮುಂತಾದ ಬೆಳೆಗಳನ್ನು ಹೊರತುಪಡಿಸಿ, ಎಂಟು ಆಣೆಗಳಿಗಿಂತಲೂ ಕಡಿಮೆ ಇಲ್ಲದ ಒಣ ಬೆಳೆಗಳನ್ನು ಬೆಳೆದಿರುವ, ತರಿ ಅಥವಾ ಬಾಗಾಯತು ಜಮೀನುಗಳ ಪ್ರಕರಣಗಳಲ್ಲಿ ಜಾರಿಯಲ್ಲಿರುವ ಒಣ ಆಕರಣೆ ಮತ್ತು ಸಂಬಂಧಿಸಿದ ಜಮೀನಿನ ತರಿ ದರ ಇವೆರಡರ ಸರಾಸರಿ ಮೊತ್ತದಷ್ಟು ಕಂದಾಯ ಮಾಫಿಯನ್ನು ಅನುಮತಿಸಬಹುದು.

(೫) ಈ ಮಾಫಿ ನಿಯಮಗಳು ಕೆರೆಗಳು ಮತ್ತು ತಳಪರಗಿಗಳ ಕೆಳಗಿನ ಜಮೀನುಗಳಿಗೆ ಮಾತ್ರ ಅನ್ವಯವಾಗುತ್ತಿದ್ದವಲ್ಲದೇ ನದಿ ಮತ್ತು ಇನ್ನಿತರ ಕಾಲುವೆಗಳಿಂದ ನೀರು ಸರಬರಾಜಾಗುತ್ತಿದ್ದ ಜಮೀನುಗಳಿಗೆ ಸದಾ ಅಡಿಕೆ, ತೆಂಗು ಮುಂತಾದ ಬೆಳೆಗಳನ್ನು ಬೆಳೆಯುವ ಬಾಗಾಯತು ಜಮೀನುಗಳು ಕೆರೆ ಮತ್ತು ತಲಪುರಗಿಗಳ ಕೆಳಗೆ ಇದ್ದರೂ ಕಂದಾಯ ಮಾಫಿ ನಿಯಮಗಳನ್ನು ಅವುಗಳಿಗೆ ಅನ್ವಯಿಸುವಂತಿಲ್ಲ.

ಸರಕಾರವು ೧೯೩೨ರಲ್ಲಿಯೇ ಹೊರಡಿಸಿದ ಮತ್ತೊಂದು ಪ್ರಕಟಣೆಯಂತೆ, ಕಂದಾಯ ಮಾಫಿ ಸೌಲಭ್ಯವನ್ನು ಕಾಲುವೆಗಳು ಮತ್ತು ಹಳ್ಳಗಳಿಂದ ನೀರನ್ನು ಪಡೆದುಕೊಳ್ಳುವ ಜಮೀನುಗಳಿಗೂ ವಿಸ್ತರಿಸಲಾಯಿತು. ಸಂಬಂಧಿಸಿದ ಜಮೀನಿನ ಮೇಲೆ ವಿಧಿಸಲಾಗಿರುವ ತರಿ ಆಕರಣೆ ಮತ್ತು ಆ ಪ್ರದೇಶದಲ್ಲಿ ಜಾರಿಯಲ್ಲಿರುವ ಗರಿಷ್ಠ ಖುಷ್ಕಿ ಆಕರಣೆ ಇವೆರಡರ ನಡುವಿನ ವ್ಯತ್ಯಾಸಕ್ಕಿಂತ ಯಾವುದೇ ಕಾರಣಕ್ಕೂ ಮಾಫಿ ಮಾಡಲಾದ ಕಂದಾಯದ ಮೊತ್ತವು ಜಾಸ್ತಿ ಇರಬಾರದು ಎಂದು ಆದೇಶಿಸಲಾಯಿತು.

ಕರ್ನಾಟಕ ಏಕೀಕರಣಕ್ಕಿಂತ ಸ್ವಲ್ಪ ಮೊದಲು ಹಳೇ ಮೈಸೂರು ರಾಜ್ಯದಲ್ಲಿ ಜಾರಿಯಲ್ಲಿದ್ದ ಕಂದಾಯ ಮಾಫಿ ನಿಯಮಗಳ ಪ್ರಕಾರ, ಬೆಳೆಗಳು ವಿಫಲವಾದಾಗ ನೀರಾವರಿ ಜಮೀನುಗಳ ಮೇಲೆ ಅರ್ಧದಷ್ಟು ತರಿ ಕಂದಾಯವನ್ನು ಮಾಫಿ ಮಾಡಬಹುದಿತ್ತು. ಒಣ ಜಮೀನುಗಳ ಸಂಬಂಧ ಶೇ. ೨೫ ರಷ್ಟು ಕಂದಾಯವನ್ನು ತಡೆಹಿಡಿಯಬಹುದಿತ್ತು.

ಪ್ರಸ್ತುತ ಜಾರಿಯಲ್ಲಿರುವ ಮಾಫಿ ನಿಯಮಗಳು ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಪ್ರಕಾರ ೧೯೬೬ರಲ್ಲಿ ಗೊತ್ತುಪಡಿಸಲಾಗಿದೆ. ಯಾವುದೇ ಒಂದು ವರ್ಷದಲ್ಲಿ ಮಳೆಯ ಪ್ರಮಾಣವು ಪೂರ್ತಾ ಅಥವಾ ಭಾಗಶ: ಕಡಿಮೆಯಾಗಿರುವ ಸಂಗತಿ ಜಿಲ್ಲಾಧಿಕಾರಿಯ ಗಮನಕ್ಕೆ ಬಂದಾಗ, ಅವರು ಸಂಬಂಧಿಸಿದ ಪ್ರದೇಶದಲ್ಲಿ ಬೆಳೆ ಕಟಾವು ಪ್ರಾತ್ಯಕ್ಷಿಕೆ ನಡೆಸುವ ಮೂಲಕ ಎಕರೆವಾರು ಸರಾಸರಿ ಇಳುವರಿಯನ್ನು ಕಂಡುಕೊಳ್ಳುತ್ತಾರೆ. ಇದೇ ರೀತಿ, ತಹಸೀಲ್ದಾರರು ತನ್ನ ಆಡಳಿತ ವ್ಯಾಪ್ತಿಯಲ್ಲಿ ಬಾಧೆಗೊಳಗಾಗಿರುವ ಕನಿಷ್ಠ ಶೇಕಡ ಐದರಷ್ಟು ಹಳ್ಳಿಗಳಲ್ಲಿಯಾದರೂ ಅಂಥದೇ ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತಾರೆ. ಇದೇ ರೀತಿ, ಕಂದಾಯ ನಿರೀಕ್ಷಕನು ಸಹ ಆತನ ಕಾರ್ಯವ್ಯಾಪ್ತಿಯಲ್ಲಿರುವ ಪ್ರದೇಶದಲ್ಲಿ ಕನಿಷ್ಠ ಶೇಕಡಾ ೨೦ ಹಳ್ಳಿಗಳಲ್ಲಿಯಾದರೂ ಬೆಳೆ ಕಟಾವು ಪ್ರಾತ್ಯಕ್ಷಿಕೆಗಳನ್ನು ನಡೆಸುತ್ತಾರೆ. ಸರಾಸರಿ ಫಸಲು ಶೇಕಡಾ ೩೫ಕ್ಕಿಂತ ಕಡಿಮೆ ಇದ್ದಲ್ಲಿ ಭೂ ಕಂದಾಯ ಸಂಗ್ರಹವನ್ನು ಪೂರ್ತಾ ತಡೆಹಿಡಿಯಲಾಗುವುದು. ಸರಾಸರಿ ಫಸಲು ಶೇಕಡಾ ೩೫ ರಿಂದ ೫೦ರವರೆಗಿದ್ದರೆ ಅರ್ಧದಷ್ಟು ಭೂ ಕಂದಾಯ ಸಂಗ್ರಹವನ್ನು ತಡೆಹಿಡಿಯಲಾಗುವುದು ಮತ್ತು ಸರಾಸರಿ

ಫಸಲು ಶೇಕಡಾ ೫೦ಕ್ಕಿಂತ ಅಧಿಕವಾಗಿದೆಯೆಂದು ತಿಳಿದುಬಂದಾಗ ಭೂ ಕಂದಾಯ ಸಂಗ್ರಹವನ್ನು ತಡೆಹಿಡಿಯಲಾಗುವುದಿಲ್ಲ. ತಡೆಹಿಡಿಯಲಾದ ಕಂದಾಯವನ್ನು ಮುಂದಿನ ವರ್ಷದ ಕಂದಾಯದ ಜೊತೆಗೆ ಕೆಳಕಾಣಿಸಿರುವಂತೆ ಸಂಗ್ರಹಿಸಲಾಗುವುದು:

೧. ವಸೂಲಿ ವರ್ಷದ ಫಸಲಿನ ಸರಾಸರಿ ಇಳುವರಿ ಶೇಕಡಾ ೭೫ರಷ್ಟಿದ್ದರೆ ಒಂದು ವರ್ಷಕ್ಕೆ ಸಮನಾದ ಕಂದಾಯದ ಮೊತ್ತ; (೨) ಸರಾಸರಿ ಇಳುವರಿಯು ಶೇಕಡಾ ೬೭ಕ್ಕಿಂತ ಕಡಿಮೆ ಇದ್ದರೆ ವಾರ್ಷಿಕ ಕಂದಾಯದ ಶೇಕಡಾ ೬೨ರಷ್ಟು; ಮತ್ತು (೩) ಸರಾಸರಿ ಇಳುವರಿಯು ಶೇಕಡಾ ೬೨ಕ್ಕಿಂತ ಕಡಿಮೆ ಇದ್ದಲ್ಲಿ ಯಾವುದೇ ಕಂದಾಯವನ್ನು ಸಂಗ್ರಹಿಸುವುದಿಲ್ಲ.

**ಕೋಷ್ಟಕ-೯.೪: ಚಾಮರಾಜನಗರ ಜಿಲ್ಲೆಯಲ್ಲಿ ೧೯೯೮-೯೯ ರಿಂದ ೨೦೧೦-೨೦೧೧ರವರೆಗೆ ಭೂ ಕಂದಾಯ ಮತ್ತು ಕರಗಳ ವಸೂಲಿಯಲ್ಲಿ ಸಾಧಿಸಿದ ಪ್ರಗತಿ (ಜುಲೈನಿಂದ ಜೂನ್‌ವರೆಗೆ)**

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ವಸೂಲಾತಿಯ ಶೇಕಡಾವಾರು |
|---|---|---|---|---|---|
| ೧೯೯೮-೯೯ | ಕೊಳ್ಳೇಗಾಲ | ೨೮೮೧೪೨ | ೨೮೨೫೬೬ | ೫೫೭೬ | ೯೮% |
| | ಯಳಂದೂರು | ೧೯೯೯೦೫ | ೧೫೫೧೧೩ | ೪೭೯೨ | ೭೮% |
| | ಚಾಮರಾಜನಗರ | ೧೧೪೯೧೮೨ | ೯೮೬೭೨೧ | ೧೬೨೪೬೧ | ೮೬% |
| | ಗುಂಡ್ಲುಪೇಟೆ | ೨೧೩೧೩೮ | ೨೧೩೧೩೮ | ೦ | ೧೦೦% |
| | **ಒಟ್ಟು** | **೧೮೫೦೩೬೭** | **೧೬೩೭೫೩೮** | **೨೧೨೮೨೯** | **೮೮%** |
| ೧೯೯೯-೨೦೦೦ | ಕೊಳ್ಳೇಗಾಲ | ೨೬೯೩೯೩ | ೨೫೭೪೮೪ | ೧೧೯೦೯ | ೯೬% |
| | ಯಳಂದೂರು | ೧೩೭೮೭೬ | ೧೧೯೩೫೦ | ೧೮೫೨೬ | ೮೭% |
| | ಚಾಮರಾಜನಗರ | ೬೦೪೪೬೩ | ೪೭೮೪೩೦ | ೧೨೬೦೩೩ | ೭೯% |
| | ಗುಂಡ್ಲುಪೇಟೆ | ೩೬೫೪೦೬ | ೩೩೮೭೧೨ | ೨೬೬೯೪ | ೯೩% |
| | **ಒಟ್ಟು** | **೧೩೭೭೧೩೮** | **೧೧೯೩೯೭೬** | **೧೮೩೧೬೨** | **೮೭%** |
| ೨೦೦೦-೦೧ | ಕೊಳ್ಳೇಗಾಲ | ೨೬೪೭೯೧ | ೨೬೪೭೯೧ | ೦ | ೧೦೦% |
| | ಯಳಂದೂರು | ೧೩೨೧೮೧ | ೧೦೭೧೩೨ | ೨೫೦೪೯ | ೮೧% |
| | ಚಾಮರಾಜನಗರ | ೬೯೯೦೭೯ | ೪೭೩೫೬೮ | ೨೨೫೫೧೧ | ೬೮% |
| | ಗುಂಡ್ಲುಪೇಟೆ | ೮೬೦೯೧೫ | ೮೬೦೯೧೫ | ೦ | ೧೦೦% |
| | **ಒಟ್ಟು** | **೧೯೫೬೯೬೬** | **೧೭೦೬೪೦೬** | **೨೫೦೫೬೦** | **೮೭%** |
| ೨೦೦೧-೦೨ | ಕೊಳ್ಳೇಗಾಲ | ೫೯೫೬೬೬ | ೫೯೫೬೬೬ | ೦ | ೧೦೦% |
| | ಯಳಂದೂರು | ೧೪೦೩೩೮ | ೧೪೦೩೩೮ | ೦ | ೧೦೦% |
| | ಚಾಮರಾಜನಗರ | ೧೧೫೬೪೭೯ | ೬೨೬೫೬೯ | ೫೨೯೯೧೦ | ೫೪% |
| | ಗುಂಡ್ಲುಪೇಟೆ | ೬೮೦೧೧೨ | ೬೫೧೪೩೨ | ೨೮೬೮೦ | ೯೬% |
| | **ಒಟ್ಟು** | **೨೫೭೨೫೯೫** | **೨೦೧೪೦೦೫** | **೫೫೮೫೯೦** | **೭೮%** |
| ೨೦೦೨-೦೩ | ಕೊಳ್ಳೇಗಾಲ | ೪೨೦೬೮೧ | ೧೭೦೬೭೪ | ೨೫೦೦೦೭ | ೪೧% |
| | ಯಳಂದೂರು | ೨೪೦೫೫೧ | ೧೧೩೧೦೮ | ೧೨೭೫೪೩ | ೪೭% |
| | ಚಾಮರಾಜನಗರ | ೧೦೭೪೨೪೭ | ೪೨೨೩೯೩ | ೬೫೧೮೫೪ | ೩೯% |
| | ಗುಂಡ್ಲುಪೇಟೆ | ೮೧೬೪೪೪ | ೫೫೬೩೦೧ | ೨೬೦೧೪೩ | ೬೮% |
| | **ಒಟ್ಟು** | **೨೫೫೨೦೨೩** | **೧೨೬೨೪೭೬** | **೧೨೮೯೫೪೭** | **೪೯%** |

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ವಸೂಲಾತಿಯ ಶೇಕಡಾವಾರು |
|---|---|---|---|---|---|
| ೨೦೦೩–೦೪* | ಕೊಳ್ಳೇಗಾಲ | ೫೫೪೨೩೧ | ೩೫೧೮೬೭ | ೨೦೨೩೬೪ | ೬೧% |
| | ಯಳಂದೂರು | ೨೫೦೧೯೧ | ೨೩೫೧೩೨ | ೧೫೦೫೯ | ೯೧% |
| | ಚಾಮರಾಜನಗರ | ೮೭೪೮೬೩ | ೪೨೦೨೬೩ | ೪೫೪೫೯೫ | ೪೧% |
| | ಗುಂಡ್ಲುಪೇಟೆ | ೩೮೬೮೩೨ | ೪೭೬೯೪೧ | ೦ | – |
| | **ಒಟ್ಟು** | **೨೦೬೬೧೧೭** | **೧೪೮೪೨೦೮** | **೬೭೨೦೧೮** | **೭೧%** |
| ೨೦೦೪–೦೫ | ಕೊಳ್ಳೇಗಾಲ | ೬೪೧೪೮೯ | ೫೨೨೫೩೨ | ೧೧೮೯೧೭ | ೮೧% |
| | ಯಳಂದೂರು | ೧೩೦೬೪೪ | ೧೦೯೯೨೩ | ೨೦೭೨೧ | ೮೪% |
| | ಚಾಮರಾಜನಗರ | ೭೦೧೬೩೩ | ೭೦೧೬೩೩ | ೦ | ೧೦೦% |
| | ಗುಂಡ್ಲುಪೇಟೆ | ೩೪೫೪೬೯ | ೩೬೧೭೨೭ | ೦ | ೧೦೫% |
| | **ಒಟ್ಟು** | **೧೮೧೯೧೯೫** | **೧೬೯೫೮೧೫** | **೧೩೯೬೩೮** | **೯೩%** |
| ೨೦೦೫–೦೬ | ಕೊಳ್ಳೇಗಾಲ | ೫೫೪೧೮೯ | ೪೫೪೩೦೫ | ೯೯೮೮೪ | ೮೧% |
| | ಯಳಂದೂರು | ೧೬೩೫೨೨ | ೧೩೩೧೪೪ | ೩೦೩೭೮ | ೮೧% |
| | ಚಾಮರಾಜನಗರ | ೬೮೪೮೩೭ | ೬೮೪೮೩೭ | ೦ | ೧೦೦% |
| | ಗುಂಡ್ಲುಪೇಟೆ | ೩೩೩೦೨೧ | ೩೩೩೦೨೧ | ೦ | ೧೦೦% |
| | **ಒಟ್ಟು** | **೧೭೩೫೫೬೯** | **೧೬೦೫೩೦೭** | **೧೩೦೨೬೨** | **೯೧%** |
| ೨೦೦೬–೦೭ | ಕೊಳ್ಳೇಗಾಲ | ೫೩೮೪೬೪ | ೨೫೩೩೨೨ | ೨೮೫೧೪೨ | ೪೭% |
| | ಯಳಂದೂರು | ೧೪೨೪೧೩ | ೧೨೫೪೩೮ | ೧೬೯೭೫ | ೮೮% |
| | ಚಾಮರಾಜನಗರ | ೧೧೫೩೭೯೬ | ೬೪೦೧೨೧ | ೫೧೩೬೭೫ | ೫೫% |
| | ಗುಂಡ್ಲುಪೇಟೆ | ೨೬೦೧೯೬ | ೨೬೦೧೯೬ | ೦ | ೧೦೦% |
| | **ಒಟ್ಟು** | **೨೦೯೪೮೬೯** | **೧೨೭೯೦೭೭** | **೮೧೫೭೯೨** | **೬೧%** |
| ೨೦೦೭–೦೮ | ಕೊಳ್ಳೇಗಾಲ | ೮೬೭೫೧೨ | ೩೨೭೨೬೯ | ೫೪೦೨೪೩ | ೩೮% |
| | ಯಳಂದೂರು | ೧೩೨೩೦೨ | ೧೧೨೬೨೪ | ೧೯೬೭೮ | ೮೫% |
| | ಚಾಮರಾಜನಗರ | ೬೨೩೭೬೫ | ೫೯೯೫೫೫ | ೨೪೨೧೦ | ೯೬% |
| | ಗುಂಡ್ಲುಪೇಟೆ | ೩೦೪೮೪೪ | ೩೦೪೮೪೪ | ೦ | ೧೦೦% |
| | **ಒಟ್ಟು** | **೧೯೨೮೪೨೩** | **೧೩೪೪೨೯೨** | **೫೮೪೧೩೧** | **೭೦%** |
| ೨೦೦೮–೦೯ | ಕೊಳ್ಳೇಗಾಲ | ೧೨೫೯೭೧೭ | ೫೫೨೬೬೫ | ೧೪೨೮೫೫ | ೭೯% |
| | ಯಳಂದೂರು | ೨೧೦೭೧೬ | ೯೯೨೬೪ | ೦ | ೧೦೦% |
| | ಚಾಮರಾಜನಗರ | ೬೩೯೯೮೭ | ೬೨೦೫೮೪ | ೧೯೪೦೩ | ೯೭% |
| | ಗುಂಡ್ಲುಪೇಟೆ | ೧೧೨೩೯೮೯ | ೩೮೩೮೦೬ | ೦ | ೧೦೦% |
| | **ಒಟ್ಟು** | **೩೨೩೪೪೦೯**** | **೧೬೫೬೩೧೯** | **೧೬೨೨೫೮** | **೯೧%** |
| ೨೦೦೯–೧೦ | ಕೊಳ್ಳೇಗಾಲ | ೧೦೨೫೭೭೯ | ೨೪೪೧೨೮ | ೭೮೧೬೫೧ | ೨೪% |
| | ಯಳಂದೂರು | ೧೫೯೨೩೨ | ೪೪೩೫೨ | ೧೧೪೮೮೦ | ೨೮% |
| | ಚಾಮರಾಜನಗರ | ೫೯೭೨೭೯ | ೩೧೨೮೦೭ | ೨೮೪೪೭೨ | ೫೨% |
| | ಗುಂಡ್ಲುಪೇಟೆ | ೬೫೫೯೩೯ | ೨೩೪೮೭೮ | ೪೨೧೦೬೧ | ೩೬% |
| | **ಒಟ್ಟು** | **೨೪೩೮೨೨೯** | **೮೩೬೧೬೫** | **೧೬೦೨೦೬೪** | **೩೪%** |

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ವಸೂಲಾತಿಯ ಶೇಕಡಾವಾರು |
|---|---|---|---|---|---|
| ೨೦೧೦–೧೧ | ಕೊಳ್ಳೇಗಾಲ | ೫೯೭೨೭೯ | ೩೧೨೮೦೭ | ೨೮೪೪೭೨ | ೫೨.೩೭% |
| | ಯಳಂದೂರು | ೬೫೫೯೩೯ | ೨೩೪೮೭೮ | ೪೨೧೦೬೧ | ೩೫.೮೧% |
| | ಚಾಮರಾಜನಗರ | ೧೦೨೫೭೭೯ | ೨೪೪೧೨೮ | ೭೮೧೬೫೧ | ೨೩.೮% |
| | ಗುಂಡ್ಲುಪೇಟೆ | ೧೫೯೨೩೨ | ೪೪೩೫೨ | ೧೧೪೮೮೦ | ೨೭.೮೫% |
| | **ಒಟ್ಟು** | **೨೪೩೮೨೨೯** | **೮೩೬೧೬೫** | **೧೬೦೨೦೬೪** | **೩೪.೯೫%** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

** ಸರ್ಕಾರದ ಅಧಿಸೂಚನೆ ಸಂಖ್ಯೆ:೨೮೫/ಟಿಆರ್‌ಎಂ:೨೦೦೨, ದಿನಾಂಕ ೦೧–೧೨–೨೦೦೩ರ ಆದೇಶದಂತೆ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿನ ಭೂ ಕಂದಾಯದ ಶೇಕಡಾ ೧೦೦ ರಷ್ಟು ಮತ್ತು ಕೊಳ್ಳೇಗಾಲ ತಾಲೂಕಿನ ಶೇಕಡಾ ೫೦ ರಷ್ಟು ಕಂದಾಯವನ್ನು ಮುನ್ನಾ ಮಾಡಿರುವ ಮೇರೆಗೆ ಬೇಡಿಕೆಯನ್ನು ತಗ್ಗಿಸಿರುತ್ತದೆ ಮತ್ತು ಯಳಂದೂರು ತಾಲೂಕಿಗೆ ಸಂಬಂಧಿಸಿದಂತೆ ಸಾಲಾಖೈರು ಲೆಕ್ಕದಂತೆ ವ್ಯತ್ಯಾಸವಾಗಿದ್ದ ಮೊಬಲಗನ್ನು ಬೇಡಿಕೆಯಿಂದ ತಗ್ಗಿಸಿಕೊಳ್ಳಲಾಗಿದೆ. ಪ್ರಸಕ್ತ ಮಾಹೆಯಲ್ಲಿ ೯೦೧೧೯ ಭೂ ಕಂದಾಯ ದುಬಾರಿ ವಸೂಲಿಯಾಗಿರುತ್ತದೆ.*

*** ತಗ್ಗಿಸಿದ ಬೇಡಿಕೆ ೧೪೧೫೮೩೨*

## ಕೋಷ್ಟಕ–೯.೫: ಚಾಮರಾಜನಗರ ಜಿಲ್ಲೆಯಲ್ಲಿ ೧೯೯೮–೯೯ ರಿಂದ ೨೦೧೦–೨೦೧೧ರವರೆಗೆ ನೀರು ತೆರಿಗೆ ಮತ್ತು ನಿರ್ವಹಣಾ ಕರಗಳ ವಸೂಲಾತಿಯಲ್ಲಿ ಸಾಧಿಸಿದ ಪ್ರಗತಿ (ಜುಲೈನಿಂದ ಜೂನ್‌ವರೆಗೆ)

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|
| ೧೯೯೮–೯೯ | ಕೊಳ್ಳೇಗಾಲ | ೨೨೯೪೮೨೮ | ೭೫೫೭೮೨ | ೧೫೩೯೦೪೬ | ೩೨.೯೩% |
| | ಯಳಂದೂರು | ೨೪೨೬೩೮೬ | ೪೪೫೧೯೨ | ೧೯೮೧೧೯೪ | ೧೮.೩೫% |
| | ಚಾಮರಾಜನಗರ | ೭೯೮೮೦೯೬ | ೩೮೩೩೩೮ | ೭೬೦೪೭೫೮ | ೪.೮೦% |
| | ಗುಂಡ್ಲುಪೇಟೆ | ೧೩೮೬೦೧ | ೩೧೮೪೬ | ೧೦೬೭೫೫ | ೨೨.೯೮% |
| | **ಒಟ್ಟು** | **೧೨೮೪೭೯೧೧** | **೧೬೧೬೧೫೮** | **೧೧೨೩೧೭೫೩** | **೧೨.೫೮%** |
| ೧೯೯೯–೨೦೦೦ | ಕೊಳ್ಳೇಗಾಲ | ೧೫೩೯೦೪೬ | ೬೪೫೯೦೭ | ೮೯೩೧೩೯ | ೪೧.೯೭% |
| | ಯಳಂದೂರು | ೧೯೮೧೧೯೫ | ೪೯೭೭೦೫ | ೧೪೮೩೪೯೦ | ೨೫.೧೨% |
| | ಚಾಮರಾಜನಗರ | ೭೬೦೪೭೫೮ | ೨೦೪೦೫೦ | ೭೪೦೦೭೦೮ | ೨.೬೮% |
| | ಗುಂಡ್ಲುಪೇಟೆ | ೧೭೨೬೪೧ | ೭೮೧೨೨ | ೯೪೫೧೯ | ೪೫.೨೫% |
| | **ಒಟ್ಟು** | **೧೧೨೯೭೬೪೦** | **೧೪೨೫೭೮೪** | **೯೮೭೧೮೫೬** | **೧೨.೬೨%** |
| ೨೦೦೦–೦೧ | ಕೊಳ್ಳೇಗಾಲ | ೨೬೨೦೪೯೭ | ೫೯೧೧೧೦ | ೨೦೨೯೩೮೭ | ೨೩% |
| | ಯಳಂದೂರು | ೧೪೮೩೪೯೦ | ೨೧೦೯೩೭ | ೧೨೭೨೫೫೩ | ೧೪% |
| | ಚಾಮರಾಜನಗರ | ೮೦೩೦೮೦೩ | ೧೨೬೫೭೦ | ೭೯೦೪೨೩೩ | ೨% |
| | ಗುಂಡ್ಲುಪೇಟೆ | ೧೧೯೧೬೦ | ೬೭೮೦ | ೧೧೨೩೮೦ | ೬% |
| | **ಒಟ್ಟು** | **೧೨೨೫೩೯೫೦** | **೯೩೫೩೯೭** | **೧೧೩೧೮೫೫೩** | **೮%** |
| ೨೦೦೧–೦೨ | ಕೊಳ್ಳೇಗಾಲ | ೨೦೨೯೩೮೭ | ೬೪೦೩೦೧ | ೧೩೮೯೦೮೬ | ೩೨% |
| | ಯಳಂದೂರು | ೧೨೭೨೫೫೩ | ೪೪೧೯೬೩ | ೮೩೦೫೯೦ | ೩೫% |
| | ಚಾಮರಾಜನಗರ | ೭೯೦೪೨೩೩ | ೩೦೬೫೬೫ | ೭೫೯೭೬೬೮ | ೪% |
| | ಗುಂಡ್ಲುಪೇಟೆ | ೧೧೨೩೮೦ | ೨೫೮೩ | ೧೦೯೭೯೭ | ೨% |
| | **ಒಟ್ಟು** | **೧೧೩೧೮೫೫೩** | **೧೩೯೧೪೧೨** | **೯೯೨೭೧೪೧** | **೧೨%** |

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|
| ೨೦೦೨–೦೩ | ಕೊಳ್ಳೇಗಾಲ | ೩೩೯೬೮೮೬ | ೨೦೬೧೪೪ | ೩೧೯೦೭೪೨ | ೬% |
| | ಯಳಂದೂರು | ೪೦೪೩೩೪೦ | ೨೬೯೨೩೫ | ೩೭೭೪೧೦೫ | ೭% |
| | ಚಾಮರಾಜನಗರ | ೭೫೯೭೬೬೮ | ೧೬೬೪೦೬ | ೭೪೩೧೨೬೨ | ೨% |
| | ಗುಂಡ್ಲುಪೇಟೆ | ೧೦೯೭೯೭ | ೮೫೫ | ೧೦೮೯೪೨ | ೧% |
| | **ಒಟ್ಟು** | **೧೫೧೪೭೬೯೧** | **೬೪೨೬೪೦** | **೧೪೫೦೫೦೫೧** | **೪%** |
| ೨೦೦೩–೦೪* | ಕೊಳ್ಳೇಗಾಲ | ೩೩೫೭೫೯೪ | ೧೩೫೬೦೫ | ೩೨೨೧೯೮೯ | ೪.೦೪% |
| | ಯಳಂದೂರು | ೩೪೬೨೫೮೧ | ೪೪೫೩೯೪ | ೩೦೧೭೧೮೭ | ೧೨.೮೩% |
| | ಚಾಮರಾಜನಗರ | ೯೩೦೦೦೩೩ | ೬೭೧೩ | ೯೨೩೨೩೨೦ | ೦.೭೩% |
| | ಗುಂಡ್ಲುಪೇಟೆ | ೧೦೮೯೪೨ | ೯೩೦ | ೧೦೮೦೧೨ | ೦.೮೩% |
| | **ಒಟ್ಟು** | **೧೬೨೨೯೧೫೦** | **೬೪೯೬೪೨** | **೧೫೫೭೯೫೦೮** | **೪%** |
| ೨೦೦೪–೦೫ | ಕೊಳ್ಳೇಗಾಲ | ೩೨೨೧೯೮೯ | ೪೭೮೬೨೯ | ೨೭೪೩೩೬೦ | ೧೪.೮೬% |
| | ಯಳಂದೂರು | ೩೦೦೯೩೭೩ | ೪೨೪೪೯೯ | ೨೫೮೪೮೭೪ | ೧೪.೧೧% |
| | ಚಾಮರಾಜನಗರ | ೯೩೨೧೮೩೦ | ೨೮೫೦೫೬ | ೯೦೩೬೭೭೪ | ೩.೦೬% |
| | ಗುಂಡ್ಲುಪೇಟೆ | ೧೦೮೦೧೨ | ೧೭೮೮೬ | ೯೦೧೨೬ | ೧೮.೫೮% |
| | **ಒಟ್ಟು** | **೧೫೬೬೧೨೦೪** | **೧೨೦೬೦೭೦** | **೧೪೪೫೫೧೩೪** | **೭.೭೦%** |
| ೨೦೦೫–೦೬ | ಕೊಳ್ಳೇಗಾಲ | ೫೮೯೪೨೧೩ | ೩೫೭೦೦೨ | ೫೫೩೭೨೧೧ | ೬.೦೬% |
| | ಯಳಂದೂರು | ೨೫೮೪೮೭೪ | ೩೯೪೧೯೦ | ೨೧೯೦೬೮೪ | |
| | ಚಾಮರಾಜನಗರ | ೯೭೦೬೩೪೪ | ೨೬೪೦೭೬ | ೯೪೪೨೨೬೮ | ೨.೭೨% |
| | ಗುಂಡ್ಲುಪೇಟೆ | ೯೦೧೨೬ | ೫೮೩೦ | ೮೪೨೯೬ | ೬.೪% |
| | **ಒಟ್ಟು** | **೧೮೨೭೫೫೫೭** | **೧೦೨೧೦೯೮** | **೧೭೨೫೪೪೫೯** | **೫.೫%** |
| ೨೦೦೬–೦೭ | ಕೊಳ್ಳೇಗಾಲ | ೫೫೩೭೨೧೧ | ೩೪೪೧೧೧ | ೫೧೯೩೧೦೦ | ೬.೨೧% |
| | ಯಳಂದೂರು | ೨೧೯೦೬೮೪ | ೩೩೦೫೫೦ | ೧೮೬೦೧೩೪ | ೧೬.೦೯% |
| | ಚಾಮರಾಜನಗರ | ೯೪೨೨೬೮ | ೧೫೬೨೨೮ | ೯೨೮೬೦೪೦ | ೧.೬೫% |
| | ಗುಂಡ್ಲುಪೇಟೆ | ೮೪೨೯೬ | ೮೪೭೧ | ೭೫೮೨೫ | ೧೦.೦೫% |
| | **ಒಟ್ಟು** | **೧೭೨೫೪೪೫೯** | **೮೩೯೩೫೦** | **೧೬೪೧೫೦೯೯** | **೪.೮೮%** |
| ೨೦೦೭–೦೮ | ಕೊಳ್ಳೇಗಾಲ | ೫೧೯೩೧೦೦ | ೨೦೪೭೪೦ | ೪೯೮೮೩೬೦ | ೩.೯೪% |
| | ಯಳಂದೂರು | ೧೮೮೪೦೯೮ | ೨೪೦೯೮೩ | ೧೬೪೩೧೧೫ | ೧೨.೭೦% |
| | ಚಾಮರಾಜನಗರ | ೯೨೮೬೦೪೦ | ೭೮೩೮೭ | ೯೨೦೭೬೫೩ | ೦.೮೪% |
| | ಗುಂಡ್ಲುಪೇಟೆ | ೭೫೮೨೫ | ೨೯೫೨೪ | ೪೬೩೦೧ | ೩೮.೯೪% |
| | **ಒಟ್ಟು** | **೧೬೪೩೯೦೬೩** | **೫೫೩೬೩೪** | **೧೫೮೮೫೪೨೯** | **೩.೫೭%** |
| ೨೦೦೮–೦೯ | ಕೊಳ್ಳೇಗಾಲ | ೧೫೨೩೬೯೫೫ | ೨೮೩೫೧೦ | ೧೪೯೫೩೪೪೫ | ೧.೮೬% |
| | ಯಳಂದೂರು | ೩೦೮೩೫೨೪ | ೨೨೬೬೩೭ | ೨೮೫೬೮೮೭ | ೭.೩೫% |
| | ಚಾಮರಾಜನಗರ | ೯೨೦೭೬೫೩ | ೯೮೪೩೩ | ೯೧೦೯೨೨೦ | ೧.೦೭% |
| | ಗುಂಡ್ಲುಪೇಟೆ | ೪೬೩೦೧ | ೧೯೩೧೪ | ೨೬೯೮೭ | ೪೧.೭೧% |
| | **ಒಟ್ಟು** | **೨೭೫೭೪೪೩೩** | **೬೨೭೮೯೪** | **೨೬೯೪೬೫೩೯** | **೧೨.೯೯** |

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|
| ೨೦೦೯–೧೦ | ಕೊಳ್ಳೇಗಾಲ | ೧೪೯೫೩೪೪೫ | ೪೫೩೯೬೫ | ೧೪೪೯೯೪೮೦ | ೩.೦೪% |
| | ಯಳಂದೂರು | ೨೮೫೬೮೮೭ | ೧೯೦೩೬೦ | ೨೬೬೬೫೨೭ | ೬.೬೬% |
| | ಚಾಮರಾಜನಗರ | ೯೧೦೯೨೨೦ | ೧೭೭೪೪೭ | ೮೯೩೧೭೭೩ | ೧.೯೫% |
| | ಗುಂಡ್ಲುಪೇಟೆ | ೨೬೯೮೭ | ೮೩೨೦ | ೧೮೬೬೭ | ೩೦.೮೩% |
| | **ಒಟ್ಟು** | **೨೬೯೪೬೫೩೯** | **೮೩೦೧೦೨** | **೨೬೧೧೬೪೩೭** | **೧೦.೬೨%** |
| ೨೦೧೦–೧೧ | ಕೊಳ್ಳೇಗಾಲ | ೯೧೦೯೨೨೦ | ೧೭೭೪೪೭ | ೮೯೩೧೭೭೩ | ೧.೯೫% |
| | ಯಳಂದೂರು | ೨೬೯೮೭ | ೮೩೨೦ | ೧೮೬೬೭ | ೩೦.೮೩% |
| | ಚಾಮರಾಜನಗರ | ೧೪೯೫೩೪೪೫ | ೪೫೩೯೬೫ | ೧೪೪೯೯೪೮೦ | ೩.೦೪% |
| | ಗುಂಡ್ಲುಪೇಟೆ | ೨೮೫೬೮೮೭ | ೧೯೦೩೬೦ | ೨೬೬೬೫೨೭ | ೬.೬೬% |
| | **ಒಟ್ಟು** | **೨೬೯೪೬೫೩೯** | **೮೩೦೧೦೨** | **೨೬೧೧೬೪೩೭** | **೧೦.೬೨%** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

*ಸರ್ಕಾರದ ಆದೇಶ ಸಂಖ್ಯೆ:ಜಸಂಇ೩೩:ಎಂಮೊಐ:೨೦೦೩ ದಿನಾಂಕ ೦೮–೦೯–೨೦೦೩ರ ಮೇರೆಗೆ ೩೦.೮೩ ನೀರು ದರ ಮತ್ತು ನಿರ್ವಹಣಾ ಶುಲ್ಕವನ್ನು ಶೇ.೧೦೦ ರಷ್ಟನ್ನು ಮನ್ನಾ ಮಾಡಿರುವ ಮೇರೆಗೆ ೨೦೦೨–೦೩ನೇ ಸಾಲಿಗೆ ಕೊಳ್ಳೇಗಾಲ ಮತ್ತು ಯಳಂದೂರು ತಾಲೂಕುಗಳಿಗೆ ಸಂಬಂಧಿಸಿದಂತೆ ಬೇಡಿಕೆಯಿಂದ ತಗ್ಗಿಸಿಕೊಳ್ಳಲಾಗಿದೆ.

**ಕೋಷ್ಟಕ–೯.೬ ಚಾಮರಾಜನಗರ ಜಿಲ್ಲೆಯಲ್ಲಿ ೧೯೯೮–೯೯ ರಿಂದ ೨೦೧೦–೧೧ ರವರೆಗೆ (ಜುಲೈನಿಂದ ಜೂನ್) ದಂಡನೆ ನೀರು ತೆರಿಗೆ ವಸೂಲಾತಿಯಲ್ಲಿ ಸಾಧಿಸಿದ ಪ್ರಗತಿ**

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|
| ೧೯೯೮–೯೯ | ಕೊಳ್ಳೇಗಾಲ | ೧೩೧೭೫೭೭೭ | ೦ | ೧೩೧೭೫೭೭೭ | ೦.೦% |
| | ಯಳಂದೂರು | ೨೨೩೭೬೨೧೨ | ೦ | ೨೨೩೭೬೨೧೨ | ೦.೦% |
| | ಚಾಮರಾಜನಗರ | ೧೦೧೪೩೭ | ೦ | ೧೦೧೪೩೭ | ೦.೦% |
| | ಗುಂಡ್ಲುಪೇಟೆ | ೦ | ೦ | ೦ | – |
| | **ಒಟ್ಟು** | **೩೫೬೫೩೪೨೬** | **೦** | **೦** | **೦%** |
| ೧೯೯೯–೨೦೦೦ | ಕೊಳ್ಳೇಗಾಲ | ೫೮೪೩೫೫೫ | ೦ | ೫೮೪೩೫೫೫ | ೦.೦% |
| | ಯಳಂದೂರು | ೨೨೩೭೬೨೧೨ | ೦ | ೨೨೩೭೬೨೧೨ | ೦.೦% |
| | ಚಾಮರಾಜನಗರ | ೧೦೧೪೩೭ | ೦ | ೧೦೧೪೩೭ | ೦.೦% |
| | ಗುಂಡ್ಲುಪೇಟೆ | ೦ | ೦ | ೦ | – |
| | **ಒಟ್ಟು** | **೨೮೩೨೧೨೦೪** | **೦** | **೨೮೩೨೧೨೦೪** | |
| ೨೦೦೦–೦೧ | ಕೊಳ್ಳೇಗಾಲ | ೧೧೯೭೦೨೨೪ | ೦ | ೧೧೯೭೦೨೨೪ | ೦.೦% |
| | ಯಳಂದೂರು | ೨೨೩೭೬೨೧೨ | ೦ | ೨೨೩೭೬೨೧೨ | ೦.೦% |
| | ಚಾಮರಾಜನಗರ | ೮೫೨೯೮೪ | ೦ | ೮೫೨೯೮೪ | ೦.೦% |
| | ಗುಂಡ್ಲುಪೇಟೆ | ೦ | ೦ | ೦ | – |
| | **ಒಟ್ಟು** | **೩೫೧೯೯೪೨೦** | **೦** | **೩೫೧೯೯೪೨೦** | |

| ವರ್ಷ | ತಾಲ್ಲೂಕು | ಬೇಡಿಕೆ (ರೂ.ಗಳಲ್ಲಿ) | ವಸೂಲಾತಿ (ರೂ.ಗಳಲ್ಲಿ) | ಬಾಕಿ (ರೂ.ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|
| ೨೦೦೧-೦೨ | **ಕೊಳ್ಳೇಗಾಲ** | ೧೧೯೭೦೨೨೪ | ೦ | ೧೧೯೭೦೨೨೪ | ೦.೦% |
| | **ಯಳಂದೂರು** | ೨೨೩೭೬೨೧೨ | ೦ | ೨೨೩೭೬೨೧೨ | ೦.೦% |
| | **ಚಾಮರಾಜನಗರ** | ೮೫೨೯೮೪ | ೦ | ೮೫೨೯೮೪ | ೦.೦% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೩೫೧೯೯೪೨೦** | **೦** | **೩೫೧೯೯೪೨೦** | |
| ೨೦೦೨-೦೩ | **ಕೊಳ್ಳೇಗಾಲ** | ೩೯೪೭೧೩೪೬ | ೦ | ೩೯೪೭೧೩೪೬ | ೦.೦% |
| | **ಯಳಂದೂರು** | ೪೨೩೯೪೯೯೮ | ೦ | ೪೨೩೯೪೯೯೮ | ೦.೦% |
| | **ಚಾಮರಾಜನಗರ** | ೮೫೨೯೮೪ | ೦ | ೮೫೨೯೮೪ | ೦.೦% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೮೨೭೧೯೩೨೮** | **೦** | **೮೨೭೧೯೩೨೮** | **೦.೦%** |
| ೨೦೦೩-೦೪* | **ಕೊಳ್ಳೇಗಾಲ** | ೪೦೪೬೬೩೨೨ | ೦ | ೪೦೪೬೬೩೨೨ | ೦.೦% |
| | **ಯಳಂದೂರು** | ೪೪೯೭೦೬೬೨ | ೦ | ೪೪೯೭೦೬೬೨ | ೦.೦% |
| | **ಚಾಮರಾಜನಗರ** | ೧೨೮೨೮೦೩ | ೦ | ೧೨೮೨೮೦೩ | ೦.೦% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೮೬೭೧೯೭೮೭** | **೦** | **೮೬೭೧೯೭೮೭** | **೦.೦%** |
| ೨೦೦೪-೦೫ | **ಕೊಳ್ಳೇಗಾಲ** | ೪೦೪೬೬೩೨೨ | ೦ | ೪೦೪೬೬೩೨೨ | ೦.೦% |
| | **ಯಳಂದೂರು** | ೪೪೯೭೦೬೬೨ | ೦ | ೪೪೯೭೦೬೬೨ | ೦.೦% |
| | **ಚಾಮರಾಜನಗರ** | ೧೨೮೨೮೦೩ | ೦ | ೧೨೮೨೮೦೩ | ೦.೦% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೮೬೭೧೯೭೮೭** | **೦** | **೮೬೭೧೯೭೮೭** | **೦.೦%** |
| ೨೦೦೫-೦೬ | **ಕೊಳ್ಳೇಗಾಲ** | ೪೦೪೬೬೩೨೨ | ೦ | ೪೦೪೬೬೩೨೨ | ೦.೦% |
| | **ಯಳಂದೂರು** | ೪೪೯೭೦೬೬೨ | ೦ | ೪೪೯೭೦೬೬೨ | ೦.೦% |
| | **ಚಾಮರಾಜನಗರ** | ೧೨೮೨೮೦೩ | ೦ | ೧೨೮೨೮೦೩ | ೦.೦% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೮೬೭೧೯೭೮೭** | **೦** | **೮೬೭೧೯೭೮೭** | **೦.೦%** |
| ೨೦೦೬-೦೭ | **ಕೊಳ್ಳೇಗಾಲ** | ೫೭೧೭೨೩೪೧ | ೦ | ೫೭೧೭೨೩೪೧ | ೦.೦% |
| | **ಯಳಂದೂರು** | ೪೬೫೮೫೩೩೩ | ೦ | ೪೬೫೮೫೩೩೩ | ೦.೦% |
| | **ಚಾಮರಾಜನಗರ** | ೧೭೧೧೬೦೭ | ೦ | ೧೬೮೭೦೮೦ | ೧% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೧೦೫೪೬೯೨೮೧** | **೦** | **೧೦೫೪೪೪೭೫೪** | **೦.೦%** |
| ೨೦೦೭-೦೮ | **ಕೊಳ್ಳೇಗಾಲ** | ೫೭೧೭೨೩೪೧ | ೦ | ೫೭೧೭೨೩೪೧ | ೦.೦% |
| | **ಯಳಂದೂರು** | ೪೬೫೮೫೩೩೩ | ೦ | ೪೬೫೮೫೩೩೩ | ೦.೦% |
| | **ಚಾಮರಾಜನಗರ** | ೧೬೮೭೦೮೦ | ೦ | ೧೬೮೭೦೮೦ | ೦.೦% |
| | **ಗುಂಡ್ಲುಪೇಟೆ** | ೦ | ೦ | ೦ | – |
| | **ಒಟ್ಟು** | **೧೦೫೪೪೪೭೫೪** | **೦** | **೧೦೫೪೪೪೭೫೪** | **೦.೦%** |

| | | | | | |
|---|---|---|---|---|---|
| ೨೦೦೮-೦೯ | ಕೊಳ್ಳೇಗಾಲ | ೧೪೧೨೬೨೭೮೩ | ೦ | ೧೪೧೨೬೨೭೮೩ | ೦.೦% |
| | ಯಳಂದೂರು | ೪೭೬೨೮೬೫೩ | ೦ | ೪೭೬೨೮೬೫೩ | ೦.೦% |
| | ಚಾಮರಾಜನಗರ | ೧೬೮೭೦೮೦ | ೦ | ೧೬೮೭೦೮೦ | ೦.೦% |
| | ಗುಂಡ್ಲುಪೇಟೆ | ೦ | ೦ | ೦ | ೦.೦% |
| | **ಒಟ್ಟು** | **೧೯೦೫೭೮೫೧೬** | **೦** | **೧೯೦೫೭೮೫೧೬** | **೦.೦%** |
| ೨೦೦೯-೧೦ | ಕೊಳ್ಳೇಗಾಲ | ೧೪೧೨೬೨೭೮೩ | ೦ | ೧೪೧೨೬೨೭೮೩ | ೦.೦% |
| | ಯಳಂದೂರು | ೪೭೬೨೮೬೫೩ | ೦ | ೪೭೬೨೮೬೫೩ | ೦.೦% |
| | ಚಾಮರಾಜನಗರ | ೧೬೮೭೦೮೦ | ೦ | ೧೬೮೭೦೮೦ | ೦.೦% |
| | ಗುಂಡ್ಲುಪೇಟೆ | ೦ | ೦ | ೦ | ೦.೦% |
| | **ಒಟ್ಟು** | **೧೯೦೫೭೮೫೧೬** | **೦** | **೧೯೦೫೭೮೫೧೬** | **೦.೦%** |
| ೨೦೧೦-೧೧ | ಕೊಳ್ಳೇಗಾಲ | ೧೪೧೨೬೨೭೮೩ | ೦ | ೧೪೧೨೬೨೭೮೩ | ೦.೦% |
| | ಯಳಂದೂರು | ೪೭೬೨೮೬೫೩ | ೦ | ೪೭೬೨೮೬೫೩ | ೦.೦% |
| | ಚಾಮರಾಜನಗರ | ೧೬೮೭೦೮೦ | ೦ | ೧೬೮೭೦೮೦ | ೦.೦% |
| | ಗುಂಡ್ಲುಪೇಟೆ | ೦ | ೦ | ೦ | ೦.೦% |
| | **ಒಟ್ಟು** | **೧೯೦೫೭೮೫೧೬** | **೦** | **೧೯೦೫೭೮೫೧೬** | **೦.೦%** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

** ಜೂನ್ ೨೦೦೩ರವರೆಗೆ ಬಂದ ಬೇಡಿಕೆ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಕ್ರಮವಾಗಿ ' ೨೭,೫೦,೧೧೨೨ ಮತ್ತು '೨೦,೦೧೮,೭೮೬ (ಜಿಲ್ಲೆಯ ಒಟ್ಟು ಬೇಡಿಕೆ '೪೭೫೧೯೦೮) ಆಗಿತ್ತು. ಬೇಡಿಕೆಯಲ್ಲಿ ಕಾಣುವ ಹೆಚ್ಚಳಕ್ಕೆ ಇದು ಕಾರಣವಾಗಿದೆ.*

** ಸರ್ಕಾರದ ಆದೇಶ ಸಂಖ್ಯೆ: ಜಸಂಇ:೩೩:ಎಂಮೊಐ:೨೦೦೩ ದಿನಾಂಕ ೦೮-೦೯-೨೦೦೩ರ ಮೇರೆಗೆ ನೀರು ದರ ಮತ್ತು ನಿರ್ವಹಣಾ ಶುಲ್ಕವನ್ನು ಶೇ.೧೦೦ ರಷ್ಟನ್ನು ಮನ್ನಾ ಮಾಡಿರುವ ಮೇರೆಗೆ ೨೦೦೨-೦೩ನೇ ಸಾಲಿಗೆ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಬೇಡಿಕೆಯಿಂದ ತಗ್ಗಿಸಿಕೊಳ್ಳಲಾಗಿದೆ.*

** ೨೦೦೩-೦೪ರಲ್ಲಿ ಚಾಮರಾಜನಗರ ತಾಲ್ಲೂಕಿನ ಜೂನ್ ೨೦೦೩ರ ಬೇಡಿಕೆ ' ೪,೯೪,೧೮೬ನ್ನು ಸೇರಿಸಿರುವುದರಿಂದ ಬೇಡಿಕೆಯಲ್ಲಿ ಹೆಚ್ಚಳವಾಗಿದೆ. ಇದೇ ವರ್ಷದಲ್ಲಿ ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳ ತಗ್ಗಿಸಿದ ಬೇಡಿಕೆ ಕ್ರಮವಾಗಿ ' ೯,೯೪,೯೭೬ ಮತ್ತು ' ೬೪,೩೬೭ ಆಗಿತ್ತು. ಬೇಡಿಕೆಯಲ್ಲಿನ ಹೆಚ್ಚಳಕ್ಕೆ ಇದೂ ಕಾರಣ.*

### ಕೋಷ್ಟಕ-೯.೭ ಚಾಮರಾಜನಗರ ಜಿಲ್ಲೆಯಲ್ಲಿ ೧೯೯೮-೯೯ ರಿಂದ ೨೦೧೦-೧೧ರವರೆಗೆ ಭೂ ಕಂದಾಯ ಮತ್ತು ಕರಗಳು, ನೀರು ತೆರಿಗೆ ಮತ್ತು ನಿರ್ವಹಣಾ ಕರಗಳು, ದಂಡನೆ, ನೀರು ತೆರಿಗೆ, ಸಾಲಗಳು ಮತ್ತು ಇತರೆ ಸರ್ಕಾರಿ ಬಾಕಿ ವಸೂಲಾತಿಯಲ್ಲಿ ಸಾಧಿಸಿದ ಪ್ರಗತಿ (ಜುಲೈ ನಿಂದ ಜೂನ್‌ವರೆಗೆ)

| ವರ್ಷ | ಕ್ರ.ಸಂ. | ಬಾಕಿ ವಸೂಲಿ ವಿವರಗಳು | ಬೇಡಿಕೆ (₹ ಗಳಲ್ಲಿ) | ವಸೂಲಾತಿ (₹ ಗಳಲ್ಲಿ) | ಬಾಕಿ (₹ ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|---|
| ೧೯೯೮-೯೯ | ೧ | ಭೂ ಕಂದಾಯ | ೧೮೫೦೩೬೭ | ೧೬೩೭೫೩೮ | ೨೧೨೮೨೯ | ೮೮.೫೦% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೨೮೪೭೯೧೧ | ೧೬೧೬೧೫೮ | ೧೧೨೩೧೭೫೩ | ೧೨.೫೮% |
| | ೩ | ದಂಡ ನೀರು ತೆರಿಗೆ | ೩೫೬೫೩೪೨೬ | ೦ | ೩೫೬೫೩೪೨೬ | ೦.೦% |
| | ೪ | ಸಾಲಗಳು | ೯೫೭೪೫೯ | ೧೨೭೬೭೯ | ೮೨೯೭೮೦ | ೧೩.೩೪% |
| | ೫ | ಇತರೆ ಸರ್ಕಾರಿ ಬಾಕಿ | ೧೮೬೫೭೮೯೪ | ೧೯೯೨೧೬೩ | ೧೬೬೬೫೭೩೧ | ೧೦.೬೮% |
| | | ಒಟ್ಟು | **೬೯೯೬೭೦೫೭** | **೫೩೭೩೫೩೮** | **೬೪೫೯೩೫೧೯** | **೭.೬೮%** |

| ವರ್ಷ | ಕ್ರ.ಸಂ. | ಬಾಕಿ ವಸೂಲಿ ವಿವರಗಳು | ಬೇಡಿಕೆ (₹ ಗಳಲ್ಲಿ) | ವಸೂಲಾತಿ (₹ ಗಳಲ್ಲಿ) | ಬಾಕಿ (₹ ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|---|
| ೧೯೯೯–೨೦೦೦ | ೧ | ಭೂ ಕಂದಾಯ | ೧೩೭೭೧೩೮ | ೧೧೯೩೯೭೬ | ೧೮೩೧೬೨ | ೮೬.೭೦% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೧೨೯೭೬೪೦ | ೧೪೨೫೭೮೪ | ೯೮೭೧೮೫೬ | ೧೨.೬೨% |
| | ೩* | ದಂಡ ನೀರು ತೆರಿಗೆ | ೨೮೩೨೧೨೦೪ | ೦ | ೨೮೩೨೧೨೦೪ | ೦.೦% |
| | ೪ | ಸಾಲಗಳು | ೮೩೧೭೮೦ | ೩೦೦೦ | ೮೨೮೭೮೦ | ೦.೩೬% |
| | ೫ | ಇತರೆ ಸರ್ಕಾರಿ ಬಾಕಿ | ೧೭೯೪೫೨೭೮ | ೩೨೪೧೭೦ | ೧೭೬೨೧೧೦೮ | ೧.೮೧% |
| | | **ಒಟ್ಟು** | **೫೯೭೭೩೦೪೦** | **೨೯೪೬೯೩೦** | **೫೬೮೨೬೧೧೦** | **೪.೯೩%** |
| ೨೦೦೦–೦೧ | ೧ | ಭೂ ಕಂದಾಯ | ೧೯೫೬೯೬೬ | ೧೭೦೬೪೦೬ | ೨೫೦೫೬೦ | ೮೭% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೨೨೫೩೯೫೦ | ೯೩೫೩೯೭ | ೧೧೩೧೮೫೫೩ | ೮% |
| | ೩ | ದಂಡ ನೀರು ತೆರಿಗೆ | ೩೫೧೯೯೪೨೦ | ೦ | ೩೫೧೯೯೪೨೦ | ೦.೦% |
| | ೪ | ಸಾಲಗಳು | ೮೨೮೭೮೦ | ೦ | ೮೨೮೭೮೦ | ೦.೦% |
| | ೫* | ಇತರೆ ಸರ್ಕಾರಿ ಬಾಕಿ | ೫೦೦೯೨೯೪೯ | ೮೭೪೮೮೫ | ೪೯೨೧೮೦೬೪ | ೨% |
| | | **ಒಟ್ಟು** | **೧೦೦೩೩೨೦೬೫** | **೩೫೧೬೬೮೮** | **೯೬೮೧೫೩೭೭** | **೪%** |
| ೨೦೦೧–೦೨ | ೧ | ಭೂ ಕಂದಾಯ | ೨೫೭೨೫೯೫ | ೨೦೧೪೦೦೫ | ೫೫೮೫೯೦ | ೭೮% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೧೩೧೮೫೫೩ | ೧೩೯೧೪೧೨ | ೯೯೨೭೧೪೧ | ೧೨.೩% |
| | ೩ | ದಂಡ ನೀರು ತೆರಿಗೆ | ೩೫೧೯೯೪೨೦ | ೦ | ೩೫೧೯೯೪೨೦ | ೦.೦% |
| | ೪ | ಸಾಲಗಳು | ೮೨೮೭೮೦ | ೦ | ೮೨೮೭೮೦ | ೦.೦% |
| | ೫ | ಇತರೆ ಸರ್ಕಾರಿ ಬಾಕಿ | ೬೨೨೬೪೪೨೪ | ೭೬೮೭೦೪ | ೬೧೪೯೫೭೨೦ | ೧.೨% |
| | | **ಒಟ್ಟು** | **೧೧೨೧೮೩೭೭೨** | **೪೧೭೪೧೨೧** | **೧೦೮೦೦೯೬೫೧** | **೩.೭%** |
| ೨೦೦೨–೦೩ | ೧ | ಭೂ ಕಂದಾಯ | ೨೫೫೨೦೨೩ | ೧೨೬೨೪೭೬ | ೧೨೮೯೫೪೭ | ೪೯% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೫೧೪೬೯೧ | ೬೪೨೬೪೦ | ೧೪೫೦೫೦೫೧ | ೪.೨% |
| | ೩ | ದಂಡ ನೀರು ತೆರಿಗೆ | ೮೨೭೧೯೩೨೮ | ೦ | ೮೨೭೧೯೩೨೮ | ೦.೦% |
| | ೪ | ಸಾಲಗಳು | ೯೦೨೪೨೫ | ೦ | ೯೦೨೪೨೫ | ೦.೦% |
| | ೫ | ಇತರೆ ಸರ್ಕಾರಿ ಬಾಕಿ | ೬೩೭೬೩೧೩೭ | ೧೬೭೪೨೬ | ೬೩೫೯೫೭೧೧ | ೦.೩% |
| | | **ಒಟ್ಟು** | **೧೬೫೦೮೪೬೦೪** | | **೧೬೩೦೧೨೧೦೬೨** | **೧.೩%** |
| ೨೦೦೩–೦೪ | ೧ * | ಭೂ ಕಂದಾಯ | ೨೦೬೬೧೧೭ | ೧೪೮೪೨೦೮ | ೬೭೨೦೧೮ | ೭೧.೮% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೬೨೨೯೧೫೦ | ೬೪೯೬೪೨ | ೧೫೫೭೯೫೦೮ | ೪.೦% |
| | ೩ | ದಂಡ ನೀರು ಕರ | ೮೬೭೧೯೭೮೭ | ೦ | ೮೬೭೧೯೭೮೭ | ೦.೦% |
| | ೪ | ಸಾಲಗಳು | ೯೦೨೪೨೫ | ೦ | ೯೦೨೪೨೫ | ೦.೦% |
| | ೫ | ಇತರೆ ಸರ್ಕಾರಿ ಬಾಕಿ | ೩೯೧೬೭೬೨೭ | ೩೨೩೧೨೪೮ | ೩೫೯೩೬೩೭೯ | ೮.೨% |
| | | **ಒಟ್ಟು** | **೧೪೫೦೮೫೧೦೬** | **೫೩೬೫೦೯೮** | **೧೩೯೮೧೦೧೧೭** | **೩.೭%** |

| ವರ್ಷ | ಕ್ರ.ಸಂ. | ಬಾಕಿ ವಸೂಲಿ ವಿವರಗಳು | ಬೇಡಿಕೆ (₹ ಗಳಲ್ಲಿ) | ವಸೂಲಾತಿ (₹ ಗಳಲ್ಲಿ) | ಬಾಕಿ (₹ ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|---|
| ೨೦೦೪–೦೫ | ೧ | ಭೂ ಕಂದಾಯ | ೧೮೧೯೧೯೫ | ೧೬೯೫೮೧೫ | ೧೩೯೬೩೮ | ೯೩.೨% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೫೬೬೧೨೦೪ | ೧೨೦೬೦೭೦ | ೧೪೪೫೫೧೩೪ | ೭.೭% |
| | ೩ | ದಂಡ ನೀರು ಕರ | ೮೬೭೧೯೭೮೭ | ೦ | ೮೬೭೧೯೭೮೭ | ೦.೦% |
| | ೪ | ಸಾಲಗಳು | ೯೦೨೪೨೫ | ೬೩೦೦೬ | ೮೩೯೪೧೯ | ೭.೦% |
| | ೫ | ಇತರೆ ಸರ್ಕಾರಿ ಬಾಕಿ | ೬೨೪೨೨೬೧೯ | ೪೧೧೦೯೯೭ | ೫೮೩೧೧೬೨೨ | ೬.೬% |
| | | **ಒಟ್ಟು** | **೧೬೭೫೨೫೨೩೦** | **೭೦೭೫೮೮೮** | **೧೬೦೪೬೫೬೦೦** | **೪.೨%** |
| ೨೦೦೫–೦೬ | ೧ | ಭೂ ಕಂದಾಯ | ೧೭೩೫೫೬೯ | ೧೬೦೫೩೦೭ | ೧೩೦೨೬೨ | ೯೨.೫% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೮೨೭೫೫೫೭ | ೧೦೨೧೦೯೮ | ೧೭೨೫೪೪೫೯ | ೫.೬% |
| | ೩ | ದಂಡ ನೀರು ಕರ | ೧೦೫೪೬೯೨೮೧ | ೨೪೫೨೭ | ೧೦೫೪೪೪೭೫೪ | ೦.೦% |
| | ೪ | ಸಾಲಗಳು | ೭೯೪೬೯೫ | ೦ | ೭೯೪೬೯೫ | ೦.೦% |
| | ೫ | ಇತರೆ ಸರ್ಕಾರಿ ಬಾಕಿ | ೫೯೯೭೪೭೦೧ | ೫೫೧೨೬೬೯ | ೫೪೪೬೨೦೩೨ | ೯೨% |
| | | **ಒಟ್ಟು** | **೧೮೬೨೪೯೮೦೩** | **೮೧೬೩೬೦೧** | **೧೭೮೦೮೬೨೦೨** | **೪೪%** |
| ೨೦೦೬–೦೭ | ೧ | ಭೂ ಕಂದಾಯ | ೨೦೯೪೮೬೯ | ೧೨೭೯೦೭೭ | ೮೧೫೭೯೨ | ೬೧.೦೬% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೭೨೫೪೪೫೯ | ೮೩೯೩೬೦ | ೧೬೪೧೫೦೯೯ | ೪.೮೬% |
| | ೩ | ದಂಡ ನೀರು ಕರ | ೧೦೫೪೪೪೭೫೪ | ೦ | ೧೦೫೪೪೪೭೫೪ | ೦.೦% |
| | ೪ | ಸಾಲಗಳು | ೭೯೪೬೯೫ | ೦ | ೭೯೪೬೯೫ | ೦.೦% |
| | ೫* | ಇತರೆ ಸರ್ಕಾರಿ ಬಾಕಿ | ೨೮೯೭೫೫೫೬ | ೧೮೧೮೪೮೧ | ೨೭೧೫೭೦೭೫ | ೬.೨೮% |
| | | **ಒಟ್ಟು** | **೧೫೪೫೬೪೩೩೩** | **೩೯೩೬೯೧೮** | **೧೫೦೬೨೭೪೧೫** | **೨.೫೫%** |
| ೨೦೦೭–೦೮ | ೧ | ಭೂ ಕಂದಾಯ | ೧೯೨೮೪೨೩ | ೧೩೪೪೨೯೨ | ೫೮೪೧೩೧ | ೬೯.೭% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೧೬೪೩೯೦೬೩ | ೫೫೩೬೩೪ | ೧೫೮೮೫೪೨೯ | ೩.೩೭% |
| | ೩ | ದಂಡ ನೀರು ತೆರಿಗೆ | ೧೦೫೪೪೪೭೫೪ | ೦ | ೧೦೫೪೪೪೭೫೪ | ೦.೦೦% |
| | ೪ | ಸಾಲಗಳು | ೭೯೪೬೯೫ | ೨೩೪೩೨ | ೭೭೧೨೬೩ | ೨.೯೫% |
| | ೫ | ಇತರೆ ಸರ್ಕಾರಿ ಬಾಕಿ | ೨೮೦೧೩೨೭೭ | ೧೩೦೯೨೭೯ | ೨೬೭೦೩೯೯೮ | ೪.೬೭% |
| | | **ಒಟ್ಟು** | **೧೫೨೬೨೦೨೧೨** | **೩೨೩೦೬೩೭** | **೧೪೯೩೮೯೫೭೫** | **೨.೧೨%** |
| ೨೦೦೮–೦೯ | ೧ | ಭೂ ಕಂದಾಯ | ೩೨೩೪೪೦೯ | ೧೬೫೬೩೧೯ | ೧೬೨೨೫೮ | ೯೧.೦೮% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೨೭೫೭೪೪೩೩ | ೬೨೭೮೯೪ | ೨೬೯೪೬೫೩೯ | ೨.೨೮% |
| | ೩ | ದಂಡ ನೀರು ಕರ | ೧೯೦೫೭೮೫೧೬ | ೦ | ೧೯೦೫೭೮೫೧೬ | ೦.೦೦% |
| | ೪ | ಸಾಲಗಳು | ೭೭೧೨೬೩ | ೦ | ೭೭೧೨೬೩ | ೦.೦೦% |
| | ೫* | ಇತರೆ ಸರ್ಕಾರಿ ಬಾಕಿ | ೪೦೩೨೦೮೬೧ | ೧೨೮೭೮೫೮ | ೩೯೦೩೩೦೦೩ | ೩.೧೯% |
| | | **ಒಟ್ಟು** | **೨೬೨೪೭೯೪೮೨*** | **೩೫೭೨೦೭೧** | **೨೫೭೪೯೧೫೭೯** | **೧೯.೩೧** |

| ವರ್ಷ | ಕ್ರ.ಸಂ. | ಬಾಕಿ ವಸೂಲಿ ವಿವರಗಳು | ಬೇಡಿಕೆ (₹ ಗಳಲ್ಲಿ) | ವಸೂಲಾತಿ (₹ ಗಳಲ್ಲಿ) | ಬಾಕಿ (₹ ಗಳಲ್ಲಿ) | ಶೇಕಡಾ ವಸೂಲಿ |
|---|---|---|---|---|---|---|
| ೨೦೦೯–೧೦ | ೧ | ಭೂ ಕಂದಾಯ | ೨೪೩೮೨೨೯ | ೮೩೬೧೬೫ | ೧೬೦೨೦೬೪ | ೩೪.೨೯% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೨೬೯೪೬೫೩೯ | ೮೩೦೧೦೨ | ೨೬೧೧೬೪೩೭ | ೩.೦೮% |
| | ೩ | ದಂಡ ನೀರು ಕರ | ೧೯೦೫೭೮೫೧೬ | ೦ | ೧೯೦೫೭೮೫೧೬ | ೦.೦೦% |
| | ೪ | ಸಾಲಗಳು | ೭೭೧೨೬೩ | ೦ | ೭೭೧೨೬೩ | ೦.೦೦% |
| | ೫* | ಇತರೆ ಸರ್ಕಾರಿ ಬಾಕಿ | ೫೪೯೫೩೬೮೭ | ೯೦೦೪೩೭ | ೫೪೦೫೩೨೫೦ | ೧.೬೪% |
| | | ಒಟ್ಟು | **೨೭೫೬೮೮೨೩೪** | **೨೫೬೬೭೦೪** | **೨೭೩೧೨೧೫೩೦** | **೭.೮೦** |
| ೨೦೧೦–೧೧ | ೧ | ಭೂ ಕಂದಾಯ | ೨೪೩೮೨೨೯ | ೮೩೬೧೬೫ | ೧೬೦೨೦೬೪ | ೩೪.೯೫% |
| | ೨ | ನೀರು ತೆರಿಗೆ ಮತ್ತು ನಿರ್ವಹಣಾ ಕರ | ೨೬೯೪೬೫೩೯ | ೮೩೦೧೦೨ | ೨೬೧೧೬೪೩೭ | ೪೨.೪೮% |
| | ೩ | ದಂಡ ನೀರು ಕರ | ೧೯೦೫೭೮೫೧೬ | ೦ | ೧೯೦೫೭೮೫೧೬ | ೦% |
| | ೪ | ಸಾಲಗಳು | ೭೭೧೨೬೩ | ೦ | ೭೭೧೨೬೩ | ೦% |
| | ೫* | ಇತರೆ ಸರ್ಕಾರಿ ಬಾಕಿ | ೫೪೯೫೩೬೮೭ | ೯೦೦೪೩೭ | ೫೪೦೫೩೨೫೦ | ೧೬.೪೯% |
| | | ಒಟ್ಟು | **೨೭೫೬೮೮೨೩೪** | **೨೫೬೬೭೦೪** | **೨೭೩೧೨೧೫೩೦** | **೧೮.೯೮** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

**ತಗ್ಗಿಸಿದ ಬೇಡಿಕೆ ₹ ೧೪೧೫೮೩೨*

*ಷರಾ: * ೧೯೯೯–೨೦೦೦ ದಲ್ಲಿ ₹ ೧೩,೩೨,೨೨೨ ರಷ್ಟು ದಂಡ ನೀರು ತೆರಿಗೆ ಬೇಡಿಕೆಯನ್ನು ತಗ್ಗಿಸಲಾಗಿದೆ.*

*– ೨೦೦೧–೦೨ರಲ್ಲಿ ₹ ೨೭,೩೦೦ನ್ನು ಇತರೆ ಸರ್ಕಾರಿ ಬಾಕಿ ಅಡಿಯಲ್ಲಿ ತಗ್ಗಿಸಲಾಗಿದೆ.*

*– ಸರ್ಕಾರದ ಅಧಿಸೂಚನೆ ಸಂಖ್ಯೆ ಆರ್‌ಇ ೨೮೫/ಟಿಆರ್‌ಎಂ/೨೦೦೨, ದಿನಾಂಕ ೦೧–೧೨–೨೦೦೩ರ ಆದೇಶದಂತೆ ಚಾಮರಾಜನಗರ ಜಿಲ್ಲೆಯ ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿನ ಭೂ ಕಂದಾಯದ ಶೇಕಡಾ ೧೦೦ ರಷ್ಟು ಮತ್ತು ಕೊಳ್ಳೇಗಾಲ ತಾಲ್ಲೂಕಿನ ಶೇಕಡಾ ೫೦ ರಷ್ಟು ಕಂದಾಯವನ್ನು ಮನ್ನಾ ಮಾಡಿರುವ ಮೇರೆ ಬೇಡಿಕೆಯನ್ನು ತಗ್ಗಿಸಿರುತ್ತದೆ ಮತ್ತು ಯಳಂದೂರು ತಾಲ್ಲೂಕಿಗೆ ಸಂಬಂಧಿಸಿದಂತೆ ಸಾಲಾಖೈರು ಲೆಕ್ಕದಂತೆ ವ್ಯತ್ಯಾಸವಾಗಿದ್ದ ಮೊಬಲಗನ್ನು ಬೇಡಿಕೆಯಿಂದ ತಗ್ಗಿಸಿಕೊಳ್ಳಲಾಗಿದೆ.*

*– ಯಳಂದೂರು ತಾಲ್ಲೂಕಿಗೆ ಸಂಬಂಧಿಸಿದ ಸಾಲಗಳ ಮತ್ತು ಇತರೆ ಸರ್ಕಾರಿ ಬಾಕಿ ಲೆಕ್ಕಶೀರ್ಷಿಕೆಯಲ್ಲಿ ವ್ಯತ್ಯಾಸವಾಗಿರುವುದನ್ನು ಸರಿಪಡಿಸಿ ಬಾಕಿ ಕಲಂನಲ್ಲಿ ತೋರಿಸಲಾಗಿದೆ.*

*– ಆಯುಕ್ತರು, ವಾಣಿಜ್ಯ ತೆರಿಗೆ ಇಲಾಖೆಯ ಸೂಚನೆ ಮೇರೆಗೆ ವಾಣಿಜ್ಯ ತೆರಿಗೆ ಬಾಕಿ ₹ ೫,೧೦,೫೫೨ ಗಳನ್ನು ತಗ್ಗಿಸಿಕೊಳ್ಳಲಾಗಿದೆ.*

ಅಬ್ಕಾರಿ ಇಲಾಖೆಯು ತಿಳಿಸಿರುವಂತೆ ಬಾಕಿದಾರರು ಈ ಜಿಲ್ಲೆಯಲ್ಲಿ ನೆಲೆಸಿಲ್ಲವಾದ್ದರಿಂದ ಅಬ್ಕಾರಿ ಬಾಕಿ ₹ ೨,೮೦,೩೬,೨೭೨ ನ್ನು ಬೇಡಿಕೆಯಿಂದ ತಗ್ಗಿಸಿಕೊಳ್ಳಲಾಗಿದೆ. ಸರ್ಕಾರವು ದಿನಾಂಕ ೩೧–೦೩–೨೦೦೩ರ ವರೆಗಿನ ಎಲ್ಲಾ ನೀರಾವರಿ ವಿದ್ಯುತ್ ಶುಲ್ಕ ಬಾಕಿಯನ್ನು ಮನ್ನಾ ಮಾಡಿದ್ದರಿಂದ ವಿದ್ಯುತ್ ಬಾಕಿ ₹ ೨,೩೩,೫೨೨ನ್ನು ಬೇಡಿಕೆಯಿಂದ ತಗ್ಗಿಸಿಕೊಳ್ಳಲಾಗಿದೆ.

## ಭೂ ಸುಧಾರಣೆಗಳು

ಸ್ವಾತಂತ್ರ್ಯಪೂರ್ವದಲ್ಲಿ ರಾಜ್ಯದ ವ್ಯವಸಾಯ ಯೋಗ್ಯ ಭೂಮಿಯ ಬಹುಭಾಗ ಭೂ ಮಾಲೀಕರ ಹಿಡಿತದಲ್ಲಿದ್ದು, ನಿಜವಾದ ಕೃಷಿಕರು ಭೂ ಮಾಲೀಕತ್ವದಿಂದ ಬಹುತೇಕ ವಂಚಿತರಾಗಿದ್ದರು. ಗೇಣಿದಾರಿ ಸಮಸ್ಯೆಗಳನ್ನು ಎಲ್ಲಾ ರೀತಿಗಳಿಂದಲೂ ಪರಿಶೀಲಿಸಿ ಏಕರೂಪದ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕೆಂಬ ಸಾರ್ವಜನಿಕ ಒತ್ತಾಯದ ಪರಿಣಾಮವಾಗಿ ದಿನಾಂಕ ೧೦ನೇ ಮೇ ೧೯೫೭ ರಂದು ಬಿ.ಡಿ.ಜತ್ತಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಗೇಣಿದಾರಿ ಮತ್ತು ಕೃಷಿ ಭೂಮಿ ಕಾನೂನು ಸಮಿತಿಯನ್ನು ರಾಜ್ಯ ಸರಕಾರ ನೇಮಕ

ಮಾಡಿತು. ಅದೇ ವರ್ಷದ ಸೆಪ್ಟೆಂಬರ್ ತಿಂಗಳಿನಲ್ಲಿ ಆ ಸಮಿತಿ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿಸಿತು. ಇದರ ಪರಿಣಾಮವಾಗಿ ಸಿದ್ಧಪಡಿಸಿದ ಭೂ ಸುಧಾರಣೆ ಮಸೂದೆಯ ಕರಡನ್ನು ೪೬ ಸದಸ್ಯರಿದ್ದ ಜಂಟಿ ಸದನ ಸಮಿತಿಯೊಂದು ಕೂಲಂಕಷವಾಗಿ ಪರಿಶೀಲಿಸಿ ೨೫ನೇ ಮಾರ್ಚ್ ೧೯೬೧ ರಂದು ತನ್ನ ವರದಿಯನ್ನು ಸರಕಾರಕ್ಕೆ ನೀಡಿತು. ಸಣ್ಣಪುಟ್ಟ ಹೊಂದಾಣಿಕೆಗಳೊಡನೆ ನವೆಂಬರ್ ೧೯೬೧ ರಲ್ಲಿ ವಿಧಾನಮಂಡಲದಲ್ಲಿ ಅಂಗೀಕಾರಗೊಂಡ ಈ ಅಧಿನಿಯಮಕ್ಕೆ ೧೯೬೨ರಲ್ಲಿ ಭಾರತದ ರಾಷ್ಟ್ರಪತಿಯವರ ಅಂಕಿತ ದೊರೆಯಿತು. ದಿನಾಂಕ ೨ನೇ ಅಕ್ಟೋಬರ್ ೧೯೬೫ ರಿಂದ ಜಾರಿಗೆ ಬಂದ ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧ (೧೯೬೨ರ ೧೦ನೆಯದು)ವನ್ನು ೧೯೬೬, ೧೯೬೭, ೧೯೬೮, ೧೯೭೦, ೧೯೭೨ ಮತ್ತು ೧೯೭೪ರಲ್ಲಿ ತಿದ್ದುಪಡಿ ಮಾಡಲಾಗಿದೆ.

ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧ ರ ಉಪಬಂಧಗಳ ಮೇರೆಗೆ, ಒಪ್ಪಂದ ಅಥವಾ ಬೇರೆ ರೀತಿಯಲ್ಲಿ ನಿಗದಿಯಾಗಿದ್ದ ಅವಧಿ ಮುಗಿದ ಕಾರಣದಿಂದಾಗಿ ಯಾವುದೇ ಗೇಣಿಗಾರಿಕೆಯನ್ನು ಮುಕ್ತಾಯಗೊಳಿಸುವಂತಿಲ್ಲ. ೧೦ನೇ ಸೆಪ್ಟೆಂಬರ್ ೧೯೫೭ರ ಹಿಂದೆ ಗೇಣಿದಾರರಾಗಿದ್ದು, ಅದರಿಂದ ಹೊರದೂಡಲ್ಪಟ್ಟಿದ್ದವರು ಗೇಣಿ ಮಾಡುತ್ತಿದ್ದ ಜಮೀನುಗಳನ್ನು ಹಿಂಪಡೆಯುವ ಅವಕಾಶವನ್ನು ನೀಡಲಾಯಿತು. ಭೂ ಮಾಲೀಕನು ತನ್ನ ಜಮೀನನ್ನು ಮಾರಾಟ ಮಾಡಬೇಕಾದಲ್ಲಿ ಪ್ರಥಮ ಅವಕಾಶವನ್ನು ಗೇಣಿದಾರನಿಗೇ ನೀಡಬೇಕಾಯಿತು. ಕೆಲವೊಂದು ಸಂದರ್ಭಗಳಲ್ಲಿ ಗೇಣಿಗೆ ನೀಡಲಾಗಿದ್ದ ಜಮೀನಿನಲ್ಲಿ ಕೇವಲ ಅರ್ಧದಷ್ಟನ್ನು ಮಾತ್ರ ಭೂ ಮಾಲೀಕನು ಹಿಂಪಡೆಯಬಹುದಾಗಿತ್ತು. ಕೃಷಿಯನ್ನೇ ತನ್ನ ಮೂಲವೃತ್ತಿಯನ್ನಾಗಿ ಆಯ್ದುಕೊಳ್ಳಲು ಇಷ್ಟವಿರುವ ವ್ಯಕ್ತಿಯು ಸರಕಾರದ ಅನುಮತಿ ಪಡೆದು, ಬೇರೆ ಮಿತಿಗಳಿಗನುಸಾರವಾಗಿ ಕೃಷಿ ಭೂಮಿಯನ್ನು ಖರೀದಿಸಲು ಅವಕಾಶ ಮಾಡಿಕೊಡಲಾಯಿತು.

ಕರ್ನಾಟಕ ಭೂ ಸುಧಾರಣಾ ಅಧಿನಿಯಮ, ೧೯೬೧ರಲ್ಲಿ ಸಣ್ಣ ಹಿಡುವಳಿದಾರರು, ವಿಧವೆಯರು, ಅಪ್ರಾಪ್ತ ವಯಸ್ಕರು, ಅಂಗವಿಕಲರು, ಸೈನಿಕರು ಮತ್ತು ನಾವಿಕರು ಮುಂತಾದವರು ತಮ್ಮ ಜಮೀನುಗಳನ್ನು ಗೇಣಿಗೆ ನೀಡಲು ಅವಕಾಶವಿತ್ತು.

ಅನೇಕ ಕಾರಣಗಳಿಂದಾಗಿ ೧೯೬೧ರ ಭೂ ಸುಧಾರಣಾ ಕಾಯ್ದೆಯ ತನ್ನ ಉದ್ದೇಶಿತ ಗುರಿಯನ್ನು ಸಂಪೂರ್ಣವಾಗಿ ಸಾಧಿಸಲು ಆಗಲಿಲ್ಲ. ಸಿವಿಲ್ ವ್ಯವಹಾರಗಳ ಜಟಿಲವಾದ ಕಾರ್ಯವಿಧಾನಗಳು, ಖರ್ಚುವೆಚ್ಚಗಳು, ಭೂ ಮಾಲೀಕರು ನ್ಯಾಯಾಲಯಗಳಲ್ಲಿ ದಾಖಲಿಸಿದ ಸಹಸ್ರಾರು ಪ್ರಕರಣಗಳು ಈ ಕಾಯ್ದೆಯ ಉದ್ದೇಶಿತ ಗುರಿಗಳನ್ನು ಸಾಧಿಸಲು ಅಡ್ಡಿಯಾಗಿ ಪರಿಣಮಿಸಿದವು.

ಈ ವೇಳೆಗೆ ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಭೂ ಸುಧಾರಣಾ ಕ್ರಮಗಳನ್ನು ತ್ವರಿತವಾಗಿ ತೆಗೆದುಕೊಳ್ಳಬೇಕೆಂಬ ಸಾರ್ವಜನಿಕ ಅಭಿಪ್ರಾಯವು ಬಲವಾಗತೊಡಗಿತ್ತು. ಜೊತೆಗೆ ಭಾರತ ಸರಕಾರವು ಈ ದಿಕ್ಕಿನಲ್ಲಿ ಕೆಲವು ನಿರ್ದಿಷ್ಟ ಮಾರ್ಗಸೂಚಿಗಳನ್ನು ಒದಗಿಸಿತು. ಇದರ ಪರಿಣಾಮವಾಗಿ ೧೯೬೧ರ ಭೂ ಸುಧಾರಣಾ ಕಾಯ್ದೆಗೆ ಸಮಗ್ರ ತಿದ್ದುಪಡಿಯನ್ನು ಮಾಡಿ ೧೯೭೩ರಲ್ಲಿ ರಾಜ್ಯ ಶಾಸನ ಸಭೆಯಲ್ಲಿಟ್ಟು ಅನುಮೋದನೆ ಪಡೆದುಕೊಳ್ಳಲಾಯಿತು. ಈ ತಿದ್ದುಪಡಿ ಮೂಲಕ ಕ್ರಾಂತಿಕಾರಿ ಬದಲಾವಣೆಗಳನ್ನು ತಂದು ದಿನಾಂಕ ೧–೪–೧೯೭೪ರಿಂದ ಜಾರಿಗೊಳಿಸಲಾಯಿತು.

ಅದರಂತೆ, 'ಉಳುವವನೇ ಭೂಮಿಗೆ ಒಡೆಯ' ಎಂಬ ಘೋಷಣೆಯನ್ನು ಕರ್ನಾಟಕದಲ್ಲಿ ಕಾರ್ಯರೂಪಕ್ಕೆ ತರಲಾಯಿತು. ಇದರಿಂದಾಗಿ, ಸಹಸ್ರಾರು ಸಂಖ್ಯೆಯಲ್ಲಿ ಕೃಷಿಕಾರ್ಮಿಕರು, ಹರಿಜನ ಗಿರಿಜನರು ಮತ್ತು ಇತರೆ

ಭೂಹೀನರು ಅವರವರು ಗೇಣಿದಾರರಾಗಿ ಕೃಷಿ ಮಾಡುತ್ತಿದ್ದ ಜಮೀನುಗಳ ಸ್ವಾಮ್ಯವನ್ನು ಪಡೆದುಕೊಂಡರು. 'ಕುಟುಂಬ' ಎಂಬ ಪದವನ್ನು ಮರು ವ್ಯಾಖ್ಯಾನಿಸುವ ಮೂಲಕ ಓರ್ವ ವ್ಯಕ್ತಿ, ಆ ವ್ಯಕ್ತಿಯ ಪತಿ ಯಾ ಪತ್ನಿ, ಅಪ್ರಾಪ್ತ ವಯಸ್ಸಿನ ಗಂಡು ಮಕ್ಕಳು ಮತ್ತು ವಿವಾಹವಾಗದಿರುವ ಹೆಣ್ಣುಮಕ್ಕಳು ಅದರ ಸದಸ್ಯರೆಂದು ಹೇಳಲಾಯಿತು. ಓರ್ವ ವ್ಯಕ್ತಿ ಅಥವಾ ಆ ವ್ಯಕ್ತಿಯ ಪತಿ ಅಥವಾ ಪತ್ನಿ ಮೃತರಾಗಿದ್ದಲ್ಲಿ, ಅವರ ಅಪ್ರಾಪ್ತ ವಯಸ್ಸಿನ ಗಂಡುಮಕ್ಕಳು ಮತ್ತು ವಿವಾಹವಾಗದಿರುವ ಹೆಣ್ಣುಮಕ್ಕಳು ಮಾತ್ರ ಆ ಕುಟುಂಬ ಸದಸ್ಯರೆಂದು ಮಾನ್ಯ ಮಾಡಲ್ಪಡುತ್ತಾರೆ. ಈ ಬಗೆಯಲ್ಲಿ ಪರಿಭಾಷಿಸಲ್ಪಟ್ಟ ಯಾವುದೇ ಒಂದು ಕುಟುಂಬ ಹೊಂದಬಹುದಾದ ಜಮೀನಿನ ಗರಿಷ್ಠ ಮಿತಿಯನ್ನು ಗೊತ್ತುಪಡಿಸಲಾಯಿತು. ಯಾವುದಾದರೊಂದು ಕುಟುಂಬದ ಸದಸ್ಯನಾಗಿಲ್ಲದ ವ್ಯಕ್ತಿ ಅಥವಾ ಕುಟುಂಬವಿಲ್ಲದಿರುವ ವ್ಯಕ್ತಿ ಅಥವಾ ಒಂದು ಕುಟುಂಬ ೧೦ ಯೂನಿಟ್ಟುಗಳಿಗಿಂತ ಹೆಚ್ಚು ವಿಸ್ತೀರ್ಣವುಳ್ಳ ಜಮೀನನ್ನು ಹೊಂದುವಂತಿಲ್ಲ ಎಂದು ಹೇಳಲಾಯಿತು. ಯಾವುದೇ ಒಂದು ಕುಟುಂಬದ ಸದಸ್ಯರ ಸಂಖ್ಯೆ ಐದಕ್ಕಿಂತ ಹೆಚ್ಚಿದ್ದಲ್ಲಿ, ಹಾಗೆ ಹೆಚ್ಚಿಗೆ ಇರುವ ಪ್ರತಿಯೊಬ್ಬ ಸದಸ್ಯನ ಲೆಕ್ಕದಲ್ಲಿ ಎರಡು ಹೆಚ್ಚುವರಿ ಯೂನಿಟ್ಟುಗಳ ಜಮೀನನ್ನು ಆ ಕುಟುಂಬ ಹೊಂದಬಹುದಾಗಿದೆ. ಕುಟುಂಬವೊಂದರ ಸಂದರ್ಭದಲ್ಲಿ ಭೂಮಿತಿಯನ್ನು ಅದು ಹೊಂದಿರುವ ಒಟ್ಟು ಜಮೀನಿಗೆ ಅನ್ವಯಿಸುತ್ತಿದ್ದು ಅದರಲ್ಲಿ "ಸ್ತ್ರೀ ಧನ" ಭೂಮಿಯೂ ಸೇರಿರುತ್ತದೆ. ಅವಿಭಕ್ತ ಕುಟುಂಬಗಳ ಸದಸ್ಯರು ಮತ್ತು ಖಾಸಗಿ ಅಥವಾ ಸಾರ್ವಜನಿಕ ನ್ಯಾಸಗಳು ಹೊಂದಿರಬಹುದಾದ ಭೂಮಿತಿಗಳ ಬಗ್ಗೆಯೂ ಭೂ ಸುಧಾರಣಾ ಅಧಿನಿಯಮ ೧೯೬೧, ವಿವರಗಳನ್ನು ನೀಡುತ್ತದೆ. ಕೃಷಿಕ, ಕೃಷಿ ಕಾರ್ಮಿಕ ಅಥವಾ ಕೃಷಿಕ ಕುಟುಂಬಕ್ಕೆ ಸೇರದ ಯಾವುದೇ ವ್ಯಕ್ತಿ, ಕುಟುಂಬ ಅಥವಾ ಅವಿಭಕ್ತ ಕುಟುಂಬ ಕೃಷಿಯೇತರ ಮೂಲಗಳಿಂದ ವಾರ್ಷಿಕ ೧೨,೦೦೦ ರೂಪಾಯಿಗಳ ಆದಾಯವನ್ನು ಹೊಂದಿದ್ದರೆ, ಅಂತಹ ವ್ಯಕ್ತಿ ಅಥವಾ ಕುಟುಂಬ ಕೃಷಿ ಭೂಮಿಯನ್ನು ಖರೀದಿಸಕೂಡದೆಂಬ ನಿಯಮವನ್ನು ಸಹ ಭೂ ಸುಧಾರಣಾ ಅಧಿನಿಯಮ (೧೯೬೧) ಒಳಗೊಂಡಿದ್ದು, ೦೧–೦೩–೭೪ರಿಂದ ೧೯೯೫ರವರೆಗೆ ೫೦,೦೦೦ ಆದಾಯ ಮಿತಿ ಇತ್ತು. ನಂತರ ಪರಿಷ್ಕರಿಸಿದ್ದು ಈಗ ಅಂತಹ ಆದಾಯ ₹ ಎರಡು ಲಕ್ಷಕ್ಕಿಂತ ಹೆಚ್ಚಿರಬಾರದು. ಅಂತಹವರು ಉಪವಿಭಾಗಾಧಿಕಾರಿಗಳಿಂದ ಅನುಮತಿ ಪಡೆದು ಜಮೀನು ಖರೀದಿಸಬಹುದು. ಸಂಘ–ಸಂಸ್ಥೆಗಳು ಖರೀದಿಸಬೇಕಾದರೆ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರದ ಪೂರ್ವಾನುಮತಿ ಪಡೆಯಬೇಕು. ಭೂ ಮಾಲೀಕರಾಗಿ ಅಥವಾ ಗೇಣಿದಾರರಾಗಿ ಅಥವಾ ಅಡಮಾನದಾರರಾಗಿ ಜಮೀನು ಹೊಂದಲು ಕಲಂ ೬೩ರಡಿಯಲ್ಲಿ ಹಲವಾರು ಮಿತಿಗಳನ್ನು ನಿಗದಿಪಡಿಸಲಾಯಿತು. ಅಧಿಭೋಗದಾರರು ಎಂದು ನೋಂದಾಯಿಸಲು ಅರ್ಹರಾದ ಎಲ್ಲಾ ವ್ಯಕ್ತಿಗಳಿಗೆ ಸಂಬಂಧಿಸಿದ ತಾಲ್ಲೂಕು ಭೂ ನ್ಯಾಯಮಂಡಳಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಮಾಡಿಕೊಡಲಾಯಿತು.

ಇದರ ಪರಿಣಾಮವಾಗಿ ೧ನೇ ಏಪ್ರಿಲ್ ೧೯೭೪ ರಂದು ಗೇಣಿದಾರನ ಸ್ವಾಧೀನದಲ್ಲಿದ್ದ ಎಲ್ಲಾ ಜಮೀನುಗಳೂ ಸರಕಾರದಲ್ಲಿ ನಿಹಿತವಾದವು. ಅಂತಹ ಜಮೀನುಗಳನ್ನು ಸರಕಾರವು ಆಯಾ ಗೇಣಿದಾರರಿಗೆ ಭೂ ನ್ಯಾಯ ಮಂಡಳಿಗಳ ಮೂಲಕ ನೀಡುತ್ತಾ ಬರುತ್ತಿದೆ. ಈ ದಿನಾಂಕದ ನಂತರ ಗೇಣಿಗೆ ನೀಡಲಾಗುವ ಯಾವುದೇ ಜಮೀನನ್ನು ಸರಕಾರವೇ ಮುಟ್ಟುಗೋಲು ಹಾಕಿಕೊಳ್ಳುತ್ತದೆ. ಸೈನಿಕರು ಮತ್ತು ನಾವಿಕರನ್ನು ಬಿಟ್ಟು ಬೇರೆ ಯಾರೂ ಸಹ ತಮ್ಮ ಜಮೀನುಗಳನ್ನು ಗೇಣಿಗೆ ನೀಡಕೂಡದೆಂಬ ಕಟ್ಟುನಿಟ್ಟಾದ ನಿರ್ಬಂಧವನ್ನು ಹೇರಲಾಗಿದೆ. ವಶಪಡಿಸಿಕೊಂಡ ಒಟ್ಟು ಜಮೀನಿನ ಅರ್ಧದಷ್ಟನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ಮೀಸಲಿರಿಸಲಾಯಿತು. ಗೇಣಿದಾರಿಕೆ ರದ್ದತಿಯಿಂದ ದೊರಕಿದ ಹೆಚ್ಚುವರಿ ಜಮೀನನ್ನು ನೆಲೆ ತಪ್ಪಿದ ಗೇಣಿದಾರರಿಗೆ ನೀಡಲಾಯಿತು. ಕೃಷಿ ಕಾರ್ಮಿಕರು, ಭೂ ಹೀನರು, ಮತ್ತು ₹ ೨,೦೦೦ಗಳಿಗಿಂತ (ಈಗ ₹ ೪,೮೦೦ಗಳು) ಕಡಿಮೆ ವಾರ್ಷಿಕ ಆದಾಯವಿರುವ ಮಾಜಿ ಸೈನಿಕರು ಮುಂತಾದವರಿಗೆ ಮಂಜೂರು ಮಾಡಬಹುದೆಂದು ಹೇಳಲಾಯಿತು.

ಮಂಜೂರಿದಾರ ಅವರಿಗೆ ಸಂದ ಎ, ಬಿ, ಅಥವಾ ಸಿ ವರ್ಗದ ಜಮೀನಿನ ವಾರ್ಷಿಕ ಉತ್ಪನ್ನದ ಶೇಕಡಾ ೧೫ರಷ್ಟು ಮೌಲ್ಯವನ್ನು ಹಣದ ರೂಪದಲ್ಲಿ ಸರಕಾರಕ್ಕೆ ಪಾವತಿ ಮಾಡಬೇಕೆಂದು ನಿರ್ಬಂಧ ಮಾಡಲಾಯಿತು; ಡಿ ವರ್ಗದ ಜಮೀನಾಗಿದ್ದಲ್ಲಿ ಸರಕಾರಕ್ಕೆ ನೀಡಬೇಕಾದ ಮೊತ್ತವನ್ನು ೨೦ ಪಟ್ಟು ಎಂದು ಗೊತ್ತುಪಡಿಸಲಾಯಿತು.

**ಕೋಷ್ಟಕ ೯.೮: ಕರ್ನಾಟಕ ಭೂ ಸುಧಾರಣಾ ಕಾಯ್ದೆಯಡಿ ಸ್ವೀಕೃತವಾದ ಸಂಖ್ಯೆ, ವಿಲೇವಾರಿ ಹಾಗೂ ಬಾಕಿ ಇರುವ ಮಾಹಿತಿಯನ್ನು ತೋರಿಸುವ ತಃಖ್ತೆ (೨೦೧೨ನೇ ಮಾರ್ಚ್ ಅಂತ್ಯಕ್ಕೆ)**

**ನಮೂನೆ–೭**

**ಜಿಲ್ಲೆ: ಚಾಮರಾಜನಗರ**

| ತಾಲೂಕು | ಒಟ್ಟು ಸ್ವೀಕರಿಸಲಾದ ಅರ್ಜಿಗಳು | | | ಒಟ್ಟು ವಿಲೇವಾರಿ ಮಾಡಿದ ಅರ್ಜಿಗಳು | | | ಅರ್ಜಿದಾರರ ಪರವಾಗಿ ವಿಲೇಯಾದ ಅರ್ಜಿಗಳು | | | ತಿರಸ್ಕರಿಸಿದ ಅರ್ಜಿಗಳು | | | ಬಾಕಿ ಉಳಿದ ಅರ್ಜಿಗಳು | | |
|---|---|---|---|---|---|---|---|---|---|---|---|---|---|---|---|
| | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | |
| | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ |
| ಚಾ.ರಾ.ನಗರ | ೨೪೦೫ | ೬೩೨೦ | ೧೯ | ೨೪೦೫ | ೬೩೨೦ | ೧೯ | ೯೦೦ | ೧೮೧೩ | ೩೭ | ೧೫೨೫ | ೪೫೦೬ | ೨೨ | ೦ | ೦ | ೦ |
| ಗುಂಡ್ಲುಪೇಟೆ | ೨೫೧೬ | ೯೨೪೨ | ೦ | ೨೫೧೬ | ೯೨೪೨ | ೦ | ೧೦೪೬ | ೨೫೬೯ | ೦ | ೧೪೭೦ | ೬೬೭೩ | ೦ | ೦ | ೦ | ೦ |
| ಕೊಳ್ಳೇಗಾಲ | ೩೩೮೧ | ೮೧೮೫ | ೩೫ | ೩೩೮೧ | ೮೧೮೫ | ೩೫ | ೧೦೯೮ | ೧೨೪೬ | ೮ | ೨೨೬೩ | ೬೯೩೯ | ೨೭ | ೦ | ೦ | ೦ |
| ಯಳಂದೂರು | ೧೮೯೫ | ೨೪೬೪ | ೦ | ೧೮೯೫ | ೨೪೬೪ | ೦ | ೧೦೨೦ | ೧೧೧೧ | ೧೨ | ೮೭೫ | ೧೩೫೨ | ೨೮ | ೦ | ೦ | ೦ |
| ಒಟ್ಟು | ೧೦೧೯೭ | ೨೬೨೧೨ | ೧೪ | ೧೦೧೯೭ | ೨೬೨೧೨ | ೧೪ | ೪೦೬೪ | ೬೭೪೦ | ೧೭ | ೬೧೩೩ | ೧೯೪೭೧ | ೩೭ | ೦ | ೦ | ೦ |

**ನಮೂನೆ ೭ 'ಎ'**

| ತಾಲೂಕು | ಒಟ್ಟು ಸ್ವೀಕರಿಸಲಾದ ಅರ್ಜಿಗಳು | | | ಒಟ್ಟು ವಿಲೇವಾರಿ ಮಾಡಿದ ಅರ್ಜಿಗಳು | | | ಅರ್ಜಿದಾರರ ಪರವಾಗಿ ವಿಲೇಯಾದ ಅರ್ಜಿಗಳು | | | ತಿರಸ್ಕರಿಸಿದ ಅರ್ಜಿಗಳು | | | ಬಾಕಿ ಉಳಿದ ಅರ್ಜಿಗಳು | | |
|---|---|---|---|---|---|---|---|---|---|---|---|---|---|---|---|
| | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | | ಸಂಖ್ಯೆ | ಕ್ಷೇತ್ರ | |
| | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ |
| ಚಾಮರಾಜನಗರ | ೨೬೦ | ೭೬೯ | ೨೯ | ೧೧೧ | ೩೯೩ | ೧೦ | ೧೭ | ೪೧ | ೨೦ | ೯೪ | ೩೫೧ | ೩೦ | ೧೪೯ | ೩೭೬ | ೧೯ |
| ಗುಂಡ್ಲುಪೇಟೆ | ೨೮೬ | ೫೬೫ | ೪ | ೧೯೪ | ೪೩೫ | ೩೩ | ೩೬ | ೯೧ | ೩೦ | ೧೫೮ | ೩೪೪ | ೩ | ೯೨ | ೧೨೯ | ೧೧ |
| ಕೊಳ್ಳೇಗಾಲ | ೨೫೩ | ೭೯೨ | ೩೧ | ೨೫೩ | ೭೯೨ | ೩೧ | ೧೩ | ೨೭ | ೫ | ೨೪೦ | ೭೬೫ | ೨೬ | ೦ | ೦ | ೦ |
| ಯಳಂದೂರು | ೨೬೮ | ೩೨೦ | ೩೯ | ೨೬೫ | ೩೧೯ | ೦ | ೬೧ | ೪೯ | ೧೯ | ೨೦೪ | ೨೬೯ | ೨೧ | ೩ | ೧ | ೩೯ |
| ಒಟ್ಟು | ೧೦೬೭ | ೨೪೪೮ | ೨೩ | ೮೨೩ | ೧೯೪೦ | ೩೪ | ೧೨೭ | ೨೦೯ | ೩೪ | ೬೯೬ | ೧೭೩೧ | ೦ | ೨೪೪ | ೫೦೭ | ೨೯ |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

## ಭೂ ನ್ಯಾಯ ಮಂಡಳಿ

ಕರ್ನಾಟಕ ಭೂ ಸುಧಾರಣೆ ಅಧಿನಿಯಮ ೧೯೬೧ ಸೆಕ್ಷನ್ ೪೮ರಲ್ಲಿ ಹೇಳುವಂತೆ, ಸೂಕ್ತ ಅಧಿಸೂಚನೆ ಹೊರಡಿಸುವ ಮೂಲಕ ರಾಜ್ಯ ಸರಕಾರವು ಪ್ರತಿ ತಾಲೂಕಿಗೂ ಒಂದು ಭೂ ನ್ಯಾಯ ಮಂಡಳಿಯನ್ನು ರಚಿಸಬಹುದಾಗಿದೆ. ಇದರಲ್ಲಿ ಸಂಬಂಧಿಸಿದ ಕಂದಾಯ ಉಪವಿಭಾಗದ ಸಹಾಯಕ ಆಯುಕ್ತರು ಮತ್ತು ರಾಜ್ಯ ಸರಕಾರದಿಂದ ನಾಮಕರಣಗೊಂಡ ನಾಲ್ವರು ಸದಸ್ಯರಿರುತ್ತಾರೆ. ಅಗತ್ಯವೆನಿಸಿದಲ್ಲಿ ಸರಕಾರವು ಯಾವುದೇ

ತಾಲೂಕಿಗೆ ಒಂದಕ್ಕಿಂತ ಹೆಚ್ಚಿನ ಸಂಖ್ಯೆಯ ಭೂ ನ್ಯಾಯಮಂಡಳಿಗಳನ್ನು ರಚಿಸಲು ಅವಕಾಶವಿದ್ದು ಕೆಲವಾರು ಸಂದರ್ಭಗಳಲ್ಲಿ ಹಾಗೆ ಮಾಡಲಾಗಿದೆ. ಸಹಾಯಕ ಆಯುಕ್ತರು ಭೂ ನ್ಯಾಯ ಮಂಡಳಿಯ ಅಧ್ಯಕ್ಷರಾಗಿರುತ್ತಿದ್ದರು. ಆಗಿಂದಾಗ್ಗೆ ಭೂ ನ್ಯಾಯಮಂಡಳಿಯನ್ನು ಪುನರ್ರಚಿಸಲು ಸರಕಾರಕ್ಕೆ ಅಧಿಕಾರವಿದೆ. ಭೂ ನ್ಯಾಯಮಂಡಳಿಯ ನಾಲ್ವರು ಸದಸ್ಯರ ಪೈಕಿ ಒಬ್ಬನಾದರೂ ಪರಿಶಿಷ್ಟಜಾತಿ/ಪಂಗಡಕ್ಕೆ ಸೇರಿದವನಾಗಿರಬೇಕು. ಪ್ರಕರಣಗಳನ್ನು ಬಹುಮತದ ಆಧಾರದ ಮೇಲೆ ತೀರ್ಮಾನಿಸಲಾಗುತ್ತದೆ. ಮೂವರು ಸದಸ್ಯರು ಮತ್ತು ಅಧ್ಯಕ್ಷರು ಸೇರಿದರೆ ಅವಶ್ಯ ಕೋರಂ ಇದ್ದಂತೆ. ರಾಜ್ಯದಲ್ಲಿ ೧೭೬ ಭೂ ನ್ಯಾಯಮಂಡಳಿಗಳನ್ನು ರಚಿಸಲಾಗಿದ್ದಿತು.

ಭೂ ನ್ಯಾಯಮಂಡಳಿ ಅರೆ ನ್ಯಾಯಸ್ಥಾನ ರೂಪದ ಸಂಸ್ಥೆಯಾಗಿದ್ದು, ಸಂಕ್ಷಿಪ್ತ ವಿಚಾರಣೆ ನಡೆಸುವ ಅಧಿಕಾರ ಹೊಂದಿರುತ್ತದೆ. ಪ್ರಾರಂಭದಲ್ಲಿ ಭೂ ನ್ಯಾಯ ಮಂಡಳಿಗಳ ಮುಂದೆ ವಕೀಲರು ಹಾಜರಾಗುವುದನ್ನು ನಿಷೇಧಿಸಲಾಗಿತ್ತು. ಆದರೆ ೧೯೯೧ರಲ್ಲಿ ಕಾಯಿದೆಗೆ ಮಾಡಿದ ತಿದ್ದುಪಡಿಯು ವಕೀಲರು ಹಾಜರಾಗಲು ಅವಕಾಶವನ್ನು ದೊರಕಿಸಿದೆ. ಭೂ ನ್ಯಾಯಮಂಡಳಿ ತನ್ನ ತೀರ್ಪನ್ನು ಬಹುಮತದಿಂದ ನೀಡಬೇಕು. ಒಂದು ವೇಳೆ ಅಧ್ಯಕ್ಷರ ಅಭಿಪ್ರಾಯಕ್ಕೆ ತದ್ವಿರುದ್ಧ ಅಭಿಪ್ರಾಯವು ಬಹುಮತದಿಂದ ಹೊರಟರೆ ಆ ಬಹುಮತದ ತೀರ್ಪೇ ಕಾನೂನು ಪ್ರಕಾರ ಸಿಂಧುವಾಗುತ್ತದೆ.

ಕೃಷಿ ಭೂಮಿಯನ್ನು ಓರ್ವ ಗೇಣಿದಾರನಿಗೆ ಖಾಯಂ ಮಾಡಿದ ಆದೇಶವನ್ನು ಹೊರಡಿಸಿದ ನಂತರ ತಹಸೀಲ್ದಾರನು ಹಕ್ಕುಪತ್ರಗಳನ್ನು ನಮೂನೆ ೧೦ರಲ್ಲಿ ಗೇಣಿದಾರನಿಗೆ ಕೊಡುತ್ತಾರೆ. ಈ ಹಕ್ಕುಪತ್ರವನ್ನು ಪಡೆದ ದಿನದಿಂದ ೧೫ ವರ್ಷಗಳವರೆಗೆ ಆ ಜಮೀನನ್ನು ಅವನು ಪರಭಾರೆ ಮಾಡುವಂತಿಲ್ಲ. ಅಧಿಭೋಗದಾರಿಕೆ ಹಕ್ಕನ್ನು ಪಡೆದ ಮಾಜಿ ಗೇಣಿದಾರನು/ಹೊಸ ಹಿಡುವಳಿದಾರನು ಸರಕಾರಕ್ಕೆ ಆ ಜಮೀನಿನ ಬಾಬ್ತು ವಾರ್ಷಿಕ ಭೂ ತೆರಿಗೆ ಕಟ್ಟಲು ಬಾಧ್ಯಸ್ಥನಾಗಿರುತ್ತಾನೆ.

ಕರ್ನಾಟಕ ಭೂ ಸುಧಾರಣಾ ಕಾಯಿದೆಯು ಭೂ ನ್ಯಾಯ ಮಂಡಳಿಗಳಿಗೆ ವ್ಯಾಪಕ ಮತ್ತು ಅಪರಿಮಿತ ಅಧಿಕಾರಗಳನ್ನು ನೀಡಿದೆ. ಇದರಿಂದಾಗಿ, ರಾಜ್ಯಾದ್ಯಂತ ಲಕ್ಷಾಂತರ ಗೇಣಿದಾರಿಕೆ ಅರ್ಜಿಗಳು, ಮನೆ ನಿವೇಶನ ಅರ್ಜಿಗಳು, ಹೆಚ್ಚುವರಿ ಜಮೀನಿನ ಘೋಷಣೆಗಳು ತೀರ್ಮಾನವಾಗಿವೆ. ಭೂ ನ್ಯಾಯ ಮಂಡಳಿಯು ಮಾಡುವ ಆಜ್ಞೆ ಪ್ರಶ್ನಾತೀತವಾಗಿದ್ದು, ಬೇರಾವುದೇ ಸಿವಿಲ್ ನ್ಯಾಯಾಲಯವು ಅದು ನೀಡುವ ಆಜ್ಞೆಯ ಕುರಿತಾಗಿ ಯಾವುದೇ ಕ್ರಮವನ್ನು ಜರುಗಿಸುವ ಅಧಿಕಾರ ಹೊಂದಿರುವುದಿಲ್ಲ. ಆದರೆ ನ್ಯಾಯ ಮಂಡಳಿಯ ಆಜ್ಞೆಯಿಂದ ಬಾಧೆಗೊಳಗಾದವರು ರಾಜ್ಯದ ಉಚ್ಚ ನ್ಯಾಯಾಲಯದ ಮೊರೆ ಹೋಗಬಹುದಿತ್ತು. ಭೂ ನ್ಯಾಯಮಂಡಳಿಗಳು ವಿಚಾರಣೆ ನಡೆಸುವಾಗ ಸೂಕ್ತ ಕಾನೂನಿನ ಕ್ರಮಗಳ ಪಾಲನೆಯಾಗಿಲ್ಲವೆಂದು ಆರೋಪಿಸಿ ಸಹಸ್ರಾರು ಮೊಕದ್ದಮೆಗಳನ್ನು ಹೈಕೋರ್ಟಿನಲ್ಲಿ ದಾಖಲು ಮಾಡಲಾಯಿತು. ಆದರೆ ಉಚ್ಚ ನ್ಯಾಯಾಲಯವು ಕೂಡ ತಾನೇ ವಿಚಾರಣೆ ನಡೆಸಿ ತೀರ್ಪು ನೀಡುವ ಹಾಗೆ ಇಲ್ಲವಾದುದರಿಂದ, ಮರು ವಿಚಾರಣೆ ನಡೆಸುವ ಅಗತ್ಯವಿದೆಯೆಂದು ಹೇಳಿ ಭೂ ನ್ಯಾಯಮಂಡಳಿಗಳಿಗೇ ಅವುಗಳನ್ನು ಹಿಂತಿರುಗಿಸುತ್ತಾ ಬಂದಿತು. ಹೆಚ್ಚಿನ ಸಂಖ್ಯೆಯಲ್ಲಿ ಇಂತಹ ಪ್ರಕರಣಗಳು ಉಚ್ಚ ನ್ಯಾಯಾಲಯದ ಮುಂದೆ ಬರುತ್ತಿದ್ದುದರಿಂದ ಇತರ ಪ್ರಕರಣಗಳ ವಿಲೇವಾರಿ ವೇಗವು ಕುಂಠಿತವಾಗತೊಡಗಿತು. ಈ ಪರಿಸ್ಥಿತಿಯನ್ನು ಗಮನಿಸಿದ ಸರಕಾರವು ಭೂ ಸುಧಾರಣಾ ಕಾನೂನಿಗೆ ತಿದ್ದುಪಡಿ ತಂದು (೧೯೮೬) ಜಿಲ್ಲೆಗೊಂದರಂತೆ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರವನ್ನು ಸೆಕ್ಷನ್ ೧೧೬–ಎ ಪ್ರಕಾರ ಸ್ಥಾಪಿಸಿತು. ಇಂತಹ ಪ್ರತಿಯೊಂದು ಪ್ರಾಧಿಕಾರದಲ್ಲಿ ನ್ಯಾಯಾಂಗ

ಇಲಾಖೆಯ ಓರ್ವ ಸಿವಿಲ್ ಜಡ್ಜ್ ಮತ್ತು ಕಂದಾಯ ಇಲಾಖೆಯ ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಯೊಬ್ಬರು ಜೊತೆಯಾಗಿ ಕುಳಿತು ಮೇಲ್ಮನವಿಗಳನ್ನು ಆಲಿಸಿ ತೀರ್ಪು ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಉಚ್ಛ ನ್ಯಾಯಾಲಯದಲ್ಲಿದ್ದ ಸಹಸ್ರಾರು ಪ್ರಕರಣಗಳನ್ನು ಈ ಮೇಲ್ಮನವಿ ಪ್ರಾಧಿಕಾರಗಳಿಗೆ ವರ್ಗಾಯಿಸಲಾಯಿತು.

ಸರಕಾರವು ೧೯೯೦ರಲ್ಲಿ ಕಾಯಿದೆಗೆ ಮತ್ತೊಂದು ತಿದ್ದುಪಡಿ ಮಾಡಿ ಭೂ ಸುಧಾರಣಾ ಮೇಲ್ಮನವಿ ಪ್ರಾಧಿಕಾರಗಳನ್ನು ರದ್ದುಗೊಳಿಸಿತ್ತು. ನಿರೀಕ್ಷೆಯಂತೆಯೇ ಹಿಂದೆ ಉಂಟಾಗಿದ್ದ ಸಮಸ್ಯೆಗಳೇ ಪುನರಾವರ್ತನೆಯಾಗತೊಡಗಿದವು. ಉಚ್ಛ ನ್ಯಾಯಾಲಯವು ಪುನಃ ಮೇಲ್ಮನವಿ ಪ್ರಾಧಿಕಾರಗಳನ್ನು ಸ್ಥಾಪಿಸಲು ಸರಕಾರಕ್ಕೆ ಸೂಚನೆ ನೀಡಿತು. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ (ಕೆ.ಎ.ಟಿ)ಕ್ಕೆ ಮೇಲ್ಮನವಿ ಸಲ್ಲಿಸಲು ಕರ್ನಾಟಕ ಭೂ ಸುಧಾರಣಾ ಕಾಯ್ದೆ ೧೯೬೧ ರ ಅಡಿಯಲ್ಲಿ ಜಿಲ್ಲಾಧಿಕಾರಿಯವರು ಅಥವಾ ೭೭ ಅಧಿನಿಯಮ ೧ನೇ ಅಧಿನಿಯಮ ಅಥವಾ ೮೩ನೇ ಅಧಿನಿಯಮದ ಅಡಿಯಲ್ಲಿ ಪ್ರಾಧಿಕೃತನಾದ ಅಧಿಕಾರಿಯು ನೀಡಿದ ಆದೇಶದ ವಿರುದ್ಧ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ (ಕೆ.ಎ.ಟಿ)ಗಳಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಲು ಅಧಿನಿಯಮದ ೧೧೮ರ ೨ನೇ ಉಪ ಅಧಿನಿಯಮಕ್ಕೆ ತಿದ್ದುಪಡಿ ತರಲಾಯಿತು.

**ಕೋಷ್ಟಕ ೯.೯: ಚಾಮರಾಜನಗರ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಹಂಚಿಕೆ ಮಾಡಲಾದ ಹೆಚ್ಚುವರಿ ಜಮೀನಿನ ವಿವರ (೨೦೧೨ನೇ ಮಾರ್ಚ್ ಅಂತ್ಯಕ್ಕೆ)**

| ತಾಲೂಕು | ಸಲ್ಲಿಕೆ | | | ಘೋಷಣೆ ಮಾಡಿದ ಹೆಚ್ಚುವರಿ ಜಮೀನ | | ವಶಕ್ಕೆ ತೆಗೆದು ಕೊಂಡಿದ್ದು | | ಫಲಾನುಭವಿಗಳಿಗೆ ಹಂಚಿಕೆ ಮಾಡಿದ್ದು | | ಫಲಾನುಭವಿಗಳ ಒಟ್ಟು ಸಂಖ್ಯೆ | ಪರಿಶಿಷ್ಟ ಜಾತಿ ಫಲಾನುಭವಿಗಳು | | | ಪರಿಶಿಷ್ಟ ಪಂಗಡ ಫಲಾನುಭವಿಗಳು | | |
|---|---|---|---|---|---|---|---|---|---|---|---|---|---|---|---|---|
| | ಸಲ್ಲಿಕೆ | ಇತ್ಯರ್ಥ | ಉಳಿಕೆ | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | | ಸಂಖ್ಯೆ | ಎಕರೆ | ಗುಂಟೆ | ಸಂಖ್ಯೆ | ಎಕರೆ | ಗುಂಟೆ |
| ಚಾಮರಾಜನಗರ | ೨೪೦೫ | ೨೪೦೫ | ೦ | ೩೬ | ೨೮ | ೩೬ | ೨೮ | ೩೫ | ೬೮ | ೧೯ | ೧೦ | ೧೯ | ೩೬ | ೦ | ೦ | ೦ |
| ಗುಂಡ್ಲುಪೇಟೆ | ೨೫೧೬ | ೨೫೧೬ | ೦ | ೩೪೮ | ೩೦ | ೩೪೮ | ೩೦ | ೬೬ | ೪೦ | ೩೯ | ೨೨ | ೩೬ | ೧೦ | ೦ | ೦ | ೦ |
| ಕೊಳ್ಳೇಗಾಲ | ೩೩೬೧ | ೩೩೬೧ | ೦ | ೨೭ | ೩೩ | ೨೭ | ೩೩ | ೨೭ | ೩೩ | ೧೧ | ೭ | ೧೬ | ೧೦ | ೦ | ೦ | ೦ |
| ಯಳಂದೂರು | ೧೮೯೫ | ೧೮೯೫ | ೦ | ೫ | ೩೫ | ೫ | ೩೫ | ೦ | ೦ | ೦ | ೦ | ೦ | ೦ | ೦ | ೦ | ೦ |
| ಒಟ್ಟು | ೧೦೧೭೭ | ೧೦೧೭೭ | ೦ | ೪೧೯ | ೬ | ೪೧೯ | ೬ | ೧೩೧ | ೨೧ | ೬೯ | ೩೯ | ೭೨ | ೧೬ | ೦ | ೦ | ೦ |

*ಮುಂದುವರೆದ ಭಾಗ*

| ಇತರೆ ಫಲಾನುಭವಿಗಳು | | | ಹೆಚ್ಚುವರಿ ಅದರೆ ಹಂಚಿಕೆಯಾಗದ ಘೋಷಿಸಿದ ವಿಸ್ತೀರ್ಣ | | ಹಂಚಿಕೆ ಮಾಡಲು ಲಭ್ಯವಾಗದ ಪ್ರದೇಶ: ಕಾದಿರಿಸಿದ/ ಸಾರ್ವಜನಿಕ ಉದ್ದೇಶಕ್ಕೆ ವರ್ಗಾವಣೆಗೆ | | ಹಂಚಿಕೆ ಮಾಡಲು ಲಭ್ಯವಾಗದ ಪ್ರದೇಶ: ವ್ಯವಸಾಯಕ್ಕೆ ಯೋಗ್ಯವಲ್ಲದ್ದು | | ಹಂಚಿಕೆ ಮಾಡಲು ಲಭ್ಯವಾಗದ ಪ್ರದೇಶ: ಇತರೆ | | ಹಂಚಿಕೆಗೆ ಲಭ್ಯವಿಲ್ಲದ ಒಟ್ಟು ವಿಸ್ತೀರ್ಣ | | ಹಂಚಿಕೆಗೆ ಲಭ್ಯವಿರುವ ಒಟ್ಟು ವಿಸ್ತೀರ್ಣ | |
|---|---|---|---|---|---|---|---|---|---|---|---|---|---|---|
| ಸಂಖ್ಯೆ | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ | ಎಕರೆ | ಗುಂಟೆ |
| ೯ | ೧೬ | ೩೨ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೧೭ | ೩೦ | ೩೦ | ೨೮೧ | ೩೦ | ೨೬೩ | ೨ | ೧೬ | ೫ | ೦ | ೧೦ | ೨೭೯ | ೧೭ | ೦ | ೦ |
| ೪ | ೧೧ | ೨೩ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ೦ | ೦ | ೦ | ೫ | ೩೫ | ೩ | ೨೨ | ೦ | ೦ | ೪ | ೨೬ | ೭ | ೪೮ | ೦ | ೦ |
| ೩೦ | ೫೯ | ೫ | ೨೮೭ | ೨೫ | ೨೬೬ | ೨೪ | ೧೬ | ೫ | ೪ | ೩೬ | ೨೮೭ | ೨೫ | ೦ | ೦ |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

## ಇನಾಂ ರದ್ದಿಯಾತಿ

ವಿವಿಧ ಇನಾಂ ರದ್ದಿಯಾತಿ ಕಾಯ್ದೆಗಳ ಕೆಳಗೆ, ಅಂದರೆ ಕರ್ನಾಟಕ (ಪರ್ಸನಲ್ ಮತ್ತು ಮಿಸ್ಸೆಲೇನಿಯಸ್) ಕಾಯ್ದೆ, ೧೯೫೪, ಕರ್ನಾಟಕ ಮತೀಯ ಮತ್ತು ಧಾರ್ಮಿಕ ಇನಾಂ ರದ್ದಿಯಾತಿ ಕಾಯ್ದೆ ೧೯೫೫, ಕರ್ನಾಟಕ ಗ್ರಾಮ ಕಛೇರಿ ರದ್ದಿಯಾತಿ ಕಾಯಿದೆ, ೧೯೬೧, ಕರ್ನಾಟಕ (ಸಂಡೂರು ಪ್ರದೇಶ) ಇನಾಂ ರದ್ದಿಯಾತಿ ಕಾಯ್ದೆ ೧೯೭೬, ಮತ್ತು ಕರ್ನಾಟಕ ಹಲವು ಇನಾಂ ರದ್ದಿಯಾತಿ ಕಾಯ್ದೆ, ೧೯೭೭ಗಳ ಕೆಳಗೆ ಉಳುಮೆ ಮಾಡುತ್ತಿದ್ದ ಗೇಣಿದಾರರಿಗೆ ಜಮೀನನನ್ನು ಮರು ಮಂಜೂರು ಮಾಡಲಾಗಿದೆ. ಇದಕ್ಕಾಗಿ ಅರ್ಜಿ ಸಲ್ಲಿಸಲು ಗೊತ್ತುಪಡಿಸಿದ್ದ ಅವಧಿ ಕೂಡ ಮುಕ್ತಾಯವಾಗಿದೆ.

**ಕೋಷ್ಟಕ ೯.೧೦: ಕರ್ನಾಟಕದ ಹಲವು ಇನಾಂಗಳ ರದ್ದಿಯಾತಿ ಕಾಯ್ದೆ ೧೯೭೭ರ ಕಲಂ ೧೧ರಂತೆ ವಿಲೇವಾರಿ ವಿವರಗಳು (೨೦೧೨ನೇ ಮಾರ್ಚ್ ಅಂತ್ಯಕ್ಕೆ)**

| ತಾಲೂಕು | ಕಾಯಿದೆಯಡಿ ಸರ್ಕಾರದಲ್ಲಿ ನಿಹಿತಗೊಂಡ ಜಮೀನು | | ಸ್ವೀಕೃತವಾದ ಅರ್ಜಿಗಳು | | | ಒಟ್ಟು ವಿಲೆ ಆದ ಅರ್ಜಿಗಳು | | | ಬಾಕಿ ಇರುವ ಅರ್ಜಿಗಳು | | | ಅರ್ಜಿ ಮಾಡದೆ ಸರ್ಕಾರಕ್ಕೆ ನಿಹಿತಗೊಂಡಿರುವ ಜಮೀನಿನ ವಿಸ್ತೀರ್ಣ | |
|---|---|---|---|---|---|---|---|---|---|---|---|---|---|
| | | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | | |
| | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | ಎ | ಗುಂ |
| ಚಾಮರಾಜನಗರ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ಗುಂಡ್ಲುಪೇಟೆ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ಯಳಂದೂರು | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ | ೦ |
| ಕೊಳ್ಳೇಗಾಲ | ೪೨೬೫ | ೧೯ | ೨೬೨೪ | ೧೦೬೮೧ | ೭ | ೨೬೨೪ | ೧೦೬೮೧ | ೭ | ೦ | ೦ | ೦ | ೦ | ೦ |
| **ಒಟ್ಟು** | **೪೨೬೫** | **೧೯** | **೨೬೨೪** | **೧೦೬೮೧** | **೭** | **೨೬೨೪** | **೧೦೬೮೧** | **೭** | **೦** | **೦** | **೦** | **೦** | **೦** |

***ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ***

## ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬಳಸುವುದು (ಇನಾಂ ರದ್ದಿಯಾತಿ ನಂತರ)

ವೈಯಕ್ತಿಕವಾಗಿ ಕೃಷಿ ಮಾಡುವವನನ್ನು ಹೊರತುಪಡಿಸಿ ಬೇರಾವುದೇ ವ್ಯಕ್ತಿ ಭೂ ಮಾಲೀಕನಾಗಿ ಅಥವಾ ಗೇಣಿದಾರನಾಗಿ ಅಡಮಾನದಾರನಾಗಿರುವಂತಿಲ್ಲ. ಒಂದು ಕುಟುಂಬ ಹೊಂದಿರಬಹುದಾದ ಭೂಮಿಯ ಪರಿಮಿತಿ ಈಗ ೧೦ ಯೂನಿಟ್ಟು (೫.೪ ಎಕರೆ "ಡಿ" ವರ್ಗದ ಜಮೀನು) ಗಳು ಮಾತ್ರ. ಶೈಕ್ಷಣಿಕ, ಧಾರ್ಮಿಕ ಅಥವಾ ಧಾರ್ಮಿಕ ದತ್ತಿ ಸಂಸ್ಥೆಗಳು ಅಥವಾ ಸೊಸೈಟಿ ಅಥವಾ ಭೂಮಿಯ ಆದಾಯವನ್ನು ಪೂರ್ಣವಾಗಿ ತನ್ನ ಸಂಸ್ಥೆಗೆ ಬಳಸಿಕೊಳ್ಳುವ ಟ್ರಸ್ಟ್, ಸೊಸೈಟಿ ಮುಂತಾದವು ೨೦ ಯೂನಿಟ್ಟುಗಳಷ್ಟು ಭೂಮಿಯನ್ನು ಹೊಂದಬಹುದು. ಅದೇ ರೀತಿ ಭೂಮಿಯನ್ನು ಸಂಪೂರ್ಣವಾಗಿ ಸಂಶೋಧನೆ ಅಥವಾ ಬೀಜ ಕೇಂದ್ರ ಅಥವಾ ಎರಡೂ ಉದ್ದೇಶಕ್ಕೆ ಬಳಸಿಕೊಳ್ಳುವ ಸಕ್ಕರೆ ಕಾರ್ಖಾನೆ ೫೦ ಯೂನಿಟ್ಟು ಭೂಮಿಯನ್ನು ಹೊಂದಬಹುದು. ಈ ರೀತಿಯ ನಿರ್ಬಂಧಗಳು ಮತ್ತು ಪರಿಮಿತಿಗಳ ಹೊರತಾಗಿಯೂ, ಕೃಷಿಯೇತರ ಉದ್ದೇಶಗಳಾದ ಕೈಗಾರಿಕೆ, ಶಿಕ್ಷಣ, ವಸತಿ, ತೋಟಗಾರಿಕೆ, ಹೂಬನ, ಧಾರ್ಮಿಕ ಅವಶ್ಯಕತೆಗಳಿಗಾಗಿ ಕರ್ನಾಟಕ ಭೂ ಸುಧಾರಣಾ ಕಾಯ್ದೆಯ ಸೆಕ್ಷನ್ ೧೦೯(೧)ರಡಿಯಲ್ಲಿ ಕ್ರಮವಾಗಿ ೨೦, ೪, ೧೦, ೨೦ ಮತ್ತು ೧ ಯೂನಿಟ್‌ಗಳಷ್ಟು ಕೃಷಿ ಭೂಮಿಯನ್ನು ಹೊಂದಬಹುದಾಗಿದೆ. ಒಂದು ವೇಳೆ ಉದ್ದೇಶ ಮತ್ತು ವಿಸ್ತೀರ್ಣ ಬದಲಾದರೆ ಅಥವಾ ಮೀರಿದರೆ ಸೆಕ್ಷನ್ ೧೦೯ (೧ಎ) ಅಡಿಯಲ್ಲಿ ಪರಿಗಣಿಸಿ ರಾಜ್ಯದ ಮುಖ್ಯ ಕಾರ್ಯದರ್ಶಿಗಳ ನೇತೃತ್ವದ ಉನ್ನತ

ಅಧಿಕಾರಸ್ಥ ಸಮಿತಿಯ ಶಿಫಾರಸ್ಸಿನೊಂದಿಗೆ ಮತ್ತು ಸಚಿವ ಸಂಪುಟದ ಅನುಮೋದನೆಯೊಂದಿಗೆ ಸರ್ಕಾರವು ವಿನಾಯಿತಿ ಅಥವಾ ಅನುಮತಿ ನೀಡಬಹುದಾಗಿದೆ. ಈ ನಿಯಮಾವಳಿಗೆ ಅನುಸಾರವಾಗಿ ಜಿಲ್ಲಾಧಿಕಾರಿಗಳಿಂದ ಅಥವಾ ರಾಜ್ಯ ಸರ್ಕಾರದಿಂದ ಪೂರ್ವಾನುಮತಿ ಪಡೆದುಕೊಂಡು ಯಾವುದೇ ನೊಂದಾಯಿತ ಸೊಸೈಟಿ ಅಥವಾ ಸಂಸ್ಥೆಯು ಕೃಷಿ ಭೂಮಿಯನ್ನು ಕೊಳ್ಳಬಹುದು ಅಥವಾ ಹೊಂದಬಹುದು.

ಕರ್ನಾಟಕ ಭೂ ಸುಧಾರಣಾ ಕಾಯಿದೆ ೧೯೬೧ರ ಸೆಕ್ಷನ್ ೧೦೯(೧)ರಲ್ಲಿ ಹೇಳಿರುವ ಉದ್ದೇಶಗಳಿಗಾಗಿ ಜಮೀನುಗಳನ್ನು ಸದರಿ ಕಾಯಿದೆಯ ಸೆಕ್ಷನ್ ೬೩, ೭೯ಎ, ೭೯ಬಿ ಮತ್ತು ೮೦ರಲ್ಲಿನ ಕೆಲವು ಅಧಿಕಾರಗಳನ್ನು ಅಧಿಸೂಚನೆ ಸಂಖ್ಯೆ: ಸಂ.ವ್ಯ.ಶಾ.ಇ. ೪೭ ಶಾಸನ ೨೦೦೧, ದಿನಾಂಕ ೨೪–೦೪–೨೦೦೩ರಲ್ಲಿ ತಿದ್ದುಪಡಿ ಮಾಡಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ. ಇದರ ವಿವರಗಳು ಕೆಳಕಾಣಿಸಿರುವಂತಿವೆ.

| | |
|---|---|
| **೧) ಕೈಗಾರಿಕಾ ಉದ್ದೇಶಗಳಿಗಾಗಿ** | ೧೦ ಯೂನಿಟ್ಟುಗಳನ್ನು ಮೀರದಂತೆ |
| **೨) ಶೈಕ್ಷಣಿಕ ಸಂಸ್ಥೆಗಳಿಗೆ** | ೨ ಯೂನಿಟ್ಟುಗಳಿಗೆ ಮೀರದಂತೆ |
| **೩) ಧಾರ್ಮಿಕ ಸಂಸ್ಥೆಗಳಿಗೆ** | ೧/೪ ಯೂನಿಟ್ಟುಗಳನ್ನು ಮೀರದಂತೆ |
| **೪) ಗೃಹ ಯೋಜನೆ** | ೧೦ ಯೂನಿಟ್ಟುಗಳನ್ನು ಮೀರದಂತೆ |
| **೫) ತೋಟಗಾರಿಕೆ ಮತ್ತು ಪುಷ್ಪೋದ್ಯಮ** | ೧೦ ಯೂನಿಟ್ಟುಗಳನ್ನು ಮೀರದಂತೆ |

ಮುಂದುವರೆದು ಕರ್ನಾಟಕ ಭೂ ಸುಧಾರಣಾ ಕಾಯ್ದೆ, ೧೯೬೧ರ ಸೆಕ್ಷನ್ ೧೦೯ (೧ಎ) ಪ್ರಕಾರ ಯಾವುದೇ ಉದ್ದೇಶಕ್ಕಾದರೂ ೧/೨ ಹೆಕ್ಟೇರ್ ಮೀರದಂತೆ ಭೂಮಿ ಖರೀದಿಸಲು ಅಥವಾ ಹೊಂದಲು ಜಿಲ್ಲಾಧಿಕಾರಿಗಳಿಗೆ ಮಾರ್ಚ್ ೨೦೦೪ರಲ್ಲಿ ಅಧಿಕಾರ ಪ್ರತ್ಯಾಯೋಜನೆ ಮಾಡಲಾಗಿದೆ.

## ಸರಕಾರಿ ಭೂಮಿಯ ವಿಲೇವಾರಿ(ಭೂಮಂಜೂರಾತಿ)

ಸರಕಾರಕ್ಕೆ ಸೇರಿದ ಜಮೀನುಗಳನ್ನು ೧೮೬೨–೬೩ಕ್ಕೆ ಪೂರ್ವದಲ್ಲಿ ಎರಡು ರೀತಿಯ ಗೇಣಿಗಳನ್ನಾಗಿ ವಿಂಗಡಿಸಲಾಗಿತ್ತು: ೧) ಒಂದು ಗೊತ್ತಾದ ಮೊತ್ತದ ಹಣದ ಆಕರಣೆಯುಳ್ಳ ಅಥವಾ ಕಂದಾಯದ ಜಮೀನು ಮತ್ತು (೨) ಬೆಳೆದ ಧಾನ್ಯ ಮುಂತಾದ್ದನ್ನು ಸರಕಾರದೊಡನೆ ಪಾಲು ಮಾಡಿಕೊಳ್ಳುವ ಬಟಾಯಿ ಜಮೀನು. ರೈತನು ಇಚ್ಛಿಸಿದರೆ ಬಟಾಯಿ ಜಮೀನನ್ನು ಕಂದಾಯದ ಜಮೀನಾಗಿ ಪರಿವರ್ತಿಸಲು ಸರಕಾರವು ಸದಾ ಸಿದ್ಧವಿರುತ್ತಿತ್ತು. ಕಂದಾಯದ ಜಮೀನನ್ನು ವಾರ್ಷಿಕ ಪಟ್ಟಾ ಅಥವಾ ಗೇಣಿ ಕರಾರು ಮೇಲೆ ನೀಡಲಾಗುತ್ತಿತ್ತು; ಆದರೆ, ಸಾಮಾನ್ಯವಾಗಿ ಅದರ ಮೇಲೆ ವಿಧಿಸುತ್ತಿದ್ದ ಕಂದಾಯದ ಮೊತ್ತವನ್ನು ಹೆಚ್ಚಿಸುತ್ತಿರಲಿಲ್ಲ. ಕಂದಾಯದ ಮೇಲೆ ತೆಗೆದುಕೊಂಡ ಜಮೀನನ್ನು ಅನುವಂಶಿಕವಾಗಿ ಅನುಭೋಗಿಸುವ ಹಕ್ಕನ್ನು ರೈತರು ಹೊಂದಿದ್ದರು. ವಾರ್ಷಿಕ ಕಂದಾಯವನ್ನು ಮಾತ್ರ ತಪ್ಪದೇ ನೀಡಬೇಕೆಂಬ ಷರತ್ತನ್ನು ಇದಕ್ಕಾಗಿ ಅವರು ಪಾಲಿಸಲೇ ಬೇಕಿತ್ತು. ಇಂತಹ ಜಮೀನನ್ನು ಮಾರಾಟ ಮಾಡುವ ಹಕ್ಕು ರೈತರಿಗೆ ಇರಲಿಲ್ಲವಾದರೂ ಆತನಿಗಿದ್ದ ಪರಿಪೂರ್ಣ ಗೇಣಿ ಹಕ್ಕಿನಿಂದಾಗಿ, ಸರಕಾರವು ಪರಸ್ಪರ ಒಪ್ಪಿಗೆ ಅಥವಾ ಭೂ ಸ್ವಾಧೀನ ಕಾನೂನು ಪ್ರಕಾರ ಮಾತ್ರ ಪರಿಹಾರ ನೀಡಿಯೇ ಯಾವುದೇ ಕಂದಾಯ ಭೂಮಿಯನ್ನು ಪಡೆದುಕೊಳ್ಳಲು ಸಾಧ್ಯವಿತ್ತು.

ಮೂಲ ಸರ್ವೇಕ್ಷಣೆ ಮತ್ತು ಕಂದಾಯ ನಿಗದಿ ಕಾರ್ಯಗಳನ್ನು ಮಾಡುವುದಕ್ಕಿಂತ ಪೂರ್ವದಲ್ಲಿ ತನ್ನ ಜಮೀನನ್ನು ಬೇರೊಬ್ಬನಿಗೆ ವರ್ಗಾವಣೆ ಮಾಡಲಿಚ್ಛಿಸುವ ರೈತನು ಅಮಲ್ದಾರನಿಗೆ ಒಂದು **"ರಾಜೀನಾಮೆ"**

ಬರೆದು ಸಲ್ಲಿಸುತ್ತಿದ್ದನು; ಅದೇ ವೇಳೆ ಹಾಗೆ ಬಿಟ್ಟುಕೊಟ್ಟ ಜಮೀನನ್ನು ಇಂತಹ ನಿರ್ದಿಷ್ಟ ವ್ಯಕ್ತಿಗೆ ನೀಡಬಹುದೆಂದು ಕೋರಿಕೆಯನ್ನು ಸಹ ಸಲ್ಲಿಸುತ್ತಿದ್ದನು. ಆ ಎರಡನೇ ವ್ಯಕ್ತಿಯು ಮತ್ತೊಂದು ಅರ್ಜಿ ನೀಡಿ ಮೊದಲನೇ ವ್ಯಕ್ತಿಯು ರಾಜೀನಾಮೆ ನೀಡಿ ಹಿಂತಿರುಗಿಸಿರುವ ಭೂಮಿಯನ್ನು ಅದೇ ಮೊತ್ತದ ಕಂದಾಯಕ್ಕೆ ಅಥವಾ ಮಾಮೂಲು ಪ್ರಕಾರ ತನಗೆ ಮಂಜೂರು ಮಾಡಬೇಕೆಂದು ಕೋರಿಕೆ ಸಲ್ಲಿಸುತ್ತಿದ್ದನು. ಅದರ ಪ್ರಕಾರ ವರ್ಗಾವಣೆಯನ್ನು ಒಪ್ಪಿಕೊಂಡು ಹೊಸ "ಪಟ್ಟಾ" ನೀಡಲಾಗುತ್ತಿತ್ತು.

ಇದರಿಂದ ತಿಳಿದುಬರುವುದೇನೆಂದರೆ, ವ್ಯವಸಾಯಕ್ಕಾಗಿ ಜಮೀನು ಪಡೆದುಕೊಳ್ಳುವುದು ಆ ಕಾಲದಲ್ಲಿ ಕಠಿಣ ಸಮಸ್ಯೆಯೇನೂ ಆಗಿರಲಿಲ್ಲ. ವ್ಯವಸಾಯ ಮಾಡಲು ಬೇಕಾದ ಸಂಪನ್ಮೂಲ ಅಥವಾ ಸಾಧನ ಸಲಕರಣೆಗಳ ಅನುಕೂಲವಿದ್ದವರಿಗೆ ಬಯಸಿದಾಗ ಭೂಮಿ ಸಿಗುತ್ತಿತ್ತು. ಜನಸಂಖ್ಯೆಯ ಒತ್ತಡ ಕಡಿಮೆ ಇದ್ದುದು ಇದಕ್ಕೊಂದು ಕಾರಣ ಎನ್ನಬಹುದು. ಆಗೆಲ್ಲಾ ಸಾಮಾನ್ಯವಾಗಿ ಖುದ್ದು ವ್ಯವಸಾಯ ಮಾಡುವವರೇ ಭೂಮಿಯನ್ನು ಹೊಂದಿರುತ್ತಿದ್ದರು. ಮಳೆ ಕಡಿಮೆಯಾಗಿ ಅಥವಾ ಬೇರಾವುದಾದರೂ ಕಾರಣದಿಂದ ಬೆಳೆ ಕಡಿಮೆಯಾಗುವ ಅಥವಾ ವಿಫಲವಾಗುವ ಸಾಧ್ಯತೆ ಇದ್ದಲ್ಲಿ ವಾರ್ಷಿಕ ಪಟ್ಟಾ ಪಡೆದುಕೊಳ್ಳುವ ಮುನ್ನ ಬಟಾಯಿ ಪದ್ಧತಿಯನ್ನು ಆಯ್ದುಕೊಳ್ಳುವ ಅಥವಾ ಆ ವರ್ಷದ ಮಟ್ಟಿಗೆ ಪಟ್ಟಾ ನಿರಾಕರಿಸುವ ಅವಕಾಶ ಜಮಾಬಂದಿ ಸಮಯದಲ್ಲಿ ರೈತನಿಗಿತ್ತು. ಕಂದಾಯ ಮಾಫಿ ಪ್ರಶ್ನೆಯನ್ನು ಸಹ ವೈಯಕ್ತಿಕ ಹಿಡುವಳಿದಾರರ ಮಟ್ಟದಲ್ಲಿ ಅದೇ ಸಮಯದಲ್ಲಿ ತೀರ್ಮಾನಿಸಿ ಬಿಡಲಾಗುತ್ತಿತ್ತು. ನೈಸರ್ಗಿಕ ಪ್ರಕೋಪವೇ ಮುಂತಾದ ಘಟನೆಗಳು ಕಂದಾಯ ಮಾಫಿಗೆ ಸರ್ವ ಸಮ್ಮತ ಕಾರಣಗಳಾಗಿದ್ದವು.

ಈ ಎಲ್ಲಾ ಕಾರಣಗಳಿಂದಾಗಿ ಕಂದಾಯ ಮಾಫಿ ಪ್ರಶ್ನೆಯು ಸರ್ವೆ ಮತ್ತು ಸೆಟಲ್‌ಮೆಂಟ್‌ಗಿಂತ ಹಿಂದಿನ ದಿನಗಳಲ್ಲಿ ಅಷ್ಟೇನೂ ಮುಖ್ಯವಾಗಿದ್ದಂತೆ ಕಾಣುವುದಿಲ್ಲ. ಅಂದಿನ ಕಂದಾಯಾಧಿಕಾರಿಗಳ ನಿದ್ರೆ ಕೆಡಿಸುತ್ತಿದ್ದ ಸಂದರ್ಭವೆಂದರೆ, ಹೆಚ್ಚಿನ ಸಂಖ್ಯೆಯ ದರಖಾಸ್ತು ಅರ್ಜಿಗಳು ವಿಲೇವಾರಿಯಾಗದೇ ಬಾಕಿ ಉಳಿಯುತ್ತಿದ್ದುದು. ಇದರಿಂದ ಸರಕಾರಕ್ಕೆ ಬರಬೇಕಾದ ಕಂದಾಯದ ಹಣಕ್ಕೆ ಖೋತಾ ಆಗುತ್ತಿತ್ತು ಮತ್ತು ಕೃಷಿಯೋಗ್ಯ ಭೂಮಿಯ ವಿಸ್ತರಣೆ ಕಾರ್ಯವು ಕುಂಠಿತವಾಗುತ್ತಿತ್ತು. ಹೀಗಾಗಿ, ದರಖಾಸ್ತುಗಳಿಗೆ ಕ್ಷಿಪ್ರಗಮನ ನೀಡಬೇಕಾದ್ದು ಬಹಳ ಮುಖ್ಯವಾಗಿತ್ತು.

ಡಿಸೆಂಬರ್ ೧೯೦೫ರಲ್ಲಿ ಮಾಡಿದ ಸರ್ಕಾರದ ಆದೇಶ ಹೇಳುವಂತೆ, ಭೂ ಕಂದಾಯ ಆಕರಣೆಯಾಗಿರದ ಸರ್ವೆ ನಂಬರಿನ ಒಂದು ಭಾಗಕ್ಕೆ, ಗೋಮಾಳ ಸರ್ವೆ ನಂಬರು ಸೇರಿದಂತೆ, ಪೂರ್ವ ಮಂಜೂರಾತಿ ಪಡೆದಿರುವ ಅರ್ಜಿಯ ಬಗ್ಗೆ ಜಿಲ್ಲಾಧಿಕಾರಿ ಒಪ್ಪಿಗೆ ನೀಡಿದರೆ, ಅದನ್ನು ಕಂದಾಯ ನಿರೀಕ್ಷಕ ಅಥವಾ ಬೇರೆ ತಾಲೂಕು ಅಧಿಕಾರಿಗಳು, ಅಗತ್ಯವೆನಿಸಿದಲ್ಲಿ ಜಿಲ್ಲಾ ಸರ್ವೇಯರನ ಸಾಮಾನ್ಯ ಮೇಲ್ವಿಚಾರಣೆಯಲ್ಲಿ, ಕೂಡಲೇ ಅಳತೆ ಮಾಡಿಸಿ ಗುರ್ತುಗಳನ್ನು ಹಾಕಿಸಬೇಕು. ಸುತ್ತಮುತ್ತಲಿನ ಪ್ರದೇಶದಲ್ಲಿರುವ ಅಂಥದೇ ವರ್ಣನೆಯ ಜಮೀನುಗಳಿಗೆ ಗೊತ್ತುಪಡಿಸಲಾಗಿರುವ ಆಕರಣೆ ದರಗಳ ಆಧಾರದ ಮೇಲೆ ಇದಕ್ಕೂ ಜಿಲ್ಲಾಧಿಕಾರಿಯು ಆಕರಣೆಯನ್ನು ನಿಗದಿ ಮಾಡಬೇಕು.

ಆಕರಣೆ ಮಾಡಿರುವ ಸರ್ವೆ ನಂಬರುಗಳ ಮಂಜೂರಾತಿ ಕೋರಿ ಸಲ್ಲಿಸಲಾಗುವ ಅರ್ಜಿಗಳ ಕುರಿತಾಗಿಯೂ ಇದೇ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕೆಂದು ಮೇಲೆ ಹೇಳಿರುವ ಆದೇಶದಲ್ಲಿ ಸ್ಪಷ್ಟಪಡಿಸಲಾಗಿತ್ತು. ಆದರೆ, ಮರು ಮೋಜಣಿ ಕಾರ್ಯಗಳು ಪೂರ್ಣವಾಗಿರುವ ಅಥವಾ ಪ್ರಗತಿಯಲ್ಲಿರುವ ತಾಲೂಕುಗಳ ವಿಚಾರದಲ್ಲಿ

ಭೂ ದಾಖಲೆಗಳ ಅಧೀಕ್ಷಕನ ಒಪ್ಪಿಗೆಯನ್ನು ಮುಂಚಿತವಾಗಿ ಪಡೆದುಕೊಳ್ಳಬೇಕಿತ್ತಲ್ಲದೆ ಇಡೀ ಸರ್ವೆ ನಂಬರಿಗೆ ಆಕಾರಬಂದ್‌ನಲ್ಲಿ ತೋರಿಸಿರುವ ದರಗಳನ್ನೇ ಅನ್ವಯಿಸಬೇಕಾಗಿತ್ತು. ಈ ಕೆಳಗೆ ಕಾಣಿಸಿರುವ ವಿಧದ ಜಮೀನುಗಳ ಪುಕ್ಕಟೆ ಮಂಜೂರಾತಿಯನ್ನು ೧೯೨೦ರಿಂದ ನಿರ್ಬಂಧಿಸಲಾಯಿತು.

(೧) ಆಕರಣೆ ನಿಗದಿಯಾಗಿರದ ಜಮೀನುಗಳು ಮತ್ತು ಯಾವುದೇ ಸಾರ್ವಜನಿಕ, ಸಾಮುದಾಯಿಕ ಅಥವಾ ಸ್ಥಳೀಯ ಸಂಸ್ಥೆಯ ಉಪಯೋಗಕ್ಕಾಗಿ ಮೀಸಲಾಗಿರಿಸಿರುವ ಗೋಮಾಳ, ಗ್ರಾಮದ ಅರಣ್ಯ, ರಾಜ್ಯ ಅರಣ್ಯ, ಈಚಲು ವನ, ಮುಂತಾದವು.

(೨) ರೈಲ್ವೆ ನಿಲ್ದಾಣಕ್ಕೆ ಸಮೀಪದಲ್ಲಿರುವ ಜಮೀನುಗಳು.

(೩) ಭಾರಿ ಪ್ರಮಾಣದ ನೀರಾವರಿ ಯೋಜನೆಗಳಿಂದ ನೀರಾವರಿಯಾಗುತ್ತಿರುವ ಅಥವಾ ನೀರಾವರಿಯಾಗುವ ಸಾಧ್ಯತೆ ಇರುವ ಜಮೀನುಗಳು.

(೪) ಶ್ರೀಗಂಧದ ವೃಕ್ಷಗಳಿರುವ ಜಮೀನುಗಳು.

(೫) ಅಮೂಲ್ಯ ಫಲಗಳು ಅಥವಾ ಇತರೆ ವೃಕ್ಷಗಳು, ಬಾವಿಗಳು ಅಥವಾ ಕಟ್ಟಡಗಳಿರುವ ಜಮೀನುಗಳು.

ಕೆಲವು ವರ್ಗಗಳ ಜಮೀನುಗಳನ್ನು ಹರಾಜು ಮೂಲಕ ಮಾರಾಟ ಮಾಡಲು ಅಥವಾ ನಿಗದಿತ ಬೆಲೆ ನೀಡಲು ಅವಕಾಶವಿತ್ತು. ಯಾವುದೇ ಒಂದು ದರಖಾಸ್ತನ್ನು ಸಾಮಾನ್ಯ ನಿಯಮವಾದ ಪುಕ್ಕಟೆ ಅನುದಾನದಡಿಯಲ್ಲಿ ವ್ಯವಹರಿಸಬೇಕೋ, ಅಥವಾ ಬೇರೆ ರೀತಿಯಲ್ಲಿಯೋ ಎಂಬುದನ್ನು ನಿರ್ಧರಿಸುವ ಮುನ್ನ "ಖೇತ್ವಾರು ಪತ್ರಿಕೆ"ಯನ್ನು ಪರಾಮರ್ಶಿಸಬೇಕಿತ್ತು. ಅದರಲ್ಲಿ ಬೇಕಾದ ವಿವರಗಳು ಲಭ್ಯವಾಗದಿದ್ದಲ್ಲಿ, ದರಖಾಸ್ತನ್ನು ಗ್ರಾಮಾಧಿಕಾರಿಗಳಿಗೆ ಕಳುಹಿಸಿ ಒಂದು ಟಿಪ್ಪಣಿ ಸಿದ್ಧಪಡಿಸಿ ಕಳುಹಿಸಬೇಕೆಂದು ತಿಳಿಸಲಾಗುತ್ತಿತ್ತು. ಕಂದಾಯ ನಿರೀಕ್ಷಕನ ಮೂಲಕ ಅಮಲ್ದಾರನಿಗೆ ಟಿಪ್ಪಣಿ ತಲುಪಿದ ಮೇಲೆ ಕೆಳಗಿನ ಮೂರು ಪರ್ಯಾಯ ಕ್ರಮಗಳಲ್ಲಿ ಒಂದನ್ನು ಅವನು ನಿಶ್ಚಯಿಸಬೇಕು:

(೧) ಪುಕ್ಕಟೆಯಾಗಿ ಮಂಜೂರು ಮಾಡುವುದು

(೨) ಸಾರ್ವಜನಿಕವಾಗಿ ಹರಾಜು ಹಾಕುವುದು

(೩) ನಿಗದಿತ ಬೆಲೆಗೆ ನೀಡುವುದು

ಮೇಲಿನ (೧)ನೇ ಅಥವಾ (೨)ನೇ ಕ್ರಮಗಳನ್ನು ತೆಗೆದುಕೊಂಡಾಗ, ಅಮಲ್ದಾರನು ತಾನೇ ಒಂದು ಸಾಗುವಳಿ ಚೀಟಿಯನ್ನು ನೀಡಬೇಕಿತ್ತು ಅಥವಾ ಮಾರಾಟ ಪ್ರಕಟಣೆಯನ್ನು ಹೊರಡಿಸಬೇಕಿತ್ತು. ಮೂರನೇ ಪರ್ಯಾಯದಂತೆ ನಡೆದುಕೊಳ್ಳುವ ನಿರ್ಧಾರ ಮಾಡಿದಲ್ಲಿ ಉಪವಿಭಾಗಾಧಿಕಾರಿಯ ಆದೇಶಕ್ಕಾಗಿ ದರಖಾಸ್ತು ದಾಖಲೆಗಳನ್ನು ತನ್ನ ಅಭಿಪ್ರಾಯದೊಡನೆ ಕಳುಹಿಸಬೇಕಿತ್ತು.

ಕಂದಾಯ ನಿಗಧಿಯಾಗಿರುವ ಜಮೀನುಗಳೇ ಮಂಜೂರಾತಿಗಾಗಿ ಲಭ್ಯ ಇವೆಯೆಂಬ ಕಾರಣ ನೀಡಿ ಕಂದಾಯ ನಿಗಧಿಯಾಗಿಲ್ಲದ, ಅದರ ಹೆಚ್ಚಿನ ಬೇಡಿಕೆ ಇರುವ, ಜಮೀನುಗಳನ್ನು ಕೋರಿ ಸಲ್ಲಿಸಲಾಗಿರುವ ಅರ್ಜಿಗಳನ್ನು ತಿರಸ್ಕರಿಸಕೂಡದೆಂದು ಸರ್ಕಾರವು ೧೯೨೫ನೇ ವರ್ಷದಲ್ಲಿ ಆದೇಶ ನೀಡಿತ್ತು.

ಇದೇ ರೀತಿ ೧೮೮೮ರ ಮೈಸೂರು ಭೂ ಕಂದಾಯ ಕಾಯ್ದೆ (೧೮೮೮ರ IV) ಯ ನಿಯಮ ४३(೫), (೬) ಮತ್ತು (೭) ದಲಿತ ವರ್ಗಗಳಿಗೆ ಭೂ ಮಂಜೂರಾತಿ ಮಾಡುವ ಬಗ್ಗೆ ಇವೆ. ಭೂ ರಹಿತರು ಮತ್ತು ದಲಿತ ವರ್ಗದವರಿಗೆ ಮೇಲೆ ಹೇಳಿರುವ ಪುಕ್ಕಟೆ ಜಮೀನು ಮಂಜೂರಾತಿ ಮಾತ್ರವೇ ಅಲ್ಲದೆ, ಲಭ್ಯವಿರುವ ಅಮೃತ ಮಹಲ್ ಕಾವಲುಗಳು, ಈಚಲು ವನಗಳು, ತೆರವಾಗಿರುವ ಕಾಫಿ ಮತ್ತು ಏಲಕ್ಕಿ ಪ್ಲಾಂಟೇಶನ್ನುಗಳ ಭಾಗಗಳನ್ನು ಮಂಜೂರು ಮಾಡಬಹುದೆಂದು ೧೯೨೫ ಮತ್ತು ೧೯೨೬ರಲ್ಲಿ ಸರಕಾರವು ಆದೇಶಿಸಿತು. ಈ ಎಲ್ಲಾ ರೀತಿಯ ಭೂ ವಿಲೇವಾರಿ ಕ್ರಮಗಳ ಮೂಲ ಉದ್ದೇಶ ಕೃಷಿಯ ವಿಸ್ತರಣೆಯೇ ಆಗಿತ್ತೆನ್ನಬಹುದು.

ಇಡೀ ಮೈಸೂರು ರಾಜ್ಯ ಅನ್ವಯವಾಗುವ ಹೊಸ ಭೂ ಮಂಜೂರಾತಿ ನಿಯಮಗಳು ೧೯೫೮ ರಿಂದ ಜಾರಿಗೊಳಿಸಲ್ಪಟ್ಟವು. ಹೆಚ್ಚು ಸುಧಾರಿಸಿದ ಭೂ ಮಂಜೂರಾತಿ ನಿಯಮಗಳನ್ನು ೧೯೬೮ರಲ್ಲಿ ಮಾರ್ಪಡಿಸಲಾಯಿತು. ಇದಾದ ಮುಂದಿನ ವರ್ಷವೇ, ಅಂದರೆ, ३ನೇ ಮೇ ೧೯೬೯ ರಿಂದ ೧೯೬४ರ ಕಾಯ್ದೆಯ ೧೯೭ನೇ ಕಲಮಿನನ್ವಯ ಕರ್ನಾಟಕ ಭೂ ಮಂಜೂರಾತಿ ನಿಯಮಗಳನ್ನು ಜಾರಿಗೊಳಿಸಲಾಯಿತು. ಇದರಂತೆ, ಭೂಮಂಜೂರಾತಿಯಲ್ಲಿ ಈ ಕೆಳಗಿನ ವರ್ಗಗಳಿಗೆ ಆದ್ಯತೆ ನೀಡಲಾಗುತ್ತಿದೆ.

(೧) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳು
(೨) ಅನುಭವದಾರರೆಂದು ನೋಂದಾವಣಿಯಾಗದೇ ಉಳಿದ, ಉಚ್ಚಾಟನೆಗೊಂಡ ಭೂಹೀನ ಮಾಜಿ ಗೇಣಿದಾರರು.
(३) ಭೂಹೀನ ಕೃಷಿ ಕಾರ್ಮಿಕರು
(४) ವಾರ್ಷಿಕ ಆದಾಯ ₹ ४,೮೦೦/– (ಪ್ರಾರಂಭದಲ್ಲಿ ₹ ೨,೦೦೦/– ಇತ್ತು) ಮೀರದಿರುವ ಮಾಜಿ ಸೈನಿಕರು ಮತ್ತು ಇತರೆ ಭೂ ಹೀನ ವ್ಯಕ್ತಿಗಳು.
(೫) ಜೀತ ವಿಮುಕ್ತ ಕಾರ್ಮಿಕರು
(೬) ವಾರ್ಷಿಕ ಆದಾಯ ₹ ೨,೦೦೦/– ರೂಪಾಯಿಗಳನ್ನು ಮೀರದಿರುವ ಇನ್ನಾವುದೇ ಭೂಹೀನ ವ್ಯಕ್ತಿಗಳು, ಇಂಥವರು ಮಂಜೂರು ಮಾಡಬೇಕಾಗಿರುವ ಜಮೀನು ಇರುವ ಗ್ರಾಮಪಂಚಾಯತ್ ವ್ಯಾಪ್ತಿಯಲ್ಲಿಯೇ ವಾಸಿಸುತ್ತಿರಬೇಕು.

ಸರ್ಕಾರದಿಂದ ಭೂ ಮಂಜೂರಾತಿ ಮಾಡಿಸಿಕೊಂಡವರು ಕನಿಷ್ಟ ೧೫ ವರ್ಷಗಳ ಪರ್ಯಂತ ಆ ಭೂಮಿಯನ್ನು ಪರಭಾರೆ ಮಾಡುವಂತಿಲ್ಲ ಮತ್ತು ಮಂಜೂರಾತಿಯಾದ ಮೂರು ವರ್ಷಗಳೊಳಗೆ ವ್ಯವಸಾಯಕ್ಕೆ ಒಳಪಡಿಸಬೇಕು. ಮರವಳಿ ಬೆಳೆಸಬೇಕು, ಭೂಮಿ ಪಡೆದುಕೊಂಡ ವ್ಯಕ್ತಿಯೇ ಅದನ್ನು ಸಾಗುವಳಿ ಮಾಡಬೇಕು ಎಂಬ ಷರತ್ತುಗಳನ್ನು ವಿಧಿಸಲಾಗುತ್ತಿತ್ತು. ಭೂ ಮಂಜೂರಾತಿಗೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಿಸಿದ ತಾಲೂಕಿನ ತಹಸೀಲ್ದಾರರೇ ಸ್ವೀಕರಿಸಬೇಕು. ಅಗತ್ಯ ವಿಚಾರಣೆ ನಡೆಸಿ ಅಂತಿಮವಾಗಿ ಮಂಜೂರಾತಿ ಆದೇಶವನ್ನು ಹೊರಡಿಸುವ ಅಧಿಕಾರವೂ ಅವರದೇ ಆಗಿರುತ್ತದೆ. ಕೆಲವು ಸಂದರ್ಭಗಳಲ್ಲಿ ಅವರು ಅರ್ಜಿಗಳನ್ನು ಪೂರ್ವಭಾವಿ ಕ್ರಮ ಜರುಗಿಸಿದ ನಂತರ ತಮ್ಮ ಅಭಿಪ್ರಾಯದೊಡನೆ ಸರಕಾರಕ್ಕೆ ಕಳುಹಿಸಿ ಮಂಜೂರಾತಿ ಪಡೆದುಕೊಳ್ಳಬೇಕಾಗಿರುತ್ತದೆ.

ಖಾಸಗಿ ಸಂಘ–ಸಂಸ್ಥೆಗಳಿಗೆ ಅಥವಾ ವಿವಿಧ ವೈಯಕ್ತಿಕ ಉದ್ದೇಶಗಳಿಗೆ ಸರ್ಕಾರಿ ಜಮೀನುಗಳ ಮಂಜೂರಾತಿಯನ್ನು ಕರ್ನಾಟಕ ಭೂ ಮಂಜೂರಾತಿ ನಿಯಮಗಳು ೧೯೬೯ರನ್ವಯ ಮಾಡಲಾಗುತ್ತದೆ.

ಅನೇಕ ಕಾರಣಗಳಿಂದಾಗಿ ಈ ನಿಯಮಾವಳಿಯಲ್ಲಿ ಲೋಪದೋಷಗಳಿರುವುದು ಸರ್ಕಾರದ ಗಮನಕ್ಕೆ ಬಂದ ನಂತರ ಸೂಕ್ತ ತಿದ್ದುಪಡಿಯನ್ನು ಮಾಡಲಾಗಿದೆ. ಈ ನಿಯಮಗಳು ದಿನಾಂಕ ೩೧-೦೮-೨೦೦೫ರಿಂದ ಜಾರಿಗೆ ಬಂದಿವೆ.

## ಅನಧಿಕೃತ ಸಾಗುವಳಿಯಲ್ಲಿನ ಜಮೀನುಗಳ ಸಕ್ರಮೀಕರಣ

ಹೆಚ್ಚುತ್ತಿರುವ ಜನಸಂಖ್ಯೆಯ ಒತ್ತಡವೇ ಮುಂತಾದ ಕಾರಣಗಳಿಂದ ಸರ್ಕಾರಿ ಜಮೀನುಗಳ ಒತ್ತುವರಿ ನಿರಂತರವಾಗಿ ನಡೆಯುತ್ತಿದೆ. ಈ ಹಿಂದೆ ಎರಡು ಬಾರಿ ಇಂತಹ ಒತ್ತುವರಿಗಳನ್ನು ಸರ್ಕಾರವು ಸಕ್ರಮೀಕರಣಗೊಳಿಸಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ನ್ನು ಈ ಉದ್ದೇಶಕ್ಕಾಗಿಯೇ ಮೂರನೇ ಬಾರಿಗೆ ೧೯೯೧ರಲ್ಲಿ ತಿದ್ದುಪಡಿ ಮಾಡಲಾಗಿದೆ. ಇದರನ್ವಯ ಭೂಹೀನರು, ಸಣ್ಣ ಮತ್ತು ಬಡ ರೈತರಿಗೆ ಪ್ರಸ್ತುತ ಹಿಡುವಳಿ ಜಮೀನನ್ನು ಒಳಗೊಂಡಂತೆ ಗರಿಷ್ಟ ೫.೦೦ ಎಕರೆಯಷ್ಟು ಜಮೀನನ್ನು ಸಕ್ರಮೀಕರಣಗೊಳಿಸಲು ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪(ಎ) ರ ತಿದ್ದುಪಡಿಯು ಅನುಕೂಲ ಮಾಡಿಕೊಟ್ಟಿದೆ. ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೭೯(೨)ರಲ್ಲಿ ವಿಶೇಷ ಹಕ್ಕುಗಳಿಗೆ ಒಳಪಡುವ ಜಮೀನುಗಳನ್ನು ಸಕ್ರಮೀಕರಣಗೊಳಿಸಲು ಅವಕಾಶವಿದೆ.

ಮೇಲೆ ಹೇಳಿದ ಕಲಂ ಅಡಿ ಸಕ್ರಮೀಕರಣ ಕೋರಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ದಿನಾಂಕ ೩೦-೦೪-೧೯೯೯ರ ವರೆಗೆ ಒಟ್ಟು ೧೦.೯೪ ಲಕ್ಷ ಅರ್ಜಿಗಳು, ೨೬.೬೩ ಲಕ್ಷ ಎಕರೆ ವಿಸ್ತೀರ್ಣಕ್ಕೆ ಸಲ್ಲಿಸಲ್ಪಟ್ಟಿದ್ದವು.

**ಕೋಷ್ಟಕ ೯.೧೧: ಚಾಮರಾಜನಗರ ಜಿಲ್ಲೆಯಲ್ಲಿ ಅನಧಿಕೃತ ಸಾಗುವಳಿ ಸಕ್ರಮಗೊಳಿಸುವ ಬಗ್ಗೆ ಸ್ವೀಕರಿಸಿದ ಅರ್ಜಿಗಳ ವಿವರ (ನಮೂನೆ ೫೦) (ಮಾರ್ಚ್ ೨೦೧೨ರ ಅಂತ್ಯಕ್ಕೆ)**

| ತಾಲೂಕು | ಪ.ಜಾ.ಪಂ ರಿಂದ ಸ್ವೀಕರಿಸಿದ ಅರ್ಜಿ | | | ಇತರರಿಂದ ಸ್ವೀಕರಿಸಿದ ಅರ್ಜಿ | | | ಒಟ್ಟು ಅರ್ಜಿಗಳು | | | ಅಂಗೀಕೃತವಾದ ಅರ್ಜಿಗಳು ಪ.ಜಾ.ಪಂ | | | ಅಂಗೀಕೃತವಾದ ಅರ್ಜಿಗಳು ಇತರರು | | | ಅಂಗೀಕೃತವಾದ ಒಟ್ಟು ಅರ್ಜಿಗಳು | | |
|---|---|---|---|---|---|---|---|---|---|---|---|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | |
| | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ |
| ಗುಂಡ್ಲುಪೇಟೆ | ೩೫೬೦ | ೯೫೬೦ | ೦ | ೫೦೩೩ | ೧೩೫೫೦ | ೦ | ೮೫೯೩ | ೨೩೧೧೦ | ೦ | ೧೧೭೯ | ೧೭೯೬ | ೦ | ೧೮೭೨ | ೩೫೮೩ | ೩ | ೩೦೫೧ | ೫೩೭೯ | ೩ |
| ಯಳಂದೂರು | ೪೯೮ | ೯೯೩ | ೦ | ೬೧೨ | ೬೧೫ | ೦ | ೧೧೧೦ | ೧೬೦೮ | ೦ | ೧೦ | ೯ | ೦ | ೩೩ | ೨೭ | ೦ | ೪೩ | ೩೬ | ೦ |
| ಕೊಳ್ಳೇಗಾಲ | ೧೦೯೧ | ೨೦೦೯ | ೦ | ೪೩೬೩ | ೧೨೨೪೩ | ೩೧ | ೫೪೫೪ | ೧೪೨೫೨ | ೩೧ | ೪೧೮ | ೭೯೯ | ೨೧ | ೯೨೭ | ೧೭೫೦ | ೫ | ೧೩೪೫ | ೨೫೪೯ | ೨೬ |
| ಚಾ.ರಾ.ನಗರ | ೧೫೯೮ | ೪೬೪೮ | ೨೨ | ೩೫೨೫ | ೯೮೭೯ | ೧೯ | ೫೧೨೩ | ೧೪೫೨೮ | ೧ | ೫೭೮ | ೧೦೧೨ | ೨೩ | ೧೩೫೬ | ೩೩೦೨ | ೧೭ | ೧೯೩೪ | ೪೩೧೫ | ೦ |
| **ಒಟ್ಟು** | **೬೭೪೭** | **೧೭೨೧೦** | **೨೨** | **೧೩೫೩೩** | **೩೬೨೮೮** | **೧೦** | **೨೦೨೮೦** | **೫೩೪೯೮** | **೩೨** | **೨೧೮೫** | **೩೬೧೭** | **೪** | **೪೧೮೮** | **೮೬೬೨** | **೨೫** | **೬೩೭೩** | **೧೨೨೭೯** | **೨೯** |

(ನಮೂನೆ ೫೩)

| ತಾಲೂಕು | ಪರಿಶಿಷ್ಟ ಜಾತಿ/ಪಂಗಡ | | | ಇತರರು | | | ಒಟ್ಟು ಅರ್ಜಿಗಳು | | | ಒಟ್ಟು ಮಜೂರಾಗಿರುವುದು | | | ಇತರರು | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | |
| | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ |
| ಚಾಮರಾಜನಗರ | ೭೧೯ | ೧೭೬೧ | ೧೦ | ೨೫೫೩ | ೫೮೩೪ | ೨೪ | ೩೨೭೨ | ೭೫೯೫ | ೩೪ | ೭೭ | ೧೫೯ | ೨೦ | ೨೦೨ | ೩೬೪ | ೧೫ | ೨೭೯ | ೫೨೩ | ೩೫ |
| ಗುಂಡ್ಲುಪೇಟೆ | ೧೯೩೭ | ೫೦೧೯ | ೦ | ೪೧೬೩ | ೧೧೨೮೧ | ೦ | ೬೧೦೦ | ೧೬೩೦೦ | ೦ | ೨೦೮ | ೩೨೯ | ೩ | ೩೯೦ | ೭೩೧ | ೧ | ೫೯೮ | ೧೦೬೦ | ೪ |
| ಯಳಂದೂರು | ೨೯೯ | ೫೦೦ | ೩೭ | ೧೯೮ | ೨೬೨ | ೧೩ | ೪೯೭ | ೭೬೩ | ೧೦ | ೧೦ | ೯ | ೨೩ | ೧೨ | ೧೮ | ೧ | ೨೨ | ೨೭ | ೨೪ |
| ಕೊಳ್ಳೇಗಾಲ | ೧೪೨೨ | ೩೩೩೬ | ೦ | ೨೪೧೫ | ೬೧೯೪ | ೦ | ೩೮೩೭ | ೯೫೩೦ | ೦ | ೨೧೨ | ೩೦೭ | ೦ | ೯೨೪ | ೧೩೫೩ | ೦ | ೧೧೩೫ | ೧೬೬೦ | ೦ |
| | **೪೩೭೭** | **೧೦೬೧೬** | **೭** | **೯೩೨೯** | **೨೩೫೭೧** | **೩೭** | **೧೩೭೦೬** | **೩೪೧೮೯** | **೪** | **೫೦೭** | **೮೦೫** | **೬** | **೧೫೨೮** | **೨೪೬೬** | **೧೭** | **೨೦೩೫** | **೩೨೭೧** | **೨೩** |

ಮುಂದುವರೆದ ಭಾಗ

| ತಿರಸ್ಕರಿಸಿರುವುದು | | | | | | | | | ಪರಿಶಿಷ್ಟ ಜಾತಿ/ಪಂಗಡ | | | ಇತರರು | | | ಒಟ್ಟು | | |
|---|---|---|---|---|---|---|---|---|---|---|---|---|---|---|---|---|---|
| ಪರಿಶಿಷ್ಟ ಜಾತಿ/ಪಂಗಡ | | | ಇತರರು | | | ಒಟ್ಟು | | | | | | | | | | | |
| ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | |
| | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ |
| ೨೫೭ | ೯೦೮ | ೩೪ | ೩೨೭ | ೮೯೧ | ೧೨ | ೫೮೪ | ೧೮೦೦ | ೬ | ೩೩೪ | ೧೦೬೮ | ೧೪ | ೫೨೯ | ೧೨೫೫ | ೨೭ | ೮೬೩ | ೨೩೨೪ | ೧ |
| ೧೬೬೧ | ೪೫೩೮ | ೧೯ | ೩೭೪೬ | ೧೦೪೭೬ | ೩ | ೫೪೦೭ | ೧೫೦೧೪ | ೨೨ | ೧೮೬೯ | ೪೮೬೭ | ೨೨ | ೪೧೩೬ | ೧೧೨೦೭ | ೪ | ೬೦೦೫ | ೧೬೦೭೪ | ೨೬ |
| ೨೮೯ | ೪೯೧ | ೧೪ | ೧೮೬ | ೨೪೪ | ೧೨ | ೪೭೫ | ೭೩೫ | ೨೬ | ೨೯೯ | ೫೦೦ | ೩೭ | ೧೯೮ | ೨೬೨ | ೧೩ | ೪೯೭ | ೭೬೩ | ೧೦ |
| ೭೬೪ | ೧೫೬೭ | ೦ | ೧೪೫೩ | ೩೧೫೩ | ೦ | ೨೨೧೭ | ೪೭೨೦ | ೦ | ೯೭೬ | ೧೮೭೪ | ೦ | ೨೩೭೭ | ೪೫೦೬ | ೦ | ೩೩೫೩ | ೬೩೮೦ | ೦ |
| **೨೯೭೧** | **೭೫೦೫** | **೨೭** | **೫೭೧೨** | **೧೪೭೬೪** | **೨೭** | **೮೬೮೩** | **೨೨೨೭೦** | **೧೪** | **೩೪೭೮** | **೮೩೧೦** | **೩೩** | **೭೨೪೦** | **೧೭೨೩೧** | **೪** | **೧೦೭೧೮** | **೨೫೫೪೧** | **೩೭** |

ಮುಂದುವರೆದ ಭಾಗ

| ಬಾಕಿ ಇರುವ ಪ್ರಕರಣಗಳು | | | ಸಾಗುವಳಿ ಚೀಟಿ ನೀಡಿರುವ ವಿವರ | | | | | | ಸಕ್ರಮಗೊಳಿಸಿರುವ ಪ್ರಕರಣಗಳ ಪೈಕಿ ವಿಧಿಸಿರುವ ಕಿಮ್ಮತ್ತಿನ ಮೊಬಲಗು | ವಸೂಲಾದ ಕಿಮ್ಮತ್ತು |
|---|---|---|---|---|---|---|---|---|---|---|
| ಒಟ್ಟು | | | ಸಾಗುವಳಿ ಚೀಟಿ ನೀಡಿರುವುದು | | | ಸಾಗುವಳಿ ಚೀಟಿ ವಿತರಣೆಗೆ ಬಾಕಿ | | | | |
| ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | | |
| | ಎಕರೆ | ಗುಂಟೆ | | ಎಕರೆ | ಗುಂಟೆ | | ಎಕರೆ | ಗುಂಟೆ | | |
| ೨೪೦೯ | ೫೨೭೧ | ೩೩ | ೨೪೯ | ೪೩೨ | ೨೭ | ೩೦ | ೯೧ | ೮ | ೨೫೬೪೮೦ | ೧೩೯೬೨೨ |
| ೯೫ | ೨೨೫ | ೧೪ | ೫೨೩ | ೯೭೩ | ೧ | ೭೫ | ೮೭ | ೩ | ೮೭೬೩೬ | ೭೪೩೫೨ |
| ೦ | ೦ | ೦ | ೨೨ | ೨೭ | ೨೪ | ೦ | ೦ | ೦ | ೨೬೮೯ | ೨೬೮೯ |
| ೪೮೪ | ೩೧೫೦ | ೦ | ೧೧೩೬ | ೧೬೬೦ | ೦ | ೦ | ೦ | ೦ | ೩೫೧೩೮೯ | ೧೫೨೫೦೦ |
| **೨೯೮೮** | **೮೬೪೬** | **೭** | **೧೯೩೦** | **೩೦೯೩** | **೧೨** | **೧೦೫** | **೧೭೮** | **೧೧** | **೭೨೨೩೧೪** | **೩೯೩೨೮೩** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

## ಅನಧಿಕೃತ ಸರ್ಕಾರಿ ಜಮೀನುಗಳ ಒತ್ತುವರಿ

ಇತ್ತೀಚಿನ ವರ್ಷಗಳಲ್ಲಿ ನಗರ ಪ್ರದೇಶಗಳಲ್ಲಿ, ಅದರಲ್ಲೂ ಮುಖ್ಯವಾಗಿ ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಬೆಲೆ ಬಾಳುವ ಸರ್ಕಾರಿ ಜಮೀನುಗಳ ಸಂಬಂಧ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಒತ್ತುವರಿ ಮಾಡಿಕೊಳ್ಳುವ ಪ್ರವೃತ್ತಿ ಹೆಚ್ಚಾಗಿರುವುದು ಕಂಡು ಬರುತ್ತದೆ. ಅಲ್ಲದೇ, ಕರ್ನಾಟಕ ಭೂ ಕಂದಾಯ ನಿಯಮಗಳಲ್ಲಿನ ಉಪಬಂಧಗಳ ಉಲ್ಲಂಘನೆ ಮತ್ತು ಭೂ ಪರಿವರ್ತನೆ ಇಲ್ಲದೇ ಕೃಷಿ ಜಮೀನುಗಳನ್ನು ಕೃಷಿಯೇತರ ಉದ್ದೇಶಗಳಿಗಾಗಿ ಬಳಸುತ್ತಿರುವ ಪ್ರಕರಣಗಳು ಏರುತ್ತಿವೆ. ಇಂತಹ ಸಮಸ್ಯೆಗಳೊಂದಿಗೆ ವ್ಯವಹರಿಸಲು ಹಿಂದೆ ರಚಿಸಲಾಗಿದ್ದ ಟಾಸ್ಕ್‌ಫೋರ್ಸ್ ತನಗೆ ವಹಿಸಲಾಗಿದ್ದ ಕಾರ್ಯನಿರ್ವಹಿಸುವಲ್ಲಿ ಅಷ್ಟಾಗಿ ಯಶಸ್ಸು ಕಂಡಿಲ್ಲ. ಭೂ ಕಬಳಿಕೆದಾರರು ಅಥವಾ ಒತ್ತುವರಿದಾರರನ್ನು ಬಲವಂತವಾಗಿ ಒತ್ತುವರಿಯಾಗಿರುವ ಜಮೀನುಗಳಿಂದ ಹೊರದೂಡಲು ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ಕಲಂ ೯೪ರ ಉಪಕಲಂ ೩ ಮತ್ತು ೪ರನ್ವಯ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುವ ಅವಕಾಶವನ್ನೂ ಸಮರ್ಥವಾಗಿ ಬಳಸಿಕೊಳ್ಳಲಾಗಿಲ್ಲ. ಆದ್ದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ರ ೯೪, ೯೬ ಮತ್ತು ೯೭ರ ಕಲಂಗಳಿಗೆ ತಿದ್ದುಪಡಿ ಮಾಡಿ ಅಪರಾಧಗಳು ಮತ್ತು ಶಿಕ್ಷೆಗಳು ಎಂಬ ಹೊಸ ಅಧ್ಯಾಯವನ್ನು ಸೇರಿಸಿ ಅನಧಿಕೃತವಾಗಿ ಸರ್ಕಾರಿ ಜಮೀನಿನ ಸ್ವಾಧೀನವನ್ನು ಭಾರತೀಯ ದಂಡ ಸಂಹಿತೆಯಡಿ ಶಿಕ್ಷಾರ್ಹ ಮತ್ತು ಜಾಮೀನುರಹಿತ ಅಪರಾಧವೆಂದು ಪ್ರಸ್ತಾಪಿಸಲು ನಿರ್ಣಯಿಸಲಾಯಿತು. ಇಂತಹ ಒತ್ತುವರಿಗಳನ್ನು ನಿರ್ದಾಕ್ಷಿಣ್ಯವಾಗಿ ತೆರವುಗೊಳಿಸಲು ದಿನಾಂಕ ೧೧-೦೨-೨೦೦೬ರಿಂದ ಜಾರಿಗೆ ತಂದ ಈ ತಿದ್ದುಪಡಿ ಅವಕಾಶ ಮಾಡಿಕೊಟ್ಟಿದೆ. ಹೀಗೆ ಮರು ಸ್ವಾಧೀನ ಮಾಡಿಕೊಂಡ ಬೆಲೆ ಬಾಳುವ ಜಮೀನುಗಳನ್ನು ಬಹಿರಂಗ ಹರಾಜಿನ ಮೂಲಕ ವಿಲೇವಾರಿ ಮಾಡಲು ಕಲಂ ೬೯ ಎ ಯನ್ನು ಹೊಸತಾಗಿ ಕಾಯ್ದೆ ೧೯೬೪ ರಲ್ಲಿ ಸೇರ್ಪಡೆ ಮಾಡಲಾಗಿದೆ.

ಸರ್ಕಾರಿ ಜಮೀನುಗಳನ್ನು ಕೃಷಿ ಮತ್ತು ಕೃಷಿಯೇತರ ಉದ್ದೇಶಗಳಿಗಾಗಿ ಮಂಜೂರು ಮಾಡುವ ಸಂಬಂಧ ಕರ್ನಾಟಕ ಭೂ ಕಂದಾಯ ನಿಯಮಾವಳಿ ೧೯೬೬ರ ನಿಯಮ ೧೦೮ (ಐ) ಹಾಗೂ ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ ೧೯೬೯ರ ಕೆಲವು ನಿಯಮಗಳಿಗೆ ತಿದ್ದುಪಡಿಗಳನ್ನು ತರಲಾಗಿದೆ. ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಪರಿವರ್ತಿಸುವ ಬಗ್ಗೆ ಅನುಮತಿ ನೀಡುವುದಕ್ಕಾಗಿ ಏಕಗವಾಕ್ಷಿ ಸಮಿತಿಯನ್ನು ರಚಿಸಿ ಸುತ್ತೋಲೆ ಸಂಖ್ಯೆ ಆರ್‌ಡಿ ೧೩ ಎಲ್‌ಜಿಪಿ ೨೦೦೫, ದಿನಾಂಕ ೦೨-೦೭-೨೦೦೫ನ್ನು ಹೊರಡಿಸಲಾಗಿದೆ. ಈ ಸುತ್ತೋಲೆಗೆ ಕೆಲವು ತಿದ್ದುಪಡಿಗಳನ್ನು ಸಹಾ ೨೦೦೫ ಮತ್ತು ೨೦೦೮ರಲ್ಲಿ ತರಲಾಗಿದೆ.

## ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ ಅಡಿ ಹಕ್ಕು ಪುನರ್ ಸ್ಥಾಪನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗಗಳಿಗೆ ಜಮೀನು ನೀಡುವ ವಿಷಯದಲ್ಲಿ ಇಡೀ ರಾಷ್ಟ್ರದಲ್ಲಿ ಕರ್ನಾಟಕ ರಾಜ್ಯವು ಪ್ರಥಮ ಸ್ಥಾನದಲ್ಲಿದೆ. ಹಿಂದಿನ ಮೈಸೂರು ಸಂಸ್ಥಾನದ ಸರ್ಕಾರವು ೧೯೦೪ನೇ ಇಸವಿಯಲ್ಲಿಯೇ ಈ ವರ್ಗದ ಜನರಿಗೆ ಸರ್ಕಾರಿ ಜಮೀನುಗಳನ್ನು ನೀಡುವ ಸಂಬಂಧ ಡಿಪ್ರೆಸ್ಡ್ ಕ್ಲಾಸಸ್ ದರ್ಖಾಸ್ತ್ ರೂಲ್ಸ್ ಎಂಬ ಕಾನೂನನ್ನು ಜಾರಿಗೊಳಿಸಿದ್ದರು. ಅಂದಿನಿಂದ ರಾಜ್ಯದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕುಟುಂಬಗಳಿಗೆ ಸರ್ಕಾರಿ ಜಮೀನುಗಳನ್ನು ನೀಡುತ್ತಾ ಬರಲಾಗಿದೆ. ಹೀಗೆ ಭೂಮಿಗಳನ್ನು ಪಡೆದುಕೊಂಡಿದ್ದ ಅನೇಕರು ಭೂ ಮಂಜೂರಾತಿ ನಿಯಮಗಳನ್ನು ಉಲ್ಲಂಘಿಸಿ ತೀವ್ರ ಬಡತನ ಮತ್ತು ದುಶ್ಚಟಗಳ ಕಾರಣಗಳಿಂದ ತಮ್ಮ ಜಮೀನುಗಳನ್ನು ಇತರರ ವಶಕ್ಕೆ ನೀಡಿ ಸಂಕಷ್ಟಕ್ಕೆ ಸಿಲುಕಿದ್ದನ್ನು ಗಮನಿಸಿದ ರಾಜ್ಯ ಸರ್ಕಾರವು ಕರ್ನಾಟಕ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯ್ದೆ ೧೯೭೮ನ್ನು ಜಾರಿಗೊಳಿಸಿತು. ಇದರನ್ವಯ ನಿಯಮ ಉಲ್ಲಂಘಿಸಿ ಮಾರಾಟವಾದ ಜಮಿನುಗಳನ್ನು (ಹಿಂಪಡೆದು) ಮೂಲ ಮಂಜೂರಿದಾರರಿಗೆ ವಾಪಸ್ಸು ವಶಕ್ಕೆ ಕೊಡಿಸಲಾಗುವುದು. ಉಪವಿಭಾಗಾಧಿಕಾರಿಯು ಸಕ್ಷಮ ಪ್ರಾಧಿಕಾರಿಯಾಗಿದ್ದು, ಜಿಲ್ಲಾಧಿಕಾರಿ ಮೇಲ್ಮನವಿ ಪ್ರಾಧಿಕಾರಿಯಾಗಿರುತ್ತಾರೆ. ನಂತರದ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರಲ್ಲಿ ವಿಹಿತವಾಗಿರುತ್ತದೆ. ಸಿವಿಲ್ ನ್ಯಾಯಾಲಯದ ವ್ಯಾಪ್ತಿಗೆ ಒಳಪಡುವುದಿಲ್ಲವಾಗಿ ಉಚ್ಚ ನ್ಯಾಯಾಲಯಕ್ಕೆ ಮಾತ್ರವೇ ಅಪೀಲು ಸಲ್ಲಿಸಬಹುದಾಗಿದೆ.

**ಕೋಷ್ಟಕ ೯.೧೨: ೧೯೭೮ರ ಪಿ.ಟಿ.ಸಿ.ಎಲ್ ಕಾಯಿದೆ ಅನ್ವಯ ಪರಭಾರೆ ಮತ್ತು ಪುನರ್ ಸ್ಥಾಪಿಸುವ ಬಗ್ಗೆ–ಪ್ರಗತಿ ವರದಿ (ಮಾರ್ಚ್ ೨೦೧೨ರವರೆಗೆ)**

| ತಾಲೂಕು | ಈವರೆವಿಗೆ ಪರಿಶಿಷ್ಟ ಜಾತಿ:ಪರಿಶಿಷ್ಟ ಪಂಗಡದವರಿಗೆ ಜಮೀನು ಮಂಜೂರು ಮಾಡಿರುವುದು | | | ಈವರೆವಿಗೆ ಷರತ್ತು ನಿಯಮ ಉಲ್ಲಂಘನೆ ಮಾಡಿರುವ ಪತ್ತೆ ಹಚ್ಚಲಾದ ಒಟ್ಟು ಪ್ರಕರಣಗಳು | | | ಈವರೆಗೆ ವಿಲೇವಾರಿಯಾದ ಪ್ರಕರಣಗಳು | | | ಮೂಲ ಮಜೂರಿದಾರರಿಗೆ ಭೌತಿಕವಾಗಿ ಸ್ವಾಧೀನ ನೀಡಿದ ಪ್ರಕರಣಗಳು | | | ಮೂಲ ಮಜೂರಿದಾರರ ಹೆಸರಿಗೆ ಸ್ವಾಧೀನಕ್ಕೆ ನೀಡಲು ಬಾಕಿ ಇರುವ ಪ್ರಕರಣಗಳು | | | ಸ್ವಾಧೀನಕ್ಕೆ ನೀಡಲು ಬಾಕಿಯಿರುವ ಪ್ರಕರಣಗಳಲ್ಲಿ ತಡೆಯಾಜ್ಞೆ ಇರುವ ಪ್ರಕರಣಗಳ ವಿವರ | | |
|---|---|---|---|---|---|---|---|---|---|---|---|---|---|---|---|---|---|---|
| | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | |
| | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ |
| ೧ | ೨ | ೩ | | ೪ | ೫ | | ೬ | ೭ | | ೮ | ೯ | | ೧೦ | ೧೧ | | ೧೨ | ೧೩ | |
| ಚಾಮರಾಜನಗರ | ೧೬೦೧ | ೩೭೧೦ | ೨೧ | ೨೬೩ | ೭೬೯ | ೨೩ | ೨೫೬ | ೭೪೮ | ೧೬ | ೧೨೯ | ೩೪೮ | ೩೫ | ೦ | ೦ | ೦ | ೦ | ೦ | ೦ |
| ಕೊಳ್ಳೇಗಾಲ | ೪೩೬೭ | ೮೪೩೭ | ೩೮ | ೪೪೪ | ೧೯೪೩ | ೧ | ೪೧೬ | ೧೮೪೧ | ೨೮ | ೮೬ | ೭೭೩ | ೯ | ೦ | ೦ | ೦ | ೦ | ೦ | ೦ |
| ಯಳಂದೂರು | ೧೩೧ | ೧೯೩ | ೧೭ | ೬೭ | ೭೯ | ೧೩ | ೬೬ | ೭೯ | ೨ | ೬೬ | ೭೯ | ೨ | ೦ | ೦ | ೦ | ೦ | ೦ | ೦ |
| ಗುಂಡ್ಲುಪೇಟೆ | ೨೩೪೫ | ೪೦೭೫ | ೨ | ೩೧೬ | ೧೧೫೦ | ೧೯ | ೩೦೯ | ೧೧೧೦ | ೩೩ | ೧೩೨ | ೫೩೪ | ೬ | ೦ | ೦ | ೦ | ೦ | ೦ | ೦ |
| ಒಟ್ಟು | ೮೪೪೪ | ೧೬೪೧೬ | ೩೮ | ೧೦೯೦ | ೩೯೪೨ | ೧೬ | ೧೦೪೭ | ೩೭೭೯ | ೩೯ | ೪೧೩ | ೧೭೩೫ | ೧೨ | ೦ | ೦ | ೦ | ೦ | ೦ | ೦ |

| ಮಾಹೆಯ ಆರಂಭದಲ್ಲಿ ಇತ್ಯರ್ಥಕ್ಕೆ ಬಾಕಿ ಇರುವ ಪ್ರಕರಣಗಳು | | | ಪ್ರಸಕ್ತ ಮಾಹೆಯಲ್ಲಿ ಗುರುತಿಸಿದ ಒಟ್ಟು ಉಲ್ಲಂಘನೆ ಪ್ರಕರಣಗಳು | | | ಒಟ್ಟು ಇತ್ಯರ್ಥಕ್ಕೆ ಬಾಕಿ | | | ವಿಲೇವಾರಿ ಮಾಡಿದ ಪ್ರಕರಣಗಳು | | | ಮಾಸಾಂತ್ಯಕ್ಕೆ ಬಾಕಿ ಇರುವ ಪ್ರಕರಣಗಳು | | | ಉಲ್ಲಂಘನೆಗೆ ಗುರುತಿಸಿರುವ ಪ್ರಕರಣಗಳಲ್ಲಿ ಪಿಟಿಸಿಎಲ್ ಕಾಯಿದೆ ಸೆಕ್ಷನ್ ೬ರಡಿ ಕ್ರಮ ಜರುಗಿಸಿದ ಪ್ರಕರಣಗಳು |
|---|---|---|---|---|---|---|---|---|---|---|---|---|---|---|---|
| ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | ಸಂಖ್ಯೆ | ವಿಸ್ತೀರ್ಣ | | |
| | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | | ಎ | ಗುಂ | |
| ೧೪ | ೧೫ | ೧೬ | | ೧೭ | ೧೮ | | ೧೯ | ೨೦ | | ೨೧ | ೨೨ | | ೨೩ | ೨೪ | |
| ೮ | ೨೫ | ೩ | ೧ | ೧ | ೦ | ೯ | ೨೬ | ೩ | ೨ | ೪ | ೩೬ | ೭ | ೨೧ | ೭ | ೦ |
| ೨೭ | ೯೭ | ೦ | ೧ | ೪ | ೧೩ | ೨೮ | ೧೦೧ | ೧೩ | ೦ | ೦ | ೦ | ೨೮ | ೧೦೧ | ೧೩ | ೦ |
| ೧ | ೦ | ೧೧ | ೦ | ೦ | ೦ | ೧ | ೦ | ೧೧ | ೦ | ೦ | ೦ | ೧ | ೦ | ೧೧ | ೦ |
| ೭ | ೩೯ | ೨೬ | ೦ | ೦ | ೦ | ೭ | ೩೯ | ೨೬ | ೦ | ೦ | ೦ | ೭ | ೩೯ | ೨೬ | ೦ |
| **೪೩** | **೧೬೨** | **೦** | **೨** | **೫** | **೧೩** | **೪೫** | **೧೬೭** | **೧೩** | **೨** | **೪** | **೩೬** | **೪೩** | **೧೬೨** | **೧೭** | **೦** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

## ಭೂ ಸ್ವಾಧೀನ

ಮೈಸೂರು ಭೂ ಸ್ವಾಧೀನ ಅಧಿನಿಯಮ, ೧೮೯೪ (೧೮೯೪ರ VII) ಖಾಸಗಿ ಹಿಡುವಳಿಗಳನ್ನು ಸಾರ್ವಜನಿಕ ಉದ್ದೇಶಗಳಿಗಾಗಿ ಸ್ವಾಧೀನಪಡಿಸಿಕೊಳ್ಳಲು ಮತ್ತು ಅಂತಹ ಆದೇಶಗಳಿಂದ ತೊಂದರೆಗೊಳಗಾದವರಿಗೆ ತೆರೆದಿರುವ ಪರಿಹಾರಗಳನ್ನು ನೀಡುವುದಕ್ಕಾಗಿ ಏರ್ಪಡಿಸಲಾಗಿದ್ದ ಕಾಯಿದೆ. ಇದನ್ನು ೧೯೨೭ರ ಅಧಿನಿಯಮ I ಆಗಿ ತಿದ್ದುಪಡಿ ಮಾಡುವ ಮೂಲಕ ಯಾವುದೇ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಂಡು ಆ ಬಗ್ಗೆ ಘೋಷಣೆ ಹೊರಡಿಸುವ ಮುನ್ನ ಆ ಕ್ರಮದಿಂದ ಬಾಧೆಗೊಳಗಾದವರ ಆಕ್ಷೇಪಣೆಗಳನ್ನು ಆಲಿಸಿ ತೀರ್ಮಾನ ತೆಗೆದುಕೊಳ್ಳಬೇಕೆಂದು ಉಪಬಂಧಿಸಲಾಯಿತು. ತಿದ್ದುಪಡಿಯಾದ ಮೈಸೂರು ಭೂ ಸ್ವಾಧೀನ ಅಧಿನಿಯಮದ ಪ್ರಕಾರ ಸರಕಾರಿ ಇಲಾಖೆಗಳ ಪರವಾಗಿ ಜಿಲ್ಲಾಧಿಕಾರಿಯು ಭೂ ಸ್ವಾಧೀನ ಪ್ರಕ್ರಿಯೆಯನ್ನು ನಡೆಸುವ ಅಧಿಕಾರ ಹೊಂದಿದ್ದನು. ಖಾಸಗಿ ಕಂಪನಿ ಮುಂತಾದವುಗಳಿಗೆ ಭೂ ಸ್ವಾಧೀನ ಮಾಡಬೇಕಾದಾಗ ಕೂಡ ಅಧಿನಿಯಮದ ಪ್ರಕಾರವೇ ಜಿಲ್ಲಾಧಿಕಾರಿ ಕ್ರಮ ಜರುಗಿಸಬೇಕಿತ್ತು. ಸಾಮಾನ್ಯವಾಗಿ ಭೂ ಸ್ವಾಧೀನ ಮಾಡಿಕೊಳ್ಳುವ ಅಗತ್ಯ ಬೀಳುತ್ತಿದ್ದ ಸಂದರ್ಭಗಳೆಂದರೆ ಹಳ್ಳಿಗಳ ವಿಸ್ತರಣೆ ಮತ್ತು ಸುಧಾರಣೆ, ರೈಲ್ವೆ ಮಾರ್ಗಗಳ ನಿರ್ಮಾಣ, ರಸ್ತೆ ನಿರ್ಮಾಣ, ಸರ್ಕಾರಿ ಇಲಾಖೆಗಳಿಗೆ ಕಟ್ಟಡಗಳ ನಿರ್ಮಾಣ, ನೀರಾವರಿ ಯೋಜನೆಗಳು ಮುಂತಾದವು. ಪೂರ್ವಭಾವಿ ಅಧಿಸೂಚನೆ ಹೊರಡಿಸಿ, ಆಕ್ಷೇಪಣೆಗಳೇನಾದರೂ ಸಲ್ಲಿಸಲ್ಪಟ್ಟರೆ ಅವುಗಳನ್ನು ಪರಿಶೀಲಿಸಿ ಕೆಲವು ಬಾರಿ ಕರಾರಿನ ಮಾತುಕತೆ ನಡೆಸಿ, ಅಂತಿಮ ಅಧಿಸೂಚನೆಯನ್ನು ಹೊರಡಿಸಿ ಸಾರ್ವಜನಿಕ ಉದ್ದೇಶಕ್ಕಾಗಿ ಭೂ ಸ್ವಾಧೀನ ಮಾಡಿಕೊಳ್ಳುತ್ತಿರುವುದಾಗಿ ಘೋಷಣೆ ಹೊರಡಿಸಿ, ಭೂ ಸ್ವಾಧೀನ ಪ್ರಕ್ರಿಯೆಯನ್ನು ಪೂರ್ಣಗೊಳಿಸುವ ಸಕಲ ಜವಾಬ್ದಾರಿಯೂ ಜಿಲ್ಲಾಧಿಕಾರಿಯದೇ ಆಗಿತ್ತು. ಹೀಗೆ ಸ್ವಾಧೀನಪಡಿಸಿಕೊಂಡ ಜಮೀನುಗಳಿಗೆ ಅಧಿನಿಯಮದಲ್ಲಿ ಹೇಳಿರುವ ಪ್ರಕಾರ ಪರಿಹಾರ ಧನವನ್ನು ನಿಗದಿಪಡಿಸಿ ಪಾವತಿ ಮಾಡಬೇಕಾಗುತ್ತಿತ್ತು. ಪರಿಹಾರ ನೀಡಿಕೆಯಲ್ಲಿ ವಿಳಂಬ ಸಂಭವಿಸಿದ ಪ್ರಕರಣಗಳಲ್ಲಿ ನಿರ್ದಿಷ್ಟ ದರದಲ್ಲಿ ಬಡ್ಡಿಯನ್ನು ಕೂಡ ಭೂ ಮಾಲೀಕನಿಗೆ ನೀಡಲು ಕಾನೂನಿನಲ್ಲಿ ಅವಕಾಶವಿತ್ತು. ಹೀಗೆ ಸ್ವಾಧೀನ ಪಡಿಸಿಕೊಂಡ ಜಮೀನನ್ನು ಭೂ ಸ್ವಾಧೀನಾಧಿಕಾರಿಗಳು ಜಿಲ್ಲಾ ಸರ್ವೇಕ್ಷಣೆ ಸಿಬ್ಬಂದಿಯಿಂದ ಅಳತೆ ಮಾಡಿಸಿ ಗಡಿಗಳನ್ನು ಗುರುತಿಸಿದ ನಂತರ ವಶಕ್ಕೆ ತೆಗೆದುಕೊಳ್ಳಬೇಕಾಗಿತ್ತು.

ಭೂ ಸ್ವಾಧೀನ ಅಧಿನಿಯಮ (೧೮೯೪ರ ಕೇಂದ್ರ ಅಧಿನಿಯಮ I)ವನ್ನು ಭೂ ಸ್ವಾಧೀನ (ಕರ್ನಾಟಕ ವಿಸ್ತರಣೆ ಮತ್ತು ತಿದ್ದುಪಡಿ) ಅಧಿನಿಯಮ ೧೯೬೧ನ್ನು ಕರ್ನಾಟಕ ರಾಜ್ಯಕ್ಕೆ ವಿಸ್ತರಿಸಲಾದ ಸಮಯದಿಂದ ಭೂ ಸ್ವಾಧೀನ ಪ್ರಕ್ರಿಯೆಗಳನ್ನು ಅದರಂತೆಯೇ ನಡೆಸಲಾಗುತ್ತಿದೆ. ಭೂ ಸ್ವಾಧೀನಕ್ಕೆ ಸಂಬಂಧಿಸಿದಂತೆಯೇ ಇರುವ ಇನ್ನಿತರ ಅಧಿನಿಯಮಗಳೆಂದರೆ, ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಅಧಿನಿಯಮ ೧೯೬೬, ಕರ್ನಾಟಕ ಮನೆ ನಿವೇಶನಗಳ ಮಂಜೂರಾತಿಗಾಗಿ ಭೂ ಸ್ವಾಧೀನ ಅಧಿನಿಯಮ ೧೯೭೨ ಮತ್ತು ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರ ಅಧಿನಿಯಮ. ಈ ಕಾಯ್ದೆಗಳಡಿಯಲ್ಲಿನ ಭೂ ಸ್ವಾಧೀನವನ್ನು ಹೊರತುಪಡಿಸಿ ಉಳಿದೆಲ್ಲಾ ಸಾರ್ವಜನಿಕ ಉದ್ದೇಶಗಳಿಗಾಗಿ ಭೂಸ್ವಾಧೀನವನ್ನು ಕಂದಾಯ ಇಲಾಖೆ ಕೈಗೊಳ್ಳುತ್ತದೆ. ಅತಿ ಹೆಚ್ಚು ಭೂ ಸ್ವಾಧೀನವನ್ನು ನೀರಾವರಿ ಯೋಜನೆಗಳಿಗಾಗಿ ಮಾಡಲಾಗುತ್ತಿದೆ. ಇದರ ನಂತರ ರಾಜ್ಯ ಹೆದ್ದಾರಿಗಳು, ವಿದ್ಯುತ್ ಯೋಜನೆಗಳು ಮುಂತಾದ ಯೋಜನೆಗಳಿಗಾಗಿ ಹೆಚ್ಚೆಚ್ಚು ವಿಸ್ತೀರ್ಣದ ಭೂಸ್ವಾಧೀನ ಮಾಡಲಾಗುತ್ತಿದೆ. ಭಾರತ ಸರ್ಕಾರದ ರಕ್ಷಣಾ ಮಂತ್ರಾಲಯ, ರೈಲ್ವೆ ಇಲಾಖೆ ಮುಂತಾದವುಗಳಿಗಾಗಿ ಸಹ ಭೂ ಸ್ವಾಧೀನ ಕಾರ್ಯ ನಡೆಯುತ್ತಿದೆ. ಸ್ಮಶಾನಗಳಿಲ್ಲದ ಗ್ರಾಮಗಳಲ್ಲಿ ಸ್ಮಶಾನದ ಉದ್ದೇಶಕ್ಕಾಗಿ ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳುತ್ತದೆ ಹಾಗೂ ಅವಶ್ಯಬಿದ್ದರೆ ಖರೀದಿಸಲೂ ಅವಕಾಶವಿದೆ. ಕೇಂದ್ರ ಸರಕಾರವು ದಿನಾಂಕ ೨೪-೦೯-೧೯೮೪ರಿಂದ ಜಾರಿಗೆ ಬರುವಂತೆ ಭೂ ಸ್ವಾಧೀನ ಅಧಿನಿಯಮದ ಉಪಬಂಧಗಳು ಈ ಕೆಳಕಾಣಿಸಿರುವ ವಿಷಯಗಳನ್ನು ಕುರಿತಂತೆ ಇವೆ:

(೧) ನಿರ್ದಿಷ್ಟ ಉದ್ದೇಶಕ್ಕಾಗಿ ನಿರ್ದಿಷ್ಟ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವ ಬಗ್ಗೆ ಅಧಿಸೂಚನೆ ಹೊರಡಿಸುವುದು ಮತ್ತು ಇದರಿಂದ ಬಾಧೆಗೊಳಗಾದ ವ್ಯಕ್ತಿಗಳಿಂದ ಆಕ್ಷೇಪಣೆಗಳನ್ನು ಆಹ್ವಾನಿಸಿ ಅವುಗಳ ವಿಚಾರಣೆ ನಡೆಸುವುದು (ಕಲಂ ೪ ಮತ್ತು ೫ಎ)

(೨) ಸರ್ಕಾರದಿಂದ ಅಂತಿಮ ಅಧಿಸೂಚನೆಯನ್ನು ಹೊರಡಿಸುವುದು (ಕಲಂ ೬)

ಅ) ೧೮೯೪ರ ಕೇಂದ್ರ ಅಧಿನಿಯಮ I ನ್ನು ಅಂಗೀಕರಿಸುವ ಸಮಯದಲ್ಲಿ ಕರ್ನಾಟಕ ಶಾಸಕಾಂಗವು ಕಲಂ ಐದು 'ಎ' ಅನ್ನು ಸೇರಿಸಿದೆ. ಇದರಂತೆ, ಜಿಲ್ಲಾಧಿಕಾರಿಯು ನಿಗದಿತ ಅವಧಿಯೊಳಗಾಗಿ ಸರಕಾರಕ್ಕೆ ವರದಿ ಸಲ್ಲಿಸಬೇಕಲ್ಲದೆ ಆಕ್ಷೇಪಣೆಗಳನ್ನು ವ್ಯಕ್ತಪಡಿಸಿರುವ ವ್ಯಕ್ತಿಗಳಿಗೆ ಆ ವಿಷಯವನ್ನು ತಿಳಿಸಬೇಕು.

ಆ) ನಾಲ್ಕನೇ ಕಲಮಿನಡಿ ಅಧಿಸೂಚನೆಯನ್ನು ಹೊರಡಿಸಿದ ಮೂರು ವರ್ಷಗಳ ತರುವಾಯ ಯಾವುದೇ ಘೋಷಣೆಯನ್ನು ೬ನೇ ಕಲಮಿನಡಿ ಮಾಡುವಂತಿಲ್ಲವೆಂದು ಸಹ ಅಧಿನಿಯಮವು ಉಪಬಂಧಿಸಿದೆ.

(೩) ಜಿಲ್ಲಾಧಿಕಾರಿಯಿಂದ ವಿಚಾರಣೆ ಮತ್ತು ತೀರ್ಪು (೯, ೧೦ ಮತ್ತು ೧೧ನೇ ಕಲಂಗಳಡಿಯಲ್ಲಿ)

(೪) ಕರ್ನಾಟಕ ಭೂ ಸ್ವಾಧೀನ ಅಧಿನಿಯಮವು ೧೧ನೇ ಕಲಂಗೆ ಈ ಕೆಳಗೆ ನೀಡಿರುವ ಒಂದು ಷರತ್ತು ಸಹ ಸೇರಿಸಲಾಗಿದೆ.

'ಅಂತಹ ಯಾವುದೇ ತೀರ್ಪನ್ನು ರಾಜ್ಯ ಸರ್ಕಾರದ ಅಥವಾ ರಾಜ್ಯ ಸರಕಾರವು ಇದಕ್ಕಾಗಿ ನೇಮಕ ಮಾಡುವಂತಹ ಅಧಿಕಾರಿಯ ಪೂರ್ವ ಸಮ್ಮತಿ ಪಡೆದುಕೊಳ್ಳದೆ ಮಾಡುವಂತಿಲ್ಲ. ಜಿಲ್ಲಾಧಿಕಾರಿಯ ದರ್ಜೆಗಿಂತ ಕೆಳಗಿನ ಅಧಿಕಾರಿಯು ತೀರ್ಪು ನೀಡಿರುವಂತಹವನಾಗಿದ್ದಲ್ಲಿ ಸಂಬಂಧಿಸಿದ ಜಿಲ್ಲಾಧಿಕಾರಿಯನ್ನೇ ರಾಜ್ಯ ಸರಕಾರವು ಇದಕ್ಕಾಗಿ ನೇಮಕ ಮಾಡಬೇಕು.'

ತೀರ್ಪನ್ನು ಕೊಡುವುದರಲ್ಲಿ ಜಿಲ್ಲಾಧಿಕಾರಿಯು (ಭೂ ಸ್ವಾಧೀನ ಅಧಿನಿಯಮ ಕೆಳಗೆ) ಸರಕಾರದ ಕಾರ್ಯಭಾರಿಯಾಗಿ ಸೂಚನೆಯೊಂದನ್ನು ಮಾಡುತ್ತಿರುವನೆಂಬುದನ್ನು ಈ ಷರತ್ತು ಮಾನ್ಯ ಮಾಡುತ್ತದೆ. ಹೀಗಾಗಿ, ಜಿಲ್ಲಾಧಿಕಾರಿಯು ಮಾಡುವ ಸೂಚನೆಯು ರಾಜ್ಯ ಸರಕಾರದ ಅನುಮೋದನೆಗೆ ಒಳಪಟ್ಟಿರುತ್ತದೆ. ಹನ್ನೊಂದನೇ ಕಲಮಿನಡಿ ಮಾಡಿದ ತೀರ್ಪನ್ನು ಒಪ್ಪುವುದು ಅಥವಾ ತಿರಸ್ಕರಿಸುವುದು ರಾಜ್ಯ ಸರಕಾರದ ವಿವೇಚನೆಗೆ ಸೇರಿದ ವಿಚಾರವಾಗಿದೆ.

ಸುತ್ತೋಲೆ ಸಂಖ್ಯೆ: ಆರ್‌ಡಿ:೧೭೦ಎಕ್ಯೂಡಬ್ಲ್ಯೂ ೮೫, ದಿನಾಂಕ ೧೨/೧೧/೧೯೮೫ರ ಪ್ರಕಾರ ಭೂ ಸ್ವಾಧೀನ ಪ್ರಕರಣಗಳಲ್ಲಿ ಅಧಿಕಾರಿಗಳು ಅನುಮೋದಿಸಬಹುದಾದ ತೀರ್ಪಿನ ಆರ್ಥಿಕ ಮಿತಿ ಜಿಲ್ಲಾಧಿಕಾರಿ – ₹ ೧೦ ಲಕ್ಷಗಳು, ಪ್ರಾದೇಶಿಕ ಆಯುಕ್ತರು – ₹ ೨೦ ಲಕ್ಷಗಳು, ರಾಜ್ಯ ಸರಕಾರ – ₹ ೨೦ ಲಕ್ಷಗಳಿಗಿಂತ ಹೆಚ್ಚು ಇದ್ದುದು ಹಾಲಿ ಭೂ ಸ್ವಾಧೀನ ಪ್ರಕ್ರಿಯೆಯನ್ನು ಹೆಚ್ಚು ಸಮರ್ಪಕವಾಗಿ ಕೈಗೊಳ್ಳುವ ಸಲುವಾಗಿ ಪ್ರಾದೇಶಿಕ ಆಯುಕ್ತರುಗಳಿಗೆ ₹ ೫ ಕೋಟಿಯವರೆಗೆ ಸಾಮಾನ್ಯ ಐತೀರ್ಪು ಅನುಮೋದಿಸುವ ಅಧಿಕಾರ ನೀಡಲಾಗಿದೆ. ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಪ್ರಾರಂಭಿಕ ಅಧಿಸೂಚನೆ ಹೊರಡಿಸುವುದು ಮತ್ತು ₹ ೨ ಕೋಟಿಗಳವರೆಗೆ, ಸರ್ಕಾರಕ್ಕೆ ₹ ೫ ಕೋಟಿ ಮೇಲ್ಪಟ್ಟು ಸಾಮಾನ್ಯ ಐತೀರ್ಪನ್ನು ಅನುಮೋದಿಸುವ ಅಧಿಕಾರವಿರುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಜಮೀನು ಕಳೆದುಕೊಂಡವರ ಅತೃಪ್ತಿ ಮತ್ತು ನ್ಯಾಯಾಲಯಗಳಲ್ಲಿ ಏರುತ್ತಿರುವ ವ್ಯಾಜ್ಯಗಳ ಸಂಖ್ಯೆಯನ್ನು ಪರಿಗಣಿಸಿರುವ ರಾಜ್ಯ ಸರ್ಕಾರ ಭೂ ಸ್ವಾಧೀನ ಕಾಯ್ದೆಯ ಸೆಕ್ಷನ್ ೧೧(೨)ರನ್ವಯ ಒಪ್ಪಂದದ ಐತೀರ್ಪುಗಳನ್ನು ಅನುಸರಿಸಲು ಪ್ರೋತ್ಸಾಹ ನೀಡುತ್ತಿದೆ. ಹೆಚ್ಚುವರಿ ಪರಿಹಾರ ಬಯಸಿ ಸಿವಿಲ್ ನ್ಯಾಯಾಲಯಗಳಲ್ಲಿ ಹೂಡಲಾಗಿರುವ ಪ್ರಕರಣಗಳ ತ್ವರಿತ ವಿಲೇವಾರಿಗಾಗಿ ಸರ್ಕಾರವು ರಾಜ್ಯ ಕಾನೂನು ನೆರವು ಮಂಡಳಿಯ ಸಹಕಾರದೊಂದಿಗೆ ಲೋಕ್ ಅದಾಲತ್ ಮೂಲಕ ಪ್ರಯತ್ನಿಸುತ್ತಿದೆ.

ಚಾಮರಾಜನಗರ ಜಿಲ್ಲೆಗೆ ಅನ್ವಯಿಸುವ ಭೂ ಸ್ವಾಧೀನ ವಿಷಯಕ್ಕೆ ಸಂಬಂಧಿಸಿದಂತೆ ಇರುವ ಇನ್ನಿತರ ಅಧಿನಿಯಮಗಳೆಂದರೆ:–

(೧) ಕರ್ನಾಟಕ ಹೆದ್ದಾರಿಗಳ ಅಧಿನಿಯಮ, ೧೯೬೪

(೨) ಕರ್ನಾಟಕ ನೀರಾವರಿ ಅಧಿನಿಯಮ ೧೯೬೫

(೩) ಸ್ಥಿರಾಸ್ಥಿ ಅಧಿಸೂಚನೆ ಮತ್ತು ಸ್ವಾಧೀನ ಅಧಿನಿಯಮ, ೧೯೫೨ (ಕೇಂದ್ರ ಅಧಿನಿಯಮ)

(೪) ಭೂ ಸ್ವಾಧೀನ ಗಣಿಗಳ ಅಧಿನಿಯಮ, ೧೮೮೫ (ಕೇಂದ್ರ ಅಧಿನಿಯಮ)

(೫) ಭಾರತ ರಕ್ಷಣಾ ಅಧಿನಿಯಮ, ೧೯೭೧ (ಕೇಂದ್ರ ಅಧಿನಿಯಮ)

## ಸ್ಥಳಾಂತರ ಮತ್ತು ಪುನರ್ವಸತಿ

ಜಮೀನು ಹಾಗೂ ಕಟ್ಟಡಗಳ ಸ್ವಾಧೀನ ಕಾರ್ಯದಿಂದಾಗಿ ಲೆಕ್ಕವಿಲ್ಲದಷ್ಟು ಕುಟುಂಬಗಳು ಮತ್ತು ವ್ಯಕ್ತಿಗಳು ಬಾಧೆಗೆ ಸಿಲುಕುವುದು ಸಾಮಾನ್ಯ ಸಂಗತಿಯಾಗಿದೆ. ಇಂತಹವರಿಗೆ ನಿಯಮಾನುಸಾರ ಪರಿಹಾರ ನೀಡಲಾಗುತ್ತದಾದರೂ ಅದು ಪರಿಪೂರ್ಣವೆನಿಸದು. ಬೇರೆ ಹೊಸ ಸ್ಥಳದಲ್ಲಿ ವಸತಿ ಮತ್ತು ಇತರೆ ಸೌಕರ್ಯಗಳನ್ನು ಒದಗಿಸಿದರೂ, ಅವರಿಗಾಗಿರುವ ಕಷ್ಟನಷ್ಟಗಳಿಗೆ ಸರಿಸಾಟಿಯಾಗುವುದಿಲ್ಲ. ದೇಶದ

ಸರ್ವಾಂಗೀಣ ಅಭಿವೃದ್ಧಿಗಾಗಿ ಮತ್ತು ಸಮಾಜದ ಹಿತಕ್ಕಾಗಿ ತಮ್ಮ ನೆಲೆಗಳನ್ನು ತೊರೆದು ಅನೇಕ ತ್ಯಾಗಗಳನ್ನು ಮಾಡಿ ಅತಂತ್ರರಾಗುವ ಜನರಿಗಾಗಿ ಕೆಲವು ವಿಶೇಷ ರೀತಿಯ ಪರಿಹಾರ ಮತ್ತು ಸೌಲಭ್ಯಗಳನ್ನು ಒದಗಿಸಿ ಅವರ ಕಷ್ಟಕಾರ್ಪಣ್ಯಗಳ ತೀವ್ರತೆಯನ್ನು ತಗ್ಗಿಸುವ ಮಾನವೀಯ ಕ್ರಮಗಳನ್ನು ಇತ್ತೀಚಿನ ವರ್ಷಗಳಲ್ಲಿ ಸರ್ಕಾರವು ತೆಗೆದುಕೊಳ್ಳುತ್ತಲಿದೆ. ಮುಖ್ಯವಾಗಿ ರಾಜ್ಯದ ಬೃಹತ್ ಯೋಜನೆಗಳ ಸಂಬಂಧ ಭೂಸ್ವಾಧೀನ ಪ್ರಕ್ರಿಯೆಯಿಂದ ಬಾಧಿತರಾಗುವ ಕುಟುಂಬಗಳಿಗೆ ಒಂದು ವಿಶೇಷ ಪುನರ್ವಸತಿ ಮತ್ತು ಪುನರ್ನಿರ್ಮಾಣ ಕಾರ್ಯ ರೀತಿಯೊಂದಿದೆ. ಚಾಮರಾಜನಗರ ಜಿಲ್ಲೆಯಲ್ಲಿ ಅಂತಹ ವಿಶೇಷ ಯೋಜನೆಗಳು ಯಾವುದೂ ಕಂಡು ಬರುವುದಿಲ್ಲ. ಪುನರ್ವಸತಿ ಮತ್ತು ಪುನರ್ನಿರ್ಮಾಣ ಪ್ಯಾಕೇಜ್ ಅಡಿಯಲ್ಲಿ ದೊರಕುವ ಸೌಲಭ್ಯಗಳು ಈ ಕೆಳಕಾಣಿಸಿರುವಂತಿವೆ.

೧. ಉಚಿತ ಮನೆ ನಿವೇಶನಗಳು
೨. ಮನೆ ನಿರ್ಮಾಣ ಅನುದಾನ
೩. ಸಾಗಾಣಿಕೆ ಅನುದಾನ
೪. ಪುನರ್ವಸತಿ ಕೇಂದ್ರಗಳಲ್ಲಿ ನೀರು ಸರಬರಾಜು, ರಸ್ತೆ ನಿರ್ಮಾಣ, ವಿದ್ಯುಚ್ಛಕ್ತಿ, ಶಾಲೆ ಮತ್ತು ಇತರೆ ಮೂಲಭೂತ ಸೌಲಭ್ಯಗಳು
೫. ಉತ್ಪನ್ನದಾಯಕ ಚಟುವಟಿಕೆಗಳಿಗೆ ಅನುದಾನ
೬. ಸಂಕಷ್ಟ ನಿವಾರಣಾ ಅನುದಾನ
೭. ಸರ್ಕಾರಿ ಇಲಾಖೆಗಳಲ್ಲಿ ಶೇಕಡ ಐದರಷ್ಟು "ಸಿ" ಮತ್ತು "ಡಿ" ಗುಂಪಿನ ಹುದ್ದೆಗಳಲ್ಲಿ ಮೀಸಲಾತಿ
೮. ಸ್ವಾಧೀನಪಡಿಸಿಕೊಂಡ ಕಟ್ಟಡಗಳಲ್ಲಿನ ಸಾಮಗ್ರಿಗಳನ್ನು ಕೊಂಡೊಯ್ಯುವ ಅವಕಾಶ
೯. ಸ್ವಯಂ ಉದ್ಯೋಗ ತರಬೇತಿ ಯೋಜನೆಗಳ ಅನುಷ್ಠಾನ

ಕರ್ನಾಟಕ (ಯೋಜನೆಯಿಂದಾಗಿ ಸ್ಥಳಾಂತರಿತ ವ್ಯಕ್ತಿಗಳ ಪುನರ್ ವ್ಯವಸ್ಥೆ) ಅಧಿನಿಯಮ ೧೯೮೭ರಲ್ಲಿ ಅನುಮೋದನೆಯಾಗಿದ್ದು, ಅದನ್ನು ಇದುವರೆಗೂ ಅಷ್ಟಾಗಿ ಜಾರಿಗೆ ತಂದಿರುವುದಿಲ್ಲ. ಇದರಲ್ಲಿ ಹಲವಾರು ದೋಷಗಳಿರುವುದೇ ಇದಕ್ಕೆ ಕಾರಣವೆನ್ನಲಾಗಿದೆ. ಭಾರತ ಸರ್ಕಾರದ ಆರ್ ಅಂಡ್ ಆರ್ ನೀತಿಯನ್ನು ೨೦೦೩ರಿಂದ ಕರ್ನಾಟಕ ಸರ್ಕಾರ ಜಾರಿಗೆ ತಂದಿದೆ. ಪ್ರಸ್ತುತ ರಾಜ್ಯ ಸರ್ಕಾರದ ಆರ್ ಅಂಡ್ ಆರ್ ನೀತಿಯಂತೆ ಒದಗಿಸುತ್ತಿರುವ ಸೌಲಭ್ಯಗಳು ರಾಷ್ಟ್ರೀಯ ನೀತಿಯ ಗುಣಮಟ್ಟಕ್ಕಿಂತ ಉತ್ತಮವಾಗಿವೆ ಎನ್ನಲಾಗಿದೆ. ದಿನಾಂಕ ೩೧-೧೦-೨೦೦೭ರಲ್ಲಿ ಭಾರತ ಸರ್ಕಾರವು ಜಾರಿಗೊಳಿಸಿರುವ ಹೊಸ ಪುನರ್ವಸತಿ ಮತ್ತು ಪುನರ್ನಿರ್ಮಾಣ (ಆರ್ ಅಂಡ್ ಆರ್) ನೀತಿಯಲ್ಲಿ ಅನೇಕ ಉತ್ತಮ ಅಂಶಗಳಿರುವುದನ್ನು ಗಮನಿಸಲಾಗಿದ್ದು ರಾಜ್ಯ ಸರ್ಕಾರವೂ ಹೆಚ್ಚು ಉದಾರವಾದ ನೀತಿಯನ್ನು ರೂಪಿಸುವ ಕುರಿತು ಯೋಚಿಸುತ್ತಿದೆ ಎನ್ನಲಾಗಿದೆ.

## ಗಣಕೀಕರಣ ಮತ್ತು ಭೂ ದಾಖಲೆಗಳ ನಿರ್ವಹಣಾ ವ್ಯವಸ್ಥೆ (ಭೂಮಿ)

ಅನೇಕ ಕಾರಣಗಳಿಂದ ಭೂ ಮಾಲೀಕರು ತಮ್ಮ ಭೂಮಿಯ ಮೇಲಿನ ಹಕ್ಕುಗಳನ್ನು ಬೇರೆಯವರಿಗೆ ಬಿಟ್ಟು ಕೊಡುವುದು ಒಂದು ಸಾಮಾನ್ಯ ಸಂಗತಿಯಾಗಿದೆ. ಇದರಲ್ಲಿ ಜಮೀನಿನ ಮಾರಾಟ, ಭೋಗ್ಯಕ್ಕೆ ಹಾಕುವುದು, ವ್ಯಕ್ತಿಯ ನಿಧನಾನಂತರ ವಾರಸುದಾರರಿಗೆ ಹಕ್ಕು ಬದಲಾವಣೆ ಆಗುವುದು, ಕುಟುಂಬದಲ್ಲಿ ಆಸ್ತಿ

ವಿಭಜನೆಯಾದಾಗ ಅವರವರ ಪಾಲಿಗೆ ಸಂದ ಜಮೀನಿನ ಭಾಗಕ್ಕೆ ಹಕ್ಕು ಬದಲಾಯಿಸುವುದು, ಉಯಿಲು, ದಾನ, ಭೂ ಸ್ವಾಧೀನ, ಭೂ ಮಂಜೂರಾತಿ ಮುಂತಾದ ಕಾರಣಗಳಿಂದ ವ್ಯಕ್ತಿಗಳಿಗೆ ಹಕ್ಕುಗಳು ವರ್ಗಾಯಿಸಲ್ಪಡುತ್ತವೆ. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಹಕ್ಕು ಬದಲಾವಣೆ ಪ್ರಕ್ರಿಯೆ ಒಂದು ನಿರಂತರ ಕಾರ್ಯವೆನಿಸಿದೆ. ರಾಜ್ಯಾದ್ಯಂತ ವರ್ಷವೊಂದಕ್ಕೆ ಸುಮಾರು ೧೦ ಲಕ್ಷ ಹಕ್ಕು ಬದಲಾವಣೆ ಪ್ರಕರಣಗಳು ದಾಖಲಾಗುತ್ತವೆ ಎಂದು ೨೦೦೬ರಲ್ಲಿ ಅಂದಾಜು ಮಾಡಲಾಗಿತ್ತು. ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಕಲಂ ೧೨೯ರಂತೆ ಈ ಪ್ರಕ್ರಿಯೆ ಜರುಗುತ್ತದೆ.

ಈಗ ಕೈಬರಹದ ಪಹಣಿ (ಆರ್‌ಟಿಸಿ)ಗಳನ್ನು ನಿಷೇಧಿಸಿರುವುದರಿಂದ ನಿರಂತರವಾಗಿ "ಭೂಮಿ" ತಂತ್ರಾಂಶವನ್ನು ಬಳಸಿಕೊಂಡು ಹಕ್ಕು ಬದಲಾವಣೆಗಳನ್ನು ವಿಳಂಬವಿಲ್ಲದೇ ಮಾಡುವುದು ಅತ್ಯಗತ್ಯವಾಗಿರುತ್ತದೆ. ಹಕ್ಕು ಬದಲಾವಣೆ ಪ್ರಸಂಗ ಉಂಟಾದಾಗ, ಉದಾಹರಣೆಗೆ ಜೆ–ಸ್ಲಿಪ್, ಸಾಲದ ಮಾಹಿತಿ, ಭೂ ಮಂಜೂರಾತಿ, ಭೂ ಪರಿವರ್ತನೆ, ಭೂ ಸ್ವಾಧೀನ, ಕೋರ್ಟ್ ತೀರ್ಪು ಮುಂತಾದವುಗಳು ತಿಳಿವಳಿಕೆಗೆ ಬಂದಾಗ ಹಕ್ಕು ಬದಲಾವಣೆ ಪ್ರಕ್ರಿಯೆ ತಾಲ್ಲೂಕು ಕಛೇರಿಯಲ್ಲಿಯೇ ಪ್ರಾರಂಭವಾಗಬೇಕು. ಎಲ್ಲಾ ಹಕ್ಕು ಬದಲಾವಣೆ ಪತ್ರಗಳನ್ನು ಮೊದಲು ಗಣಕ ಯಂತ್ರದಲ್ಲಿ ನಮೂದಿಸಿದ ನಂತರ ಹಕ್ಕು ದಾಖಲೆ (ಆರ್‌ಆರ್) ಶಿರಸ್ತೇದಾರರು ಅನುಮೋದಿಸಿದಂಥ ಹಕ್ಕು ಬದಲಾವಣೆ ವಹಿಯಲ್ಲಿ ನಮೂದಿಸಬೇಕಾಗಿರುತ್ತದೆ. ಪಿತ್ರಾರ್ಜಿತ ಹಾಗೂ ಪೋಡಿ ಪ್ರಕರಣಗಳಲ್ಲಿಯೂ ಇದೇ ಪ್ರಕ್ರಿಯೆ ಅನ್ವಯಿಸುತ್ತದೆ. ಹಕ್ಕು ಬದಲಾವಣೆಗಾಗಿ ಬರುವ ಎಲ್ಲಾ ಅರ್ಜಿಗಳನ್ನು (ಪಿತ್ರಾರ್ಜಿತ ಅಥವಾ ಕ್ರಯಪತ್ರ ಅಥವಾ ವಿಭಾಗ ಪತ್ರ ಮುಂತಾದವು) ಕ್ಷೇತ್ರದಿಂದ ನಿಯೋಜನೆಗೊಂಡ ಒಂದು ಅಥವಾ ಹೆಚ್ಚು ಗ್ರಾಮಲೆಕ್ಕಿಗರು ಅಥವಾ ಈ ಕೆಲಸಕ್ಕೆಂದೇ ನಿಯೋಜಿಸಲಾದ ವಿಷಯ ನಿರ್ವಾಹಕರು ತಾಲೂಕು ಕಛೇರಿಯಲ್ಲಿ ಸ್ವೀಕರಿಸಬೇಕು. ಇವರನ್ನು "ಭೂಮಿ ವಿಷಯ ನಿರ್ವಾಹಕ"ರೆಂದು ಕರೆಯುವರು. ಈ ವಿಷಯ ನಿರ್ವಾಹಕರು ಅರ್ಜಿಗಳ ಜೊತೆಯಲ್ಲಿ ಸಲ್ಲಿಸಬೇಕಾದ ದಾಖಲೆಗಳನ್ನು ಅರ್ಜಿದಾರರು ಒದಗಿಸಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಇಂತಹ ಲಗತ್ತುಗಳು ದಾಖಲೆಗಳ ಮಾದರಿ ಅಥವಾ ವಿಧಕ್ಕೆ ಅನುಸಾರವಾಗಿ ಪ್ರತ್ಯೇಕವಾದವುಗಳಾಗಿರುತ್ತವೆ. ಉದಾಹರಣೆಗೆ, ಕ್ರಯ ಪತ್ರದ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳೆಂದರೆ, ಕ್ರಯ ಪತ್ರದ ಪ್ರತಿ, ಕೃಷಿಕನೆಂಬುದನ್ನು ದೃಢೀಕರಿಸುವ ದಾಖಲೆ, ಕೃಷಿ ಕಾರ್ಮಿಕನಾಗಿದ್ದರೆ ಅದರ ದೃಢೀಕರಣ ದಾಖಲೆ ಮತ್ತು ಎಲ್ಲಾ ಸರ್ವೆ ನಂಬರುಗಳ ಗಣಕೀಕೃತ ಪಹಣಿ. ವಿಭಾಗ ಪತ್ರದ ಸಂದರ್ಭದಲ್ಲಿ ಸಲ್ಲಿಸಬೇಕಾದ ದಾಖಲೆಗಳೆಂದರೆ ವಿಭಾಗಪತ್ರದ ಪ್ರತಿ, ವಂಶವೃಕ್ಷ ಮತ್ತು ಎಲ್ಲಾ ಸರ್ವೆ ನಂಬರುಗಳ ಗಣಕೀಕೃತ ಪಹಣಿ, ಇತ್ಯಾದಿ.

ಪಹಣಿಯಲ್ಲಿ ಬದಲಾವಣೆ ಮಾಡಬೇಕಾದಾಗ ಅನುಸರಿಸಬೇಕಾದ ಕಾರ್ಯವಿಧಾನವನ್ನು ಸುತ್ತೋಲೆ ಸಂಖ್ಯೆ: ಕಂಇ೨೮: ಎಂಆರ್‌ಆರ್: ೨೦೦೧ ದಿನಾಂಕ ೦೫–೦೨–೨೦೦೧ರಲ್ಲಿ ವಿವರಿಸಲಾಗಿದೆ. ಇದರಂತೆ, ಯಾರಿಂದ ಭೂಮಿಯು ವರ್ಗಾವಣೆಗೊಳ್ಳುತ್ತದೆಯೋ ಆ ವ್ಯಕ್ತಿಯೇ ಗಣಕೀಕೃತ ಪಹಣಿ ಪ್ರಕಾರ ಮಾಲೀಕನೆಂಬುದನ್ನು ಭೂಮಿ ವಿಷಯ ನಿರ್ವಾಹಕರು ಖಚಿತಪಡಿಸಿಕೊಳ್ಳಬೇಕು. ಮಾರಾಟಗಾರ ಅಥವಾ ವರ್ಗಾವಣೆದಾರನು ಭೂಮಿ ಪಹಣಿ ದಾಖಲೆಗಳ ಪ್ರಕಾರ ಮಾಲೀಕನಾಗಿದ್ದಲ್ಲಿ ಮಾತ್ರ ವ್ಯವಹಾರಗಳಿಗೆ "ಭೂಮಿ"ಯು ಅವಕಾಶ ಕೊಡುತ್ತದೆ. ಇಲ್ಲದಿದ್ದಲ್ಲಿ ಮಾರಾಟಗಾರ ಅಥವಾ ವರ್ಗಾವಣೆದಾರನ ಹೆಸರನ್ನು ಸೂಕ್ತ ವಿಧಿವಿಧಾನಗಳ ಮೂಲಕ ಪಹಣಿಯಲ್ಲಿ ನಮೂದಿಸಿಕೊಂಡ ನಂತರ ಹಕ್ಕು ಬದಲಾವಣೆ ಕೋರಿಕೆ ಸಲ್ಲಿಸುವಂತೆ ಅರ್ಜಿದಾರನಿಗೆ ಸೂಚಿಸಬೇಕು.

ಭೂಮಿಯಲ್ಲಿ ಹಿತಾಸಕ್ತಿ ಉಳ್ಳವರೆಲ್ಲರಿಗೂ ಬದಲಾವಣೆ ಮಾಡಬೇಕಾದ ಹಕ್ಕಿನ ರೀತಿ, ಹಕ್ಕು ಪಡೆಯುವ ವ್ಯಕ್ತಿ, ಹಕ್ಕು ಬಿಟ್ಟು ಕೊಡುವ ವ್ಯಕ್ತಿ ಮುಂತಾದ ವಿವರಗಳನ್ನು ನೀಡಿ ಅವರ ಆಕ್ಷೇಪಣೆಗಳು ಏನಾದರೂ ಇದ್ದಲ್ಲಿ ತಿಳಿಸಲು ೩೦ ದಿವಸಗಳ ಕಾಲಾವಕಾಶ ನೀಡಬೇಕು. ಆ ಅವಧಿಯಲ್ಲಿ ಬರುವ ಆಕ್ಷೇಪಣೆಗಳನ್ನು ಸಂಬಂಧಿಸಿದ ಕಂದಾಯ ನಿರೀಕ್ಷಕರು ವಿಚಾರಿಸಿ, ಅವುಗಳ ಸತ್ಯಾಸತ್ಯಗಳನ್ನು ಖಚಿತಪಡಿಸಿಕೊಂಡು ಅವುಗಳನ್ನು ಒಪ್ಪಿಕೊಳ್ಳುವ ಅಥವಾ ತಿರಸ್ಕರಿಸುವ ಕ್ರಮಕ್ಕೆ ಮುಂದಾಗಬೇಕು. ಅಥವಾ ಪ್ರಕರಣವನ್ನು ಮುಂದಿನ ನ್ಯಾಯಿಕ ವಿಚಾರಣೆಗಾಗಿ ಮೇಲಧಿಕಾರಿಗೆ ಕಳುಹಿಸಬೇಕು. ಸುಮಾರು ೩೦ರಿಂದ ೪೫ ದಿವಸಗಳೊಳಗಾಗಿ ಹಕ್ಕು ಬದಲಾವಣೆ ಪ್ರಕ್ರಿಯೆ ಮುಗಿಯುವುದು. ಅರ್ಜಿಯು ತಿರಸ್ಕರಿಸಲ್ಪಟ್ಟಾಗ, ಅರ್ಜಿದಾರನು ಕ್ರಮವಾಗಿ ಮೇಲ್ಮನವಿಯನ್ನು ಉಪವಿಭಾಗಾಧಿಕಾರಿ, ಕರ್ನಾಟಕ ಮೇಲ್ಮನವಿ ಪ್ರಾಧಿಕಾರ, ಕರ್ನಾಟಕ ಉಚ್ಚ ನ್ಯಾಯಾಲಯ ಮತ್ತು ಭಾರತದ ಸರ್ವೋಚ್ಚ ನ್ಯಾಯಾಲಯ ಇವುಗಳಿಗೆ ಒಯ್ದು ವ್ಯಾಜ್ಯವನ್ನು ಮುಂದುವರೆಸಬಹುದು. ಅಂತಹ ಮೇಲ್ಮನವಿ ಇತ್ಯರ್ಥವಾಗುವವರೆಗೆ ಹಕ್ಕು ಬದಲಾವಣೆ ಪ್ರಕ್ರಿಯೆಯನ್ನು ಸ್ಥಗಿತಗೊಳಿಸಲಾಗುವುದು.

ಹಕ್ಕು ಬದಲಾವಣೆಯನ್ನು ತಹಸೀಲ್ದಾರನು ಅಂಗೀಕರಿಸಿದ ನಂತರ ಪಹಣಿ ಬದಲಾಗುತ್ತದೆ ಮತ್ತು ಹಕ್ಕು ಬದಲಾವಣೆ ವ್ಯವಹರಣೆ ಯಾರ ವಿಭಾಗದಲ್ಲಿಯೂ (ಶಿರಸ್ತೇದಾರ, ರಾಜಸ್ವ ನಿರೀಕ್ಷಕ, ಗ್ರಾಮಲೆಕ್ಕಿಗ) ಉಳಿಯುವುದಿಲ್ಲ. ಪಹಣಿ ಬದಲಾದ ನಂತರ, ಆಪರೇಟರ್ ಪಹಣಿ ಪ್ರತಿ ತೆಗೆದು ಗ್ರಾಮಲೆಕ್ಕಿಗನಿಗೆ ಕಳುಹಿಸಬೇಕು. ಈ ಪಹಣಿಯನ್ನು ಸ್ವೀಕರಿಸಿದ ಗ್ರಾಮಲೆಕ್ಕಿಗನು ಎಂ.ಆರ್.ನಲ್ಲಿ ಬರೆದಿರುವ ಸಂವಾದಿ ಸಿಇ ನಂಬರಿಗೆ ವೃತ್ತಾಕಾರ (Round off) ಹಾಕಬೇಕು. ಇದು ಆ ನಿರ್ದಿಷ್ಟ ಹಕ್ಕು ಬದಲಾವಣೆಯ ನಂತರ ಹೊಸ ಪಹಣಿಯ ಸ್ವೀಕೃತಿಯನ್ನು ಸೂಚಿಸುತ್ತದೆ. ಈ ದಾಖಲೆಯು ಸುಳ್ಳು ಎಂದು ಸಾಬೀತಾಗುವವರೆಗೆ ಅದನ್ನು ಸಾಕ್ಷ್ಯಾಧಾರವೆಂದು ಯಾವುದೇ ನ್ಯಾಯಾಲಯದಲ್ಲಿ ಸ್ವೀಕರಿಸಬಹುದು. ಕಂದಾಯ ಇಲಾಖೆಯು ನಿರ್ವಹಿಸುತ್ತಿರುವ ಅತ್ಯಂತ ಮಹತ್ವದ ಜವಾಬ್ದಾರಿಗಳಲ್ಲಿ ಹಕ್ಕು ಬದಲಾವಣೆ ಕಾರ್ಯವು ಒಂದಾಗಿದೆ.

ಸರ್ಕಾರವು ಅಭಿವೃದ್ಧಿ ಮತ್ತು ಮೂಲಭೂತ ಸೌಕರ್ಯಗಳ ಬಗ್ಗೆ ಸೂಕ್ತ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಭೂ ದಾಖಲೆಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತವೆ. 'ಭೂಮಿ" ಯೋಜನೆಯು ಕರ್ನಾಟಕದಲ್ಲಿ ಭೂ ದಾಖಲೆಗಳನ್ನು ಗಣಕೀಕೃತ ಪದ್ಧತಿಯಲ್ಲಿ ನಿರ್ವಹಿಸುತ್ತಿದೆ. ಈ ಯೋಜನೆಯು ಪಾರದರ್ಶಕತೆ, ವಿಶ್ವಾಸಾರ್ಹತೆ, ಭೂ ದಾಖಲೆಗಳ ವಿತರಣಾ ಸಾಮರ್ಥ್ಯ ಇವುಗಳಿಂದಾಗಿ ಸರ್ವರ ಮನ್ನಣೆ ಪಡೆವಲ್ಲಿ ಯಶಸ್ಸುಗಳಿಸಿವೆ. ಕಂದಾಯ ಇಲಾಖೆಯು ೨೦೦೭-೦೮ನೇ ಸಾಲಿನಿಂದ ಭೂಮಿ ಯೋಜನೆಯಡಿ ತಾಲ್ಲೂಕು ಮಟ್ಟದಲ್ಲಿ ವಿವಿಧ ಮಾಹಿತಿ ಸೇವೆಗಳನ್ನು ಗಣಕೀಕರಣಗೊಳಿಸಿ, ಈ ಕೆಳಗಿನ ಮಹತ್ವದ ಸೇವೆಗಳನ್ನು ಒದಗಿಸಲು ಪ್ರಾರಂಭಿಸಿರುತ್ತದೆ.

"ನೆಮ್ಮದಿ" ಯೋಜನೆಯಡಿಯಲ್ಲಿ ರಾಜ್ಯದ ಸುಮಾರು ೮೦೦ ಗ್ರಾಮಗಳಲ್ಲಿ ಕಂಪ್ಯೂಟರ್ ಕಿಯೋಸ್ಕ್‌ಗಳನ್ನು ಸ್ಥಾಪಿಸಲಾಗಿದೆ. ಗಣಕೀಕೃತ ಭೂ ದಾಖಲೆಗಳನ್ನು ಒದಗಿಸುವುದಲ್ಲದೆ, ಈ ಕೇಂದ್ರಗಳ ಮೂಲಕ ಜಾತಿ ಪ್ರಮಾಣ ಪತ್ರ, ಆದಾಯ ಪ್ರಮಾಣ ಪತ್ರ ಮುಂತಾದ ೩೫ಕ್ಕೂ ಹೆಚ್ಚಿನ ಸೇವೆಗಳನ್ನು ಒದಗಿಸಲಾಗುತ್ತಿದೆ. ಜಿಲ್ಲೆಯಲ್ಲಿ ೧೬ ನೆಮ್ಮದಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ.

ಇಲ್ಲಿಯವರೆಗೆ "ಭೂಮಿ" ಯೋಜನೆಯಡಿಯಲ್ಲಿ ಭೂ ದಾಖಲೆಗಳನ್ನು ಮ್ಯುಟೇಷನ್ ಕಾರ್ಯ ವಿಧಾನದ ಮೂಲಕ ನಿರ್ವಹಿಸಲಾಗುತ್ತಿತ್ತು. ಈಗ ಮ್ಯುಟೇಷನ್ ಕಾರ್ಯ ವಿಧಾನದೊಂದಿಗೆ ಪೋಡಿ

ಕಾರ್ಯ ವಿಧಾನವನ್ನು ಸಂಯೋಜಿಸಲಾಗಿದೆ. ಈ ಸಂಯೋಜಿತ ಮ್ಯುಟೇಷನ್ ಪದ್ಧತಿಯಲ್ಲಿ ಹಕ್ಕು ದಾಖಲೆ ಹಾಗೂ ಜಮೀನಿನ ನಕ್ಷೆ ಎರಡೂ ಮಾಹಿತಿಯನ್ನು (ಸರ್ವೆ ನಂಬರು ಮತ್ತು ವಿಸ್ತೀರ್ಣ) ಏಕ ಕಾಲದಲ್ಲಿ ಕಾಲೋಚಿತಗೊಳಿಸಲಾಗುತ್ತಿದೆ; ಪಹಣಿಗಳೊಂದಿಗೆ ನಕ್ಷೆಗಳು ಸಹ ಲಭ್ಯವಾಗುತ್ತವೆ. ಭೂಮಿ ಕಿಯೋಸ್ಕ್‌ಗಳಿಂದ ಸಾರ್ವಜನಿಕರಿಗೆ ಪಹಣಿ ಮತ್ತು ನಕ್ಷೆಗಳನ್ನು ಒದಗಿಸಲಾಗುತ್ತಿದೆ. ಈಗ ಭೂ ದಾಖಲೆಗಳ ನಿರ್ವಹಣೆ ಮತ್ತು ಮೋಜಣಿ ವ್ಯವಸ್ಥೆಗಳೆರಡೂ ತಹಸೀಲ್ದಾರರ ಕಾರ್ಯಭಾರದ ವ್ಯಾಪ್ತಿಗೆ ಒಳಪಟ್ಟಿರುವುದರಿಂದ, ಜಮೀನಿನ ಹಕ್ಕು ದಾಖಲೆಗಳನ್ನು ಕಾಲೋಚಿತಗೊಳಿಸುವುದು ಮತ್ತು ಸರ್ವೆ ನಂಬರುಗಳು ಅವುಗಳ ವಿಸ್ತೀರ್ಣ ನಿರ್ವಹಣೆಗಳೆರಡೂ ಪ್ರಕ್ರಿಯೆಗಳನ್ನು ನಿರ್ವಹಿಸಲು ತಹಸೀಲ್ದಾರರೇ ಜವಾಬ್ದಾರರಾಗಿರುತ್ತಾರೆ.

ನೋಂದಣಿ ಇಲಾಖೆಯಲ್ಲಿ ಜಮೀನು ವಹಿವಾಟುಗಳ ನೋಂದಣಿಗಾಗಿ ಅಳವಡಿಸಿರುವ "ಕಾವೇರಿ" ತಂತ್ರಾಂಶದೊಂದಿಗೆ "ಭೂಮಿ" ಯನ್ನು ರಾಜ್ಯಾದ್ಯಂತ ಈಗಾಗಲೇ ಯಶಸ್ವಿಯಾಗಿ ಸಂಯೋಜಿಸಲಾಗಿದೆ. ಈಗ ಭೂ ದಾಖಲೆಗಳ ನಿರ್ವಹಣೆಯ ವಿವಿಧ ಪ್ರಕ್ರಿಯೆಗಳನ್ನು ಭೂಮಿಯಲ್ಲಿ ಸಂಯೋಜಿಸಿ ನಿರ್ವಹಿಸಲು ಯೋಜಿಸಲಾಗಿದೆ. ಮೊಬೈಲ್ ದೂರವಾಣಿಯನ್ನು ಬಳಸಿ ಬೆಳೆಯನ್ನು ಕಾಲೋಚಿತಗೊಳಿಸುವ ಪ್ರಾಯೋಗಿಕ ವ್ಯವಸ್ಥೆಯು ಈಗಾಗಲೇ ಕೆಲವು ತಾಲೂಕುಗಳಲ್ಲಿ ಸಫಲತೆಯನ್ನು ಕಂಡಿದೆ. ಗ್ರಾಮಲೆಕ್ಕಿಗರು ತಮ್ಮ ಕ್ಷೇತ್ರದ ಬೆಳೆ ಮಾಹಿತಿಯನ್ನು ಮೊಬೈಲ್ ಉಪಕರಣಗಳಲ್ಲಿ ಸಂಗ್ರಹಿಸಿ ನೇರವಾಗಿ "ಭೂಮಿ" ಮಾಹಿತಿ ಕೇಂದ್ರ(ಡಾಟಾಬೇಸ್)ಕ್ಕೆ ಕಾಲೋಚಿತಗೊಳಿಸುತ್ತಾರೆ. ಇದರಿಂದಾಗಿ ಮಾಹಿತಿ ಸಂಗ್ರಹವಾದ ದಿನವೇ ರೈತರು ಇತ್ತೀಚಿನ ಋತುವಿನ ಬೆಳೆ ಮಾಹಿತಿಯನ್ನು ಹೊಸ ಪಹಣಿಯಲ್ಲಿ ಪಡೆಯಬಹುದಾಗಿದೆ.

ಸರ್ವೆ ನಕ್ಷೆಗಳನ್ನು ಸ್ಕ್ಯಾನ್ ಮಾಡಿ ಅಂತಹ ನಕ್ಷೆಗಳನ್ನು ಭೂಮಿ ತಂತ್ರಾಂಶದಲ್ಲಿ ಸಂಬಂಧಪಟ್ಟ ಸರ್ವೆ ನಂಬರುಗಳ ಪಹಣಿಗಳೊಂದಿಗೆ ಸಂಯೋಜಿಸಲಾಗುವುದು. ಈ ಯೋಜನೆಯು ೨೦೦೭-೦೮ರಲ್ಲಿ ರಾಜ್ಯದ ೨೬ ತಾಲೂಕುಗಳಲ್ಲಿ ಪೂರ್ಣಗೊಂಡಿದ್ದು, ಭೂಮಿ ಡಾಟಾಬೇಸ್‌ನಲ್ಲಿ ಲಭ್ಯವಿದೆ. ಉಳಿದ ೧೫೦ ತಾಲೂಕುಗಳ ಬಾಬ್ತು ನಕ್ಷೆಗಳನ್ನು ಸ್ಕ್ಯಾನ್ ಮಾಡಿ, ಸಂಯೋಜಿಸುವ ಕಾರ್ಯವು ಮುಂದುವರೆದಿದೆ. ಇದರಿಂದಾಗಿ ಇನ್ನು ಮುಂದೆ ಅಂಗೀಕರಿಸಲ್ಪಡುವ ಎಲ್ಲಾ ಮಾಲೀಕತ್ವ ಬದಲಾವಣೆ ಮ್ಯುಟೇಷನ್ ವಹಿವಾಟುಗಳಿಗೆ ಆನ್‌ಲೈನ್ ಮೂಲಕ ಆಗಿಂದಾಗಲೇ ಸರ್ವೆ ನಕ್ಷೆ ಮತ್ತು ಹಕ್ಕುದಾಖಲೆ (ಪಹಣಿ)ಗಳನ್ನು ಸಂಯೋಜಿಸಲಾಗುವುದು. ರೈತರು ಕೇವಲ ೧೫ ರೂಪಾಯಿಗಳ ಶುಲ್ಕವನ್ನು ಮಾತ್ರ ಪಾವತಿಸಿ ತಮ್ಮ ಜಮೀನಿನ ನಕ್ಷೆಯನ್ನೂ ಪಡೆಯಬಹುದು.

ರೈತರು ಹಿಂದೆ ಯಾವುದಾದರೊಂದು ಕೃಷಿ ಜಮೀನನ್ನು ಆಧಾರವಾಗಿಟ್ಟು ಹಣಕಾಸು ಸಂಸ್ಥೆ ಅಥವಾ ಬ್ಯಾಂಕಿನಿಂದ ಸಾಲ ಪಡೆದುಕೊಂಡರೆ, ಅಂತಹ ಆಧಾರದ ಮಾಹಿತಿಯನ್ನು ಹಕ್ಕು ದಾಖಲೆಗಳಲ್ಲಿ ನಮೂದಿಸಲು ಪಾರಂಪರಿಕ ಪದ್ಧತಿಯಲ್ಲಿ ತಾಲ್ಲೂಕು ಕಛೇರಿಗಳಿಗೆ ಕಳುಹಿಸುತ್ತಿದ್ದರು. ಈಗ ಬ್ಯಾಂಕುಗಳು ತಾವು ರೈತರಿಗೆ ಸಾಲ ನೀಡಿದ ಮಾಹಿತಿಯನ್ನು ಅಂತರ್ಜಾಲದ ಮುಖೇನ ಭೂಮಿ ಕೇಂದ್ರಕ್ಕೆ ರವಾನಿಸಿ ಜಮೀನು ಆಧಾರ ಮಾಡಿರುವ ಅಥವಾ ಬಿಡುಗಡೆಯ ವಿವರಗಳನ್ನು ಪಹಣಿ ಪತ್ರಿಕೆಯಲ್ಲಿ ನಮೂದಿಸಲು ಅವಕಾಶವಿದೆ. ತಮ್ಮ ಬ್ಯಾಂಕಿನ ಆಧಾರ ಅಥವಾ ಬಿಡುಗಡೆಯ ಪ್ರಸ್ತಾಪದ ಸ್ಥಿತಿ, ಬಾಕಿ ಇರುವ ಹಂತ ಅಥವಾ ಬೇರೆ ಬ್ಯಾಂಕುಗಳು ನೀಡಬಹುದಾದ ಸಾಲದ ವಿವರಗಳು ಮುಂತಾದವನ್ನು ಕೂಡ ಅಂತರ್ಜಾಲದ

ಮೂಲಕ ಅವರು ತಿಳಿದುಕೊಳ್ಳಲು ಸಾಧ್ಯ. ಅಲ್ಲದೇ, ಆಧಾರದ ಮಾಹಿತಿ ಹಕ್ಕು ದಾಖಲೆಗಳಲ್ಲಿ ನಮೂದಾದ ಬಗ್ಗೆಯೂ ಶೀಘ್ರವಾಗಿ ಖಾತರಿಮಾಡಿಕೊಳ್ಳಬಹುದು. ಈ ಬಗ್ಗೆ ಮಾಡಿರುವ ಮಾದರಿ ಪ್ರಯೋಗವು ಈಗಾಗಲೇ ಯಶಸ್ವಿಯಾಗಿರುತ್ತದೆ.

**ಕೋಷ್ಟಕ ೯.೧೩**

**I ಮ್ಯುಟೇಷನ್‌ನಿಂದ ಸಂಗ್ರಹಿಸಲಾದ ಯೂಸರ್ ಚಾರ್ಜ್‌ಸ್ ಜೂನ್ ೨೦೧೨ರ ಅಂತ್ಯದವರೆಗೆ**

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಒಟ್ಟು ಸಂಗ್ರಹ (ಕಛೇರಿ ಉದ್ದೇಶ) | ಒಟ್ಟು ಸಂಗ್ರಹ (ರೈತರಿಗೆ ನೀಡಿದ್ದು) | ಮ್ಯುಟೇಷನ್ ಅರ್ಜಿ ಶುಲ್ಕ ಸಂಗ್ರಹ |
|---|---|---|---|---|
| ೧ | ಚಾಮರಾಜನಗರ | ೧೪೩೧ | ೩೯೮೮೨೦ | ೭೮೨೨೧೭ |
| ೨ | ಗುಂಡ್ಲು ಪೇಟೆ | ೨೨೩ | ೩೧೯೬೨೫ | ೬೨೮೦೨೮ |
| ೩ | ಯಳಂದೂರು | ೧೫೭೯ | ೭೨೧೭೫ | ೧೭೦೮೯೧ |
| ೪ | ಕೊಳ್ಳೇಗಾಲ | ೫೦ | ೧೩೨೬೪೬ | ೩೮೮೦೭೯ |
| ೫ | ಹನೂರು | ೬೮೧ | ೧೯೩೪೨೦ | ೨೬೭೫೮೨ |
| | ಒಟ್ಟು | **೩೯೬೪** | **೧೧೧೬೬೮೬** | **೨೨೩೬೭೯೭** |

**II ಆರ್.ಟಿ.ಸಿ ಯಿಂದ ಸಂಗ್ರಹಿಸಲಾದ ಯೂಸರ್ ಚಾರ್ಜ್‌ಸ್**

| ಕ್ರಮ ಸಂಖ್ಯೆ | ತಾಲೂಕಿನ ಹೆಸರು | ಒಟ್ಟು ಸಂಗ್ರಹ (ಕಛೇರಿ ಉದ್ದೇಶ) | ಒಟ್ಟು ಸಂಗ್ರಹ (ರೈತರಿಗೆ ನೀಡಿದ್ದು) |
|---|---|---|---|
| ೧ | ಚಾಮರಾಜನಗರ | ೯೫೧೫ | ೧೦೩೫೧೬೫೫ |
| ೨ | ಗುಂಡ್ಲು ಪೇಟೆ | ೨೨೪೮೮ | ೭೫೭೯೯೫ |
| ೩ | ಯಳಂದೂರು | ೭೨೫೯ | ೨೩೦೬೦೧೨ |
| ೪ | ಕೊಳ್ಳೇಗಾಲ | ೫೮೦೧ | ೪೮೯೦೦೧೪ |
| ೫ | ಹನೂರು | ೬೭೨೮ | ೩೮೯೦೫೦೦ |
| | ಒಟ್ಟು | **೫೧೭೯೧** | **೨೮೨೧೮೧೭೬** |

*ಮಾಹಿತಿ ಮೂಲ: ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ*

## ಇತರೆ ತೆರಿಗೆಗಳು

ರಾಜ್ಯ ಸರ್ಕಾರವು ನೇರ ಮತ್ತು ಪರೋಕ್ಷ ತೆರಿಗೆಗಳು ಮತ್ತು ಕೇಂದ್ರ ತೆರಿಗೆಗಳಿಂದ ಲಭಿಸುವ ಪಾಲಿನ ಮೂಲಕ ತನ್ನ ಆದಾಯವನ್ನು ಪಡೆದುಕೊಳ್ಳುತ್ತದೆ. ವಿವಿಧ ಮೂಲಗಳಿಂದ ಲಭ್ಯವಾಗುವ ತೆರಿಗೆಗಳನ್ನು ಕ್ರಮಕ್ರಮವಾಗಿ ಏರಿಸುವುದು, ಹಾಲಿ ತೆರಿಗೆ ಕ್ರಮಗಳ ಸುಧಾರಣೆ ಮತ್ತು ಹೊಸ ಆದಾಯ ಮೂಲಗಳ ಪರಿಶೋಧನೆ ರಾಜ್ಯ ಸರ್ಕಾರದ ತೆರಿಗೆ ನೀತಿಯಾಗಿದೆ ಎನ್ನಬಹುದು. ಇದರಿಂದಾಗಿ ರಾಜ್ಯದಲ್ಲಿ ಅಬಕಾರಿ,

ವಾಣಿಜ್ಯ ತೆರಿಗೆಗಳು, ಮುದ್ರಾಂಕ ಶುಲ್ಕ, ಮೋಟಾರು ವಾಹನ ತೆರಿಗೆಗಳು, ವಿದ್ಯುತ್ ತೆರಿಗೆ, ಅರಣ್ಯ ತೆರಿಗೆ ಮುಂತಾದ ಬಹುಮುಖ ತೆರಿಗೆ ಪದ್ಧತಿ ರೂಪುಗೊಂಡಿದೆ. ತೆರಿಗೆ ದರಗಳಲ್ಲಿ ಆಗಿಂದಾಗ್ಗೆ ಮಾರ್ಪಾಟುಗಳನ್ನು ಮಾಡಲಾಗುತ್ತದೆ.

ಹಿಂದೆ, ಭೂ ಕಂದಾಯವು ರಾಜ್ಯಾದಾಯದ ಪ್ರಮುಖ ಮೂಲವಾಗಿತ್ತು. ಆದರೆ ಇತ್ತೀಚಿನ ವರ್ಷಗಳಲ್ಲಿ ಅದು ಅತಿ ಕನಿಷ್ಟ ಮಟ್ಟವನ್ನು ತಲುಪಿದೆ, ಭೂ ಹಿಡುವಳಿದಾರರಿಂದ ವಸೂಲು ಮಾಡುವ ಭೂ ಕಂದಾಯದ ಜೊತೆಗೆ ಅಭಿವೃದ್ಧಿ ಕಾರ್ಯಗಳಿಗಾಗಿ ವಿದ್ಯಾಕರ (ಭೂ ಕಂದಾಯದ ೧೦%), ಆರೋಗ್ಯಕರ (೧೫%) ಮತ್ತು ಸ್ಥಳೀಯ ಕರ (೫೦%) ಗಳನ್ನು ವಸೂಲು ಮಾಡಲಾಗುತ್ತದೆ. ಪ್ರಸ್ತುತ ಭೂ ಕಂದಾಯದ ದರಗಳು ೧೯ನೇ ಶತಮಾನದ ಅಂತಿಮ ದಶಕದ ವೇಳೆಯಲ್ಲಿ ನಿಗದಿಪಡಿಸಿದವುಗಳಾಗಿದ್ದು, ಹೊಸತಾಗಿ ಭೂ ಮಾಪನ ಕಾರ್ಯಾಚರಣೆ ನಡೆಸಿ ಭೂ ಕಂದಾಯದ ಪರಿಷ್ಕರಣೆ ಆಗುವವರೆಗೆ ಸಂಗ್ರಹದಲ್ಲಿ ಹೆಚ್ಚಳವಾಗುವ ಸಂಭವವಿಲ್ಲ. ಭೂ ಕಂದಾಯದ ಜೊತೆಗೇ ನೀರಿನ ಕರ ಮತ್ತು ದಂಡದ ನೀರಿನ ಕರವನ್ನು ಸಹ ಕಂದಾಯ ಇಲಾಖೆಯೇ ವಸೂಲು ಮಾಡುತ್ತಿದೆ.

## ನೋಂದಣಿ ಮತ್ತು ಮುದ್ರಾಂಕ ಶುಲ್ಕಗಳು

ಮೈಸೂರಿನಲ್ಲಿ ೧೮೩೧–೩೨ರಿಂದಲೇ ಮುದ್ರಾಂಕ ಶುಲ್ಕಗಳನ್ನು ಸಂಗ್ರಹಿಸಲಾಗುತ್ತಿತ್ತು. ಆದರೆ ಅದರ ದರಗಳು ಬಹಳ ಕಡಿಮೆ ಇದ್ದುದಲ್ಲದೆ ಹೆಚ್ಚು ವ್ಯಾಪಕವೂ ಆಗಿರಲಿಲ್ಲ. ಈ ಮೂಲದಿಂದ ಸರ್ಕಾರಕ್ಕೆ ೧೮೩೧ ಮತ್ತು ೧೮೬೧ರ ಅವಧಿಯಲ್ಲಿ ವಾರ್ಷಿಕ ಆದಾಯವು ₹ ೬,೦೦೦ದಿಂದ ₹ ೯,೦೦೦ ಮಾತ್ರವಾಗಿತ್ತು. ಆ ವರ್ಷಗಳಲ್ಲಿ ಕೋರ್ಟ್ ಫೀಗಳನ್ನು ನಾಣ್ಯದ ರೂಪದಲ್ಲಿ ಕೊಡುತ್ತಿದ್ದು ಬೇರೆ ಆದಾಯಗಳೊಡನೆ ಇದರ ಲೆಕ್ಕಪತ್ರಗಳೂ ಮಿಶ್ರವಾಗಿರುತ್ತಿದ್ದವು. ಸ್ಥಳೀಯ ಕಾನೂನಿನಲ್ಲಿ ೧೮೬೨ರಲ್ಲಿ ಮಾಡಿದ ಕೆಲವು ಬದಲಾವಣೆಗಳಿಂದಾಗಿ ಮುದ್ರಾಂಕ ಶುಲ್ಕಗಳ ಸಂಗ್ರಹ ಹೆಚ್ಚಳ ಕಂಡು ೧೮೬೪–೬೫ರ ವೇಳೆಗೆ ವಾರ್ಷಿಕ ಆದಾಯ ₹ ೨,೪೧,೦೦೦ಗಳಾಯಿತು. ಭಾರತೀಯ ಮುದ್ರಾಂಕ ಅಧಿನಿಯಮವನ್ನು ೧೮೬೫ರಲ್ಲಿ ಜಾರಿಗೊಳಿಸಲಾಯಿತು ಮತ್ತು ಈ ಮೂಲದ ಆದಾಯವು ವರ್ಷದಿಂದ ವರ್ಷಕ್ಕೆ ಜಾಸ್ತಿಯಾಗತೊಡಗಿತು. ಮುಂದಿನ ವರ್ಷಗಳಲ್ಲಿ ಈ ಅಧಿನಿಯಮ ಮತ್ತು ನಿಯಮಾವಳಿಗಳಿಗೆ ಅನೇಕ ತಿದ್ದುಪಡಿಗಳನ್ನು ತರಲಾಯಿತು. ಈಗ ನೋಂದಣಿ ಮತ್ತು ಮುದ್ರಾಂಕ ಇಲಾಖೆಯು ಈ ಕೆಳಕಾಣಿಸಿರುವ ಕಾಯ್ದೆ ಮತ್ತು ನಿಯಮಗಳನ್ನು ಜಾರಿಗೊಳಿಸುತ್ತಿದೆ.

(೧) ನೋಂದಣಿ ಕಾಯ್ದೆ, ೧೯೦೮

(೨) ಕರ್ನಾಟಕ ನೋಂದಣಿ ನಿಯಮ, ೧೯೬೫

(೩) ಭಾರತೀಯ ಮುದ್ರಾಂಕ ಕಾಯ್ದೆ ೧೮೯೯

(೪) ಕರ್ನಾಟಕ ಮುದ್ರಾಂಕ ಕಾಯ್ದೆ ೧೯೫೭ ಮತ್ತು ಅದರಡಿ ರಚಿಸಿರುವ ನಿಯಮಗಳು ೧೯೫೮

(೫) ಕರ್ನಾಟಕ ಸಂಘ–ಸಂಸ್ಥೆಗಳ ಕಾಯ್ದೆ ಮತ್ತು ಅದರಡಿ ಮಾಡಿರುವ ನಿಯಮಗಳು

(೬) ಭಾರತೀಯ ಪಾಲುಗಾರಿಕೆ ಕಾಯ್ದೆ ೧೯೩೨

(೭) ಹಿಂದೂ ವಿವಾಹ ಕಾಯ್ದೆ ೧೯೫೨, ವಿಶೇಷ ವಿವಾಹ ಕಾಯ್ದೆ ೧೯೫೪, ಪಾರ್ಸಿ ವಿವಾಹ ಕಾಯ್ದೆ ೧೯೩೬

ಆಸ್ತಿಗಳ ಮಾರುಕಟ್ಟೆ ಬೆಲೆಯನ್ನು ನಿಗದಿಪಡಿಸಲು ಮಾರ್ಗಸೂಚಿ ಬೆಲೆಯ ಪರಿಷ್ಕರಣೆಗಾಗಿ ಇಲಾಖೆಯಲ್ಲಿ ಪ್ರತ್ಯೇಕ ಸಮಿತಿಯನ್ನು (ಕೇಂದ್ರ ಮೌಲ್ಯಮಾಪನ ಸಮಿತಿ) ರಚಿಸಿ ಮಾರುಕಟ್ಟೆ ಮೌಲ್ಯವನ್ನು ಕಾಲಕಾಲಕ್ಕೆ ನಿಗದಿಪಡಿಸಲಾಗುತ್ತದೆ. ಈ ಮೌಲ್ಯಮಾಪನವನ್ನು ಗಣಕೀಕೃತಗೊಳಿಸಿದ್ದು ಜನರು ತಮ್ಮ ಆಸ್ತಿಗಳ ಮೌಲ್ಯವನ್ನು ತಾವೇ ನೋಡಿಕೊಳ್ಳಬಹುದಾದ ವ್ಯವಸ್ಥೆ ಕಲ್ಪಿಸಿದೆ. ಅದನ್ನು ರಾಜ್ಯಪತ್ರದಲ್ಲಿಯೂ ಕೂಡ ಪ್ರಕಟಿಸುವರು.

ಈ ಮೊದಲು ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ನಿರ್ದೇಶಕರು ಈ ಇಲಾಖೆಗೆ ಪದನಿಮಿತ್ತ ನೋಂದಣಿ ಮಹಾ ಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಆಗಿದ್ದರು. ದಿನಾಂಕ ೦೧–೦೬–೯೫ರಿಂದ ಈ ಇಲಾಖೆಗೆ ಪ್ರತ್ಯೇಕ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರ ಹುದ್ದೆಯನ್ನು ಸೃಜಿಸಲಾಯಿತು. ಈಗ ಕೇಂದ್ರ ಕಛೇರಿಯಲ್ಲಿ ಮೂರು ಉಪ ನೋಂದಣಿ ಮಹಾಪರಿವೀಕ್ಷಕರು ಮತ್ತು ಮೂರು ಸಹಾಯಕ ನೋಂದಣಿ ಮಹಾ ಪರಿವೀಕ್ಷಕರು ಹಾಗೂ ಓರ್ವ ಕೇಂದ್ರ ಸ್ಥಾನ ಸಹಾಯಕರು ಇಲಾಖಾ ಮುಖ್ಯಸ್ಥರಿಗೆ ನೆರವು ನೀಡುತ್ತಿದ್ದಾರೆ. ಪ್ರತೀ ಜಿಲ್ಲೆಯಲ್ಲಿ ಒಬ್ಬ ಜಿಲ್ಲಾ ನೋಂದಣಾಧಿಕಾರಿಗಳಂತೆ ೩೪ ಜನ ಜಿಲ್ಲಾ ನೊಂದಣಾಧಿಕಾರಿಗಳೂ, ೩೧ ಜನ ಕೇಂದ್ರ ಸ್ಥಾನ ಸಹಾಯಕರು ಇದ್ದಾರೆ. ಈ ಜಿಲ್ಲಾ ನೋಂದಾಣಾಧಿಕಾರಿಗಳು ಕರ್ನಾಟಕ ಸಂಘ–ಸಂಸ್ಥೆಗಳ ಅಧಿನಿಯಮ ೧೯೬೦ರ ಅಡಿಯಲ್ಲಿ ರಿಜಿಸ್ಟ್ರಾರ್ ಎಂದು ಮತ್ತು ಭಾರತೀಯ ಪಾಲುಗಾರಿಕೆ ಅಪಧಿನಿಯಮ ೧೯೩೨ರ ಅಡಿಯಲ್ಲಿ ರಿಜಿಸ್ಟ್ರಾರ್ ಆಫ್ ಫರ್ಮ್ಸ್ ಎಂದು ಕಾರ್ಯನಿರ್ವಹಿಸುತ್ತಿದ್ದಾರೆ. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು ಮುಖ್ಯ ರಾಜಸ್ವ ನಿಯಂತ್ರಣಾಧಿಕಾರಿಯಾಗಿರುತ್ತಾರೆ ಮತ್ತು ಈ ಇಲಾಖೆಯಲ್ಲಿ ೨೪೨ ಉಪನೋಂದಣಿ ಕಛೇರಿಗಳು ಇರುತ್ತವೆ (ಕಂದಾಯ ಇಲಾಖೆ ವಾರ್ಷಿಕ ವರದಿ ೨೦೧೦–೧೧).

**ಕಾವೇರಿಯೋಜನೆ:** ೨೦೦೩–೦೪ನೇ ಸಾಲಿನಿಂದ ಕಾವೇರಿ ಗಣಕೀಕರಣ ಯೋಜನೆ ಹಾಗೂ ತಂತ್ರಾಂಶ ಅಳವಡಿಸಿದೆ. ಮೇಲಿನ ಎಲ್ಲಾ ನೊಂದಣಾಧಿಕಾರಿಗಳ ಕಚೇರಿಗಳು ಈ ಯೋಜನೆಗೆ ಒಳಪಟ್ಟಿದ್ದು, ದಸ್ತಾವೇಜು ನೊಂದಣಿ, ವಿವಾಹ ನೊಂದಣಿ ಹಾಗೂ ಪಾಲುದಾರಿಕೆ ಸಂಸ್ಥೆಗಳ ನೊಂದಣಿ ಸೇವೆಗಳು ಗಣಕೀಕರಣಗೊಂಡಿವೆ.

**ನೂತನ ಕಾವೇರಿ ಗಣಕೀಕರಣ ಯೋಜನೆ:** ಕಾವೇರಿ ಭೂಮಿ ಜೋಡಣೆ, ಇ–ಸ್ಟಾಂಪ್ ಯೋಜನೆ, ಋಣ ಭಾರ ಪ್ರಮಾಣ ಪತ್ರದ ದಾಖಲೆಗಳ ಗಣಕೀಕರಣ ಯೋಜನೆ, ಶಾಶ್ವತ ದಾಖಲಾತಿಗಳ ಸ್ಕ್ಯಾನಿಂಗ್ ಹಾಗೂ ಮೈಕ್ರೋಫಿಲ್ಮಿಂಗ್ ಯೋಜನೆ, ಮುಂತಾದ ಯೋಜನೆಗಳು ಚಾಲ್ತಿಯಲ್ಲಿವೆ.

**ಕೋಷ್ಟಕ ೯.೧೪: ಚಾಮರಾಜನಗರ ಜಿಲ್ಲೆಯ ಒಟ್ಟು ದಸ್ತಾವೇಜುಗಳು, ಮುದ್ರಾಂಕ ಶುಲ್ಕ, ನೋಂದಣಿ ಶುಲ್ಕ ಕುರಿತಾದ ಮಾಹಿತಿ (₹ ಗಳಲ್ಲಿ)**

| ಕ್ರ.ಸಂ. | ವರ್ಷ | ದಸ್ತಾವೇಜುಗಳು | ಮುದ್ರಾಂಕ ಶುಲ್ಕ | ನೋಂದಣಿ ಶುಲ್ಕ | ಒಟ್ಟು |
|---|---|---|---|---|---|
| ೦೧ | ೧೯೯೮–೯೯ | ೮೨೦೪ | ೩೨೪೪೧೯೫೯ | ೬೨೯೮೯೪೪ | ೩೮೭೪೦೯೦೩ |
| ೦೨ | ೧೯೯೯–೨೦೦೦ | ೭೯೬೧ | ೩೨೪೭೧೩೪೧ | ೬೧೬೯೨೨೫ | ೩೮೬೪೦೫೬೭ |
| ೦೩ | ೨೦೦೦–೦೧ | ೯೦೧೮ | ೩೨೪೩೯೪೯೯ | ೮೦೪೪೭೨೪ | ೪೦೪೮೪೨೨೩ |
| ೦೪ | ೨೦೦೧–೦೨ | ೯೮೦೧ | ೩೪೦೧೬೭೩೫ | ೭೯೨೦೩೭೭ | ೪೧೯೩೬೧೧೨ |
| ೦೫ | ೨೦೦೨–೦೩ | ೧೧೫೪೨ | ೩೫೫೮೩೧೯೧ | ೮೩೮೮೬೬೨ | ೪೩೯೭೧೮೫೩ |
| ೦೬ | ೨೦೦೩–೦೪ | ೧೫೨೦೨ | ೩೧೪೨೦೮೦೪ | ೬೫೯೧೯೭೯ | ೩೮೦೧೨೭೮೩ |
| ೦೭ | ೨೦೦೪–೦೫ | ೧೬೫೭೪ | ೩೮೨೦೭೧೯೭ | ೭೯೬೫೬೬೪ | ೪೮೧೭೨೮೮೧ |
| ೦೮ | ೨೦೦೫–೦೬ | ೧೫೪೭೮ | ೪೯೭೬೧೨೦೬ | ೯೮೪೪೯೧೮ | ೫೯೬೦೬೧೨೪ |
| ೦೯ | ೨೦೦೬–೦೭ | ೨೦೯೦೩ | ೬೨೬೦೪೧೮೧ | ೧೨೪೭೧೧೨೩ | ೭೫೦೭೫೩೦೪ |
| ೧೦ | ೨೦೦೭–೦೮ | ೨೩೩೩೬ | ೭೬೭೦೧೪೭೦ | ೧೪೩೨೬೯೩೭ | ೯೧೦೨೮೪೦೭ |
| ೧೧ | ೨೦೦೮–೦೯ | ೧೫೯೦೫ | ೫೯೯೦೮೬೯೬ | ೧೩೭೪೮೮೪೩ | ೭೩೬೫೭೫೩೯ |
| ೧೨ | ೨೦೦೯–೧೦ | ೨೧೪೨೧ | ೫೨೨೯೫೭೩೭ | ೧೫೬೭೭೨೧೪ | ೬೭೬೯೨೯೫೧ |
| ೧೩ | ೨೦೧೦–೧೧ | ೧೭೦೩೧ | ೬೬೨೯೪೭೮೯ | ೧೮೦೦೭೮೩೪ | ೮೪೩೦೨೬೨೩ |

**೯.೧೫: ಚಾಮರಾಜನಗರ ಜಿಲ್ಲೆಯಲ್ಲಿ ೧೯೯೯–೨೦೦೦ ದಿಂದ ೨೦೧೦–೧೧ನೇ ವರ್ಷದವರೆಗೆ ನೋಂದಣಿಯಾದ ಸಂಸ್ಥೆಗಳು ಮತ್ತು ವ್ಯಾಪಾರಿ ಸಂಸ್ಥೆಗಳ ಸಂಖ್ಯೆಗಳು ಮತ್ತು ವಸೂಲಾದ ಶುಲ್ಕದ ವಿವರ (₹ ಗಳಲ್ಲಿ)**

| ಕ್ರಮಸಂಖ್ಯೆ | ವರ್ಷ | ನೋಂದಣಿಯಾದ ಸಂಸ್ಥೆಗಳು | ನೋಂದಣಿ ಶುಲ್ಕ | ನೋಂದಣಿಯಾದ ವ್ಯಾಪಾರಿ ಸಂಸ್ಥೆಗಳು | ನೋಂದಣಿ ಶುಲ್ಕ | ಒಟ್ಟು ನೋಂದಣಿ ಶುಲ್ಕ |
|---|---|---|---|---|---|---|
| ೦೧ | ೧೯೯೯–೨೦೦೦ | ೭೦ | ೧೪೯೫೫ | ೧೬ | ೨೧೪೫ | ೧೭೧೦೦ |
| ೦೨ | ೨೦೦೦–೦೧ | ೮೨ | ೧೩೮೧೬೫ | ೨೧ | ೨೮೩೫ | ೧೪೧೦೦೦ |
| ೦೩ | ೨೦೦೧–೦೨ | ೮೮ | ೨೫೧೨೩೦ | ೨೮ | ೨೮೦೫ | ೨೫೪೦೩೫ |
| ೦೪ | ೨೦೦೨–೦೩ | ೭೮ | ೧೦೭೧೯೦ | ೨೦ | ೨೨೪೭ | ೧೦೯೪೩೭ |
| ೦೫ | ೨೦೦೩–೦೪ | ೧೦೭ | ೪೫೭೫೦ | ೧೮ | ೧೮೧೮ | ೪೭೫೬೮ |
| ೦೬ | ೨೦೦೪–೦೫ | ೧೩೩ | ೬೬೦೩೦ | ೧೩ | ೧೩೬೨ | ೬೭೩೯೨ |
| ೦೭ | ೨೦೦೫–೦೬ | ೧೨೭ | ೧೪೭೪೪೫ | ೧೭ | ೧೭೮೭ | ೧೪೯೨೩೨ |
| ೦೮ | ೨೦೦೬–೦೭ | ೧೩೦ | ೧೮೬೨೫೦ | ೦೮ | ೯೩೦ | ೧೮೭೧೮೦ |
| ೦೯ | ೨೦೦೭–೦೮ | ೧೯೨ | ೨೩೭೮೨೦ | ೧೧ | ೧೪೨೦ | ೨೩೯೨೪೦ |
| ೧೦ | ೨೦೦೮–೦೯ | ೧೩೨ | ೫೪೭೫೦ | ೧೨ | ೧೨೦೦ | ೧೨೦೦ |
| ೧೧ | ೨೦೦೯–೧೦ | ೧೪೧ | ೬೮೨೫೦ | ೧೯ | ೨೦೨೫ | ೨೦೨೫ |
| ೧೨ | ೨೦೧೦–೧೧ | ೧೫೪ | ೭೭೦೦೦ | ೨೧ | ೩೩೦೦ | ೩೩೦೦ |
| | ಒಟ್ಟು | ೧೪೩೪ | ೧೩೪೯೮೩೫ | ೨೦೪ | ೨೨೮೭೪ | ೧೨೧೭೭೦೯ |

*ಮಾಹಿತಿ ಮೂಲ: ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿ, ಚಾಮರಾಜನಗರ ಮತ್ತು ಸಹಕಾರ ಸಂಘಗಳ ಉಪ ನಿಬಂಧಕರು*

** ಸಂಘಗಳ ನೋಂದಣಿ ಕಾರ್ಯವನ್ನು, ದಿನಾಂಕ ೧.೬.೨೦೦೮ರಿಂದ ಸಹಕಾರ ಸಂಘಗಳ ಉಪನಿಬಂಧಕರಿಗೆ ವರ್ಗಾಯಿಸಲಾಗಿದೆ*

## ಮನರಂಜನೆ ತೆರಿಗೆ

ಕರ್ನಾಟಕ ರಾಜ್ಯವು ೧೯೫೬ರಲ್ಲಿ ಅಸ್ತಿತ್ವಕ್ಕೆ ಬಂದಾಗ ಹಳೆಯ ಮೈಸೂರು ರಾಜ್ಯದೊಂದಿಗೆ ಅನೇಕ ಪ್ರದೇಶಗಳು ವಿಲೀನಗೊಂಡವಷ್ಟೆ. ಆಗ ಆಯಾ ಪ್ರದೇಶಗಳಲ್ಲಿದ್ದ ಮನೋರಂಜನಾ ತೆರಿಗೆ ಕಾನೂನುಗಳು ಡಿಸೆಂಬರ್ ೧೯೫೮ರವರೆಗೆ ಮುಂದುವರೆಸಲ್ಪಟ್ಟವು. ಇಡೀ ಕರ್ನಾಟಕ ರಾಜ್ಯಕ್ಕೆ ಅನ್ವಯಿಸುವಂತಹ ಏಕರೂಪದ ಮನೋರಂಜನಾ ತೆರಿಗೆ ಕಾಯ್ದೆಯೊಂದನ್ನು ದಿನಾಂಕ ೧–೧–೧೯೫೯ರಿಂದ ಜಾರಿಗೊಳಿಸಲಾಯಿತು. ವಾಣಿಜ್ಯ ತೆರಿಗೆಗಳ ಇಲಾಖೆಯು ಈ ಕಾಯ್ದೆಯ ಆಡಳಿತದ ಜವಾಬ್ದಾರಿಯನ್ನು ವಹಿಸಿಕೊಂಡಿತು. ಈ ಕಾನೂನಿನ ಪ್ರಕಾರ ಚಲನಚಿತ್ರ ಪ್ರದರ್ಶನ ಮಂದಿರಗಳು ಮತ್ತು ಕುದುರೆ ಪಂದ್ಯಗಳ ಪ್ರವೇಶ ಪತ್ರ (ಟಿಕೆಟ್ಸ್)ಗಳ ಮೇಲೆ ಮನೋರಂಜನಾ ತೆರಿಗೆ ಹೇರಬಹುದಾಗಿದೆ. ನಾಟಕ, ಸಂಗೀತ ಮತ್ತು ಇನ್ನಿತರ ಕಾರ್ಯಕ್ರಮಗಳು ಈ ತೆರಿಗೆಯಿಂದ ವಿನಾಯಿತಿ ಪಡೆದಿವೆ.

ಸಂಪನ್ಮೂಲಗಳು ಮತ್ತು ಮಿತವ್ಯಯ ಸಮಿತಿಯ ಶಿಫಾರಸ್ಸಿನನ್ವಯ ೧೯೬೨ರಲ್ಲಿ ಮನೋರಂಜನಾ ತೆರಿಗೆ ಮತ್ತು ಪ್ರದರ್ಶನ ತೆರಿಗೆ ಮೇಲೆ ಶೇಕಡಾ ೨೫ರಷ್ಟು ಮೇಲು ಕರವನ್ನು ವಿಧಿಸಲಾಯಿತು. ರಾಜ್ಯದಲ್ಲಿ

ತಯಾರಾಗುವ ಚಲನಚಿತ್ರಗಳೀಗೆ ಸಹಾಯಧನ (ಸಬ್ಸಿಡಿ) ನೀಡುವ ಉದ್ದೇಶದಿಂದ ೧೯೬೬ರಲ್ಲಿ ಈ ಮೇಲುಕರವನ್ನು ಶೇಕಡಾ ೩೫ಕ್ಕೆ ಏರಿಸಲಾಯಿತು. ಆಗ ಪ್ರದರ್ಶನ ತೆರಿಗೆ ಮೇಲಿನ ಮೇಲು ಕರವನ್ನು ಪ್ರದರ್ಶನ ತೆರಿಗೆಯಲ್ಲಿಯೇ ವಿಲೀನಗೊಳಿಸಲಾಯಿತು. ಇದನ್ನು ೧೯೭೧ರಲ್ಲಿ ಶೇಕಡಾ ೬೦ಕ್ಕೆ ಹಾಗೂ ೧೯೭೪ರಲ್ಲಿ ಶೇಕಡಾ ೧೦೦ಕ್ಕೆ ಏರಿಸಲಾಯಿತು. ಜುಲೈ ೧೯೮೨ರಲ್ಲಿ ಪ್ರವೇಶ ಪತ್ರದ ಮೇಲಿನ ತೆರಿಗೆಯನ್ನು ಏರಿಸಲಾಯಿತು ಮತ್ತು ಹೆಚ್ಚುವರಿ ತೆರಿಗೆಯನ್ನು ರದ್ದು ಮಾಡಲಾಯಿತು. ದಿನಾಂಕ ೧–೪–೧೯೮೫ ರಿಂದ ಚಲನಚಿತ್ರ ಮಂದಿರಗಳ ಪ್ರವೇಶ ತೆರಿಗೆ ದರಗಳನ್ನು ಮತ್ತಷ್ಟು ಏರಿಸಲಾಯಿತು. ಪ್ರದರ್ಶನ ತೆರಿಗೆ ಮತ್ತು ಮೇಲುಕರ ಹೊರತುಪಡಿಸಿ ಮನೋರಂಜನಾ ತೆರಿಗೆಯ ಶೇಕಡಾ ೯೦ಅನ್ನು ಚಲನಚಿತ್ರ ಮಂದಿರ ಇರುವ ಊರಿನ ಸ್ಥಳೀಯ ಸಂಸ್ಥೆಗೆ ನೀಡಲಾಗುವುದು; ಉಳಿದ ಶೇಕಡಾ ೧೦ ಅನ್ನು ಸಂಗ್ರಹಣೆ ವೆಚ್ಚವೆಂದು ರಾಜ್ಯ ಸರ್ಕಾರವು ಉಳಿಸಿಕೊಳ್ಳುವುದು. ದಿನಾಂಕ ೧–೪–೨೦೦೫ ರಿಂದ ಮೌಲ್ಯವರ್ಧಿತ ತೆರಿಗೆ ಪದ್ಧತಿ (VAT) ಯನ್ನು ಜಾರಿಗೊಳಿಸಲಾಗಿದೆ. ಸ್ಥಳೀಯ ಅಧಿಕಾರಿಗಳಾದ ತಹಸೀಲ್ದಾರರು, ಚೀಫ್ ಆಫೀಸರು, ಪೊಲೀಸ್ ಇನ್ಸ್‌ಪೆಕ್ಟರು ಮಾತ್ರವೇ ಅಲ್ಲದೆ ಇಲಾಖಾ ಅಧಿಕಾರಿಗಳು ಚಲನಚಿತ್ರ ಮಂದಿರಗಳಲ್ಲಿ ಅನಿರೀಕ್ಷಿತ ತನಿಖೆ ಕೈಗೊಳ್ಳುವ ಅಧಿಕಾರವನ್ನು ಪಡೆದಿರುತ್ತಾರೆ. ಕರ ವಿನಾಯಿತಿ ನೀಡುವ ಅಧಿಕಾರ ಮೊದಲು ಇಲಾಖೆಯ ಅಧಿಕಾರಿಗಳಿಗಿತ್ತಾದರೂ ಇತ್ತೀಚೆಗೆ ರಾಜ್ಯ ಸರ್ಕಾರವೇ ಈ ಅಧಿಕಾರವನ್ನು ಚಲಾಯಿಸುತ್ತಿದೆ.

## ವೃತ್ತಿ ತೆರಿಗೆ

ಸ್ಥಳೀಯ ಪ್ರಾಧಿಕಾರಗಳು ೧೯೭೬ರವರೆಗೆ ವೃತ್ತಿ, ವ್ಯಾಪಾರಗಳು, ಕಸುಬುಗಳು ಮತ್ತು ಉದ್ಯೋಗದ ಮೇಲಿನ ತೆರಿಗೆಯನ್ನು ವಸೂಲ್ಮಾಡಿಕೊಳ್ಳುತ್ತಿದ್ದವು. ಆದರೆ ಕರ್ನಾಟಕ ಉದ್ಯೋಗ, ವ್ಯಾಪಾರ ಮತ್ತು ವೃತ್ತಿಗಳ ಅಧಿನಿಯಮ ೧೯೭೬ರಂತೆ ಏಪ್ರಿಲ್ ೧, ೧೯೭೬ ರಿಂದ ಜಾರಿಗೆ ತರಲಾಯಿತು. ವೇತನ ಪಡೆಯುವ ನೌಕರರು ಪಾವತಿಸಬೇಕಾದ ತೆರಿಗೆದರ ಅವರ ಒಟ್ಟು ವೇತನವನ್ನು ಅವಲಂಬಿಸಿದೆ. ವ್ಯಾಪಾರಿಗಳ ವಿಷಯದಲ್ಲಿ ಮಾರಾಟದಿಂದ ಬಂದ ಹಣದ ಮೇಲೆ ವೃತ್ತಿ ತೆರಿಗೆಯ ಪ್ರಮಾಣವನ್ನು ನಿರ್ಧರಿಸಲಾಗುವುದು. ನೌಕರರು ಸಂದಾಯ ಮಾಡಬೇಕಾದ ವೃತ್ತಿತೆರಿಗೆ ಮೊತ್ತವನ್ನು ಅವರ ಮಾಹೆಯಾನ ಸಂಬಳದಿಂದ ಕಟಾಯಿಸಿಕೊಳ್ಳಲಾಗುತ್ತದೆ. ಸ್ವ ಉದ್ಯೋಗಿಗಳು ಪ್ರತೀ ವರ್ಷದ ಸೆಪ್ಟೆಂಬರ್ ಮಾಹೆಯ ಅಂತ್ಯದ ವೇಳೆಗೆ ವೃತ್ತಿ ತೆರಿಗೆಯನ್ನು ಸಂದಾಯ ಮಾಡಬೇಕು. ವಿಮಾ ಕಾಯ್ದೆ ೧೯೩೮ರ ಪ್ರಕಾರ ಲೈಸೆನ್ಸ್ ಪಡೆದಿರುವ ವಿಮಾ ಏಜೆಂಟರು ಮತ್ತು ಇತರರು ಯಾವುದೇ ದರ್ಜೆಯ ಹುದ್ದೆಯಲ್ಲಿದ್ದರೂ ಅವರು ಗಳಿಸುವ ಆದಾಯಕ್ಕೆ ಅನುಸಾರವಾಗಿ ವೃತ್ತಿ ತೆರಿಗೆ ದರವನ್ನು ನಿಗದಿಪಡಿಸಲಾಗುತ್ತದೆ.

ದಿನಾಂಕ ೧–೪–೧೯೮೩ ರಿಂದ ಪ್ರತೀ ತಿಂಗಳು ₹ ೧,೨೦೦ ಮತ್ತು ಅದಕ್ಕೂ ಹೆಚ್ಚಿನ ಮೂಲವೇತನ ಪಡೆಯುವ ಎಲ್ಲಾ ನೌಕರರೂ ವೃತ್ತಿ ತೆರಿಗೆ ಸಂದಾಯ ಮಾಡಲು ಬದ್ಧರೆಂದು ಪರಿಗಣಿಸಲ್ಪಟ್ಟಿರುತ್ತಾರೆ. ಸ್ವಉದ್ಯೋಗಿಗಳು ಅಧಿನಿಯಮದ ಪ್ರಕಾರ ವೃತ್ತಿ ತೆರಿಗೆ ಪಾವತಿದಾರರೆಂದು ರಿಜಿಸ್ಟರು ಮಾಡಿಕೊಳ್ಳಬೇಕು ಮತ್ತು ಏಪ್ರಿಲ್ ೩೦ನೇ ತಾರೀಖಿನೊಳಗೆ ನಿಗದಿತ ದರದಂತೆ ಪ್ರತೀವರ್ಷ ತೆರಿಗೆ ಮೊತ್ತವನ್ನು ಸಂದಾಯ ಮಾಡಬೇಕು.

ಕರ್ನಾಟಕ ಮಾರಾಟ ಕರ ಅಧಿನಿಯಮ ೧೯೫೦ರಂತೆ ನೋಂದಾಯಿತರಾಗಿರುವ ವ್ಯಾಪಾರಿಗಳು ವಾರ್ಷಿಕ ಮಾರಾಟದ ಮೊತ್ತ ₹ ೨೫,೦೦೦ ಆಗಿದ್ದು, ಆದರೆ ₹ ೫೦,೦೦೦ಕ್ಕಿಂತ ಕಡಿಮೆ ಇದ್ದಲ್ಲಿ ಮಾಹೆಯಾನ ₹ ೧೦೦ನ್ನು ವೃತ್ತಿ ತೆರಿಗೆ ಎಂದು ಪಾವತಿ ಮಾಡಬೇಕಾಗುತ್ತದೆ. ಇದಕ್ಕಿಂತ ಹೆಚ್ಚಿನ ಮೊತ್ತದ ಮಾರಾಟವಾಗಿದ್ದಲ್ಲಿ ಮಾಹೆಯಾನ ₹ ೨೫೦ನ್ನು ವೃತ್ತಿ ತೆರಿಗೆಯನ್ನಾಗಿ ಪಾವತಿ ಮಾಡಬೇಕಾಗುತ್ತದೆ. ದಿನಾಂಕ ೧-೮-೧೯೮೫ ರಿಂದ ವಾರ್ಷಿಕ ಮಾರಾಟ ಮೊತ್ತ ₹ ೭೫,೦೦೦ಕ್ಕೆ ಕಡಿಮೆ ಇಲ್ಲದ ಪಕ್ಷದಲ್ಲಿ ₹ ೨೫೦ನ್ನು ಪ್ರತೀ ತಿಂಗಳು ವೃತ್ತಿ ತೆರಿಗೆ ರೂಪದಲ್ಲಿ ಪಾವತಿ ಮಾಡಬೇಕಾಗುತ್ತದೆ.

## ಐಷಾರಾಮ ತೆರಿಗೆ

ಕರ್ನಾಟಕ ಐಷಾರಾಮ (ಹೋಟೆಲುಗಳು ಮತ್ತು ವಸತಿ ಗೃಹಗಳು) ತೆರಿಗೆಗಳ ಅಧಿನಿಯಮ, ೧೯೭೯ ದಿನಾಂಕ ೧-೬-೧೯೭೯ ರಿಂದ ಜಾರಿಗೊಳಿಸಲ್ಪಟ್ಟಿದೆ. ಇದರಂತೆ ಹೋಟೆಲ್‌ಗಳು ಮತ್ತು ವಸತಿಗೃಹಗಳಲ್ಲಿ ಒದಗಿಸಲಾಗುವ ಭೋಗ ವಸ್ತುಗಳು ಮತ್ತು ಸೌಲಭ್ಯಗಳಿಗೆ ಈ ಕೆಳಗೆ ಕಾಣಿಸಿರುವ ದರಗಳಂತೆ ಐಷಾರಾಮ ತೆರಿಗೆ ವಿಧಿಸಲು ಅವಕಾಶವಿರುತ್ತದೆ:

೧) ವಸತಿ ಸೌಕರ್ಯ ಒದಗಿಸುವುದಕ್ಕಾಗಿ ವಿಧಿಸುವ ಪ್ರತಿ ದಿನದ ಬಾಡಿಗೆ ₹ ೫೦ಕ್ಕಿಂತ ಹೆಚ್ಚು ಮತ್ತು ₹ ೧೫೦ಕ್ಕಿಂತ ಕಡಿಮೆ ಇರುವ ಪ್ರಸಂಗಗಳಲ್ಲಿ ಅಂತಹ ಬಾಡಿಗೆಯ ಶೇಕಡಾ ೧೦ರಷ್ಟು.

೨) ಪ್ರತಿದಿನದ ಬಾಡಿಗೆ ಮೊತ್ತ ₹ ೧೫೦ ರಿಂದ ₹ ೨೫೦ರವರೆಗೆ ಇದ್ದಲ್ಲಿ ಶೇಕಡಾ ೧೫ರಷ್ಟು.

೩) ಪ್ರತಿದಿನದ ಬಾಡಿಗೆ ಮೊತ್ತ ₹ ೨೫೦ಕ್ಕಿಂತ ಹೆಚ್ಚಿದ್ದಲ್ಲಿ ಅಂತಹ ಬಾಡಿಗೆಯ ಶೇಕಡಾ ೨೦ರಷ್ಟು ತೆರಿಗೆ ವಿಧಿಸಲಾಗುವುದು.

## ಕೃಷಿ ಆದಾಯ ತೆರಿಗೆ

ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ ೧೯೫೭, ಏಳು ತೋಟದ ಬೆಳೆಗಳು ಸೇರಿದಂತೆ, ಒಟ್ಟು ೩೧ ವಾಣಿಜ್ಯ ಬೆಳೆಗಳ ಮೇಲೆ ತೆರಿಗೆ ವಿಧಿಸಲು ಅವಕಾಶ ಮಾಡಿಕೊಡುತ್ತದೆ. ಈ ಅಧಿನಿಯಮದಂತೆ ಎಲ್ಲಾ ಕೃಷಿ ಆದಾಯದ ಮೇಲೆ ತೆರಿಗೆ ವಿಧಿಸಬಹುದಾದರೂ ೧-೪-೧೯೮೫ ರಿಂದ ನಿವ್ವಳ ಆದಾಯವು ₹೨೦,೦೦೦ ಮೀರಿದರೆ ಮಾತ್ರ ಬಾಧ್ಯತೆ ಉಂಟಾಗುವುದು. ಇದಕ್ಕೆ ಮೊದಲು (೧೯೭೬) ಮಿತಿ ₹ ೮,೦೦೦ ಆಗಿತ್ತು. ತೋಟದ ಬೆಳೆಗಳ ಸಂಬಂಧ ಹಿಡುವಳಿಯ ವಿಸ್ತೀರ್ಣದ ಆಧಾರದ ಮೇಲೆ ಆದಾಯ ತೆರಿಗೆ ವಿಧಿಸಲೂ ಅವಕಾಶವಿದೆ.

ಕರ್ನಾಟಕ ಕೃಷಿ ಆದಾಯ ತೆರಿಗೆ ಅಧಿನಿಯಮ ೧೯೫೭ ವನ್ನು ೧೯೮೩ರಲ್ಲಿ ತಿದ್ದುಪಡಿ ಮಾಡಲಾಯಿತು. ಇದರಂತೆ, ತೋಟದ ಬೆಳೆಗಳಿಂದ ಲಭ್ಯವಾಗುವ ಆದಾಯಕ್ಕೆ ಮಾತ್ರ ಕೃಷಿ ಆದಾಯ ತೆರಿಗೆಯನ್ನು ನೀಡಬೇಕೆಂದು ಮತ್ತು ೩೧-೦೩-೧೯೮೨ ರಂದು ಅಂತ್ಯಗೊಳ್ಳುವ ವರ್ಷದಿಂದ ಇದು ಜಾರಿಗೆ ಬರುವುದೆಂದು ನಿರ್ಧರಿಸಲಾಯಿತು. ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ಅಧಿನಿಯಮ, ೧೯೮೫ ಮತ್ತು ಕರ್ನಾಟಕ ಕೃಷಿ ಆದಾಯ ತೆರಿಗೆ (ತಿದ್ದುಪಡಿ) ಅಧಿನಿಯಮ, ೧೯೮೬, ಇವುಗಳ ಪ್ರಕಾರ ೨೫ ಎಕರೆಗಳವರೆಗೆ ತೋಟದ ವಿಸ್ತೀರ್ಣವಿದ್ದು, ಬಾಳೆ, ತೆಂಗು, ಏಲಕ್ಕಿ, ಕಾಳು ಮೆಣಸು ಅಥವಾ ಕಿತ್ತಳೆಯನ್ನು ಪೂರ್ತಿಯಾಗಿ ಅಥವಾ

ಮಿಶ್ರ ಬೆಳೆಯಾಗಿ ಬೆಳೆಯುವವರು ಕೃಷಿ ಆದಾಯ ತೆರಿಗೆ ನೀಡಲು ಬಾಧ್ಯರಾಗುತ್ತಾರೆ. ಕೃಷಿ ಆದಾಯ ತೆರಿಗೆ ದರಗಳ ವಿವರಗಳು ಕೆಳಕಾಣಿಸಿರುವಂತಿದ್ದು ಒಂದೇ ಕಂತಿನಲ್ಲಿ ಪಾವತಿ ಮಾಡಬೇಕಾಗಿರುತ್ತದೆ.

i. ತೋಟದ ವಿಸ್ತೀರ್ಣವು ೧೫ ಎಕರೆಗಳನ್ನು ಮೀರದ ಸಂದರ್ಭಗಳಲ್ಲಿತೆರಿಗೆ ಇಲ್ಲ.

ii. ತೋಟದ ವಿಸ್ತೀರ್ಣವು ೧೫ ಎಕರೆಗಳಿಗಿಂತ ಹೆಚ್ಚಿದ್ದು ೨೦ ಎಕರೆಗಳನ್ನು ಮೀರದಿದ್ದಲ್ಲಿ ₹೧,೫೦೦

iii. ತೋಟದ ವಿಸ್ತೀರ್ಣವು ೧೫ ಎಕರೆಗಳಿಗಿಂತ ಹೆಚ್ಚಿದ್ದು ೨೫ ಎಕರೆಗಳನ್ನು ಮೀರದಿದ್ದಲ್ಲಿ ₹೨,೫೦೦

## ರಾಜ್ಯ ಅಬಕಾರಿ ಸುಂಕ

ಏಕೀಕರಣದ ಸಮಯದಲ್ಲಿ ಚಾಮರಾಜನಗರ ಜಿಲ್ಲೆಯಲ್ಲಿ ಮೈಸೂರು ಸಂಸ್ಥಾನದ ಅಬಕಾರಿ ಕಾಯ್ದೆಯು ಜಾರಿಯಲ್ಲಿತ್ತು. ಕರ್ನಾಟಕ ಅಬಕಾರಿ ಅಧಿನಿಯಮ ೧೯೬೫ ನ್ನು ಜಾರಿಗೊಳಿಸುವವರೆಗೆ ಅದೇ ಜಾರಿಯಲ್ಲಿತ್ತು. ಅಬಕಾರಿ ಅಧಿನಿಯಮ ೧೯೬೫ರ ಮುಖ್ಯ ಉಪಬಂಧಗಳೆಂದರೆ:

೧) ಅಧಿನಿಯಮದ ಅಡಿಯಲ್ಲಿ ನೀಡಲಾಗಿರುವ ಲೈಸೆನ್ಸ್ ಅಥವಾ ಪರವಾನಗಿಯ ಪ್ರಕಾರ ತಯಾರು ಮಾಡಿರುವ ಎಲ್ಲಾ ರೀತಿಯ ವಸ್ತುಗಳ ಮೇಲೆ ರಾಜ್ಯ ಸರ್ಕಾರವು ವಿಧಿಸಿರುವ ದರದಲ್ಲಿ ಅಬಕಾರಿ ಸುಂಕವನ್ನು ಹಾಕಲಾಗುತ್ತದೆ.

೨) ಅಬಕಾರಿ ಕಾಯ್ದೆಯಡಿಯಲ್ಲಿ ತಯಾರಿಸಲಾಗಿರುವ ಅಥವಾ ಉತ್ಪಾದಿಸಲಾಗುವ ಅಥವಾ ಆಮದು ಮಾಡಿಕೊಳ್ಳಲಾಗುವ ಅಬಕಾರಿ ಸುಂಕಕ್ಕೆ ಒಳಪಡುವ ಯಾವುದೇ ವಸ್ತುವಿನ ಮೇಲೆ ಸರಿಗಟ್ಟುವ ದರ ಅಥವಾ ದರಗಳಲ್ಲಿ ತೆರಿಗೆಯನ್ನು ಹಾಕಲಾಗುವುದು.

ಅಬಕಾರಿ ತೆರಿಗೆಗೆ ಒಳಪಡುವ ವಸ್ತುಗಳೆಂದರೆ ಕಾಕಂಬಿ, ಬ್ರಾಂದಿ, ವ್ಹಿಸ್ಕಿ, ರಮ್, ಜಿನ್, ಮತ್ತು ರಾಜ್ಯದ ಡಿಸ್ಟಿಲರಿಗಳಲ್ಲಿ ತಯಾರಾಗುವ ವಿವಿಧ ಬಗೆಯ ಮಾದಕ ವಸ್ತುಗಳಾದ ಬೀಯರ್, ವೈನ್, ಫೆನ್ನಿ ಇತ್ಯಾದಿ.

ಲೀಟರ್ ಫೀ, ವೃಕ್ಷ ತೆರಿಗೆ, ವೃಕ್ಷ ಬಾಡಿಗೆ, ಕೌಂಟ್ ವೇಲಿಂಗ್, ಸುಂಕ, ಅಂಗಡಿ ಬಾಡಿಗೆ, ರಫ್ತು ಫೀಜು ಮತ್ತು ಲೈಸೆನ್ಸ್ ಫೀಜು, ಮುಂತಾದುವುಗಳಿಗೆ ಅಬಕಾರಿ ಸುಂಕ ಅನ್ವಯವಾಗುತ್ತದೆ.

### ಅಬಕಾರಿ ಕಾಯ್ದೆಯಲ್ಲಿ ಗೊತ್ತು ಮಾಡಿರುವ ಅಪರಾಧಗಳು

ಅಕ್ರಮ ಉತ್ಪಾದನೆ, ಅಕ್ರಮ ಸಾರಿಗೆ, ಅಕ್ರಮ ಹೊಂದಿರುವಿಕೆ, ಮಾನವ ಉಪಯೋಗಕ್ಕೆ ಅಯೋಗ್ಯವಾಗುವಂತೆ ಮದ್ಯಸಾರವನ್ನು ಕೆಡಿಸುವುದು, ಲೈಸೆನ್ಸಿನ ದುರುಪಯೋಗ, ಕಲಬೆರಕೆ, ಮತ್ತೊಬ್ಬ ವ್ಯಕ್ತಿಯ ಪರವಾಗಿ ತಯಾರಿಕೆ, ವಶದಲ್ಲಿಟ್ಟುಕೊಳ್ಳುವಿಕೆ ಹಾಗೂ ಮಾರಾಟ ಮತ್ತು ಅಪರಾಧ ಎಸಗಲು ಅನುಕೂಲವಾಗುವಂತೆ ಸ್ಥಳ, ವಾಹನ ಮುಂತಾದ ಸೌಲಭ್ಯಗಳನ್ನು ಒದಗಿಸುವುದು ಇತ್ಯಾದಿ.

**ಕೋಷ್ಟಕ ೯.೧೬: ಅಬಕಾರಿ ಇಲಾಖೆಯ ಚಾಮರಾಜನಗರ ಜಿಲ್ಲಾ ಕಛೇರಿ, ಜಿಲ್ಲೆಯಲ್ಲಿ ೧೯೯೮-೧೯೯೯ ರಿಂದ ೨೦೧೦-೨೦೧೧ ರವರೆಗೆ ವಿವಿಧ ಶಿರೋನಾಮೆಗಳಡಿಯಲ್ಲಿ ಸಂಗ್ರಹಿಸಿದ ರಾಜಸ್ವದ ವಿವರಗಳು (ಲಕ್ಷ ₹ಗಳಲ್ಲಿ)**

| ಕ್ರ. ಸಂ. | ವಿವರ | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ | ೨೦೦೫-೦೬ |
|---|---|---|---|---|---|---|---|---|---|
| ೦೧ | ೦೨ | ೦೩ | ೦೪ | ೦೫ | ೦೬ | ೦೭ | ೦೮ | ೦೯ | ೧೦ |
| ೦೧ | ಸಾರಾಯಿ ಶುಲ್ಕ | ೯೭೮೧೫೦೦ | ೧೭೫೦೫೮೩೦ | ೨೧೦೭೬೦೦೦ | ೨೦೦೪೭೦೦೦ | ೨೨೫೧೨೧೪೦ | ೮೦೯೨೬೯ | – | – |
| ೦೨ | ಸಾರಾಯಿ ಬಾಡಿಗೆ | ೬೭೪೪೪೯೭೫ | ೧೩೨೭೮೩೧೪೫ | ೧೬೦೧೦೭೩೮೫ | ೧೭೦೭೩೯೮೩೪ | ೧೫೮೮೧೮೪೯೩ | ೨೦೨೦೮೦೩೨೧ | ೨೬೪೦೫೨೦೯ | ೨೬೪೦೫೨೦೯ |
| ೦೩ | ಬಾಡಿಗೆ ಮೇಲಿನ ಬಡ್ಡಿ | ೧೦೯೫೬೬೮ | ೧೭೩೮೨೫೨ | ೬೯೪೦೩೨೯ | ೪೨೦೦೯೪ | ೫೦೦೮೪೨೨ | ೧೩೯೫೭೦೫ | ೪೫೪೫೩೫೮ | ೪೫೪೫೩೫೮ |
| ೦೪ | ಸನ್ನದು ಶುಲ್ಕ | ೮೮೪೨೬೬೮ | ೮೯೩೪೦೦ | ೨೦೬೩೧೪೨೫ | ೧೨೮೬೨೮೫೦ | ೮೫೮೯೮೫೦ | ೧೨೮೨೯೭೧೦ | ೯೫೨೮೬೦೦ | ೯೫೨೮೬೦೦ |
| ೦೫ | ಮೂಲಭೂತ ಸೌಲಭ್ಯ ಕರ | – | – | – | – | – | ೧೯೦೦೮೭೭ | ೧೮೮೨೮೭೯ | ೧೮೮೨೮೭೯ |
| ೦೬ | ದಂಡ ಮತ್ತು ಮುಟ್ಟುಗೋಲು | ೧೧೮೭೩೮೫ | ೭೯೫೫೩೫೮ | ೫೮೦೩೭೯ | ೬೯೭೬೨೩೮ | ೨೭೪೮೪೨೪ | ೩೨೫೮೫೭೭ | ೪೯೦೬೪೪ | ೪೯೦೬೪೪ |
| ೦೭ | ಇತರೆ ಬಾಬ್ತುಗಳು | ೫೧೦೧೮೦ | ೧೭೬೧೮೫೩ | ೨೪೧೮೨೬೫೭ | ೨೫೮೮೪೭೭ | ೨೪೪೯೧೬೩ | ೪೫೯೫೦೨ | ೪೦೧೨೬೯ | ೪೦೧೨೬೯ |
| | ಒಟ್ಟು | ೮೮೮೬೪೩೭೬ | ೧೭೦೬೮೨೫೬೮ | ೨೫೦೩೯೫೧೪ | ೨೩೮೭೪೧೫೯೫ | ೨೧೭೪೧೫೨೯೩ | ೨೦೦೧೨೬೪೯೨ | ೨೩೦೦೧೩೯೬೧ | ೨೮೯೦೦೮೩೯ |

**ಮುಂದುವರೆದಿದೆ**

| ಕ್ರ. ಸಂ. | ವಿವರ | ೨೦೦೬-೦೭ | ೨೦೦೭-೦೮ | ೨೦೦೮-೦೯ | ೨೦೦೯-೧೦ | ೨೦೧೦-೧೧ |
|---|---|---|---|---|---|---|
| ೦೧ | ೦೨ | ೧೧ | ೧೨ | ೧೩ | ೧೪ | ೧೫ |
| ೦೧ | ಸಾರಾಯಿ ಶುಲ್ಕ | ೩೧೯೩೦೧೯೨೩ | ೧೨೦೦೮೪೮೧೬ | – | ೧೮೮೫೨೪ | ೨೧೬೩೦೩೫ |
| ೦೨ | ಸಾರಾಯಿ ಬಾಡಿಗೆ | ೩೦೦೨೮೮೨ | ೧೦೦೦೦ | ೧೧೦೪೩ | – | – |
| ೦೩ | ಬಾಡಿಗೆ ಮೇಲಿನ ಬಡ್ಡಿ | ೧೦೬೨೭೮೦೦ | ೨೬೭೯೨೫೦ | ೨೭೬೪೨೭೦೦ | ೪೯೮೪೫೦೦ | ೩೯೪೨೦೦೦ |
| ೦೪ | ಸನ್ನದು ಶುಲ್ಕ | ೧೬೨೧೯೫೦ | ೪೮೬೦೯೩೫ | ೪೧೩೩೭೭೫ | ೬೧೨೯೭೭೯ | ೫೫೪೧೪೫೦ |
| ೦೫ | ಮೂಲಭೂತ ಸೌಲಭ್ಯ ಕರ | ೧೦೬೫೦೩೬ | ೬೬೦೦೬೫ | ೮೯೯೮೩ | ೧೨೦೮೪೮೮ | ೧೮೨೮೦೫೧ |
| ೦೬ | ದಂಡ ಮತ್ತು ಮುಟ್ಟುಗೋಲು | ೩೪೫೫೨೭ | ೧೫೦೮೦ | ೨೯೫೮ | ೯೧೦೩ | ೧೬೪೦ |
| ೦೭ | ಇತರೆ ಬಾಬ್ತುಗಳು | ೩೩೫೯೬೫೧೧೮ | ೧೫೨೪೦೦೧೪೬ | ೩೨೬೯೦೪೯ | ೪೮೫೨೦೩೯೪ | ೪೬೪೭೬೧೭೬ |

*ಮಾಹಿತಿ ಮೂಲ: ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಜ್, ಚಾಮರಾಜನಗರ ಜಿಲ್ಲೆ, ಚಾಮರಾಜನಗರ*

**ಕೋಷ್ಟಕ ೯.೧೭: ಅಬಕಾರಿ ಇಲಾಖೆಯ ಚಾಮರಾಜನಗರ ಜಿಲ್ಲಾ ಕಛೇರಿ ಕಾನೂನಿಗೆ ವಿರೋಧವಾಗಿ ಪಾನಗಳ ಉತ್ಪಾದನೆ, ಮಾರಾಟ ಮತ್ತು ಸಾಗಾಣಿಕೆಯನ್ನು ತಡೆಯಲು ಕೈಗೊಂಡ ಕ್ರಮದ ವಿವರಗಳು ೨೦೦೬-೦೭ರಿಂದ ೨೦೧೦-೧೧**

| ವರ್ಷ | ವಾಹನ | ಭಾರತೀಯ ತಯಾರಿಕೆ ಮದ್ಯ (ಲೀ.ಗಳಲ್ಲಿ) | ಬಿಯರ್ (ಲೀ.ಗಳಲ್ಲಿ) | ರೆಕ್ಟಿಫೈಡ್ ಸ್ಪಿರಿಟ್ (ಲೀ.ಗಳಲ್ಲಿ) | ಸಾರಾಯಿ (ಲೀ.ಗಳಲ್ಲಿ) | ಕಳ್ಳಭಟ್ಟಿ ನಾಶ (ಲೀ.ಗಳಲ್ಲಿ) | ವಾಷ್‌ನಾಶಪಡಿಸಿದ್ದು (ಲೀ.ಗಳಲ್ಲಿ) | ಸೇಂದಿ ನಾಶಪಡಿಸಿದ್ದು | ನಾಶಗೊಳಿಸಿದ ಪದಾರ್ಥಗಳ ಒಟ್ಟು ಮೌಲ್ಯ (₹ ಗಳಲ್ಲಿ) |
|---|---|---|---|---|---|---|---|---|---|
| ೦೧ | ೦೨ | ೦೩ | ೦೪ | ೦೫ | ೦೬ | ೦೭ | ೦೮ | ೦೮ | ೦೯ |
| ೨೦೦೬-೦೭ | ೦೭ | ೪೨ | – | ೬೩೦ | ೩೪ | ೧೨ | ೧೫೧೦ | – | ೧೫೨೨೦೦ |
| ೨೦೦೭-೦೮ | ೧೬ | ೭೧೭೭ | ೧೪೪೮ | ೧೩೯೦ | ೧೬೬೩೨ | ೬೫ | ೨೫೫೩ | – | ೨೬೧೦೦೦ |
| ೨೦೦೮-೦೯ | ೧೨ | ೬೩೬೧.೮೨೨ | ೨೨೬.೨೧೦ | ೧೫೦೦ | ೫೦೦ | – | ೪೫೧೫ | ೪೩೨೫ | – |
| ೨೦೦೯-೧೦ | ೮ | ೧೨೬೬.೮೫ | ೩೨೦೩.೬೬೦ | – | – | – | ೪೮೯೭ | ೬೪೭೦ | – |
| ೨೦೧೦-೧೧ | ೯ | ೧೨೯.೪೮೦ | – | – | – | ೬೪ | ೧೨೩೫ | ೪೨೨೫ | – |
| ಒಟ್ಟು | ೫೨ | ೧೪೯೭೭.೧೫ | ೩೫೭೭.೮೭ | ೩೫೨೦ | ೧೭೧೬೬ | ೧೪೧ | ೧೪೭೧೦ | ೧೫೦೨೦ | ೪೧೩೨೦೦ |

*ಮಾಹಿತಿ ಮೂಲ: ಡೆಪ್ಯೂಟಿ ಕಮೀಷನರ್ ಆಫ್ ಎಕ್ಸೈಸ್ ರವರ ಕಾರ್ಯಾಲಯ, ಚಾಮರಾಜನಗರ ಜಿಲ್ಲೆ .*

## ಮೋಟಾರು ವಾಹನ ತೆರಿಗೆ

ಮೋಟಾರು ವಾಹನಗಳ ಮೇಲೆ ತೆರಿಗೆ ವಿಧಿಸುವ ಪದ್ಧತಿ ೧೯೨೪ರಲ್ಲಿ ಆರಂಭವಾಯಿತು. ಇದು ನೋಂದಣಿ ಫೀ ರೂಪದಲ್ಲಿದ್ದು, ವಾಹನದ ಬಗೆ ಮತ್ತು ಅಶ್ವಶಕ್ತಿಯ ಮೇಲೆ ನಿರ್ಧರಿಸಲ್ಪಡುತ್ತಿತ್ತು. ಮೋಟಾರು ಬಸ್ಸುಗಳು ಮತ್ತು ಟ್ಯಾಕ್ಸಿಕ್ಯಾಬ್‌ಗಳು ೧೯೨೫ರಿಂದ ಹೆಚ್ಚುವರಿ ತೆರಿಗೆಯೊಂದನ್ನು ಪರವಾನಗಿ ಫೀ ಎಂದು ಕೊಡಬೇಕಾಯಿತು ಮತ್ತು ಬಸ್ಸುಗಳ ಸಂಬಂಧದಲ್ಲಿ ಅವುಗಳು ಕ್ರಮಿಸುವ ದೂರಕ್ಕನುಗುಣವಾಗಿ ವ್ಯತ್ಯಾಸವಾಗುತ್ತಿತ್ತು. ಇದಾದ ನಂತರ ಮುನಿಸಿಪಾಲಿಟಿಗಳು ಮತ್ತು ಜಿಲ್ಲಾ ಬೋರ್ಡುಗಳು ವಾಹನಗಳ ಮೇಲೆ ಸುಂಕ (ಟೋಲ್ಸ್) ವಿಧಿಸಲಾರಂಭಿಸಿದವು. ಇದರಿಂದ ಬರುವ ಆದಾಯವನ್ನು ರಸ್ತೆಗಳ ಅಭಿವೃದ್ಧಿಗೆ ವಿನಿಯೋಗಿಸುವುದಾಗಿ ಅವು ಹೇಳಿಕೊಂಡವು.

ಪ್ರಾದೇಶಿಕ ಸಾರಿಗೆ ಕಛೇರಿಯು ೧೯೫೬ರಿಂದ ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಕಾರ್ಯಾರಂಭ ಮಾಡಿತು. ಇದರ ವಿಭಾಗೀಯ ಕಛೇರಿಯು ಸಾರಿಗೆ ಉಪ ಆಯುಕ್ತರ ನಿಯಂತ್ರಣದಲ್ಲಿ ಕಾರ್ಯನಿರ್ವಹಿಸುತ್ತಿದೆ.

ಕರ್ನಾಟಕ ಏಕೀಕರಣವಾದ ವರ್ಷದಲ್ಲಿ ವಿಲೀನಗೊಂಡ ಪ್ರದೇಶಗಳಲ್ಲಿ ಬೇರೆಬೇರೆ ಮೋಟಾರು ವಾಹನ ತೆರಿಗೆ ಕಾನೂನುಗಳು ಜಾರಿಯಲ್ಲಿದ್ದವು. ಇಡೀ ರಾಜ್ಯಕ್ಕೆ ಅನ್ವಯವಾಗುವ ಒಂದು ಏಕರೂಪದ ಮೋಟಾರು ವಾಹನ ತೆರಿಗೆ ಕಾಯ್ದೆಯನ್ನು ೧೯೫೭ರಲ್ಲಿ ಪರಿಚಯಿಸಲಾಯಿತು. ಈ ಕಾಯ್ದೆಯಡಿ ತೆರಿಗೆ ದರಗಳು ಮೋಟಾರು ಸೈಕಲ್ಲುಗಳಾದರೆ ಅಶ್ವಶಕ್ತಿಯ ಮೇಲೆ, ಸರಕು ಸಾಗಣೆ ವಾಹನಗಳಾದರೆ ಅವುಗಳ ಭಾರ

ಹೊರುವ ಸಾಮರ್ಥ್ಯ, ಮೋಟಾರು ಕಾರುಗಳಾದರೆ ಖಾಲಿ ವಾಹನದ ಭಾರ ಮತ್ತು ಸಾರ್ವಜನಿಕ ಸಾರಿಗೆ ವಾಹನವಾದರೆ ಪೀಠಗಳ ಸಂಖ್ಯೆಯ ಮೇಲೆ ನಿರ್ಧಾರವಾಗುತ್ತವೆ. ಮೂರು ತಿಂಗಳಿಗೆ, ಆರು ತಿಂಗಳಿಗೆ ಮತ್ತು ಒಂದು ವರ್ಷದಲ್ಲಿ ಅನ್ವಯಿಸುವಂತೆ ತೆರಿಗೆ ಪಾವತಿಸುವ ಅವಕಾಶವಿದೆ. ಈಗ ವಾಹನದ ಜೀವಮಾನ ತೆರಿಗೆ ಸಹ ಪಾವತಿಸಲು ಅವಕಾಶವಿದೆ.

ಸಾರಿಗೆ ಇಲಾಖೆಯು ಈ ಕೆಳಗೆ ತೋರಿಸಿರುವ ಅಧಿನಿಯಮಗಳು ಮತ್ತು ನಿಯಮಾವಳಿಗಳನ್ನು ಜಾರಿಗೊಳಿಸುತ್ತದೆ:

೧. ಮೈಸೂರು ಮೋಟಾರು ವಾಹನಗಳ ತೆರಿಗೆ ಅಧಿನಿಯಮ, ೧೯೫೭.
೨. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿಯಮಗಳು, ೧೯೫೭.
೩. ಕರ್ನಾಟಕ ಮೋಟಾರು ವಾಹನಗಳ ನಿಯಮಗಳು, ೧೯೬೩.

**ಕೋಷ್ಟಕ ೯.೧೮: ಚಾಮರಾಜನಗರ ಜಿಲ್ಲಾ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಯಿಂದ ೨೦೦೦-೦೧ ರಿಂದ ೨೦೧೦-೧೧ ರವರೆಗೆ ವಿವಿಧ ಬಾಬ್ತುಗಳಲ್ಲಿ ರಾಜಸ್ವ ವಸೂಲಿಗಾಗಿ ನಿಗದಿಪಡಿಸಿದ ಗುರಿ ಹಾಗೂ ಸಾಧನೆ ವಿವರಗಳು (ಲಕ್ಷ ₹ಗಳಲ್ಲಿ)**

| ವರ್ಷ | ನಿಗದಿಯಾಗಿದ್ದ ರಾಜಸ್ವ ಸಂಗ್ರಹಣೆ | ಸಂಗ್ರಹಣೆ | ಶೇಕಡವಾರು |
|---|---|---|---|
| ೨೦೦೦-೦೧ | ೪೨೫ | ೩೪೩.೨೮ | ೮೦.೭ |
| ೨೦೦೧-೦೨ | ೪೪೦ | ೪೧೮.೧೬ | ೯೫.೦೩ |
| ೨೦೦೨-೦೩ | ೪೭೦ | ೪೩೭.೩೬ | ೯೩.೦೫ |
| ೨೦೦೩-೦೪ | ೫೩೦ | ೫೧೩.೧೫ | ೯೬.೦೮ |
| ೨೦೦೪-೦೫ | ೫೧೦ | ೫೧೨.೩೬ | ೧೦೦.೦೪ |
| ೨೦೦೫-೦೬ | ೫೫೭ | ೩೮೭.೩೩ | ೧೦೫.೪೪ |
| ೨೦೦೬-೦೭ | ೬೩೯ | ೬೭೫.೦೮ | ೧೦೫.೬೦ |
| ೨೦೦೭-೦೮ | ೭೬೭ | ೮೦೫.೫೪ | ೧೦೫.೦೨ |
| ೨೦೦೮-೦೯ | ೯೬೯ | ೭೯೦.೯೬ | ೮೧.೬೨ |
| ೨೦೦೯-೧೦ | ೮೩೭ | ೯೨೮.೧೫ | ೧೧೦.೮೯ |
| ೨೦೧೦-೧೧ | ೧೦೦೦ | ೧೨೪೫.೧೯ | ೧೦೩.೪೪ |

*ಮಾಹಿತಿ ಮೂಲ: ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಚಾಮರಾಜನಗರ*

## ವಿದ್ಯುತ್ ತೆರಿಗೆ

ವಿದ್ಯುಚ್ಛಕ್ತಿ ಬಳಕೆಯ ಮೇಲೆ ತೆರಿಗೆಯೊಂದನ್ನು ಜೂನ್ ೧೯೫೦ ರಿಂದ ವಿಧಿಸಲು ಪ್ರಾರಂಭಿಸಲಾಯಿತು. ಟ್ಯಾರಿಫ್ ದರಗಳ ಮೇಲೆ ಶೇಕಡಾ ೧೦ರಷ್ಟು ತೆರಿಗೆಯನ್ನು ಈ ಕೆಳಕಾಣಿಸಲಾಗಿರುವ ವರ್ಗಗಳ ವಿದ್ಯುತ್ ಮೇಲೆ ವಿಧಿಸಲಾಗಿದೆ.

೧. ನಗರಗಳು, ಚಿಕ್ಕ ಮುನಿಸಿಪಾಲಿಟಿಗಳು ಮತ್ತು ಗ್ರಾಮಪಂಚಾಯತಿಗಳು ಒದಗಿಸುವ ಬೀದಿ ದೀಪಗಳು.

೨. ಹಿಟ್ಟಿನ ಗಿರಣಿಗಳು, ಫೋಟೋ ಸ್ಟುಡಿಯೋಗಳು ಮತ್ತು ಇತರೆ ಕೈಗಾರಿಕೆಗಳು

೩. ಜವಳಿ ಗಿರಣಿಗಳು ಮತ್ತು ಇತರೆ ಉದ್ಯಮಗಳ ಮೇಲೆ ಹಗಲು ಮತ್ತು ರಾತ್ರಿ ವೇಳೆಗಳಿಗೆ ಪ್ರತ್ಯೇಕ ದರಗಳು.

೪. ಬೃಹತ್ ಕೈಗಾರಿಕೆಗಳಿಗೆ ಪ್ರತ್ಯೇಕ ಏರ್ಪಾಟುಗಳ ಮೂಲಕ ಸರಬರಾಜಾಗುವ ವಿದ್ಯುತ್.

ವಿದ್ಯುತ್ ತೆರಿಗೆಯನ್ನು ದಿನಾಂಕ ೧-೪-೧೯೫೪ರಿಂದ ಶೇಕಡಾ ೨೦ಕ್ಕೇರಿಸಲಾಯಿತು ಮತ್ತು ಪ್ರತಿ ಯೂನಿಟ್ಟಿಗೆ ನಾಲ್ಕು ಪೈಸೆಗಳ ಗರಿಷ್ಠ ದರ ಇತ್ತು. ವಿಲೀನಗೊಂಡ ಪ್ರದೇಶಗಳಲ್ಲಿ ಪ್ರತ್ಯೇಕ ದರಗಳು ಚಾಲ್ತಿಯಲ್ಲಿದ್ದವು. ಹಳೇ ಮೈಸೂರು ಸಂಸ್ಥಾನದಲ್ಲಿ ೧೨ ಯೂನಿಟ್ಟುಗಳಿಗಿಂತ ಕಡಿಮೆ ವಿದ್ಯುತ್ ಬಳಸುವವರಿಗೆ ತೆರಿಗೆಯಿಂದ ವಿನಾಯಿತಿ ಇತ್ತು. ಉಳಿದವರು ಯೂನಿಟ್ಟಿಗೆ ಅರ್ಧಾಣೆ ದರದಲ್ಲಿ ವಿದ್ಯುತ್ ದೀಪಗಳನ್ನು ಉರಿಸಲು ಮತ್ತು ಕಾಲಾಣೆ ದರದಲ್ಲಿ ಇನ್ನಿತರ ರೀತಿಯ ಉಪಯೋಗಗಳಿಗೆ ತೆರಿಗೆ ಪಾವತಿಸಬೇಕಿತ್ತು.

ಮೈಸೂರು ವಿದ್ಯುಚ್ಛಕ್ತಿ (ಬಳಕೆ ಮೇಲಿನ ತೆರಿಗೆ) ಅಧಿನಿಯಮ, ೧೯೫೯ರಂತೆ ವಿವಿಧ ತೆರಿಗೆ ದರಗಳ ಬದಲಾಗಿ ಏಕರೂಪದ ಒಂದು ದರ ಪಟ್ಟಿಯನ್ನು ಜಾರಿಗೊಳಿಸಲಾಯಿತು. ಬಳಸಿದ ಪ್ರತೀ ಯೂನಿಟ್ ವಿದ್ಯುತ್ತಿನ ಮೇಲೆ ಆರು ಪೈಸೆಗಳ ದರದಲ್ಲಿ ತೆರಿಗೆ ವಿಧಿಸಲು ಈ ಅಧಿನಿಯಮ ಅವಕಾಶ ಮಾಡಿಕೊಟ್ಟಿತು. ಏಪ್ರಿಲ್ ೧೯೭೦ರ ಪೂರ್ವದಲ್ಲಿ ಈ ದರ ಯೂನಿಟ್ಟಿಗೆ ಗರಿಷ್ಠ ಮೂರು ಪೈಸೆಗಳಾಗಿತ್ತು. ಬೇರೆ ಬೇರೆ ವರ್ಗದ ಬಳಕೆದಾರರ ಮೇಲೆ ಬೇರೆ ಬೇರೆ ದರದಲ್ಲಿ ತೆರಿಗೆ ವಿಧಿಸಲಾಗುತ್ತಿದೆ. ಕೆಲವು ಕಡೆ ಗೃಹೇತರ ಬಳಕೆದಾರರಿಗೆ ಸರಬರಾಜಾಗುವ ವಿದ್ಯುತ್ತಿಗೆ ಅವರೊಡನೆ ಕ.ವಿ.ಸ.ನಿ.ನಿ. ಕರಾರಿನಲ್ಲಿ ಒಪ್ಪಿಕೊಂಡಿರುವ ಸೂತ್ರದನ್ವಯ ತೆರಿಗೆ ದರವನ್ನು ವಸೂಲ್ಮಾಡಲಾಗುತ್ತದೆ. ಆಗ ಮೀಟರಿನ ಪ್ರಕಾರ ಸರಬರಾಜಾಗುವ ವಿದ್ಯುತ್ತಿನ ಪ್ರಮಾಣವನ್ನು ಲೆಕ್ಕಹಾಕಲಾಗುವುದಿಲ್ಲ.

ವಿದ್ಯುತ್ ಕ್ಷೇತ್ರದಲ್ಲಿ ಕೆಲವು ಮೂಲಭೂತ ಹಾಗೂ ತೀವ್ರತರ ಸುಧಾರಣೆಗಳನ್ನು ಜಾರಿಗೊಳಿಸಲಿಕ್ಕಾಗಿ ಸರ್ಕಾರವು ೧೯೯೯ರಲ್ಲಿ ಒಂದು ಹೊಸ ಶಾಸನವನ್ನು ಮಾಡಿತು. ಇದರಂತೆ ಕರ್ನಾಟಕ ವಿದ್ಯುತ್ ಸರಬರಾಜು ನಿಗಮ ನಿಯಮಿತ ಎಂಬುದಾಗಿ ಮಾರ್ಪಾಟುಹೊಂದಿತು. ಚಾಮರಾಜನಗರ ಜಿಲ್ಲೆಯಲ್ಲಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಚಾ.ವಿ.ಸ.ನಿ.ನಿ.) ವಿದ್ಯುತ್ ಸರಬರಾಜಿನ ಹೊಣೆ ನಿರ್ವಹಿಸುತ್ತಿದೆ.

**ಕೋಷ್ಟಕ ೯.೧೯: ಚಾಮರಾಜನಗರ ಜಿಲ್ಲೆಯಲ್ಲಿ ೧೯೯೮-೯೯ ರಿಂದ ೨೦೧೦-೧೧ ರಲ್ಲಿದ್ದಂತೆ ಪ್ರವರ್ಗವಾರು ವಿದ್ಯುತ್ ರಾಜಸ್ವ ವಸೂಲಾತಿ ವಿವರ (ಯೂನಿಟ್ಸ್ ಮತ್ತು ₹ಗಳಲ್ಲಿ)**

| ವಿವರ | ೧೯೯೮-೯೯ | ೧೯೯೯-೨೦೦೦ | ೨೦೦೦-೦೧ | ೨೦೦೧-೦೨ | ೨೦೦೨-೦೩ | ೨೦೦೩-೦೪ | ೨೦೦೪-೦೫ | ೨೦೦೫-೦೬ | ೨೦೦೬-೦೭ | ೨೦೦೭-೦೮ |
|---|---|---|---|---|---|---|---|---|---|---|
| ಗೃಹಬಳಕೆ | ೪೦೮೬೧೫೩೭ | ೩೯೬೭೩೪೦೩ | ೩೬೩೪೫೩೫೮ | ೪೪೫೭೬೩೩೦ | ೪೧೬೧೨೭೨೯ | ೫೨೩೬೦೬೦೯ | ೯೬೮೫೬೯೫೩ | ೬೬೦೫೭೬೧೩ | ೧೨೨೯೪೪೨೩೬ | ೧೧೭೨೧೩೮೬೭ |
| ಸರ್ವ ವಿದ್ಯುತ್ | ೧೫೩೫೨೮೦೪ | ೧೫೦೨೪೬೫೩ | ೧೩೩೪೪೮೭೨ | ೧೬೪೦೮೫೬೦ | ೨೨೭೧೩೧೪೨ | ೧೮೯೬೯೯೯೨ | ೧೯೬೭೭೬೮೬ | ೩೧೫೬೯೭೧೩ | | |
| ವಾಣಿಜ್ಯ | ೨೨೮೦೭೧೧೭ | ೨೫೯೧೧೦೦೨ | ೨೫೨೩೫೬೯೮ | ೨೪೭೮೬೬೮೧ | ೨೪೦೩೭೪೨೫ | ೩೫೫೩೧೪೦೦ | ೩೬೯೫೨೨೬೬ | ೪೦೩೬೭೭೫೨ | ೪೩೯೩೩೬೫೪ | ೫೦೪೮೬೮೦೭ |
| ಕೈಗಾರಿಕೆ | ೩೮೧೩೮೪೮ | ೩೫೮೬೩೭೮೦ | ೨೩೯೬೯೨೫೯ | ೨೬೫೯೨೯೪೮ | ೨೨೬೩೫೮೫೩ | ೨೫೨೨೨೦೩೮ | ೩೦೨೨೭೦೫೭ | ೩೦೭೧೮೦೦೮ | ೩೦೦೩೨೯೦೦ | ೩೧೨೬೮೧೩೧ |
| ಕುಡಿಯುವ ನೀರು | ೫೧೦೪೯೨೩ | ೩೫೬೫೯೮೮ | ೩೦೩೪೨೮೫೯ | ೯೮೨೮೨೫೪ | ೧೦೮೮೧೨೯೩ | ೭೧೨೧೦೧೫ | ೧೭೬೨೫೫೩೦೭ | ೨೨೯೮೩೪೭೦ | ೨೬೮೭೩೨೨೦ | ೨೩೮೪೯೧೨೬ |
| ನೀರಾವರಿ ಐ.ಪಿ. ಸೆಟ್ಟುಗಳು | ೨೯೫೨೨೯೯೬ | ೩೧೦೪೦೧೩೯ | ೩೪೫೮೯೩೨೩ | ೧೨೪೨೮೭೮೧ | ೧೫೩೬೮೯೧೭ | ೩೩೪೭೩೭೩೩ | ೫೭೯೮೧೨೬೫ | ೭೫೪೪೧೪ | ೩೧೧೧೧೨೯ | ೩೮೦೪೪೪೧೮ |
| ಬೀದಿ ದೀಪ | ೪೨೧೩೧೫೬ | ೨೩೯೨೫೬೦ | ೧೩೩೬೦೮೩೭ | ೪೨೯೩೪೩೯ | ೮೨೦೫೩೮೧ | ೧೩೩೨೬೪೭೬ | ೫೧೦೫೧೧೦೧ | ೩೩೪೯೧೮೫ | ೧೫೭೬೬೪೧೬ | ೧೫೦೭೪೬೯೬ |
| ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | ೨೦೫೮೨೦೫ | ೭೪೮೯೧೯.೦೦ | ೧೪೨೩೮೯೭ | ೧೧೯೯೯೪೮ | ೪೭೨೩೨೫೨ | ೯೪೫೭೪ | ೧೮೦೯೮೮೨೯ | ೩೮೮೯೩೪೦ | ೨೫೨೯೭೬ | ೫೬೮೯೬೮ |
| ಎಚ್.ಟಿ. | ೧೮೭೨೬೦೬ | ೨೦೧೩೬೩೫೨ | ೨೫೬೫೮೪೬ | ೨೨೩೫೯೫೨ | ೧೩೪೦೧೦೪೯ | ೧೫೬೮೧೭೫೧ | ೨೮೬೮೨೬೦೮ | ೨೮೪೩೮೮೦೭ | ೪೯೮೯೬೦೦೮ | ೪೪೦೬೭೭೦೬ |
| ಒಟ್ಟು (ಬೀದಿದೀಪ ಹೊರತು ಪಡಿಸಿ) | ೧೭೨೬೩೮೬೩೬ | ೧೭೮೯೬೪೨೩೬ | ೧೯೦೯೦೭೩೫ | ೧೫೮೧೮೧೦೩೪ | ೧೫೫೩೭೩೬೬೦ | ೫೧೭೨೧೫೨೧ | ೪೬೪೭೩೯೭೧ | ೨೨೪೭೭೯೧೧೭ | ೨೭೯೩೨೧೧೩ | ೩೦೫೪೯೯೦೨೩ |

*ಮುಂದುವರೆದಿದೆ*

| ವಿವರ | ೨೦೦೮-೦೯ | ೨೦೦೯-೧೦ | ೨೦೧೦-೧೧ |
|---|---|---|---|
| ಗೃಹಬಳಕೆ | ೧೧೮೯೪೯೧೭೩ | ೬೨೦೭೨೯೧೮ | ೭೦೯೭೭೭೫೭ |
| ಸರ್ವ ವಿದ್ಯುತ್ | | | |
| ವಾಣಿಜ್ಯ | ೫೮೩೮೫೨೩೪ | ೩೭೩೫೭೩೫೮ | ೫೦೦೫೫೧೧೭ |
| ಕೈಗಾರಿಕೆ | ೩೪೨೪೧೦೮೦ | ೧೭೧೦೬೧೨೫ | ೧೬೮೨೩೭೮೧ |
| ಕುಡಿಯುವ ನೀರು | ೫೪೭೫೧೬೦೭ | ೧೭೫೫೬೮೯೪ | ೧೪೯೦೯೮೨೭ |
| ನೀರಾವರಿ ಐ.ಪಿ.ಸೆಟ್ಟುಗಳು | ೭೦೪೪೦೦೩೬ | ೩೦೮೩೩೫೨೬೬ | ೮೩೨೭೩೪೨೯೫ |
| ಬೀದಿ ದೀಪ | ೪೫೦೦೪೯೩೩ | ೧೨೬೬೭೪೫೧ | ೧೪೪೮೧೩೦೧ |
| ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | ೨೫೬೫೭೩೪೦ | ೧೩೮೬೧೭೧೧ | ೩೫೮೫೮೪೧೦ |
| ಎಚ್.ಟಿ. | ೫೦೬೬೫೮೬೯ | ೪೩೫೦೮೬೯೧ | ೫೫೩೪೦೨೧೬ |
| **ಒಟ್ಟು (ಬೀದಿ ಹೊರತುಪಡಿಸಿ)** | **೪೧೩೦೯೦೩೩೯** | **೪೯೯೭೯೮೯೬೩** | **೧೦೭೬೬೯೯೪೦೩** |

*ಷರಾ: ೨೦೦೯-೧೦ನೇ ಸಾಲಿನಿಂದ ಕೊಳ್ಳೇಗಾಲ ವಿಭಾಗವು ಬೇರ್ಪಟ್ಟಿರುತ್ತದೆ.*

**ಕೊಳ್ಳೇಗಾಲ ವಿಭಾಗಕ್ಕೆ ಸಂಬಂಧಿಸಿದಂತೆ ವಿದ್ಯುತ್ ರಾಜಸ್ವ ವಸೂಲಾತಿ ವಿವರ (೨೦೦೯-೧೦ರಿಂದ)**

| ವಿವರ | ೨೦೦೯-೧೦ | ೨೦೧೦-೧೧ | ೨೦೧೧-೧೨ |
|---|---|---|---|
| | **ವಸೂಲಾತಿ** | **ವಸೂಲಾತಿ** | **ವಸೂಲಾತಿ** |
| ಗೃಹಬಳಕೆ, ಸರ್ವ ವಿದ್ಯುತ್. | ೫೭೭೧೨೯೯ | ೬೪೨೧೪೩೩೮ | ೭೫೮೭೦೪೧೨ |
| ವಾಣಿಜ್ಯ | ೩೪೦೬೨೮೯೦ | ೪೪೨೩೭೬೩೮ | ೫೧೩೯೭೧೬೯ |
| ಕೈಗಾರಿಕೆ | ೧೭೬೭೭೪೨೯ | ೧೬೫೬೭೭೨೨ | ೧೯೯೬೮೩೮೨ |
| ಕುಡಿಯುವ ನೀರು | ೧೮೨೨೧೩೨೦ | ೧೭೫೦೪೯೯೩ | ೧೭೨೨೧೦೨೦ |
| ನೀರಾವರಿ ಐ.ಪಿ.ಸೆಟ್ಟುಗಳು | ೧೮೨೮೫೭೪೬೨ | ೪೮೭೭೪೮೭೮೧ | ೬೧೮೭೬೧೮೭೮ |
| ಬೀದಿ ದೀಪ | ೫೮೪೭೭೩೮ | ೯೨೧೮೩೧೦ | ೬೯೬೩೧೫೯ |
| ಭಾಗ್ಯ ಜ್ಯೋತಿ/ ಕುಟೀರ ಜ್ಯೋತಿ | ೧೧೧೪೨೮೬೯ | ೨೧೦೬೫೧೯ | ೧೨೫೪೧೧೮೦ |
| ಎಚ್.ಟಿ. | ೧೧೫೭೩೮೧೪ | ೧೩೮೬೦೩೫೩ | ೧೮೩೯೯೭೪ |

*ಮಾಹಿತಿ ಮೂಲ: ಕಾರ್ಯನಿರ್ವಾಹಕ ಇಂಜಿನಿಯರ್ (ವಿ),ಚಾವಿಸನಿನಿ, ಕಾ ಮತ್ತು ಪಾ ವಿಭಾಗ, ಕೊಳ್ಳೇಗಾಲ*

## ಅರಣ್ಯ ಅಭಿವೃದ್ಧಿ ತೆರಿಗೆ

ಅರಣ್ಯಗಳು ರಾಷ್ಟ್ರದ ಮುಖ್ಯ ಆಸ್ತಿಗಳಾಗಿದ್ದು, ಸತತವಾಗಿ ಏರುತ್ತಾ ಹೋಗುವ ಉತ್ಪಾದನೆ ತತ್ವದ ಆಧಾರದ ಮೇಲೆ ನಿರ್ವಹಿಸಲ್ಪಡುತ್ತವೆ. ಈ ಕ್ಷೇತ್ರದಲ್ಲಿ ಬಂಡವಾಳ ಹೂಡಿಕೆಯನ್ನು ಹೆಚ್ಚಿಸಲು ಡಿಸೆಂಬರ್ ೧೯೭೫ರಿಂದ ರಾಜ್ಯ ಸರ್ಕಾರವು ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಜಾರಿ ಮಾಡಿತು; ಇದರಿಂದ ಸಂಗ್ರಹವಾಗುವ ಮೊತ್ತವನ್ನು ಅರಣ್ಯಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಮಾತ್ರ ವಿನಿಯೋಗಿಸಬೇಕೆಂದು ಕಟ್ಟುಪಾಡು ಮಾಡಿತು. ಅರಣ್ಯ ಅಭಿವೃದ್ಧಿ ತೆರಿಗೆಯನ್ನು ಕರ್ನಾಟಕ ಅರಣ್ಯ ಅಧಿನಿಯಮದ ಪ್ರಕಾರವೇ ವಿಧಿಸಲಾಗುತ್ತದೆ. ಅರಣ್ಯೋತ್ಪನ್ನಗಳಾದ ಚೌಬೀನೆ, ಸೌದೆ, ಇದ್ದಿಲು, ಶ್ರೀಗಂಧ, ಬಿದಿರು, ಕಿರು ಅರಣ್ಯೋತ್ಪನ್ನಗಳು ಮುಂತಾದವುಗಳ ಮೇಲೆ ವಿಧಿಸಲಾಗುತ್ತದೆ. ಪ್ರಾರಂಭದಲ್ಲಿ ಈ ತೆರಿಗೆಯನ್ನು ಶೇಕಡಾ ೫ರ ದರದಲ್ಲಿ ವಸೂಲ್ಮಾಡುತ್ತಿದ್ದು ದಿನಾಂಕ ೧–೪–೧೯೮೦ರಿಂದ ಶೇಕಡಾ ೮ರ ದರದಲ್ಲಿ ವಸೂಲ್ಮಾಡಲಾಗುತ್ತಿದೆ.

ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ಜಾರಿಗೊಳಿಸಲಾಗುತ್ತಿರುವ ಅಧಿನಿಯಮಗಳು ಮತ್ತು ನಿಯಮಾವಳಿಗಳು ಕೆಳಗೆ ಕಾಣಿಸಲ್ಪಟ್ಟಿವೆ:

೧. ಕರ್ನಾಟಕ ಅರಣ್ಯ ಅಧಿನಿಯಮ, ೧೯೬೩ ಮತ್ತು ನಿಯಮಗಳು, ೧೯೬೯

೨. ಕರ್ನಾಟಕ ವನ್ಯಜೀವಿ ಸಂರಕ್ಷಣಾ ಅಧಿನಿಯಮ, ೧೯೭೨

೩. ಕರ್ನಾಟಕ ಅರಣ್ಯ ಸಂಹಿತೆ, ೧೯೭೬.

೪. ಕರ್ನಾಟಕ ವೃಕ್ಷ ಸಂರಕ್ಷಣೆ ಅಧಿನಿಯಮ, ೧೯೭೬

೫. ಅರಣ್ಯ ಸಂರಕ್ಷಣಾ ಅಧಿನಿಯಮ, ೧೯೮೦.

೬. ಕರ್ನಾಟಕ ಅರಣ್ಯ ಲೆಕ್ಕ ಸಂಹಿತೆ (ತಿದ್ದುಪಡಿಗಳೊಂದಿಗೆ), ೧೯೮೮

೭. ಕರ್ನಾಟಕ ಅರಣ್ಯ ಕೈಪಿಡಿ.

**ಕೋಷ್ಟಕ ೯.೨೦: ಚಾಮರಾಜನಗರ ಜಿಲ್ಲೆಯಲ್ಲಿ ಅರಣ್ಯ ಇಲಾಖೆಯು ೨೦೦೧–೦೨ ರಿಂದ ೨೦೧೦–೧೧ರ ಅವಧಿಯಲ್ಲಿ ವಿವಿಧ ಬಾಬ್ತುಗಳಿಂದ ಸಂಗ್ರಹಿಸಿದ ರಾಜಸ್ವದ ವಿವರಗಳು (₹ ಗಳಲ್ಲಿ)**

| ತಾಲೂಕು | ವರ್ಷ | ೦೯–ಅರಣ್ಯ ಉತ್ಪನ್ನಗಳು | ನೀಲಗಿರಿ ನೆಡುತೋಪುಗಳು | ೦೨–ಉರುವಲು ಮತ್ತು ಇದ್ದಿಲು | ೦೫–ಇತರೆ ಕಿರು ಅರಣ್ಯ ಉತ್ಪನ್ನಗಳು | ೦೨–ದಂಡ ಮತ್ತು ಮುಟ್ಟುಗೋಲು | ೦೫–ಅವಧಿ ಮೀರಿ ಬಾಕಿ ಉಳಿದ ರಾಜಸ್ವ (ಅರಣ್ಯ ಅಭಿವೃದ್ಧಿ ತೆರಿಗೆ) | ಇತರೆ ಜಮೆಗಳು |
|---|---|---|---|---|---|---|---|---|
| ೦೧ | ೦೨ | ೦೩ | ೦೪ | ೦೫ | ೦೬ | ೦೭ | ೦೮ | ೦೯ |
| ಚಾಮರಾಜನಗರ | ೨೦೦೧–೦೨ | ೨೫೪೯೧೩ | – | ೩೮೬೬೭ | ೧೯೪೮೧ | ೧೨೯೫೫೦ | – | ೩೩೮೧೫ |
| | ೨೦೦೨–೦೩ | ೨೫೩೦೦೦ | – | ೩೮೬೦೦ | ೧೯೪೦೦ | ೧೨೯೬೦೦ | – | ೩೩೮೦೦ |
| | ೨೦೦೩–೦೪ | ೫೪೨೮೦೭ | – | ೪೮೭೩೪ | ೩೯೮೩ | ೧೫೯೦೭೩ | ೧೪೮೬ | ೨೨೯೬೨೦ |
| | ೨೦೦೪–೦೫ | ೧೫೪೫೦ | – | – | ೧೨೩೫೦ | ೨೦೦೩೫೦ | – | ೨೪೧೪೨೦ |
| | ೨೦೦೫–೦೬ | – | – | ೪೭೦೫೦ | – | ೧೨೨೬೮೯ | – | ೨೮೪೭೯೫ |
| | ೨೦೦೬–೦೭ | ೨೨೧೦೯ | – | ೧೬೯೪೦ | – | ೬೫೫೪೩ | – | ೨೮೦೭೫೦ |
| | ೨೦೦೭–೦೮ | ೧೨೪೮೬೩ | – | – | ೨೫೩೦೦ | – | – | ೧೯೯೦೪೯೬ |
| | ೨೦೦೮–೦೯ | ೪೦೦೦ | – | ೨೯೪೪೦ | ೧೪೦೦೦ | – | – | ೬೧೬೪೪೪ |
| | ೨೦೦೯–೧೦ | ೧೦೯೩೬೭ | – | ೫೬೦೫ | ೧೧೯೭೫ | ೧೩೮೭೦೨೫ | – | ೬೨೪೭೩೧ |
| | ೨೦೧೦–೧೧ | ೧೨೮೫೩೮ | – | ೧೫೩೮೫೦ | – | ೧೨೮೭೮೮೫ | – | ೫೫೫೮೮೬ |
| ಯಳಂದೂರು | ೨೦೦೧–೦೨ | – | – | – | – | – | – | – |
| | ೨೦೦೨–೦೩ | – | – | – | – | – | – | – |
| | ೨೦೦೩–೦೪ | – | – | – | – | – | – | – |
| | ೨೦೦೪–೦೫ | – | – | – | – | – | – | – |
| | ೨೦೦೫–೦೬ | – | – | – | – | – | – | – |
| | ೨೦೦೬–೦೭ | – | – | – | – | – | – | – |
| | ೨೦೦೭–೦೮ | – | – | – | – | – | – | – |
| | ೨೦೦೮–೦೯ | – | – | – | – | – | – | – |
| | ೨೦೦೯–೧೦ | – | – | – | – | – | – | – |
| | ೨೦೧೦–೧೧ | – | – | – | – | – | – | – |

ಮುಂದುವರೆದಿದೆ

| ತಾಲೂಕು | ವರ್ಷ | ೦೯-ಅರಣ್ಯ ಉತ್ಪನ್ನಗಳು | ನೀಲಗಿರಿ ನೆಡುತೋಪುಗಳು | ೦೨-ಉರುವಲು ಮತ್ತು ಇದ್ದಿಲು | ೦೫-ಇತರೆ ಕಿರು ಅರಣ್ಯ ಉತ್ಪನ್ನಗಳು | ೦೭-ದಂಡ ಮತ್ತು ಮುಟ್ಟುಗೋಲು | ೦೫-ಅವಧಿ ಮೀರಿ ಬಾಕಿ ಉಳಿದ ರಾಜಸ್ವ (ಅರಣ್ಯ ಅಭಿವೃದ್ಧಿ ತೆರಿಗೆ) | ಇತರೆ ಜಮೆಗಳು |
|---|---|---|---|---|---|---|---|---|
| ೦೧ | ೦೨ | ೦೩ | ೦೪ | ೦೫ | ೦೬ | ೦೭ | ೦೯ | ೦೯ |
| ಕೊಳ್ಳೇಗಾಲ | ೨೦೦೧–೦೨ | ೨೨೫೯೯೪ | ೪೩೦೦ | ೪೫೮೮೫೩ | ೪೯೪೧೮೬ | ೪೫೧೫೪ | – | ೧೧೧೨೫೫೪ |
| | ೨೦೦೨–೦೩ | ೨೮೬೮೭೩ | – | ೨೭೫೯೩೩ | ೧೯೭೭೦ | ೧೪೫೦೩ | – | ೮೯೨೪೧೪ |
| | ೨೦೦೩–೦೪ | ೩೦೧೮೯೧ | – | ೩೩೮೯೧೦ | ೧೮೭೯೧೯ | ೨೦೨೭೫ | ೧೩೮೭ | ೨೫೫೩೩೬೩ |
| | ೨೦೦೪–೦೫ | ೨೨೭೦೮೨ | – | ೧೬೮೩೯ | ೭೮೮೪೨೦ | ೨೨೫೧೩ | – | ೧೫೩೭೫೨೯ |
| | ೨೦೦೫–೦೬ | ೧೭೬೧೩೫ | – | – | ೮೫೭೮೦೫ | ೧೬೮೧೬ | – | ೧೨೬೦೨೭೫ |
| | ೨೦೦೬–೦೭ | ೬೭೩೯೧ | – | – | ೨೦೦ | – | – | ೨೩೫೭೭೬೭ |
| | ೨೦೦೭–೦೮ | ೪೮೪೨೩ | – | ೨೨೭೭೦೧ | – | ೫೧೫ | – | ೫೦೩೯೫೧೮ |
| | ೨೦೦೮–೦೯ | ೧೧೦೭೧೭ | – | ೧೦೫೫೦ | ೨೪೨೦೦ | – | ೮೨೪೮ | ೬೮೩೮೯ |
| | ೨೦೦೯–೧೦ | ೩೨೭೪೮೭ | – | ೨೫೪೪೪೪ | ೩೧೦ | – | ೪೨೫೨೮ | ೮೨೯೭೧೪ |
| | ೨೦೧೦–೧೧ | ೮೬೫೪೫೨ | – | ೨೫೩೦೦ | – | – | ೨೯೫೭೧ | ೩೬೯೩೩೩ |
| ಗುಂಡ್ಲುಪೇಟೆ | ೨೦೦೧–೦೨ | – | – | – | – | – | – | – |
| | ೨೦೦೨–೦೩ | ೨೭೦೦ | – | – | ೧೨೭೭೦ | – | – | ೩೧೫೦ |
| | ೨೦೦೩–೦೪ | ೧೯೩೧೩ | – | ೪೮೫೫ | ೨೭೦೧ | ೩ | – | ೪೪೫೬೬ |
| | ೨೦೦೪–೦೫ | ೧೦೨೮೮೬ | – | ೩೪೦೦ | ೧೬೭೨೫೦ | ೭೪ | – | ೫೫೯೧೨ |
| | ೨೦೦೫–೦೬ | ೧೮೦೭೪ | – | ೪೭೮೦ | ೬೯೫೧೨೫ | ೫೦೦೦ | – | ೪೪೭೪೯ |
| | ೨೦೦೬–೦೭ | ೪೫೩೧೫ | – | – | – | – | – | ೫೮೬೭೨ |
| | ೨೦೦೭–೦೮ | ೭೦೯೩೫ | – | – | – | – | – | ೭೮೮೨೮ |
| | ೨೦೦೮–೦೯ | ೮೦೪೯೨ | – | ೧೬೨೦೯ | ೧೭೦೮೦ | – | ೨೧೨೫೬ | ೭೭೩೪೮ |
| | ೨೦೦೯–೧೦ | ೨೦೧೨೩೬ | – | ೩೭೪೨೫ | – | – | ೨೨೫೫೭ | ೬೪೯೮೧ |
| | ೨೦೧೦–೧೧ | ೧೬೮೭೪ | – | ೭೬೦೦೦ | – | – | ೫೧೭೩೩ | ೫೪೨೦೬ |

*ಮಾಹಿತಿ ಮೂಲ: ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಾಮರಾಜನಗರ*

## ವಾಣಿಜ್ಯ ತೆರಿಗೆ

ವಾಣಿಜ್ಯ ತೆರಿಗೆಗಳ ಇಲಾಖೆಯು ಚಾಮರಾಜನಗರ ಜಿಲ್ಲೆಯಲ್ಲಿ ರಾಜ್ಯದ ಬೊಕ್ಕಸಕ್ಕೆ ಗಣನೀಯ ಪ್ರಮಾಣದ ಆದಾಯ ತರುವ ಈ ಕೆಳಗಿನ ಕಾಯ್ದೆಗಳನ್ನು ಜಾರಿಗೊಳಿಸುತ್ತದೆ:

೧) ಕೇಂದ್ರ ಮಾರಾಟ ತೆರಿಗೆ ಕಾಯ್ದೆ, ೧೯೫೬

೨) ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ, ೧೯೫೭

೩) ಕರ್ನಾಟಕ ಕೃಷಿ ವರಮಾನ ತೆರಿಗೆ ಕಾಯ್ದೆ, ೧೯೫೭.

೪) ಕರ್ನಾಟಕ ಮನರಂಜನಾ ಕಾಯ್ದೆ, ೧೯೫೮

೫) ಕರ್ನಾಟಕ ವೃತ್ತಿ, ವ್ಯಾಪಾರ, ಕಸುಬು ಮತ್ತು ಉದ್ಯೋಗ ಕಾಯ್ದೆ, ೧೯೭೬

೬) ಕರ್ನಾಟಕ ಭೋಗ ಸೌಲಭ್ಯ (ಹೋಟೆಲು ಮತ್ತು ವಸತಿಗೃಹ) ತೆರಿಗೆ ಕಾಯ್ದೆ, ೧೯೭೬

೭) ಮೌಲ್ಯವರ್ಧಿತ ತೆರಿಗೆ (**VAT**) ಕಾಯ್ದೆ, ೨೦೦೫.

## ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣದ ಕಾಯ್ದೆ ೧೯೭೬ರಂತೆ, ಹಿಂದಿನ (ಅ) ಕರ್ನಾಟಕ ಕಂದಾಯ ಮೇಲ್ಮನವಿ ನ್ಯಾಯಾಧಿಕರಣ, (ಆ) ಕರ್ನಾಟಕ ಮಾರಾಟ ತೆರಿಗೆ ಮೇಲ್ಮನವಿ ನ್ಯಾಯಾಧಿಕರಣ, ಮತ್ತು (ಇ) ಕರ್ನಾಟಕ ಸಹಕಾರ ಮೇಲ್ಮನವಿ ನ್ಯಾಯಾಧಿಕರಣ ಈ ಮೂರು ನ್ಯಾಯಾಧಿಕರಣಗಳನ್ನು ಒಟ್ಟುಗೂಡಿಸಿ ದಿನಾಂಕ ೦೧–೦೧–೧೯೭೬ರಿಂದ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವನ್ನು ರಚಿಸಲಾಯಿತು. ಇದರಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, ೧೯೬೪, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ೧೯೫೯, ಕರ್ನಾಟಕ ಮಾರಾಟ ತೆರಿಗೆ ಕಾಯ್ದೆ ೧೯೫೮, ಮತ್ತು ಕರ್ನಾಟಕ ಪ್ರವೇಶ ತೆರಿಗೆ ಕಾಯ್ದೆಗಳಡಿಯಲ್ಲಿ ಕೆಳ ನ್ಯಾಯಾಲಯದ ಆದೇಶಗಳ ವಿರುದ್ಧ ಮೇಲ್ಮನವಿಗಳನ್ನು ಇದು ಸ್ವೀಕರಿಸುತ್ತದೆ. ಈ ನ್ಯಾಯಾಧಿಕರಣವು ಕಂದಾಯ ಇಲಾಖೆ, ಸಹಕಾರ ಇಲಾಖೆ ಮತ್ತು ವಾಣಿಜ್ಯ ತೆರಿಗೆ ಇಲಾಖೆಗಳಿಗೆ ಸಂಬಂಧಿಸಿದ ನ್ಯಾಯಾಧಿಕರಣವಾಗಿದ್ದರೂ ಕಂದಾಯ ಇಲಾಖೆಯ ಭಾಗವಾಗಿ ಕಾರ್ಯನಿರ್ವಹಿಸುತ್ತಿದೆ. ಈ ನ್ಯಾಯಾಧಿಕರಣದಲ್ಲಿ ಅಧ್ಯಕ್ಷರನ್ನೊಳಗೊಂಡಂತೆ ಒಟ್ಟು ೮ ಪೀಠಗಳಿದ್ದು, ಹಿರಿಯ ಶ್ರೇಣಿಯ ಭಾರತೀಯ ಆಡಳಿತ ಸೇವೆಯ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಇದರಲ್ಲಿ ಎರಡು ಕಂದಾಯ, ಎರಡು ಸಹಕಾರ ಮತ್ತು ನಾಲ್ಕು ವಾಣಿಜ್ಯ ತೆರಿಗೆ ಸೇರಿ ಒಟ್ಟು ಎಂಟು ಪೀಠಗಳಿವೆ. ಪ್ರತಿಯೊಂದು ಪೀಠದಲ್ಲಿಯೂ ಓರ್ವ ನ್ಯಾಯಾಂಗ ಸದಸ್ಯರು ಹಾಗೂ ಸಂಬಂಧಿಸಿದ ಇಲಾಖಾ ಸದಸ್ಯರು ಕಾರ್ಯನಿರ್ವಹಿಸುತ್ತಾರೆ. ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣವು ಕಂದಾಯ, ವಾಣಿಜ್ಯ ತೆರಿಗೆ ಮತ್ತು ಸಹಕಾರ ಇಲಾಖೆ ಪ್ರಕರಣಗಳ ಆಡಳಿತ ಮತ್ತು ಕಾರ್ಯನಿರ್ವಹಣೆಗೆ ಸಂಬಂಧಪಟ್ಟಿರುವ ಅನೇಕ ಕಾಯ್ದೆಗಳಡಿಯಲ್ಲಿ ಮೇಲ್ಮನವಿ ಸ್ವೀಕರಿಸುವ ಅಧಿಕಾರವನ್ನು ಪಡೆದಿರುತ್ತದೆ. ಕಸ್ಟಮ್ಸ್, ಎಕ್ಸೈಸ್, ಸೇವಾತೆರಿಗೆಗಳನ್ನೊಳಗೊಂಡ ಕೆಲವು ಮೇಲ್ಮನವಿಗಳು ಕೇಂದ್ರ ಮೇಲ್ಮನವಿ ನ್ಯಾಯಾಧಿಕರಣ ಕಾರ್ಯ ನಿರ್ವಹಿಸುತ್ತದೆ.

## ಕೇಂದ್ರ ವರಮಾನ ತೆರಿಗೆ

ಆದಾಯ ತೆರಿಗೆ ಕಾಯ್ದೆ ೧೯೬೧, ಆದಾಯ ತೆರಿಗೆ ನಿಯಮಗಳು ೧೯೬೨, ಸಂಪತ್ತು ತೆರಿಗೆ ಕಾಯ್ದೆ ೧೯೫೬, ಮತ್ತು ಉಡುಗೊರೆ ತೆರಿಗೆ ಅಧಿನಿಯಮ ೧೯೫೭ ಹಾಗೂ ಇತರೆ ಸರ್ಕಾರಿ ಆದೇಶ ನಿಯಮಗಳನ್ನು

ಜಾರಿಗೊಳಿಸಲಾಗುತ್ತಿದೆ. ಆದಾಯ ತೆರಿಗೆಗೆ ಒಳಪಡುವವರಿಗೆ ಖಾಯಂ ಖಾತೆ ಸಂಖ್ಯೆ (PAN) ನೀಡಲಾಗುತ್ತಿದ್ದು, ಸಾರ್ವಜನಿಕರಲ್ಲಿ ಸರಿಯಾಗಿ ತೆರಿಗೆ ಪಾವತಿ ಮಾಡುವ ಮನೋಭಾವ ಮೂಡಿಸಲು ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಜಿಲ್ಲೆಯಲ್ಲಿ ಭಾರತ ಸರ್ಕಾರದ ವರಮಾನ ತೆರಿಗೆ ಇಲಾಖೆಯು ದಿನಾಂಕ ೧–೫–೨೦೦೩ರಿಂದ ಕಾರ್ಯಾರಂಭ ಮಾಡಿತು. ಈ ಕಛೇರಿ (ವರಮಾನ ತೆರಿಗೆ ಅಧಿಕಾರಿ, ವಿಭಾಗ–೧)ಯ ಅಧಿಕಾರದ ವ್ಯಾಪ್ತಿ ಚಾಮರಾಜನಗರ ಜಿಲ್ಲೆಗೆ ಸೀಮಿತವಾಗಿರುತ್ತದೆ. ಹೊಸ ಜಿಲ್ಲೆ ಅಸ್ತಿತ್ವಕ್ಕೆ ಬಂದ ವರ್ಷ ೧೯೯೭–೯೮ರಿಂದ ೨೦೦೨–೦೩ರ ವರೆಗೆ ಜಿಲ್ಲೆಯಲ್ಲಿ ಪ್ರತ್ಯೇಕ ವರಮಾನ ತೆರಿಗೆ ಕಛೇರಿಯನ್ನು ಪ್ರಾರಂಭಿಸಿರಲಿಲ್ಲ. ವರ್ಷ ೨೦೦೩–೦೪ರಿಂದ ೨೦೦೬–೦೭ರ ವರೆಗೆ ಯಾವುದೇ ವರಮಾನ ತೆರಿಗೆ ಸಂಗ್ರಹವನ್ನು ಹೊಸ ಕಛೇರಿ ಮೂಲಕ ಮಾಡಿರಲಿಲ್ಲ. ೨೦೦೭–೦೮ರಲ್ಲಿ ಜಿಲ್ಲೆಯಲ್ಲಿ ಸಂಗ್ರಹಿಸಲಾದ ವರಮಾನ ತೆರಿಗೆ ಕೇವಲ ₹ ೬೫ ಲಕ್ಷ, ೨೦೦೯–೧೦ರಲ್ಲಿ ₹ ೯೧.೮೮, ೨೦೧೦–೧೧ರಲ್ಲಿ ₹ ೧.೯೮, ೨೦೧೧–೧೨ರಲ್ಲಿ ₹ ೪.೧೧ ಲಕ್ಷ ಸಂಗ್ರಹಿಸಲಾಗಿದೆ.

**ಕೇಂದ್ರ ಅಬಕಾರಿ ಶುಲ್ಕ:** ಉತ್ಪಾದಿತ ವಸ್ತುಗಳ ಮೇಲಿನ ಉತ್ಪಾದನಾ ತೆರಿಗೆ ಸಂಗ್ರಹಣೆ ಕೇಂದ್ರ ಅಬಕಾರಿ ಇಲಾಖೆಯ ಮುಖ್ಯ ಕಾರ್ಯಚಟುವಟಿಕೆ. ಕೇಂದ್ರ ಅಬಕಾರಿ ಕಾಯ್ದೆ ೧೯೪೪, ನಿಯಮ ೧೯೪೪ ಹಾಗೂ ಕೇಂದ್ರ ಅಬಕಾರಿ ಸುಂಕ ಕಾಯ್ದೆ ೧೯೮೫ರ ನಿಯಮ ಅಧಿನಿಯಮಗಳನ್ನು ಜಾರಿಗೊಳಿಸಲಾಗುತ್ತದೆ.

**ಕೋಷ್ಟಕ ೨೧: ವಾಣಿಜ್ಯ ತೆರಿಗೆ ಅಧಿಕಾರಿಯವರ (ವಸೂಲಿ) ಕಛೇರಿ ಚಾಮರಾಜನಗರದಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ**

**₹ ಲಕ್ಷಗಳಲ್ಲಿ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ | ಮೌಲ್ಯ ವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|---|---|---|
| ೨೦೦೨–೦೩ | ೨೦೭.೩೩ | ೩.೮೭ | ೭.೨೩ | – | – | – | ೩.೬೦ | ೨೨೨.೦೩ |
| ೨೦೦೩–೦೪ | ೨೩೯.೦೧ | ೮.೬೩ | ೧೧.೪೨ | – | – | – | ೩.೭೩ | ೨೬೨.೯೯ |
| ೨೦೦೪–೦೫ | ೨೯೪.೪೩ | ೫.೨೨ | ೧೩.೧೨ | – | – | – | ೩.೯೩ | ೩೧೬.೭೦ |
| ೨೦೦೫–೦೬ | ೧೦೯.೪೧ | ೮.೨೫ | ೧೨.೭೬ | – | – | – | ೩.೩೨ | ೧೩೩.೭೫ |
| ೨೦೦೬–೦೭ | ೨೬.೦೯ | ೨.೬೮ | ೦.೩೭ | – | – | – | – | ೨೯.೧೪ |
| ೨೦೦೭–೦೮ | ೭.೭೭ | ೦.೪೩ | ೦.೮೧ | – | – | – | – | ೯.೦೨ |
| ೨೦೦೮–೦೯ | ೮೭.೭೬ | ೬.೨೯ | ೧೨.೩೪ | – | ೪೨೩.೪೪ | – | – | ೫೨೯.೮೩ |
| ೨೦೦೯–೧೦ | ೯೨.೬೩ | ೧೨.೧ | ೧೩.೬೯ | – | ೫೩೬.೫೧ | – | – | ೬೫೪.೯೩ |
| ೨೦೧೦–೧೧ | ೮೧.೦೧ | ೩.೫೭ | ೧೪.೭೧ | – | ೭೯೯.೬೭ | – | – | ೮೯೮.೯೬ |
| ೨೦೧೧–೧೨ | ೧೦.೫೩ | ೮.೮೬ | ೧೦೫.೬೧ | – | ೮೧೯.೩೯ | ೮.೬ | – | ೯೫೨.೯೯ |

**ಕೋಷ್ಟಕ ೯.೨೨: ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿ ವಿ.ಎಸ್.ಒ – ೧೯೧ ನಂಜನಗೂಡುಈ ಕಛೇರಿಯಲ್ಲಿ ವಸೂಲಾದ ವಾಣಿಜ್ಯ ತೆರಿಗೆ ವಿವರ ₹ ಲಕ್ಷಗಳಲ್ಲಿ ನಮೂದಿಸಿದೆ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ | ಮೌಲ್ಯವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|---|---|---|
| ೨೦೦೫–೦೬ | – | – | – | – | ೧೫,೩೫,೮೮೮ | – | ೬೮,೫೪೨ | ೧೬,೦೪,೪೩೦ |
| ೨೦೦೬–೦೭ | – | – | ೧೦,೫೦೦ | – | ೨೭,೬೪,೫೪೩ | – | ೩೮,೯೯೭ | ೨೮,೧೪,೦೪೦ |
| ೨೦೦೭–೦೮ | – | ೨೦,೦೦೦ | ೩,೫೨,೧೦೦ | – | ೪೨,೨೨,೧೭೩ | – | ೯೯,೯೨೭ | ೪೬,೯೪,೨೦೦ |
| ೨೦೦೮–೦೯ | ೧೧.೬೧ | ೯೯.೯೦ | ೧೯.೧ | – | ೬೪೪.೯ | – | – | ೭೭೫.೫೨ |
| ೨೦೦೯–೧೦ | ೭.೮೨ | ೯೩.೯೧ | ೨೫.೦೭ | – | ೭೫೧.೫೨ | – | – | ೮೭೮.೩೨ |
| ೨೦೧೦–೧೧ | ೨.೬೫ | ೧೪೪.೯೯ | ೨೫.೮೬ | – | ೧೪೨೭.೫೫ | ೫.೪೨ | – | ೧೬೦೬.೩೭ |
| ೨೦೧೧–೧೨ | ೯.೨೮ | ೧೫೬.೬೦ | ೭೯.೧೫ | – | ೧೯೮೨.೪೦ | ೩.೩೭ | – | ೨೨೩೦.೮೦ |

*ಆಧಾರ: ವಾಣಿಜ್ಯತೆರಿಗೆ ಅಧಿಕಾರಿ, ವಿ.ಎಸ್.ಒ.೧೯೧ ನಂಜನಗೂಡು ಮತ್ತು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಆಡಳಿತ), ಮೌತೆವಿ, ಮೈಸೂರು*

*ಷರಾ: ಚಾಮರಾಜನಗರ ಜಿಲ್ಲೆಯ ವ್ಯಾಪ್ತಿಗೆ ಗುಂಡ್ಲುಪೇಟೆಯು ಸೇರ್ಪಡೆತಯಾಗಿದ್ದು, ವಿ.ಎಸ್.ಒ ೧೯೧ ಕಛೇರಿಯ ವ್ಯಾಪ್ತಿಗೆ, ಟಿ.ನರಸೀಪುರ, ನಂಜಜಗೂಡು, ಗುಂಡ್ಲುಪೇಟೆ ತಾಲೂಕುಗಳು ಒಳಗೊಂಡಿದ್ದು, ಮೇಲ್ಕಂಡ ತೆರಿಗೆ ವಿವರ ದರ ಗುಂಡ್ಲುಪೇಟೆಗೆ ೧/೩ ಭಾಗದಷ್ಟಿರುತ್ತದೆ ಎಂದು ಅಂದಾಜಿಸಬಹುದಾಗಿರುತ್ತದೆ. ಕಾರಣ ಈ ಇಲಾಖೆಯಲ್ಲಿ ತೆರಿಗೆಯಲ್ಲಿ ಆನ್‌ಲೈನ್ ಮುಖಾಂತತರ ಪಾವತಿಯಾಗುತ್ತಿರುವುದರಿಂದ ಗುಂಡ್ಲುಪೇಟೆ ತಾಲೂಕಿಗೆ ಪ್ರತ್ಯೇಕವಾಗಿ ಮಾಹಿತಿ ನೀಡಲು ಸಾಧ್ಯವಾಗುತ್ತಿಲ್ಲಾ.*

**ಕೋಷ್ಟಕ ೯.೨೩: ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿ ವಿ.ಎಸ್.ಒ – ೧೯೨ ಚಾಮರಾಜನಗರ ಯಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ ₹ ಲಕ್ಷಗಳಲ್ಲಿ ನಮೂದಿಸಿದೆ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ | ಮೌಲ್ಯವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|---|---|---|
| ೨೦೦೫–೦೬ | ೬೦.೯೨ | – | – | – | ೩೨೪.೧೧ | | | ೩೮೫.೦೩ |
| ೨೦೦೬–೦೭ | ೧೧೮.೩೪ | ೪.೮೬ | ೦.೨೦ | – | ೫೧೨.೬೫ | | | ೬೩೬.೦೫ |
| ೨೦೦೭–೦೮ | ೧೦೮.೬೩ | ೫.೦೯ | ೧೧.೬೭ | – | ೪೯೨.೩೨ | | | ೬೧೭.೭೧ |
| ೨೦೦೮–೦೯ | ೬೩.೧೪ | ೩.೯೧ | ೧೨.೦೫ | – | ೩೦೯.೨೪ | | | ೩೮೮.೩೪ |
| ೨೦೦೯–೧೦ | – | – | – | – | ೫೨೯.೮೩ | – | – | ೫೨೯.೮೩ |
| ೨೦೧೦–೧೧ | ೮೧.೦೧ | ೩.೫೭ | ೧೪.೭೧ | – | ೭೯೯.೬೭ | – | – | ೮೯೮.೯೬ |
| ೨೦೧೧–೧೨ | ೧೦.೫೩ | ೮.೮೬ | ೧೦೫.೬೧ | – | ೮೫೩.೯೫ | ೭.೧೮ | – | ೯೫೨.೯೯ |

**ಕೋಷ್ಟಕ ೯.೨೪: ವಾಣಿಜ್ಯ ತೆರಿಗೆ ಅಧಿಕಾರಿಗಳ ಕಚೇರಿ ಕೊಳ್ಳೇಗಾಲದಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಲಾಸ ತೆರಿಗೆ | ಮೌಲ್ಯವರ್ಧಿತ ತೆರಿಗೆ | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|---|---|---|
| ೨೦೦೦-೦೧ | ೪೫.೨೧ | ೦.೮೭ | ೫.೯೯ | ೦ | ೦ | ೧೨.೦೦ | ೦ | ೬೪.೦೭ |
| ೨೦೦೧-೦೨ | ೩೮.೭೦ | ೦.೮೫ | ೫.೫೮ | ೦ | ೦ | ೧೩.೩೪ | ೦ | ೫೮.೪೭ |
| ೨೦೦೨-೦೩ | ೪೦.೯೭ | ೦.೭೬ | ೫.೫೧ | ೦ | ೦ | ೧೩.೪೪ | ೦ | ೬೦.೬೮ |
| ೨೦೦೩-೦೪ | ೪೧.೩೯ | ೦.೯೫ | ೮.೬೬ | ೦ | ೦ | ೧೩.೭೪ | ೦ | ೬೪.೭೪ |
| ೨೦೦೪-೦೫ | ೪೩.೬೬ | ೦.೯೨ | ೯.೧೦ | ೦ | ೦ | ೧೩.೭೯ | ೦ | ೬೭.೪೭ |
| ೨೦೦೫-೦೬ | ೧೨.೯೩ | ೧.೩೭ | ೮.೦೯ | ೦ | ೦ | ೧೦.೪೩ | ೦ | ೩೨.೮೨ |
| ೨೦೦೬-೦೭ | ೫.೨೦ | ೦.೪೫ | ೦.೧೭ | ೦ | ೦ | ೧೦.೯೪ | ೦ | ೧೬.೭೬ |
| ೨೦೦೭-೦೮ | ೩.೯೭ | ೦.೩೬ | ೦.೨೫ | ೦ | ೦ | ೨೩.೪೭ | ೦ | ೨೮.೦೫ |
| ೨೦೦೮-೦೯ | ೩.೮೮ | ೭.೧೫ | ೯.೯೫ | ೦ | ೧೫೯.೨ | ೦ | ೦ | ೧೮೦.೧೮ |
| ೨೦೦೯-೧೦ | ೪.೫೬ | ೬.೦೯ | ೧೨.೩ | ೦ | ೧೮೧.೫೪ | ೦ | ೦ | ೨೦೪.೪೯ |
| ೨೦೧೦-೧೧ | ೩.೩೪ | ೩.೫೫ | ೧೪.೨೨ | ೦ | ೩೧೯.೯೬ | ೦ | ೦ | ೩೪೧.೦೭ |
| ೨೦೧೧-೧೨ | ೨.೧೭ | ೭.೬೧ | ೩೦.೨೧ | ೦ | ೨೯೩.೮೩ | ೫.೭೧ | ೦ | ೩೩೯.೫೩ |

**ಕೋಷ್ಟಕ ೯.೨೫: ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ ಮಾರಾಟ ತೆರಿಗೆ (ತನಿಖಾ ಠಾಣೆ), ಗುಂಡ್ಲುಪೇಟೆಯಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ.**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಐಷಾರಾಮಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ | ಮೌಲ್ಯವರ್ಧಿತ ತೆರಿಗೆ (VAT) | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|---|---|---|
| ೧೯೯೮–೯೯ | ೧೧,೬೯,೧೬೭ | – | – | – | – | | – | ೧೧,೬೯,೧೬೭ |
| ೧೯೯೯–೦೦ | ೧೫,೬೧೭೩೩ | – | – | – | – | – | – | ೧೫,೬೧,೭೩೩ |
| ೨೦೦೦–೦೧ | ೧೨,೬೫,೦೦೩ | – | – | – | – | – | – | ೧೨,೬೫,೦೦೩ |
| ೨೦೦೧–೦೨ | ೧೮,೨೩,೮೩೯ | – | – | – | – | – | – | ೧೮,೨೩,೮೩೯ |
| ೨೦೦೨–೦೩ | ೨೮,೭೭,೧೯೪ | – | – | – | – | – | – | ೨೮,೭೭,೧೯೪ |
| ೨೦೦೩–೦೪ | ೫೫,೧೩,೯೫೮ | – | – | – | – | – | – | ೫೫,೧೩,೯೫೮ |
| ೨೦೦೪–೦೫ | – | ೨೭,೪೮೬ | – | ೧,೪೪,೭೮೪ | – | – | – | ೫೭,೧೬,೦೮೫ |
| ೨೦೦೫–೦೬ | – | ೧೨,೫೩೦ | – | ೨೭,೦೭೫ | ೩೭,೧೦,೯೦೬ | – | – | ೪೦,೦೩,೧೯೪ |
| ೨೦೦೬–೦೭ | – | ೧,೬೦೦ | – | ೩,೦೨,೯೫೪ | ೩೪,೬೬,೦೨೦ | – | – | ೩೭,೭೦,೫೭೪ |
| ೨೦೦೭–೦೮ | – | ೪೭,೮೧೦ | – | – | ೩೦,೧೯,೦೪೩ | – | – | ೩೦,೬೬,೮೫೩ |
| ೨೦೦೮–೦೯ | – | ೧.೯೭ | – | – | – | – | ೩೦.೩೬ | ೩೧.೩೩ |
| ೨೦೦೯–೧೦ | – | ೦.೫೨ | – | – | ೦.೧೧ | – | ೪೫.೭೪ | ೪೬.೩೭ |
| ೨೦೧೦–೧೧ | – | ೦.೦೨ | – | – | – | – | ೨೯.೬೫ | ೨೯.೦೭ |
| ೨೦೧೧–೧೨ | – | – | – | – | ೦.೧೧ | – | ೧೪.೦೨ | ೧೪.೧೩ |

*ಆಧಾರ: ವಾಣಿಜ್ಯ ತೆರಿಗೆ ಅಧಿಕಾರಿ, ಮಾರಾಟ ತೆರಿಗೆ ತನಿಖಾ ಠಾಣೆ, ಗುಂಡ್ಲುಪೇಟೆ ಮತ್ತು ವಾಣಿಜ್ಯ ತೆರಿಗೆ ಜಂಟಿ ಆಯುಕ್ತರು (ಜಾರಿ), ಮೈಸೂರು ವಲಯ, ಮೈಸೂರು*

**ಕೋಷ್ಟಕ ೯.೨೬: ವಾಣಿಜ್ಯ ತೆರಿಗೆ ಅಧಿಕಾರಿಗಳ ಕಛೇರಿ ಮಾರಾಟ ತೆರಿಗೆ (ತನಿಖಾ ಠಾಣೆ), ಪುಂಜನೂರು ಚಾಮರಾಜನಗರ ಜಿಲ್ಲೆಯಿಂದ ವಸೂಲಾದ ವಾಣಿಜ್ಯ ತೆರಿಗೆ ವಿವರ.**

| ವರ್ಷ | ಕರ್ನಾಟಕ ಮಾರಾಟ ತೆರಿಗೆ/ಕೇಂದ್ರ ಮಾರಾಟ ತೆರಿಗೆ | ಕರ್ನಾಟಕ ಪ್ರವೇಶ ತೆರಿಗೆ | ಕರ್ನಾಟಕ ವೃತ್ತಿ ತೆರಿಗೆ | ಕರ್ನಾಟಕ ವಿಶೇಷ ತೆರಿಗೆ | ಮೌಲ್ಯವರ್ಧಿತ ತೆರಿಗೆ (VAT) | ಮನರಂಜನಾ ತೆರಿಗೆ | ಇತರೆ | ಒಟ್ಟು |
|---|---|---|---|---|---|---|---|---|
| ೧೯೯೮–೯೯ | ೪,೯೦,೩೯೦ | – | – | – | – | – | ೧೧,೯೦,೪೯೮ | ೧೬,೮೦,೮೮೮ |
| ೧೯೯೯–೦೦ | ೪,೮೧,೨೮೨ | – | – | – | – | – | ೧೩,೩೮,೬೪೮ | ೧೮,೧೯,೯೩೦ |
| ೨೦೦೦–೦೧ | ೩,೧೯,೦೫೬ | – | – | – | – | – | ೧೨,೮೧,೫೯೨ | ೧೬,೦೦,೬೪೮ |
| ೨೦೦೧–೦೨ | ೫,೦೮,೩೩೩ | – | – | – | – | – | ೯,೧೪,೨೫೩ | ೧೪,೨೨,೫೮೬ |
| ೨೦೦೨–೦೩ | ೨,೮೪,೫೨೦ | ೨೦,೪೦೦ | – | – | – | – | ೯,೮೯,೬೧೦ | ೧೨,೯೪,೫೩೦ |
| ೨೦೦೩–೦೪ | – | ೨೦,೭೬೧ | – | – | ೩,೭೦,೫೭೧ | – | ೧೦,೬೨,೪೭೫ | ೧೪,೫೩,೮೦೭ |
| ೨೦೦೪–೦೫ | – | ೭೯,೮೪೪ | – | ೮,೬೯೦ | ೬,೫೨,೧೩೧ | – | ೧೫,೮೦೯೯೬ | ೨೩,೨೧,೬೬೧ |
| ೨೦೦೫–೦೬ | – | – | – | ೨೪,೩೬೦ | ೪,೮೦,೫೨೭ | – | ೧೦,೭೨,೭೦೬ | ೧೫,೭೭,೫೯೩ |
| ೨೦೦೬–೦೭ | – | – | – | ೪೭,೬೯೩ | ೪,೪೩,೨೪೦ | – | ೧೬,೫೭,೦೧೧ | ೨೧,೪೭,೯೪೪ |
| ೨೦೦೭–೦೮ | – | – | – | ೯೬,೦೧೭ | ೫,೫೦,೯೦೫ | – | ೨೦,೯೯,೬೭೭ | ೨೭,೪೬,೫೯೯ |
| ೨೦೦೮–೦೯ | – | – | – | – | ೫.೭೬ | – | ೨೫.೬೩ | ೩೧.೩೯ |
| ೨೦೦೯–೧೦ | – | ೦.೨೪ | – | – | – | – | ೩೬.೨೨ | ೩೬.೪೬ |
| ೨೦೧೦–೧೧ | – | – | – | – | – | – | ೨೭.೬೨ | ೨೭.೬೨ |
| ೨೦೧೧–೧೨ | – | – | – | – | – | – | ೨೨.೨೩ | ೨೨.೨೩ |

*ಆಧಾರ: ವಾಣಿಜ್ಯ ತೆರಿಗೆ *ಜಂಟಿ ಆಯುಕ್ತರು (ಜಾರಿ), ಮೈಸೂರು ವಲಯ, ಮೈಸೂರು*

*****